ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಮತ್ತು ಚೆನ್ನೈನ ಗಾಯಕಿ ಶಿವಶ್ರೀ ಸ್ಕಂದಪ್ರಸಾದ್ ಅವರು ಕುಟುಂಬದವರು ಮತ್ತು ಆಯ್ದ ಗಣ್ಯರ ಸಮ್ಮುಖ ಬೆಂಗಳೂರಿನ ಹೊರವಲಯದ ರೆಸಾರ್ಟ್‌ನಲ್ಲಿ ಗುರುವಾರ ಗೃಹಸ್ಥಾಶ್ರಮ ಪ್ರವೇಶಿಸಿದರು.

ದಾಖಲೆ ಬಜೆಟ್‌ಗೆ ಸಿದ್ದು ಸಿದ್ಧ

16ನೇ ಬಾರಿ ಮುಂಗಡಪತ್ರ ಮಂಡನೆಗೆ ಸಜ್ಜು, ಬಜೆಟ್ ಗಾತ್ರ 4 ಲಕ್ಷ ಕೋಟಿ ಗಾತ್ರ ಮೀರುವ ಸಂಭವ

ಬೆಂಗಳೂರು: ಶೀಘ್ರದಲ್ಲಿಯೇ ಎದುರಾಗಲಿರುವ ಸ್ಥಳೀಯ ಸಂಸ್ಥೆ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಐತಿಹಾಸಿಕ 16ನೇ ಬಜೆಟ್‌ನಲ್ಲಿ ಗ್ರಾಮೀಣ ಹಾಗೂ ಬೆಂಗಳೂರು ಭಾಗಕ್ಕೆ ಭರ್ಜರಿ ಕೊಡುಗೆ ನೀಡುವ ಸಾಧ್ಯತೆಯಿದೆ ಎನ್ನಲಾಗಿದೆ.

2025-26ನೇ ಸಾಲಿನ ಬಜೆಟ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಸಲಿದ್ದು, ತಮ್ಮ ದಾಖಲೆಯ ಬಜೆಟ್‌ನಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡುವ ಸಾಧ್ಯತೆಯಿದೆ ಎನ್ನಲಾಗಿದೆ. ಇದರೊಂದಿಗೆ ಶಾಸಕರ ಅಸಮಾಧಾನ ತಣಿಸಲು ಮೂಲಸೌಕರ್ಯಕ್ಕೆ ಒತ್ತು ನೀಡುವ ಸಾಧ್ಯತೆಯಿದೆ. ಇನ್ನು ಮೇ ತಿಂಗಳಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ ಎದುರಾಗುವ ಸಾಧ್ಯತೆಯಿರುವುದರಿಂದ ಈ ಬಜೆಟ್‌ನಲ್ಲಿ ಕೃಷಿ, ಶಿಕ್ಷಣ, ಆರೋಗ್ಯ ಸೇರಿದಂತೆ ಆದ್ಯತಾ ವಲಯಗಳಿಗೆ ಹೆಚ್ಚಿನ ಒತ್ತು ನೀಡುವ ನಿರೀಕ್ಷೆಯಿದ್ದು, ರೈತರು, ಮಹಿಳೆಯರು, ಅಹಿಂದ ಸಮುದಾಯಕ್ಕೆ ಸರಕಾರ ಹಲವು ಗಿಫ್ಟ್ ನೀಡಲಿದೆ ಎನ್ನುವ ಮಾತುಗಳು ಕೇಳಿಬಂದಿವೆ.

ದಾಖಲೆಯ ಬಜೆಟ್ ಮಂಡಿಸಲಿರುವ ಸಿದ್ದರಾಮಯ್ಯ ಅವರು ಬಜೆಟ್ ಗಾತ್ರವನ್ನು ನಾಲ್ಕು ಲಕ್ಷ ಕೋಟಿಗೆ ಹಿಗ್ಗಿಸುವುದು ಬಹುತೇಕ ಖಚಿತವಾಗಿದೆ. ಕಳೆದ ಬಾರಿ 3.71 ಲಕ್ಷ ಕೋಟಿ ರುಪಾಯಿ ಗಾತ್ರದ ಬಜೆಟ್ ಮಂಡನೆ ಮಾಡಲಾಗಿತ್ತು. ಈ ಬಾರಿ ಬಜೆಟ್ ಗಾತ್ರ 4 ಲಕ್ಷ ಕೋಟಿ ದಾಟಲಿದೆ ಎಂದು ಅಂದಾಜಿಸಲಾಗಿದೆ.

ಹೆಚ್ಚುವರಿ ಸಾಲ ಅನಿವಾರ್ಯ: ಗ್ಯಾರಂಟಿ ಯೋಜನೆಯ ಜತೆಜತೆಗೆ ಅಭಿವೃದ್ಧಿಗೆ ಒತ್ತು ನೀಡುವ ಅನಿವಾರ್ಯತೆ ಇರುವು ದರಿಂದ 2025-26ನೇ ಆರ್ಥಿಕ ವರ್ಷಕ್ಕೆ ಅಂದಾಜು 1.25-1.50 ಲಕ್ಷ ಕೋಟಿ ಸಾಲದ ಪ್ರಸ್ತಾಪ ಸಾಧ್ಯತೆಯಿದೆ. ಈ ಮೂಲಕ ರಾಜ್ಯದ ಒಟ್ಟು ಸಾಲದ ಪ್ರಮಾಣ 8 ಲಕ್ಷ ಕೋಟಿ ಆಸುಪಾಸಿಗೆ ಬರಲಿದೆ ಎನ್ನುವ ಮಾತುಗಳು ಕೇಳಿಬಂದಿದೆ. ಕಳೆದ ಬಜೆಟ್‌ನಲ್ಲಿ 1.05 ಲಕ್ಷ ಕೋಟಿ ಸಾಲದ ಪ್ರಸ್ತಾಪ ಮಾಡಿದ್ದ ಸಿದ್ದ ರಾಮಯ್ಯ ಈ ಬಾರಿ 1.50 ಲಕ್ಷ ಕೋಟಿ ಸಾಲದ ಪ್ರಸ್ತಾಪ ಸಾಧ್ಯತೆಯಿದೆ.

ಕೇಂದ್ರದಿಂದಲೇ ಅನು ದಾನದ ನಿರೀಕ್ಷೆ: ಬದ್ಧತಾ ವೆಚ್ಚದೊಂದಿಗೆ ಗ್ಯಾರಂಟಿ ಯೋಜ ನೆಗೆ ಬಹುಪಾಲು ಅನುದಾನ ಹೋಗು ವುದರಿಂದ ಅಭಿವೃದ್ಧಿ ಯೋಜ ನೆಗೆ ಅನುದಾನದ ಕೊರತೆ ಬೀಳುವುದು ನಿಶ್ಚಿತ ಎನ್ನಲಾಗುತ್ತಿದೆ. ಆದ್ದರಿಂದ ಕೇಂದ್ರದಿಂದ ಬರಬೇಕಿರುವ ರಾಜ್ಯದ ಪಾಲು, ವಿಶೇಷ ಅನುದಾನ ಸೇರಿದಂತೆ ವಿವಿಧ ಆದಾಯ ಮೂಲಗಳ ಪ್ರಸ್ತಾಪ ಮಾಡುವ ಸಾಧ್ಯತೆಯಿದೆ. ಈ ಬಾರಿ ಬಜೆಟ್ ಭಾಷಣದಲ್ಲಿ ಕೇಂದ್ರದಿಂದ ಅನುದಾನ ಹಂಚಿಕೆಯಲ್ಲಿ ಆಗಿರುವ ಅನ್ಯಾಯಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರು ಪ್ರಸ್ತಾಪಿಸುವ ಸಾಧ್ಯತೆಯಿದೆ .

- ಸರಕಾರಿ ನೌಕರರ ಬಹುದಿನದ ಬೇಡಿಕೆ ಒಪಿಎಸ್ ಜಾರಿಯ ಒತ್ತಡ
- ನೀರಾವರಿ ಯೋಜನೆಗಳಿಗೆ ವೇಗ ನೀಡಲು ಹೆಚ್ಚುವರಿ ಅನುದಾನ ಅನಿವಾರ್ಯತೆ
- ಕೇಂದ್ರದಿಂದ ಬರಬೇಕಿರುವ ಅನುದಾನದ ಮೇಲೆ ಕೇಂದ್ರದ ಹಲವು ಯೋಜನೆಗಳ ಜಾರಿ
- ಮೂಲಸೌಕರ್ಯ ಯೋಜನೆಗಳಿಗೆ ಹೆಚ್ಚುವರಿ ಅನುದಾನ ನೀಡುವ ಬಗ್ಗೆ ಚಿಂತನೆ
- ಗ್ಯಾರಂಟಿ ಯೋಜನೆಗಳಿಗೆ 53 ಸಾವಿರ ಕೋಟಿ ರು. ನೀಡಬೇಕಾದ ಅನಿವಾರ್ಯತೆ

ಬಿಜೆಪಿಯಿಂದ ಪ್ರತಿಭಟನೆ

ರಾಜ್ಯ ಸರಕಾರದ ಪರಿಶಿಷ್ಟ ಜಾತಿ, ಪಂಗಡ ಅನುದಾನವನ್ನು ಇತರೆ ಯೋಜನೆಗಳಿಗೆ ಬಳಸಿಕೊಂಡಿದೆ. ಇದರೊಂದಿಗೆ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದೆ, ಗುತ್ತಿಗೆದಾರರ ಬಾಕಿ ಮೊತ್ತ ಪಾವತಿಯಾಗಿಲ್ಲ ಎನ್ನುವ ಆರೋಪವನ್ನು ಮುಂದಿಟ್ಟುಕೊಂಡು ಬಿಜೆಪಿ-ಜೆಡಿಎಸ್ ಶಾಸಕರು ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದಾರೆ. ಸಿದ್ದರಾಮಯ್ಯ ಅವರು ಬಜೆಟ್ ಭಾಷಣ ಮಾಡುವಾಗ ಪ್ರತಿಪಕ್ಷಗಳು ಸರಕಾರದ ವಿರುದ್ಧ ಘೋಷಣೆ ಕೂಗುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಲು ತೀರ್ಮಾನಿಸಿವೆ ಎನ್ನಲಾಗಿದೆ.

ಕುಳಿತೇ ಬಜೆಟ್ ಮಂಡನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊಣಕಾಲಿನ ನೋವಿನಿಂದ ಸಂಪೂರ್ಣವಾಗಿ ಗುಣಮುಖರಾಗದೇ ಇರುವುದರಿಂದ ಈ ಬಾರಿಯ ಬಜೆಟ್ ಅನ್ನು ಕೂತುಕೊಂಡೇ ಮಂಡಿಸಲಿದ್ದಾರೆ. ಜಂಟಿ ಅಧಿವೇಶನ ಆರಂಭದಲ್ಲಿ ಸಂತಾಪ ಸೂಚನೆ ಮಂಡಿಸುವಾಗ, ರಾಜ್ಯಪಾಲರನ್ನು ಆಹ್ವಾನಿಸುವಾಗ ನಿಂತಿದ್ದರು. ಆದರೆ ಪೂರ್ಣ ಬಜೆಟ್ ಮಂಡಿಸುವಷ್ಟು ಕಾಲ ನಿಂತುಕೊಳ್ಳುವುದರಿಂದ ಸಮಸ್ಯೆಯಾಗುವ ಸಾಧ್ಯತೆಯಿದೆ ಎಂಬ ವೈದ್ಯರು ಸಲಹೆ ಮೇರೆಗೆ ಕುಳಿತುಕೊಂಡೇ ಬಜೆಟ್ ಮಂಡಿಸಲಿದ್ದಾರೆ ಎಂದು ತಿಳಿದುಬಂದಿದೆ.

ಲಂಡನ್‌ನಲ್ಲಿ ವಿದೇಶಾಂಗ ಸಚಿವರ ಕಾರು ತಡೆದು ತ್ರಿವರ್ಣ ಧ್ವಜ ಹರಿದ ತೀವ್ರವಾದಿಗಳು । ಭಾರತ ಪ್ರತಿಭಟನೆ

ಜೈಶಂಕರ್ ಎದುರು ಖಲಿಸ್ತಾನಿಗಳ ಪುಂಡಾಟ



ಲಂಡನ್: ಬ್ರಿಟನ್ ರಾಜಧಾನಿ ಲಂಡನ್‌ನಲ್ಲಿ ಖಲಿಸ್ತಾನಿ ಹೋರಾಟಗಾರರು ಭಾರತದ ವಿದೇಶಾಂಗ ಸಚಿವ ಜೈಶಂಕರ್ ಅವರ ಕಾರನ್ನು ಅಡ್ಡಗಟ್ಟಿ ತ್ರಿವರ್ಣ ಧ್ವಜವನ್ನು ಹರಿದ ಘಟನೆ ನಡೆದಿದೆ. ಈ ಘಟನೆಯನ್ನು ಭಾರತ ಖಂಡಿಸಿದ್ದು, ಬ್ರಿಟನ್ ಹೈಕಮಿಷರ್‌ಗೆ ಸಮನ್ಸ್ ಜಾರಿ ಮಾಡಿದೆ.

ಬ್ರಿಟನ್ ಈ ದಾಳಿಯನ್ನು ಖಂಡಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ತಿಳಿಸಿದೆ. ಜೈ ಶಂಕರ್ ಅವರು ಗುರುವಾರ ಬಾಥಮ್ ಹೌಸ್ ಚಿಂತಕರ ಚಾವಡಿಯಲ್ಲಿ ನಡೆದ ಕಾರ್ಯಕ್ರಮ ವೊಂದರಲ್ಲಿ ಭಾಗವಹಿಸಿ ತಮ್ಮ ಕಾರಿನಲ್ಲಿ ಹೊರಡಲು ಅನುವಾಗುತ್ತಿದ್ದಾಗ ಈ ಘಟನೆ ನಡೆದಿದೆ. ಈ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. → 4

ಯುಕೆ ಹೈಕಮಿಷನರ್‌ಗೆ ಸಮನ್ಸ್

ಲಂಡನ್: ಖಲಿಸ್ತಾನಿಗಳ ದುಷ್ಕೃತ್ಯವನ್ನು ಖಂಡಿಸಿರುವ ಭಾರತ ಈ ಸಂಬಂಧ ಭದ್ರತಾಲೋಪದ ಬಗ್ಗೆ ವಿವರಣೆ ಪಡೆಯಲು ಬ್ರಿಟನ್ ಹೈಕಮಿಷನರ್‌ಗೆ ಸಮನ್ಸ್ ನೀಡಿದೆ. ಘಟನೆ ಕುರಿತು ವಿದೇಶಾಂಗ ಸಚಿವಾಲಯ ಹೇಳಿಕೆ ಬಿಡುಗಡೆ ಮಾಡಿದ್ದು, 'ವಿದೇಶಾಂಗ ಸಚಿವರ ಲಂಡನ್ ಭೇಟಿಯಲ್ಲಿ ಗಂಭೀರ ಸ್ವರೂಪದ ಭದ್ರತಾ ಲೋಪವಾಗಿದೆ. ಇದನ್ನು ನಾವು ಖಂಡಿಸುತ್ತೇವೆ. ಪ್ರತ್ಯೇಕತಾವಾದಿಗಳು ಮತ್ತು ಉಗ್ರಗಾಮಿಗಳ ಈ ಸಣ್ಣ ಗುಂಪಿನ ಪ್ರಚೋದನಕಾರಿ ಚಟುವಟಿಕೆಗಳನ್ನು ನಾವು ಖಂಡಿಸುತ್ತೇವೆ. ಈ ಶಕ್ತಿಗಳು ಪ್ರಜಾಸತ್ತಾತ್ಮಕ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡಿವೆ. ಯುಕೆ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುತ್ತದೆ ಎಂದು ನಾವು ಭಾವಿಸುತ್ತೇವೆ' ಎಂದು ಹೇಳಿದೆ.

ಭ್ರಷ್ಟರ ಕೋಟೆಗೆ ಲೋಕಾ ಮುತ್ತಿಗೆ

ಲೂಟಿ ವೀರರಿಂದ ಕೋಟ್ಯಂತರ ಮೊತ್ತದ ನಗದು, ಆಸ್ತಿಪಾಸ್ತಿ ದಾಖಲೆ ವಶ

ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪದಲ್ಲಿ 8 ಸರಕಾರಿ ಅಧಿಕಾರಿಗಳ ಮೇಲೆ ರಾಜ್ಯದ 40 ಕಡೆ ಗುರುವಾರ ಲೋಕಾಯುಕ್ತ ದಾಳಿ ನಡೆಸಿದೆ. ಬೆಂಗಳೂರು, ಕೋಲಾರ, ಕಲಬುರಗಿ, ದಾವಣಗೆರೆ, ತುಮಕೂರು, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಭ್ರಷ್ಟ ಅಧಿಕಾರಿಗಳಿಗೆ ಸಂಬಂಧಿಸಿದ ಮನೆ, ಕಚೇರಿ ಹಾಗೂ ಸಂಬಂಧಿಕರ ಮನೆಗಳ ಮೇಲೆ ಏಕಕಾಲಕ್ಕೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಶೋಧನೆ ಕೈಗೊಂಡಿದ್ದು,ಅಪಾರ ಸಂಪತ್ತು ಪತ್ತೆಯಾಗಿದೆ.

ಎಂಜಿನಿಯರ್ ನಂಜುಂಡಪ್ಪ: ಬೆಂಗಳೂರಿನಲ್ಲಿ ವಾಸವಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮುಖ್ಯ ಎಂಜಿನಿಯರ್ ನಂಜುಂಡಪ್ಪ ಮನೆಯಲ್ಲಿ 14 ಅಧಿಕಾರಿಗಳು ತಪಾಸಣೆ ಮಾಡಿದ್ದಾರೆ. ಈ ವೇಳೆ ಬರೊಬ್ಬರಿ 60 ಲಕ್ಷ ಮೌಲ್ಯದ ವಸ್ತುಗಳು ಪತ್ತೆಯಾಗಿದ್ದು, ಇದರಲ್ಲಿ 51 ಲಕ್ಷ ಮೌಲ್ಯದ 841 ಗ್ರಾಂ ಚಿನ್ನ, 4.66 ಲಕ್ಷ ಮೌಲ್ಯದ 5936 ಗ್ರಾಂ ಬೆಳ್ಳಿ, 3.91 ಲಕ್ಷ ನಗದು ಹಾಗೂ 60 ಸಾವಿರ ವಿದೇಶಿ ಕರೆನ್ಸಿಗಳು ಪತ್ತೆಯಾಗಿವೆ. ಇದರ ಜತೆಗೆ ಭವ್ಯ ಮನೆ ಹಾಗೂ ಆ ಮನೆಯಲ್ಲಿದ್ದ 39 ಲಕ್ಷ ಮೌಲ್ಯದ ನಾಲ್ಕು ಕಾರುಗಳು ಸಹ ಪತ್ತೆಯಾಗಿವೆ. ಟಿ. ಡಿ. ನಂಜುಂಡಪ್ಪ ಸೇರಿದ 7 ಸ್ಥಳಗಳಲ್ಲಿ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದ ಲೋಕಾಯುಕ್ತ ಅಧಿಕಾರಿಗಳಿಗೆ 8,46,22,953 ರು. ಚರ ಮತ್ತು ಸ್ಥಿರಾಸ್ತಿ ಪತ್ತೆಯಾಗಿದೆ.

ಬಿಬಿಎಂಪಿ ಕಾರ್ಯಪಾಲಕ ಅಭಿಯಂತರ: ಬಿಬಿಎಂಪಿ ಕಾರ್ಯಪಾಲಕ ಅಭಿಯಂತರರು ಎಚ್. ಬಿ. ಕಲ್ಲೇಶಪ್ಪಗೆ ಸೇರಿದ ಒಟ್ಟು 6 ಸ್ಥಳಗಳಲ್ಲಿ ಲೋಕಾಯುಕ್ತ ದಾಳಿ ನಡೆಸಿ ಪರಿಶೀಲನೆ ಮಾಡಿದ್ದು, ಒಟ್ಟು 6,50,52,663 ರು. ಮೌಲ್ಯದ ಚರ ಮತ್ತು ಸ್ಥಿರಾಸ್ತಿ ಪತ್ತೆಯಾಗಿದೆ.

ಲೋಕೋಪಯೋಗಿ ಎಂಜಿನಿಯರ್: ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ಜಗನ್ನಾಥ್ ಮನೆಯಲ್ಲಿ ಅಪಾರ ಪ್ರಮಾಣದ ವಜ್ರ, ವೈಢೂರ್ಯ ಪತ್ತೆಯಾಗಿದೆ. ಕಲಬುರಗಿಯ ನಿವಾಸದಲ್ಲಿ 2 ಕೆ.ಜಿ.ಗೂ ಅಧಿಕ ಬೆಳ್ಳಿ ಪತ್ತೆಯಾಗಿದೆ. ಮನೆಯ ಲಾಕರ್‌ನಲ್ಲಿ ಡೈಮಂಡ್ ರಿಂಗ್ ಸೇರಿದಂತೆ 30ಕ್ಕೂ ಹೆಚ್ಚು ಗೋಲ್ಡ್ ಕಾಯಿನ್ ಪತ್ತೆಯಾಗಿದೆ. ಕೋಟಿ ಕೋಟಿ ಮೌಲ್ಯ ಚಿನ್ನಾಭರಣ ಕಂಡು ಅಧಿಕಾರಿಗಳೇ ಹೌಹಾರಿದ್ದಾರೆ. ಜಗನ್ನಾಥ್ ನಿವೃತ್ತಿಗೆ ಕೇವಲ 25 ದಿನಗಳಷ್ಟೇ ಬಾಕಿ ಇತ್ತು. ಇದೇ ಹೊತ್ತಿನಲ್ಲೇ ಲೋಕಾ ಬಲೆಗೆ ಸಿಲುಕಿದ್ದು ಆತಂಕ ತಂದಿದೆ. ಜಗನ್ನಾಥಗೆ ಸೇರಿದ 5 ಕಡೆಗಳಲ್ಲೂ ದಾಳಿ ಮಾಡಲಾಗಿದೆ. ಆಳಂದ, ತಾವರಗರೆ, ಬೀದರ್, ಬಸವಕಲ್ಯಾಣ ಸೇರಿದಂತೆ ಹಲವು ಕಡೆ 60ಕ್ಕೂ ಹೆಚ್ಚು ಎಕರೆ ಆಸ್ತಿ ಪತ್ತೆಯಾಗಿದೆ.

ಫುಡ್ ಸೇಫ್ಟಿ ಅಧಿಕಾರಿ ಮನೆ ಮೇಲೆ ದಾಳಿ: ಇನ್ನು ದಾವಣಗೆರೆಯಲ್ಲಿ ಆಹಾರ ಭದ್ರತಾ ಅಧಿಕಾರಿ ಡಾ.ನಾಗರಾಜ್ ಮನೆ ಮೇಲೂ ಲೋಕಾಯುಕ್ತ ದಾಳಿ ನಡೆಸಿದೆ.. ಮನೆಯಲ್ಲಿ ಲಕ್ಷಾಂತರ ಮೌಲ್ಯದ ವಾಚ್, ಚಿನ್ನ, ಬೆಳ್ಳಿ ವಸ್ತುಗಳು ಪತ್ತೆಯಾಗಿದೆ. ನಾಗರಾಜ್‌ಗೆ ಸೇರಿದ ಐದು ಸ್ಥಳಗಳಲ್ಲಿ ಅಕ್ರಮ ಆಸ್ತಿ ಸಂಬಂಧ ತನಿಖೆ ಮಾಡಲಾಯಿತು. → 4

ದಾಳಿಗೆ ಒಳಗಾದ ಅಧಿಕಾರಿಗಳು

- ಬೆಂಗಳೂರಿನ ಎಂಜಿನಿಯರ್ ನಂಜುಂಡಪ್ಪ
- ಬಿಬಿಎಂಪಿ ಇಇ ಎಚ್. ಬಿ. ಕಲ್ಲೇಶಪ್ಪ
- ಪಿಡಬ್ಲ್ಯುಡಿ ಮುಖ್ಯ ಎಂಜಿನಿಯರ್ ಜಗನ್ನಾಥ್
- ದಾವಣಗೆರೆಯ ಆಹಾರ ಭದ್ರತಾ ಅಧಿಕಾರಿ ಡಾ.ನಾಗರಾಜ್
- ಲೆಕ್ಕಪರಿಶೋಧಕ ಮಲ್ಲೇಶ್
- ಕೆಎಚ್‌ಬಿ ಪ್ರಥಮ ದರ್ಜೆ ಸಹಾಯಕ ಶಿವಾನಂದ ಕೆಂಬಾವಿ
- ತುಮಕೂರಿನ ವೈದ್ಯ ಜಗದೀಶ್

ವಿವಿ ಬಂದ್: ಸದನದಲ್ಲಿ ಕೋಲಾಹಲ

ನೂತನ ವಿವಿ ವಜಾ ಮಾಡಲ್ಲ, ವಿಲೀನ ಮಾಡುತ್ತೇವೆ: ಡಿಸಿಎಂ । ಪ್ರತಿಪಕ್ಷಗಳ ವಾಕ್ಸಮರ

ಬೆಂಗಳೂರು: ಭಾರಿ ವಿವಾದಕ್ಕೆ ಕಾರಣವಾಗಿದ್ದ ಹೊಸ ವಿಶ್ವ ವಿದ್ಯಾಲಯಗಳನ್ನು ಮುಚ್ಚುವ ರಾಜ್ಯ ಸರಕಾರದ ತೀರ್ಮಾನ ವನ್ನು ಮತ್ತೊಮ್ಮೆ ಸಮರ್ಥಿಸಿಕೊಂಡಿರುವ ಡಿಸಿಎಂ ಡಿ.ಕೆ.ಶಿವಕುಮಾರ್, ವಜಾ ಮಾಡುವ ಬದಲು ವಿಲೀನ ಮಾಡುತ್ತೇವೆ ಎಂದು ವಿಧಾನಸಭೆಯಲ್ಲಿ ಪ್ರಕಟಿಸಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಜಗದೀಶ್ ಗುಡಗುಂಟಿ ಪ್ರಶ್ನೆಗೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಉತ್ತರಿಸಲು ಮುಂದಾಗುತ್ತಿದ್ದಂತೆ ಬಿಜೆಪಿ ಶಾಸಕರು ವಿವಿಯನ್ನು ಬಂದ್ ಮಾಡುವ ಕ್ರಮ ಖಂಡಿಸಿದರು. ಈ ವೇಳೆ ಆಡಳಿತ-ಪ್ರತಿಪಕ್ಷ ಶಾಸಕರ ನಡುವೆ ವಾಕ್ಸಮರ ನಡೆಯಿತು. → 4

ನೂತನ ವಿವಿ ವಿಚಾರದಲ್ಲಿ ಸರ್ಕಾರದಿಂದ ಸ್ಪಷ್ಟ ತೀರ್ಮಾನ ಆಗಿಲ್ಲ. ಯಾರೂ ಆತಂಕಪಡುವ ಅಗತ್ಯವಿಲ್ಲ. ವಿವಿಗಳ ಸ್ಥಿತಿ ಗತಿ ಕುರಿತು ಸಂಪುಟ ಉಪಸಮಿತಿ ಸಭೆಯಲ್ಲಿ ಚರ್ಚಿಸಲಾ ಗಿದೆ. ಈ ವಿಚಾರ ಸಂಪುಟ ಸಭೆಯ ಮುಂದೆ ಇನ್ನೂ ಬಂದಿಲ್ಲ. ವಾಹನ- ಜಮೀನು ಖರೀದಿ, ನೇಮಕಾತಿ ಸಮಸ್ಯೆಗಳಿವೆ.
- ಡಿ.ಕೆ. ಶಿವಕುಮಾರ್ ಉಪಮುಖ್ಯಮಂತ್ರಿ

ಚಿನ್ನ ಕಳ್ಳಸಾಗಣೆ: ರನ್ಯಾ ಜತೆ ಪ್ರಭಾವಿಗಳ ಕೈವಾಡ?

ಗೋಲ್ಡ್ ಬಿಸ್ಕೆಟ್ ನಟಿಯ ಬಗ್ಗೆ ರೋಚಕ ಮಾಹಿತಿ ಬಯಲು । ಸೂತ್ರಧಾರಿಗೆ ಹುಡುಕಾಟ

ಬೆಂಗಳೂರು: ಚಿನ್ನ ಕಳ್ಳಸಾಗಣೆಯಲ್ಲಿ ನಟಿ ರನ್ಯಾ ರಾವ್ ಬಂಧನ ಪ್ರಕರಣಕ್ಕೆ ಮತ್ತೊಂದು ತಿರುವು ಸಿಕ್ಕಿದೆ. ನಟಿಯನ್ನು ಬಂಧಿಸಿರುವ ಡಿಆರ್‌ಐ ಅಧಿಕಾರಿಗಳ ತನಿಖೆಯಲ್ಲಿ ಮತ್ತಷ್ಟು ಸ್ಫೋಟಕ ವಿಚಾರಗಳು ಬಯಲಾಗಿವೆ. ರನ್ಯಾ ಕೇವಲ ಪಾತ್ರಧಾರಿ, ಸೂತ್ರಧಾರಿ ಯಾರೆಂಬುದು ಬೆಳಕಿಗೆ ಬರಲಿದೆ.

17 ಕೋಟಿ ಬೆಲೆಯ ಚಿನ್ನ ಖರೀದಿಸುವಷ್ಟು ರನ್ಯಾ ಶ್ರೀಮಂತಳಲ್ಲ. ರನ್ಯಾ ಹಿರಿಯ ಪೊಲೀಸ್ ಅಧಿಕಾರಿಯ ಮಲಮಗಳು. ಆಕೆಯನ್ನು ಬಳಸಿಕೊಂಡರೆ ಸುಲಭವಾಗಿ ಚಿನ್ನಸಾಗಣೆ ಮಾಡಬಹುದು. ಇದೇ ಲೆಕ್ಕಾಚಾರದಲ್ಲಿ ರನ್ಯಾಳನ್ನು ಚಿನ್ನಸಾಗಣೆಯಲ್ಲಿ ಬಳಸಿಕೊಳ್ಳಲಾಗಿದೆ. ಈ ಅಕ್ರಮ ಚಿನ್ನಸಾಗಣೆಯಲ್ಲಿ ವಿಮಾನ ನಿಲ್ದಾಣದ ಕೆಲ ಅಧಿಕಾರಿಗಳು ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದ್ದು, ಈ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ. ಚಿನ್ನಸಾಗಣೆಯಲ್ಲಿ ನಟಿ ರನ್ಯಾಗೆ ಕೆಜಿಗೆ ನಾಲ್ಕರಿಂದ ಐದು ಲಕ್ಷ ಕಮಿಷನ್ ನೀಡುತ್ತಿದ್ದ ಬಗ್ಗೆ ಮಾಹಿತಿ ಇದೆ. ರನ್ಯಾ ಬೆಂಗಳೂರಿಗೆ ತಂದ ಚಿನ್ನವನ್ನು ಯಾರಿಗೆ ಕೊಡುತ್ತಿದ್ದರು ಎನ್ನುವ ಬಗ್ಗೆ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

ಕಣ್ಣಿಟ್ಟಿದ್ದ ಅಧಿಕಾರಿಗಳು: ಕಳೆದ ಕೆಲವು ವಾರಗಳಿಂದ, ನಟಿ ಆಗಾಗ್ಗೆ ದುಬೈಗೆ ಭೇಟಿ ನೀಡುತ್ತಿದ್ದ ಹಿನ್ನೆಲೆಯಲ್ಲಿ ಅವರ ಮೇಲೆ ಅಧಿಕಾರಿಗಳು ಕಣ್ಣಿಟ್ಟಿದ್ದರು.ವಿಮಾನ ನಿಲ್ದಾಣ ಠಾಣೆ ಪೊಲೀಸ್ ಕಾನ್‌ಸ್ಟೇಬಲ್ ಒಬ್ಬರು ರನ್ಯಾಗೆ ಭದ್ರತಾ ತಪಾಸಣೆಯನ್ನು ತಪ್ಪಿಸಲು ಸಹಾಯ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. → 4

ಚಿನ್ನ ಕಳ್ಳಸಾಗಣೆಗೆ ₹1 ಲಕ್ಷ ಕಮಿಷನ್ ಪಡೆಯುತ್ತಿದ್ದ ರನ್ಯಾ

ರನ್ಯಾ ರಾವ್ ಚಿನ್ನವನ್ನು ಸ್ವಂತಕ್ಕಾಗಿ ಕಳ್ಳಸಾಗಣೆ ಮಾಡಿಲ್ಲ ಎನ್ನಲಾಗಿದೆ. ಅವರು ಬೇರೆಯವರಿಗಾಗಿ ಕೆಲಸ ಮಾಡುತ್ತಿದ್ದು ಚಿನ್ನ ತಂದುಕೊಡಲು ಅವರಿಗೆ ಭಾರಿ ಹಣ ನೀಡಲಾಗುತ್ತಿತ್ತು ಎಂದು ವರದಿಯಾಗಿದೆ. ಒಂದು ಕೆಜಿ ಚಿನ್ನ ಭಾರತಕ್ಕೆ ಕಳ್ಳಸಾಗಣೆ ಮಾಡಲು 1 ಲಕ್ಷ ರು. ಪಡೆಯುತ್ತಿದ್ದರು. ಕಳ್ಳ ಸಾಗಣೆ ಮಾಡಲು ಅವರು ವಿಶೇಷವಾಗಿ ವಿನ್ಯಾಸ ಮಾಡಿದ್ದ ಜಾಕೆಟ್ ಮತ್ತು ಸೊಂಟದ ಪಟ್ಟಿಗಳನ್ನು ಬಳಸುತ್ತಿದ್ದರು ಎಂದು ತನಿಖೆಯಲ್ಲಿ ಬಹಿರಂಗವಾ ಗಿದೆ. ಪದೇ ಪದೆ ದುಬೈಗೆ ಹೋಗಿ ಬರುತ್ತಿದ್ದ ಕಾರಣ ಡಿಆರ್‌ಐ ಅಧಿಕಾರಿಗಳು ಅವರ ಮೇಲೆ ಕಣ್ಣಿಟ್ಟಿದ್ದರು. ಈ ಬಾರಿ ಅವರು ದುಬೈನಿಂದ ಬಂದ ಬಳಿಕ ತಪಾಸಣೆ ಮಾಡಿದಾಗ ಚಿನ್ನದ ಕಳ್ಳ ಸಾಗಾಣಿಕೆ ಕೃತ್ಯ ಬಹಿರಂಗವಾಗಿದೆ.

ಆಕೆ ನಮ್ಮ ಜತೆಗಿಲ್ಲ: ರನ್ಯಾ ತಂದೆ ಸ್ಪಷ್ಟನೆ

ಆರೋಪಿ ರನ್ಯಾ ರಾವ್ ಡಿಜಿಪಿ ಕೆ. ರಾಮಚಂದ್ರ ರಾವ್ ಮಲಮಗಳಾಗಿದ್ದಾರೆ. 'ರನ್ಯಾರಾವ್ ಹಾಗೂ ತಮ್ಮ ಕುಟುಂಬ ಪ್ರತ್ಯೇಕವಾಗಿವೆ. ನನ್ನ ಕೆರಿಯರ್‌ನಲ್ಲಿ ಒಂದೇ ಒಂದು ಕಪ್ಪು ಚುಕ್ಕಿ ಇಲ್ಲ. ಯಾವುದೇ ತಂದೆಗೆ ಆಗುವಂತೆ ನನಗೆ ಕೂಡ ಆಘಾತ ಆಗಿದೆ. ರನ್ಯಾ ನಮ್ಮ ಜೊತೆ ವಾಸ ಮಾಡು ತ್ತಿಲ್ಲ. ಗಂಡನ ಜತೆ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾಳೆ. ಕೌಟುಂಬಿಕ ಕಾರಣದಿಂದ ಅವರ ನಡುವೆ ಏನೋ ಸಮಸ್ಯೆ ಆಗಿರಬಹುದು. ಏನೇ ಆದರೂ ಕಾನೂನು ತನ್ನ ಕೆಲಸ ಮಾಡಲಿದೆ. ಹೆಚ್ಚೇನೂ ಹೇಳಲು ನಾನು ಇಷ್ಟಪಡಲ್ಲ' ಎಂದು ಹಿರಿಯ ಪೊಲೀಸ್ ಅಧಿಕಾರಿ ಸ್ಪಷ್ಟಪಡಿಸಿದ್ದಾರೆ.

ಸೊಂಪಾದ ಪುಟಗಳು

ನಮ್ಮ ತಲೆ ಹಿಂದಿಗಿಂತ ದೊಡ್ಡದು ಆಗುತ್ತಿದೆಯೇ?
ಶಿಶಿರಕಾಲ
ಶಿಶಿರ್ ಹೆಗಡೆ 6

ಜನಪದ ನಂಬಿಕೆಗಳ ಆಗರ ಈ ಪ್ರಾಕೃತಿಕ ಸೊಬಗಿನ ಬಂಡೆ!
ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ಕೆಲವು ಜನ ನಿಮ್ಮನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ, ನಿಮ್ಮನ್ನು ಟೀಕಿಸುತ್ತಾರೆ, ಬೈಯುತ್ತಾರೆ. ಆದರೆ ಯಾವ ಕಾರಣಕ್ಕೂ ಅವರ ಹಂತಕ್ಕೆ ಇಳಿಯಲೇಬಾರದು. ಅಂಥ ಸಂದರ್ಭದಲ್ಲಿ ಶಾಂತವಾಗಿದ್ದು, ಮನಸ್ಸನ್ನು ಗಟ್ಟಿಗೊಳಿಸಿಕೊಂಡು ಮುನ್ನಡೆಯಬೇಕು. ಇಂಥವುಗಳಿಗೆಲ್ಲ ಮಹತ್ವವನ್ನೇ ನೀಡಬಾರದು.

ವಕ್ರತುಂಡೋಕ್ತಿ

ಯಾರಿಗೂ ಸ್ಮಶಾನಕ್ಕೆ ಹೋಗಲು ಇಷ್ಟವಿರುವುದಿಲ್ಲ. ಆದರೂ ಸ್ಮಶಾನಕ್ಕೆ ಗೋಡೆ ಹಾಕಿರುತ್ತಾರೆ.

ದೊರೆಸ್ವಾಮಿ ವಿಧಿವಶ

ಬೆಂಗಳೂರು: ಪಿಇಎಸ್ ಶಿಕ್ಷಣ ಸಂಸ್ಥೆಗಳ ಸ್ಥಾಪಕ, ವಿಧಾನಪರಿಷತ್ ಮಾಜಿ ಸದಸ್ಯ ಎಂ.ಆರ್. ದೊರೆಸ್ವಾಮಿ ಗುರುವಾರ ಸಂಜೆ ವಿಧಿವಶರಾಗಿದ್ದಾರೆ. ಶುಕ್ರವಾರ ಅವರ ಅಂತ್ಯ ಕ್ರಿಯೆ ನಡೆಯಲಿದೆ. ಎಂ.ಆರ್. ದೊರೆ ಸ್ವಾಮಿ ಅವರಿಗೆ 88 ವರ್ಷ ವಯಸ್ಸಾ ಗಿತ್ತು. ಅವರು ಪತ್ನಿ ಕೆ ರಾಧಾ ಮನೋಹರಿ, ಒಬ್ಬ ಮಗ, ಮಗಳನ್ನು ಅಗಲಿದ್ದಾರೆ. ಆಂಧ್ರ ಪ್ರದೇಶದ ಚಿತ್ತೂರು ಮೂಲದ ದೊರೆಸ್ವಾಮಿ ಬೆಂಗಳೂರಿನಲ್ಲಿ ಶಿಕ್ಷಣ ತಜ್ಞರಾಗಿ, ಪಿಇಎಸ್ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಕರ್ನಾಟಕದ ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದರು. ದೊರೆಸ್ವಾಮಿ ಅವರ ಅಂತ್ಯಕ್ರಿಯೆಯನ್ನು ಸಕಲ ಸರಕಾರಿ ಗೌರವಗಳೊಂದಿಗೆ ನೆರವೇರಿಸುವಂತೆ ಸಿಎಂ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಮಾತಂದ್ರೆ ಮಾತು

ಮುಂಬೈಗೆ ಒಂದೇ ಭಾಷೆ ಎಂಬುದಿಲ್ಲ, ಹಲವಾರು ಭಾಷೆಗಳಿವೆ. ಮಹಾನಗರದ ವಿವಿಧ ಪ್ರದೇಶಗಳಲ್ಲಿ ಜನರು ವಿವಿಧ ಭಾಷೆಗಳನ್ನು ಆಡುತ್ತಾರೆ. ಘಾಟ್ಕೋಪರ್‌ನಲ್ಲಿ ಜನ ಹೆಚ್ಚುವ ಆಡುವ ಭಾಷೆ ಗುಜರಾತಿ. ಅದೇ ರೀತಿ ಗಿರ್‌ಗಾಂವ್‌ನಲ್ಲಿ ಕೆಲವೇ ಜನರು ಹಿಂದಿ ಮಾತನಾಡುತ್ತಾರೆ. ಅಲ್ಲಿ ಹೆಚ್ಚಿನ ಜನರ ಭಾಷೆ ಮರಾಠಿ. ಹೀಗಾಗಿ ಮುಂಬೈಗೆ ಬರುವವರು ಮರಾಠಿ ಕಲಿಯುವ ಅಗತ್ಯ ಇಲ್ಲ.

-ಸುರೇಶ್ ಭಯ್ಯಾಜಿ ಜೋಶಿ
ಆರೆಸ್ಸೆಸ್ ಮುಖಂಡ

ಫನ್‌ತರಂಗ
- ರಘುಪತಿ ಶೃಂಗೇರಿ -

ಶೇ. 80ರಷ್ಟು ಟೆಕ್ಕಿಗಳಿಗೆ ಫ್ಯಾಟಿ ಲಿವರ್ ಸಮಸ್ಯೆ: ಸಂಶೋಧನಾ ವರದಿ





It is with profound sadness that we announce the passing of our beloved founder, Dr. M R Doreswamy. A visionary leader and an inspiring educator, Dr. Doreswamy dedicated his life to the pursuit of excellence in education, healthcare and the betterment of society.

A Heartfelt Farewell

As we mourn the loss of a great leader, we also celebrate his remarkable life and the enduring impact he has made. Our thoughts and prayers are with his family during this difficult time.

Rest in Peace, Dr. M R Doreswamy. Your legacy lives on.

PES UNIVERSITY

ಸಮಾಚಾರ ಸಣ್ಣದಲ್ಲ

ಪ್ರೆಸ್‌ಕ್ಲಬ್ ಕಾರ್ಯದರ್ಶಿ ಕುರುಗೋಡಿ ನೇಮಕ

ಹಾವೇರಿ: ಕರ್ನಾಟಕ ರಾಜ್ಯ ಪ್ರೆಸ್ ಕ್ಲಬ್ ಗೆ ರೈತ ಧ್ವನಿ ಟಿವಿ ಸಂಸ್ಥಾಪಕರಾದ ಬಸವರಾಜ ಕುರಗೋಡಿ ಅವರನ್ನು ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಕರ್ನಾಟಕ ರಾಜ್ಯ ಪ್ರೆಸ್ ಕ್ಲಬ್‌ನ ರಾಜ್ಯ ಕಾರ್ಯಕಾರಣಿ ಸಭೆಯ ಸರ್ವಾನು ಮತದ ತೀರ್ಮಾನ ದೊಂದಿಗೆ ಬಸವರಾಜ ಕುರಗೋಡಿ ಅವರ ಪತ್ರಿಕಾ ಕ್ಷೇತ್ರದಲ್ಲಿ ಗಣನೀಯ ಸೇವೆ, ಹೋರಾಟ, ಸಂಘಟನಾ ಶಕ್ತಿ ಇವೆಲ್ಲವನ್ನು ಗಣನೆಯಲ್ಲಿ ಇಟ್ಟುಕೊಂಡು ಒಂದು ವರ್ಷದ ಅವಧಿಗೆ ಕರ್ನಾಟಕ ರಾಜ್ಯ ಪ್ರೆಸ್ ಕಬ್ಲ್ ರಾಜ್ಯ ಸಂಘಟನಾ ಕಾರ್ಯ ದರ್ಶಿಯಾಗಿ ನೇಮಿಸಲಾಗಿದೆ ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ರಮೇಶ ಎಸ್. ಜಿ ತಿಳಿಸಿದ್ದಾರೆ.

ಲೋಕಾಯುಕ್ತರ ತಾಲೂಕು ಭೇಟಿ 12ಕ್ಕೆ

ಕಾರವಾರ: ಲೋಕಾಯುಕ್ತ ಅಧಿಕಾರಿಗಳ ತಾಲೂಕು ಭೇಟಿ ಕಾರ್ಯಕ್ರಮವು ಮಾ.12 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಹೊನ್ನಾವರ ತಾಪಂ ಸಭಾ ಭವನ ದಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಭರ್ತಿ ಮಾಡಿದ ದೂರುಗಳನ್ನು ಸ್ವೀಕಾರ ಮಾಡಿ, ವಿಚಾರಣೆ ನಡೆಸುವರು. ಸರಕಾರಿ ಕಚೇರಿಯಲ್ಲಿ ಸಾರ್ವಜನಿಕ ಕೆಲಸಗಳನ್ನು ನಿರ್ವಹಿಸಲು ಲಂಚಕ್ಕೆ ಬೇಡಿಕೆ ಮತ್ತು ಅರ್ಜಿಗಳ ವಿಲೇವಾರಿ ಮಾಡುವಲ್ಲಿ ಅನಗತ್ಯ ವಿಳಂಬ, ಸರಕಾರಿ ಹಣ ದುರು ಪಯೋಗ, ಕರ್ತವ್ಯ ಲೋಪ, ಕಳಪೆ ಕಾಮಗಾರಿ ಮಾಡುವ ಸರಕಾರಿ ಅಧಿಕಾರಿ ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗಧಿತ ನಮೂನೆ-1 ಮತ್ತು 2 ರಲ್ಲಿ ಭರ್ತಿಮಾಡಿ ನೀಡಬಹುದು. ಸಾರ್ವಜನಿಕರು ತಮ್ಮ ದೂರುಗಳು ಇದ್ದಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಪರಿಹಾರ ಕಂಡುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂರವಾಣಿ ಸಂ।08382-295293, 220198, 222250, 222022, 229988ಗೆ ಸಂಪರ್ಕಿಸಬಹುದು ತಿಳಿಸಿದ್ದಾರೆ.

ಬೆಡಸಗಾಂವ ಸಂಘಕ್ಕೆ ಜೈದೇವ ನಾಯ್ಕ ಅಧ್ಯಕ್ಷ

ಮುಂಡಗೋಡ: ತಾಲೂಕಿನ ಬೆಡಸಗಾಂವ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷರಾಗಿ ಜೈದೇವ ಹನ್ಮಂತ ನಾಯ್ಕ ಹಾಗೂ ಉಪಾಧ್ಯಕ್ಷರಾಗಿ ಗಂಗಾಧರ ನಿಂಗಪ್ಪ ನಾಯ್ಕ ಅವರು ಅವಿರೋ ಧವಾಗಿ ಆಯ್ಕೆಯಾದರು. ಬುಧವಾರ ನಡೆದ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಚುನಾವಣೆಯಲ್ಲಿ ಸಂಘದ 11 ಜನರ ಪೈಕಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ತಲಾ ಒಬ್ಬರು ಮಾತ್ರ ನಾಮಪತ್ರ ಸಲ್ಲಿಸಿ ದ್ದರಿಂದ ಅವಿರೋಧ ಆಯ್ಕೆ ನಡೆಯಿತು. ಸಹಕಾರಿ ಅಭಿವೃದ್ಧಿ ಅಧಿಕಾರಿ ರಾಘವೇಂದ್ರ ಗುಡಿಕೇರಿ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿ ದರು. ಈ ಸಂದರ್ಭದಲ್ಲಿ ಸಂಘದ ಮುಖ್ಯ ಕಾರ್ಯನಿರ್ವಾಹಕ ಪ್ರದೀಪ ನಾಯ್ಕ ಮುಂತಾದವರು ಉಪಸ್ಥಿತರಿದ್ದರು.

ಕುಮಟಾ: ವಿದ್ಯುತ್ ವ್ಯತ್ಯಯ ನಾಳೆ

ಕಾರವಾರ: ಹೆಸ್ಕಾಂ, ಕುಮಟಾ ಉಪವಿಭಾಗದ 11 ಕೆ.ವಿ ಇಂಡಸ್ಟ್ರೀಯಲ್ ಮಾರ್ಗದ ವ್ಯಾಪ್ತಿಯಲ್ಲಿ ಬರುವ ಚೆನ್ನಮ್ಮ ಪಾರ್ಕ ಹೆಗಡೆ ಕ್ರಾಸ್ ಹತ್ತಿರ ಐ.ಆರ್.ಬಿ ರವರ ಲೈನ್ ಕಾಮಗಾರಿ ಇರುವು ದರಿಂದ ಮಾ.8 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಇಂಡಸ್ಟ್ರೀಯಲ್ ಮಾರ್ಗಕ್ಕೆ ಸಂಬಂಧಿಸಿದ ಸಿದ್ದನಭಾವಿ, ಹೊಸ ಬಸ್ಸ್ಟ್ಯಾಂಡ್, ಉಪ್ಪಾರಕೇರಿ, ಮೂರೂರ ರೋಡ, ಜೋಸೆಫ್ ನಗರ, ಗಾಂಧಿನಗರ ಮತ್ತು ವಿವೇಕನಗರ ಮತ್ತು ಮಣಕಿ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ, ಕುಮಟಾ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರು(ವಿ)ರವರು ತಿಳಿಸಿದ್ದಾರೆ.

ಮೇಕೆ ಸಾಕಣೆ ತರಬೇತಿ ಅರ್ಜಿ ಆಹ್ವಾನ

ಕಾರವಾರ: ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ತರಬೇತಿ ಸಂಸ್ಥೆಯಲ್ಲಿ 19 ರಿಂದ 45 ವಯಸ್ಸಿನ ಗ್ರಾಮೀಣ ಭಾಗದ ನಿರುದ್ಯೋಗ ರೈತ ಯುವಕ/ಯುವತಿರಿಗಾಗಿ ಏಪ್ರಿಲ್‌ನ ಮೂದಲನೇ ವಾರದಲ್ಲಿ ಕುರಿ ಹಾಗೂ ಮೇಕೆ ಸಾಕಾಣಿಕೆ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಹೆಸರು, ವಿಳಾಸವನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ತರಬೇತಿ ಅವಧಿಯಲ್ಲಿ ಊಟ ವಸತಿ ಸಂಪೂರ್ಣ ಉಚಿತವಾಗಿರುತ್ತದೆ. ಮೊದಲು ಬಂದವರಿಗೆ ಹಾಗೂ ಗ್ರಾಮೀಣ ಭಾಗದವರಿಗೆ ಮೊದಲ ಆದ್ಯತೆ ನೀಡಲಾಗುವುದು. ತರಬೇತಿಯಲ್ಲಿ ಕೌಶಲ್ಯ, ಸಾಧನ ಪ್ರೇರಣಾ ತರಬೇತಿ, ಉದ್ಯಮಶೀಲತೆಯ ದಕ್ಷ ಗುಣಗಳು, ಕ್ಷೇತ್ರ ಭೇಟಿ, ಸಾಫ್ಟ್ ಸ್ಕಿಲ್ಸ್, ಯೋಗ ತರಬೇತಿ, ಬ್ಯಾಂಕಿನಿಂದ ಸಾಲ ಪಡೆದು ಸ್ವಉದ್ಯೋಗ ಪ್ರಾಂಭಿಸಲು ಬೇಕಾದ ಜ್ಞಾನ, ಸರಕಾರಿ ಯೋಜನೆಗಳು ಮತ್ತು ಯೋಜನಾ ವರದಿ ತಯಾರಿಕೆ ಇನ್ನಿತರ ಮಾಹಿತಿ ಉಚಿತವಾಗಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂ ಸಂ. 8970145354,9 ನ್ನು ಸಂಪರ್ಕಿಸಲು ತಿಳಿಸಿದ್ದಾರೆ.

{ಹೆಚ್. ಡಿ ಕುಮಾರಸ್ವಾಮಿ} ಕೇಂದ್ರ ಸಚಿವ

ಜನ ಇದಕ್ಕೆ ತಲೆಕೆಡಿಸಿಕೊಳ್ಳಿಲ್ಲ. ಅವರಿಗೆ 2 ಸಾವಿರ ಹಣವೇ ದೊಡ್ಡದು. ಜನರಿಗೆ ಬೇಕಿಲ್ಲದಿದ್ದಾಗ ವಿರೋಧ ಪಕ್ಷಗಳು ಏನು ಚರ್ಚೆ ಮಾಡುತ್ತವೆ. ಜನ ನೆಮ್ಮದಿಯಿಂದ ಇದ್ದಾರೆ. ಎರಡು ವರ್ಷದಿಂದ ಆರ್ಥಿಕವಾಗಿ ಸದೃಢವಾಗಿದ್ದಾರೆ. ಗ್ಯಾರಂಟಿ ಕಾರ್ಯಕ್ರಮದಿಂದ ಅವರು ಸಂತೃಪ್ತಿಯಿಂದ ಇರಬೇಕಲ್ಲವೇ.

ಜಿಲ್ಲೆಯಲ್ಲಿ ಐದು ನಾಯಿಗಳು ಚಿರತೆ ಬಾಯಿಗೆ ಬಲಿ | ಮನೆಗಳಲ್ಲಿನ ಬೆಕ್ಕುಗಳನ್ನೂ ಬಿಡದೇ ಬೇಟೆಯಾಡುತ್ತಿದೆ

ಮನೆ ಕಾಯ್ವ ನಾಯಿಯ ಕಾಯ್ವರಾರು?

ವಿನುತಾ ಹೆಗಡೆ ಶಿರಸಿ

ನಮ್ಮನೇನಲ್ಲಿ ಈ ವರ್ಷ ಏನಿಲ್ಲವೆಂದರೂ ಐದು ನಾಯಿ ಆಗಿರಬಹುದು ಹುಲಿ ಬಾಯಿಗೆ ಬಿದ್ದಿದ್ದು. ಅಷ್ಟೇ ಅಲ್ಲ ಮೂರು ಬೆಕ್ಕೂ ಮಾಯ..? ಮನೆ ಕಾಯಲು ಸಾಕಿರುವ ನಾಯಿಯನ್ನೇ ಹುಲಿ ಹೊತ್ತೊಯ್ದರೆ ಅದರ ಕಾಯುವವರಾರು ಎನ್ನುವುದೇ ದೊಡ್ಡ ಚಿಂತೆಯಾಗಿದೆ. ಇಂದು ಗ್ರಾಮೀಣ ಭಾಗದ ಎಲ್ಲಾ ಸಾರ್ವಜನಿಕರ ಸಮಸ್ಯೆ. ಮಲೆನಾಡಿನ ಹಳ್ಳಿಗರಿಗೆ ಈಗ ಮನೆಕಾಯುವ ಸಾಕುನಾಯಿಗಳನ್ನೇ ಕಾಯಬೇಕಾದ ಸ್ಥಿತಿ ಬಂದೊದಗಿದೆ. ಚಿರತೆ, ಹುಲಿ, ಕಿರುಬ ಎನ್ನದೇ ಮನುಷ್ಯರ ಭಯವೇ ಇಲ್ಲದೇ ಎಲ್ಲವೂ ಮನೆಯಂಗಳಕ್ಕೆ ಬಂದು ನಾಯಿಯನ್ನು, ಬೆಕ್ಕನ್ನು ಹೊತ್ತೊಯ್ಯುತ್ತಿವೆ.

ಚಿರತೆ, ಹುಲಿಗಳಿಗೆ ಕಾಡಿನಲ್ಲಿ ಆಹಾರವಿಲ್ಲವೇ ಅಥವಾ ಸುಲಭಕ್ಕೆ ಇಲ್ಲಿ ನಾಯಿಗಳು ಸಿಗುತ್ತದೆ ಎನ್ನುವ ಅಪಲಾಷೆಯೋ ಗೊತ್ತಿಲ್ಲ. ಒಟ್ಟಾರೆಯಾಗಿ ಚಿರತೆಗಳು ದಿನೇ ದಿನೇ ಗ್ರಾಮೀಣಭಾಗದಲ್ಲಿ ಮನೆಗೆ ಬರುತ್ತಿರುವುದು ನಾಯಿಯನ್ನು ತಿನ್ನುತ್ತಿರುವುದು ಮಾತ್ರ ನಡೆದೇ ಇದೆ.

ನೀಯತ್ತಿನಿಂದ ಮನೆಕಾಯುವ, ನಿಷ್ಠೆಗೆ ಹೆಸರಾದ ನಾಯಿಗಳನ್ನು ಹಳ್ಳಿಗಳ ಬಹುತೇಕ ಮನೆಗಳಲ್ಲಿ ಸಾಕುತ್ತಾರೆ. ಕೆಲವು ತಳಿಯ ನಾಯಿಗಳನ್ನು ಸಾಕಿದರೆ ಹೆಚ್ಚಿನವರು ದೇಶಿಯ (ಬೀದಿ ನಾಯ)ತಳಿಯ ನಾಯಿಗಳನ್ನು



ಸಾಕುವುದು ಹೆಚ್ಚು. ಅದರಲ್ಲೂ ಈಗೆಲ್ಲ ಹಳ್ಳಿಗಳ ಮನೆಗಳಲ್ಲಿ ವಾಸಿಸುವವರ ಸಂಖ್ಯೆ ಕಡಿಮೆ ಆಗುತ್ತಿರುವುದರಿಂದ ಸುರಕ್ಷತೆಗೆ ನಾಯಿಗಳು ಆಧಾರವಾಗಿವೆ. ಏಕೆಂದರೆ ಇತ್ತೀಚಿನ ವರ್ಷಗಳಲ್ಲಿ ಗ್ರಾಮೀಣ ಭಾ ವೃದ್ಧಾಶ್ರಮವಾಗಿ ಬೆಳೆದಿದೆ. ಮನೆಯಲ್ಲಿ ಆಸರೆಯಾಗಿ ಪ್ರೀತಿಯಿಂದ ಸಾಕಿದ ನಾಯಿಗಳು ಅನಾಯಾಸವಾಗಿ ಮಾಯವಾಗುತ್ತವೆ.

ಮನೆಯಂಗಳದಲ್ಲಿ ಬೆಳಕು ಇರಲಿ ಇಲ್ಲದಿರಲಿ ಚಿರತೆಮಾತ್ರ ಸಂಜೆಯಾದೊಡನೆ ಪ್ರತ್ಯಕ್ಷ. ಹಾಗಂತ ಈ ಚಿರತೆಗಳು ಮಧ್ಯರಾತ್ರಿಗೆಲ್ಲ ಬರುವುದು ತೀರಾ ಅಪರೂಪ ಸಂಜೆ ಹೊತ್ತಲ್ಲಿ ಹಾಗೂ ನಾಯಿಗೆ ಅನ್ನ ಹಾಕುವ ಹೊತ್ತಲ್ಲೇ ದುತ್ತನೇ ಬಂದುಬಿಡುತ್ತವೆ. ಮನೆಯಂಗಳಕ್ಕೆ ಲಗ್ಗೆಯಿಟ್ಟ ಚಿರತೆಗಳು ಆಹಾರಕ್ಕಾಗಿ ಇವುಗಳನ್ನು ಹೊತ್ತೊಯ್ಯುತ್ತಿವೆ. ಕೆಲವು ಕಡೆಗಳಲ್ಲಿ ಮನೆಯಲ್ಲಿ ಜನರಿದ್ದಾಗಲೂ ಚಿರತೆಗೆ ಯಾವುದೇ ಎಗ್ಗಿಲ್ಲದೆ ನಾಯಿಯನ್ನು ಹೊತ್ತೊಯ್ಯುತ್ತಿದೆ.ಈ ಹಿಂದೆ ಕಾಡಿನಲ್ಲಿ ಕಾಡು ಪ್ರಾಣಿಗಳಿಗೆ ಆಹಾರವಿಲ್ಲ ಪಾಪ ಅವು ನಾಡಿನತ್ತ

> **ನಮ್ಮ ಮನೆಯಲ್ಲಿ ಈಗಾಗಲೇ ಸಾಕಷ್ಟು ನಾಐಿಯನ್ನು ಸಂಜೆಯ ವೇಳೆಯಲ್ಲಿ ಚಿರತೆ ಹೊತ್ತೊಯ್ದಿದೆ. ಆದ್ದರಿಂದ ಮುಂಚೆಯೆಲ್ಲ ಒಂದೊಂದೆ ನಾಯಿ ಸಾಕುತ್ತಿದ್ದೆವು. ಆದರೀಗ ಎರಡೆರಡು ನಾಯಿಯನ್ನು ಸಾಕುತ್ತಿದ್ದೇವೆ. ಈಗ ಇವೆರಡೂ ಬದುಕಿಯೇ ಇದೆ. ಬಹುಷ ಎರಡು ನಾಯಿ ಇದ್ದರೆ ಚಿರತೆಗೆ ಭಯ ಅನಿಸುತ್ತದೆ. ನಮ್ಮ ಮನೆಯಲ್ಲಿ ನಾಯಿಯೊಂದೇ ಅಲ್ಲ ಬೆಕ್ಕನ್ನೂ ಬಿಟ್ಟಿಲ್ಲ ಚಿರತೆ. ಅದೆಷ್ಟೋ ಹಸಿವೋ ಅಥವಾ ಆಲಸಿತನವೋ ಗೊತ್ತಿಲ್ಲ. ನಾವು ಮನೆಯೊಳಗೇ ಇದ್ದಾಗಲೂ ಚಿರತೆ ಮನೆಯಂಗಳಕ್ಕೆ ಬಂದಿದ್ದು ಈಗಲೂ ನಮಗೂ ಭಯ ಆಗುತ್ತದೆ. ಇದಕ್ಕೆ ಪರಿಹಾರವಂತೂ ಕಾಣುತ್ತಿಲ್ಲ.**
> -ಸುವರ್ಣ ಗಾಂವ್ಕರ, ಭಾಗಿನಕಟ್ಟಾ

ಬುತ್ತಿವೆ ಆಹಾರ ಅರಸಿ ಎನ್ನುತ್ತಿದ್ದರು. ಆದರೀಗ ಇದೆಲ್ಲ ದಿನ ನಿತ್ಯದ ಗೋಳಾಗಿದೆ.

ಸಾಮಾನ್ಯ ಹಿಂದೆಲ್ಲ ಅಲ್ಲಲ್ಲಿ ಇಂತಹ ಘಟನೆ ನಡೆಯುತ್ತಿದ್ದವು. ಆದರೀಗ ಎಲ್ಲ ಹಳ್ಳಿಗಳೂ ನಿತ್ಯವೂ ಇಂತಹ ಘಟನೆಗಳು ಘಟಿಸುತ್ತಿವೆ. ಇದರ ಜತೆಯಲ್ಲಿ ಮನೆಯ ಅಂಗಳದಲ್ಲಿದ್ದ ಬೆಕ್ಕನ್ನು ಸಹ ಚಿರತೆ ಹೊತ್ತೊಯ್ಯುತ್ತಿರುವ ಘಟನೆ ನಡೆಯುತ್ತಿದೆ.

ಇನ್ನು ಇತ್ತೀಚೆಗೆ ತೋಟಕ್ಕೆ ಬರುತ್ತಿದ್ದ ನವಿಲನ್ನೂ ಚಿರತೆ ಆಹಾರವಾಗಿಸಿಕೊಂಡಿದ್ದು, ಅವು ತೋಟಕ್ಕೆ ಬರುವ ಹೊತ್ತಲ್ಲೇ ತಾನೂ ಆಗಮಿಸಿ ಅದನ್ನು ಕಬಳಿಸುತ್ತಿದೆ.

ನಾಯಿಗೆ ಅನ್ನ ಹಾಕುವ ಹೊತ್ತಲ್ಲಿ ಚಿರತೆ

> **ಪರಿಹಾರವೆಲ್ಲ ಇಲ್ಲ**
> **ಅದೆಷ್ಟೋ ಮನಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಿದ್ದಾರೆ. ಅದರಲ್ಲಿಯ ಕೆಲ ದೃಶ್ಯ ನೋಡಿದರೆ ನಾಯಿಗಲ್ಲ ನಮಗೂ ಭಯ ಹುಟ್ಟಿಸುತ್ತದೆ. ಚಿರತೆಗಳು ನಾವು ಮಲಗಿದ್ದಾಗ ಮನೆಯಂಗಳದಲ್ಲಿ ಓಡಾಡಿ ಹೋಗಿರುತ್ತವೆ ಇನ್ನು ಕೆಲವಂತೂ ನಾಯಿಯನ್ನು ಎಳೆದೊಯ್ದಿದ್ದು ನೋಡಿದರೆ ನಮಗೆ ಭಯ ಹುಟ್ಟಿಸುತ್ತದೆ. ನಾಯಿ ಏನಾಯಿತು ಎನ್ನುವುದಷ್ಟನ್ನೇ ಸಿಸಿ ಕ್ಯಾಮೆರಾ ತೋರಿಸುತ್ತದೆ ಅಷ್ಟೆ. ಕಾಡು ಪ್ರಾಣಿ ನಾಯಿಯನ್ನು ಹೊತ್ತೊಯ್ದಿದ್ದರಿಂದ ಅರಣ್ಯ ಇಲಾಖೆ ಪರಿವೇನೂ ಕೊಡುತ್ತಿಲ್ಲ.**

ನಾಯಿಯನ್ನು ತಿನ್ನಲು ಸಂಚು ಹೂಡುತ್ತದೆ. ಏಕೆಂದರೆ ನಾಯಗಳಿಗೆ ಅನ್ನ ತಿನ್ನುವ ಹೊತ್ತಲ್ಲಿ ಚೊರತೆಯ ವಾಸನೆ ಬರುವುದಿಲ್ಲ, ಅಲ್ಲದೇ ಅದರ ಗಮನ ಚಿರತೆಯತ್ತ ಹೋಗದೇ ತಿನ್ನುವ ಅನ್ನದ ಮೇಲಿರುತ್ತದೆ. ಆದ್ದರಿಂದ ನಾಯಿಯು ಅನ್ನ ತಿನ್ನುವ ಹೊತ್ತಲ್ಲೇ ಚಿರತೆ ಲಗ್ಗೆ ಇಡುತ್ತದೆ. ಅದೂ ಅಲ್ಲದೇ ನಾಯಿಯನ್ನು ಗೋಡಿನಲ್ಲಿ ಕೆಲವರು ತುಂಬಿ ಇಡುವುದರಿಂದ ಅನ್ನಕ್ಕಾಗಿ ಬಿಟ್ಟಾಗಾದರೂ ಕಬಳಿಸಬಹುದು ಎನ್ನುವ ಚತುರ ಬುದ್ದಿ ಚಿರತೆಯದ್ದು. ಆದ್ದರಿಂದ ಸಂಜೆಯ ಹೊತ್ತಲ್ಲಿ ಅಥವಾ ಊಟದ ಹೊತ್ತಲ್ಲೇ ಹೆಚ್ಚಾಗಿ ಚಿರತೆ ಮನೆಯಂಗಳಕ್ಕೆ ಬರುತ್ತದೆ.

ದೌರ್ಜನ್ಯ ಖಂಡಿಸಿ ಕ್ರಮಕ್ಕೆ ಒತ್ತಾಯ

ಶಿರಸಿ: ಅರಣ್ಯ ಸಿಬ್ಬಂದಿ ಸಿದ್ದಾಪುರ ತಾಲೂಕಿನ ತಂಡಾಗುಂಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಾರಖಂಡ ಗ್ರಾಮದ ಅರಣ್ಯವಾಸಿಗಳ ಕುಟುಂಬದವ ಮೇಲೆ ಅರಣ್ಯ ಸಿಬ್ಬಂದಿ ಅಮಾನವೀಯ ದೌರ್ಜನ್ಯದ ಕೃತ್ಯವನ್ನು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ತೀವ್ರವಾಗಿ ಖಂಡಿಸಿದ್ದು, ಅರಣ್ಯ ಸಿಬ್ಬಂದಿ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಸಕರಿಗೆ ಒತ್ತಾಯಿಸಿದ್ದಾರೆ.

ಅರಣ್ಯ ಸಿಬ್ಬಂದಿಯಿಂದ ತೀವ್ರ ದೈಹಿಕ ಹಲ್ಲೆಗೆ ಒಳಗಾಗಿ ಶಿರಸಿ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿರುವ ವಿದ್ಯಾ ವಿನಾಯಕ ಗೌಡ ಹಾಗೂ ಅವಳ ಪತಿ ಹೊರರೋಗಿಯಾಗಿ ಚಿಕಿತ್ಸೆ ಪಡೆಯುತ್ತಿರುವ ವಿನಾಯಕ ಗೌಡ ಅವರ ಆರೋಗ್ಯ ಹೇಳಿಕೆ ನೀಡಿದರು. ಕೆರಿಯಾ ಅಜ್ಜು ಗೌಡ ಅವರು ಅನಾದಿಕಾಲದಿಂದ ಅತಿಕ್ರಮಣ ಸಾಗುವಳಿ ಕ್ಷೇತ್ರದಲ್ಲಿ ಅರಣ್ಯ ಸಿಬ್ಬಂದಿ ಕಾನೂನು ವ್ಯಾಪ್ತಿಗೆ ಮೀರಿ ದೈಹಿಕ ಹಲ್ಲೆ, ಅವಾಚ್ಯ ಶಬ್ದ, ಮಾನಸಿಕ ಹಿಂಸೆ ನೀಡಿದಲ್ಲದ್ದೇ ಗಾಯಾಳು ವಿದ್ಯಾ ಪ್ರಜ್ಞೆ ಹಿನಾಳಾಗಿದಾಗಲೂ ಬಲಪ್ರಯೋಗದಿಂದ ಅರಣ್ಯ ಇಲಾಖೆಯ ವಾಹನದಲ್ಲಿ ಎತ್ತಿಹಾಕಿರುವ ಘಟನೆ ಖಂಡನೀಯ ಎಂದಿದ್ದಾರೆ.

ಕ್ರಮಕ್ಕೆ ಆಗ್ರಹ: ಕಾನೂನು ಮೀರಿದ ಅರಣ್ಯ ಸಿಬ್ಬಂದಿಯ ಅಮಾನವೀಯ ಕೃತ್ಯಕ್ಕೆ ತಕ್ಷಣ ಸ್ಥಳೀಯ ಶಾಸಕ ಭೀಮಣ್ಣ ನಾಯ್ಕ ಕ್ರಮಕ್ಕೆ ಸೂಚನೆ ನೀಡಬೇಕು. ಮುಂದಿನ ದಿನಗಳಲ್ಲಿ ಇಂತಹ ಕೃತ್ಯ ಪುನರಾವರ್ತನೆಗೊಳ್ಳದಂತೆ ಕ್ರಮ ಜರುಗಿಸಬೇಕೆಂದು ಅಧ್ಯಕ್ಷ ರವೀಂದ್ರ ನಾಯ್ಕ ಒತ್ತಾಯಿಸಿದ್ದಾರೆ.

ರಾಷ್ಟ್ರ ಬದ್ಧತೆ ಬಲಪಡಿಸಲು ಜಾಗೃತಿ ಅವಶ್ಯಕ

ನರಗುಂದ: ಜೀವನದ ಎಲ್ಲ ಕ್ಷೇತ್ರಗಳಲ್ಲಿ ಸುರಕ್ಷತೆಯನ್ನು ಖಾತ್ರಿಪಡಿಸಿಕೊಳ್ಳುವ ಭಾರತದ ಬದ್ಧತೆಯನ್ನು ಬಲಪಡಿಸಲು ಜಾಗೃತಿ ಮೂಡಿಸಲು ರಾಷ್ಟ್ರೀಯ ಸುರಕ್ಷತಾ ದಿನವು ಬಹಳ ಮಹತ್ವದ್ದಾಗಿದೆ ಎಂದು ಚಿಕ್ಕ ನರಗುಂದ ಸ.ಪ.ಪೂ ಕಾಲೇಜಿನ ಉಪನ್ಯಾಸಕ ಫಕಿರೇಶ ಅಂಗಡಿ ಹೇಳಿದರು.

ಇಲ್ಲಿನ ಶ್ರೀಯಡಿಯೂರ ಸಿದ್ಧಲಿಂಗೇಶ್ವರ ಶಿಕ್ಷಣ ಮಹಾವಿದ್ಯಾಲಯದ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದ ಎರಡನೇ ದಿನದ ಉಪನ್ಯಾಸ ಮಾಲಿಕೆಯಲ್ಲಿ ರಾಷ್ಟ್ರೀಯ ಸುರಕ್ಷತಾ ದಿನ ನನ್ನ ಭಾರತಕ್ಕಾಗಿ ಯುವಕರು ಎಂಬ ವಿಷಯದ ಕುರಿತು ಮಾತನಾಡಿ, ಸ್ಪರ್ಧಾತ್ಮಕ ಪ್ರಪಂಚದಲ್ಲಿ ಈಜಿ ದಡ ಸೇರಬೇಕಾದರೆ ಯುವಕರಲ್ಲಿ ಕೇವಲ ಗುರಿ ಮುಖ್ಯವಲ್ಲ. ಛಲ ಬಿಡದೆ, ಕಲಿಕಾ ಹಂಬಲದೊಂದಿಗೆ ಸಿಗುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು.

ವಾರ್ಷಿಕ ವಿಶೇಷ ಶಿಬಿರದಲ್ಲಿ ಅರಿಶಿನ ಗೋಡಿ ಗ್ರಾಮದ ಶ್ರೀ ಮಾರುತೇಶ್ವರ ದೇವಸ್ಥಾನ ಹಾಗೂ ಗ್ರಾಮದ ಪ್ರಮುಖ ಕೆರೆಯ ಸುತ್ತಲಿನ ಪ್ರದೇಶವನ್ನು ಶಿಬಿರಾರ್ಥಿಗಳು ಸ್ವಚ್ಛಗೊಳಿಸುವುದರ ಮೂಲಕ ಶ್ರಮದಾನ ಕೈಗೊಂಡರು.

ಉಪನ್ಯಾಸ ಕಾರ್ಯಕ್ರಮದಲ್ಲಿ ಶಿವಲಿಂಗಯ್ಯ ಹಿರೇಮಠ್ ಶಿಬಿರಾರ್ಥಿಗಳಿಗೆ ಆಶೀರ್ವಚನ ನೀಡಿದರು. ನರಗುಂದ ಎಪಿಎಂಸಿ ಮಾಜಿ ಅಧ್ಯಕ್ಷರಾದ ಎನ್.ವಿ.ಮೇಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಶಿಬಿರಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು.ನಾಗರಾಜ್ ಮುಳ್ಳೂರ್, ಸಂಗೀತ ಕುರಿ ನಿರೂಪಿಸಿದರು. ವಿದ್ಯಾ ಬಡಿಗೇರ್, ಮೇಘಾ ಗೌಡರ್ ಪ್ರಾರ್ಥಿಸಿದರು. ಭರತ್ ಬುಡನ್, ವೈಷ್ಣವಿ ಹೊಸಳ್ಳಿ ಸ್ವಾಗತಿಸಿದರು. ಪ್ರವೀಣ್ ಚಲವಾದಿ ವಂದಿಸಿದರು. ಕಾರ್ಯಕ್ರಮದಲ್ಲಿ ಊರಿನ ಪ್ರಮುಖ ಗಣ್ಯವ್ಯಕ್ತಿಗಳು ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದ ಎರಡನೇ ದಿನದ ಉಪನ್ಯಾಸ ಮಾಲಿಕೆಯಲ್ಲಿ ರಾಷ್ಟ್ರೀಯ ಸುರಕ್ಷತಾ ದಿನ ನನ್ನ ಭಾರತಕ್ಕಾಗಿ ಯುವಕರು ಎಂಬ ವಿಷಯದ ಕುರಿತು ಸ.ಪ.ಪೂ ಕಾಲೇಜಿನ ಉಪನ್ಯಾಸಕ ಫಕಿರೇಶ ಅಂಗಡಿ ಮಾತನಾಡಿದರು.

> **ಇಂದಿನ ಯುವಕರು ಆಧುನಿಕತೆ ಗೋಳಿಗೆ ಮಾರು ಹೋಗಿದ್ದಾರೆ ಇದರ ಪ್ರಭಾವದಿಂದ ಕೌಟುಂಬಿಕ ಸ್ಥಿತಿಗತಿಗಳು ಬದಲಾಗಿವೆ. ಶಕ್ತಿಯುತ ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ ಮಹತ್ವವಾದದ್ದು.**
> **-ಫಕಿರೇಶ ಅಂಗಡಿ,** ಸ.ಪ.ಪೂ ಕಾಲೇಜಿನ ಉಪನ್ಯಾಸಕ

ಬೀದಿ ನಾಟಕದಿಂದ ಮೈಕ್ರೋ ಫೈನಾನ್ಸ್ ಜಾಗೃತಿ

ಹಾವೇರಿ: ಇತ್ತೀಚೆಗೆ ಮೈಕ್ರೊಫೈನಾನ್ಸ್ ಗಳಿಂದ ಕಿರುಕುಳದ ಬಗ್ಗೆ ಚರ್ಚೆ ನಡೆಯುತ್ತಿದೆ. ಆದ್ದರಿಂದ ಮೈಕ್ರೊಫೈನಾನ್ಸ್ ವ್ಯವಹಾರದ ಬಗ್ಗೆ ನಾಟಕದ ಮೂಲಕ ಜನರಲ್ಲಿ ಅರಿವು ಮೂಡಿಸುತ್ತಿರುವುದು ಒಳ್ಳೆಯ ಸಂಗತಿ ಎಂದು ಹಾವೇರಿ ಗ್ರಾಮೀಣ ವೃತ್ತ ನೀರಿಕ್ಷಕರಾದ ಸಂತೋಷ ಪವಾರ ಅಭಿಪ್ರಾಯಪಟ್ಟರು.

ನಗರದ ಅಶ್ವಿನಿ ನಗರದ ನವಚೇತನ ಮೈಕ್ರೊ ಫೈನಾನ್ಸ್ ಕಚೇರಿಯಲ್ಲಿ ನಡೆದ ಬೀದಿ ನಾಟಕಗಳ ಮೂಲಕ ಮೈಕ್ರೋಫೈನಾನ್ಸ್ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಕ್ರೊಫೈನಾನ್ಸ್ ಗಳು ಜನರೊಂದಿಗೆ ಮಾನವೀಯತೆಯಿಂದ ನಡೆದಕೊಳ್ಳಬೇಕು ಎಂದರು.

ನವಚೇತನ ಸಂಸ್ಥೆ ಯ ಅಧ್ಯಕ್ಷ ನಾಗೇಂದ್ರ ಮಾಳಿ ಮಾತನಾಡಿ, ಮೈಕ್ರೊಫೈನಾನ್ಸ್ ವಹಿವಾಟು ಕಳೆದ ಮೂರು ದಶಕಗಳಿಂದ ನಡೆದು ಬಂದಿದೆ. ಗ್ರಾಮೀಣ ಜನರ ಜೀವನ ಮಟ್ಟ ಸುಧಾರಣೆಗಾಗಿ ನಡೆದು ಬಂದಿದೆ ದೇಶಾದ್ಯಂತ 65 ಲಕ್ಷ ಗ್ರಾಹಕರಿಗೆ 70 ಸಾವಿರ ಕೋಟಿ ಹಣ ನೀಡಿ ಜನರ ಜೀವನ ನಡೆಸಲು ಸಹಕಾರಿಯಾಗಿದೆ. ಮಹಿಳೆಯರನ್ನೆ ಗುರಿಯಾಗಿಸಿ ಹಣದ ವಹಿವಾಟು ನಡೆಸುವದರ ಉದ್ದೇಶ ಮಹಿಳೆಯರನ್ನ ಸ್ವಾವಲಂಬಿಯನ್ನಾಗಿ ಮಾಡುವದರ ಕಡೆ ನಡೆಯುವುದು.

ಮೈಕ್ರೋಫೈನಾನ್ಸ್ ಬಗ್ಗೆ ಜಾಗೃತಿ ಮೂಡಿಸಲು ಬೀದಿನಾಟಕ ಸಮಾರಂಭವು ನವಚೇತನ ಫೈನಾನ್ಸ್ ಸಂಸ್ಥೆಯ ಕಚೇರಿಯಲ್ಲಿ ನೆರವೇರಿತು.

ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ ಮಾತನಾಡಿ, ಫೈನಾನ್ಸ್, ಬ್ಯಾಂಕ್, ಮೈಕ್ರೊಫೈನಾನ್ಸ್ ಬಗ್ಗೆ ರೈತರಿಗೆ ಅರಿವು ಇರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಮೈಕ್ರೊಫೈನಾನ್ಸ್ ಹಾವಳಿಯಿಂದ ಸಾಲ ಪಡೆದವರು ಪರದಾಡುವ ಸ್ಥಿತಿ ಬಂದಿದೆ. ಇಂದಿನಿಂದ ಪ್ರಕೃತಿ ಸಾಂಸ್ಕೃತಿಕ ಕಲಾ ತಂಡ ದಾವಣಗೇರೆ ಅವರಿಂದ ಜಿಲ್ಲೆಯಾದ್ಯಂತ ನಾಟಕ ಪ್ರದರ್ಶನ ನಡೆಯಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನವಚೇತನ ಫೈನಾನ್ಸ್ ಸಂಸ್ಥೆ ಅಧ್ಯಕ್ಷ ನಾಂಗೇಂದ್ರ ಮಾಳಿ, ಹಾವೇರಿ ಗ್ರಾಮೀಣ ಠಾಣಾ ಸಿಪಿಐ ಸಂತೋಷ ಪವಾರ, ರೈತ ಸಂಘದ ಮುಖಂಡ ಮಲ್ಲಿಕಾರ್ಜುನ ಬಳ್ಳಾರಿ, ಕೊಟ್ಟರಗೌಡರ, ಶಾರದಾ, ತಿಪ್ಪೇಸ್ವಾಮಿ, ತೀರ್ಥಪ್ರಸಾದ್, ನವಚೇತನ ಸಂಸ್ಥೆ ನಿರ್ದೇಶಕ ಉಲ್ಲಾಸ ಉಪಸ್ಥಿತರಿದ್ದರು.

> **ರಾಜ್ಯ ಸರಕಾರ ಮೈಕ್ರೊ ಫೈನಾನ್ಸ್ ಬಗ್ಗೆ ಕಾನೂನು ತಂದಿದೆ. ಆದ್ದರಿಂದ ಸಾರ್ವಜನಿಕ ರೊಂದಿಗೆ ನಿಯಮಾವಳಿಗಳ ಪ್ರಕಾರ ನಡೆದುಕೊಳ್ಳಬೇಕು. ಮೈಕ್ರೊ ಫೈನಾನ್ಸನಲ್ಲಿ ಸಾಲ ಪಡೆಯುವವರು ಬಡವರು,ರೈತರು ದಿನಗೂಲಿ ಕೇಲಸಗಾರರೆ ಆಗಿರುತ್ತಾರೆ. ಅವರೊಂದಿಗೆ ಕೇವಲ ವ್ಯವಹಾರಿಕ ವಾಗಿ ವರ್ತಿಸದೆ ಮಾನವೀಯ ನೆಲೆಗಟ್ಟಿನಿಂದಲು ನಡೆಯಬೇಕು.**
> **-ಸಂತೋಷ ಪವಾರ,**
> ಗ್ರಾಮೀಣ ವೃತ್ತ ನೀರಿಕ್ಷಕ

ಸಾಂಕ್ರಾಮಿಕ ರೋಗ ಹರಡದಂತೆ ಮುಂಜಾಗ್ರತೆ ವಹಿಸಿ

ಜಿಲ್ಲಾ ಮಟ್ಟದ ಕಣ್ಗಾವಲು ಸಮಿತಿ ಸಭೆ | ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಸೂಚನೆ

ಗದಗ: ಜಿಲ್ಲೆಯಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಮುಂಜಾಗ್ರತೆ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾ ಮಟ್ಟದ ಕಣ್ಗಾವಲು ಸಮಿತಿ ಸಭೆಯಲ್ಲಿ ಮಾತನಾಡಿದರು.

ಜಿಪಂ ಸಿಇಒ ಭರತ್.ಎಸ್ ಮಾತನಾಡಿ, ಸೊಳ್ಳೆಗಳಿಂದ ಹರಡುಬಹುದಾದ ರೋಗಗಳಾದ ಮಲೇರಿಯಾ, ಡೆಂಘೀ, ಚಿಕುನ್‌ಗುನ್ಯಾ ಹಾಗೂ ಮೆದುಳು ಜ್ವರದ ಪ್ರಕರಣಗಳನ್ನು ತಡೆಗಟ್ಟಲು ಚರಂಡಿ, ಗಟಾರಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ನಿಂತ ನೀರಿನಲ್ಲಿ ಸೊಳ್ಳೆ ಪ್ರಮಾಣ ಹೆಚ್ಚಾಗದಂತೆ ಲಾರ್ವಾ ಸಮೀಕ್ಷೆಯನ್ನು ತೀವ್ರಗೊಳಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ವೆಂಕಟೇಶ ರಾಠೋಡ್ ಮಾತನಾಡಿ, ಜಿಲ್ಲೆಯಲ್ಲಿ 2024 ರಲ್ಲಿ 410 -ಡೆಂಘೀ ಪ್ರಕರಣಗಳು ಹಾಗೂ 14-ಚಿಕುನ್‌ಗುನ್ಯಾ ಪ್ರಕರಣಗಳು ವರದಿಯಾಗಿವೆ ಎಂದರು. ಗದಗ ಜಿಲ್ಲೆಯು ಕೂಡ ಕೆಎಫ್‌ಡಿ ಬಾಧಿತ ಎಂಡಮಿಕ್ ಜಿಲ್ಲೆಯಾಗಿದ್ದು, ಕೆಎಫ್‌ಡಿ ವೈರಸ್‌ನಿಂದ ಸೋಂಕಿತಗೊಂಡ ಉಣ್ಣೆಯು ಕಚ್ಚುವುದರಿಂದ ಹರಡುವ ವೈರಲ್ ಜ್ವರವಾಗಿದೆ. ಈ ಖಾಯಿಲೆಗೆ ಯಾವುದೇ ನಿರ್ದಿಷ್ಟ ಚಿಕಿತ್ಸೆ ಇಲ್ಲ. ಜಿಲ್ಲೆಯಿಂದ ಈಗಾಗಲೇ 11 ರಕ್ತದ ಮಾದರಿಗಳನ್ನು ಹಾಗೂ 16-ಟಿಕ್‌ಪೂಲ್ ಮಾದರಿಗಳನ್ನು ಕೆಎಫ್‌ಡಿ ವೈರಸ್ ಪತ್ತೆಗಾಗಿ ವಿಡಿಎಲ್ ಶಿವಮೊಗ್ಗ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಬಿ.ಸಂಕದ, ವಿವಿಧ ಇಲಾಖೆಯ ಅಧಿಕಾರಿಗಳು, ತಾಲೂಕಾ ಆರೋಗ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.

> **ಕೆಎಫ್‌ಡಿ ನಿಯಂತ್ರಣಕ್ಕೆ ಸಂಬಂಧಪಟ್ಟ ಇಲಾಖೆಗಳು ಅಗತ್ಯ ಸಹಕಾರ ನೀಡಬೇಕು. ನಾಯಿ ಕಡಿತಕ್ಕೆ ಸಂಬಂಧಿಸಿದಂತೆ ಪ್ರತಿ ತಿಂಗಳು ಜಿಲ್ಲೆಯಲ್ಲಿ ಸುಮಾರು 1000ಕ್ಕಿಂತ ಹೆಚ್ಚು ಪ್ರಕರಣಗಳು ವರದಿಯಾಗುತ್ತಿದ್ದು, ನಾಯಿ ಕಡಿತಕ್ಕೆ ಸಂಬಂಧಿಸಿದಂತೆ ಲಸಿಕೆಯನ್ನು ಎಲ್ಲ ಆರೋಗ್ಯ ಸಂಸ್ಥೆಗಳಲ್ಲಿ ಕಾಯ್ದಿರಿಸಿಡಲು ನಿರ್ದೇಶಿಸಿದರು.**
> **-ಸಿ.ಎನ್. ಶ್ರೀಧರ್, ಜಿಲ್ಲಾಧಿಕಾರಿ**

ಜಿಲ್ಲಾ ಮಟ್ಟದ ಕಣ್ಗಾವಲು ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಮಾತನಾಡಿದರು.

ಕಾಯಿಲೆ ಬಗ್ಗೆ ಜಾಗೃತಿ ವಹಿಸುವ ಅಂಶಗಳು

- ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನಿಂದ ಹರಡಬಹುದಾದ ಸಾಂಕ್ರಾಮಿಕ ರೋಗಗಳ ಬಗ್ಗೆ ಜಾಗೃತಿ ವಹಿಸಬೇಕು.
- ಕುಡಿಯುವ ನೀರಿನ ಮೂಲಗಳ ಪರೀಕ್ಷೆ ಹಾಗೂ ಸರಬರಾಜುವಿನ ಬಗ್ಗೆ ನಿರಂತರವಾಗಿ ಕ್ರಮವಹಿಸಬೇಕು.
- ಸಾಂಕ್ರಾಮಿಕ ರೋಗಗಳಾದ ಕರಳುಬೇನೆ, ಕಾಲರಾ, ವಿಷಮ ಶೀತಜ್ವರ, ಕಾಮಾಲೆ, ಕೆಎಫ್‌ಡಿ, ಹಕ್ಕಿಜ್ವರ, ನಾಯಿಕಡಿತ ಹಾಗೂ ಹಾವು ಕಡಿತ ಕುರಿತು ಮುಂಜಾಗ್ರತೆ ತೆಗೆದುಕೊಳ್ಳುವುದು.
- ಕುಡಿಯುವ ನೀರಿನ ಪೈಪಲೈನ್‌ಗಳಲ್ಲಿ ಕಲುಷಿತ ನೀರು ಸೇರಿಕೊಳ್ಳದ ಹಾಗೆ ಕ್ರಮವಹಿಸಲು ಸಂಬಂಧಪಟ್ಟ ಗ್ರಾಪಂ ಅಧಿಕಾರಿಗಳಿಗೆ ತಿಳಿಸಬೇಕು.
- ಎಲ್ಲ ಒಎಚ್‌ಟಿಗಳನ್ನು ನಿಯಮಿತವಾಗಿ ಸರಿಯಾಗಿ ಸ್ವಚ್ಛಗೊಳಿಸಲು ಕ್ರಮವಹಿಸಬೇಕು.
- ಓಎಚ್‌ಟಿಗಳಲ್ಲಿ ಶೇಖರಿಸಿದ ನೀರನ್ನು ಕ್ರಮಬದ್ದವಾಗಿ ಕ್ಲೋರಿನೇಷನ್ ಮಾಡಿ ಸರಬರಾಜು ಮಾಡಲು ಕ್ರಮ.

ವಿವಿಧ ಕಾಮಗಾರಿಗಳಿಗೆ ಶಾಸಕರಿಂದ ಭೂಮಿಪೂಜೆ

ಶಿರಸಿ: ಇಸಳೂರು, ದೊಡ್ನಳ್ಳಿ ವ್ಯಾಪ್ತಿಯ ಮೂರು ಕೆರೆಗಳಿಗೆ 1.60 ಕೋಟಿ ರು.ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಶಾಸಕ ಭೀಮಣ್ಣ ನಾಯ್ಕ್ ಗುರವಾರ ಭೂಮಿ ಪೂಜೆ ನೆರವೇರಿಸಿದ್ದು, ಜಲಮೂಲಗಳ ಅಭಿವೃದ್ಧಿಗೆ ಮುನ್ನುಡಿ ಬರೆದಿದ್ದಾರೆ.

ಇಸಳೂರಿನ ಧರ್ಮಾ ಕೆರೆಗೆ 1 ಕೋಟಿ, ಒಕ್ಕಲಕೊಪ್ಪ ಕೆರೆಗೆ 20 ಲಕ್ಷ ರು. ಹಾಗೂ ದೊಡ್ನಳ್ಳಿ ಗ್ರಾಪಂ ವ್ಯಾಪ್ತಿಯ ಬ್ಯಾಗದ್ದೆ ಸ.ನಂ. 35ರ ಕೆರೆ ಅಭಿವೃದ್ಧಿಗೆ 40 ಲಕ್ಷ ರು. ಅನುದಾನ ನೀಡಿದ್ದು, ಅಭಿವೃದ್ಧಿ ಕೆಲಸಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು,ಅಭಿವೃದ್ಧಿ ಎಂಬುದು ನಿಂತ ನೀರಲ್ಲ. ಸರಕಾರದಿಂದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಅಗತ್ಯವಿರುವ ಅನುದಾನ ಕಾಲಕಾಲಕ್ಕೆ ತರಲಾಗುತ್ತದೆ. ಶಿರಸಿ ಸಿದ್ದಾಪುರ ಕ್ಷೇತ್ರದ ಗ್ರಾಮೀಣ ಮತ್ತು ನಗರ ಭಾಗದಲ್ಲಿ ಹೆಚ್ಚಿನ ಅನುದಾನ ತಂದು ನಿರೀಕ್ಷೆಗೂ ಮೀರಿ ಅಭಿವೃದ್ಧಿ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕೆರೆ ಅಭಿವೃದ್ಧಿಗೆ ಸಹಕರಿಸಿದ ಶಾಸಕ ಭೀಮಣ್ಣ ನಾಯ್ಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಜಗದೀಶ ಗೌಡ, ಎಸ್.ಕೆ.ಭಾಗ್ವತ್, ದುಶ್ಯಂತ ಗೌಡ, ಧರ್ಮಾ ಸಹಕಾರಿ ಸಂಘದ ಎನ್.ಡಿ.ಹೆಗಡೆ, ಧರ್ಮೇಶ್ವರ ದೇವಸ್ಥಾನ ಅಧ್ಯಕ್ಷ ಡಿ.ಎನ್. ಹೆಗಡೆ, ಇಸಳೂರು ಮತ್ತು ದೊಡ್ನಳ್ಳಿ ಗ್ರಾಪಂ ಜನಪ್ರತಿನಿಧಿಗಳು ಇದ್ದರು.

ಕೈದಿ ಆತ್ಮಹತ್ಯೆ : ಮೂವರ ಅಮಾನತು

ಹಾವೇರಿ: ಕೊಲೆ ಪ್ರಕರಣದಲ್ಲಿ ಬಂಧಿತನಾಗಿದ್ದ ವಿಚಾರಣಾಧೀನ ಖೈದಿಯೊಬ್ಬ ಅನುಮಾನಾಸ್ಪದವಾಗಿ ಕಾರಾಗೃಹದಲ್ಲಿ ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆಯಲ್ಲಿ ಕರ್ತವ್ಯ ಲೋಪದಡಿ ಜೈಲ್‌ನ ಮೂವರು ಸಿಬ್ಬಂದಿಯನ್ನು ಅಮಾನತ್ತು ಮಾಡಲಾಗಿದೆ. ಕಾರಾಗೃಹದ ಮುಖ್ಯವೀಕ್ಷಕರಾದ ಕೆ.ಡಿ.ಮಾದರ್, ಎಸ್ .ಪ್ರಭು, ಅಂಬರೀಶ್ ಹಾವೇರಿ ಎಂಬುವರನ್ನು ಕರ್ತವ್ಯ ಲೋಪದಡಿ ಬೆಳಗಾವಿ ಡಿಐಜಿ ಅಮಾನತ್ತುಗೊಳಿಸಿದ್ದಾರೆ ಎಂದು ಜಿಲ್ಲಾಕಾರಗೃಹದ ಅಧೀಕ್ಷಕಿ ವೈ.ಡಿ.ನಾಗರತ್ನ ತಿಳಿಸಿದ್ದಾರೆ. ಸವಣೂರು ತಾಲೂಕಿನ ಹತ್ತಿಮತ್ತೂರ ಗ್ರಾಮದ ಕೋಟೆಪ್ಪ ಅಂಬಿಗೇರ (43) ಎಂಬ ಖೈದಿ ಜಿಲ್ಲಾ ಕಾರಾಗೃಹದ ಸ್ಟೋರ್ ರೂಂನಲ್ಲಿ ಮಾ.2ರ ಭಾನುವಾರ ನೇಣಿಗೆ ಶರಣಾಗಿದ್ದನು. ಈತ ಜಿಲ್ಲೆಯ ಸವಣೂರು ತಾಲೂಕು ಹತ್ತಿಮತ್ತೂರ ಗ್ರಾಮದಲ್ಲಿ 2018ರ ಜೂನ್ ತಿಂಗಳಲ್ಲಿ ಅನೈತಿಕ ಸಂಬಂಧದ ವಿಚಾರಕ್ಕೆ ಇಬ್ಬರನ್ನು ಬರ್ಬರವಾಗಿ ಕೊಲೆಗೈದು ಜೈಲು ಸೇರಿದ್ದ. ಈ ಪ್ರಕರಣ ವಿಚಾರಣೆ ನಡೆದಿತ್ತು. ಕಾರಾಗೃಹದ ಅಡುಗೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಕೋಟೆಪ್ಪ ರವಿವಾರ ಬೆಳಗ್ಗೆ ಸ್ಟೋರ್ ರೂಂನಲ್ಲಿ ಸಾಮಗ್ರಿ ತರಲು ಹೋಗುತ್ತೇನೆಂದು ಹೋಗಿ ನೇಣಿಗೆ ಶರಣಾಗಿದ್ದ. ಈ ಕುರಿತು ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿ, ನ್ಯಾಯಾಂಗ ತನಿಖೆ ನಡೆದಿತ್ತು. ಈಗ ಮೂವರು ಸಿಬ್ಬಂದಿ ಅಮಾನತ್ತು ಮಾಡಲಾಗಿದೆ.

ರಾಷ್ಟ್ರೀಯ ಹೆದ್ದಾರಿ ಬೈಪಾಸ್ ಕಾಮಗಾರಿ ಸ್ಥಗಿತ

ಪ್ರಭು ಗುಡಾರದ ನರಗುಂದ

ಹುಬ್ಬಳ್ಳಿ ವಿಜಯಪೂರ ರಾಷ್ಟ್ರೀಯ ಹೆದ್ದಾರಿ ನರಗುಂದ ಮಧ್ಯ ಹಾದು ಹೋಗಿದ್ದರಿಂದ ವಾಹನಗಳ ದಟ್ಟನೆ ಅದರಲ್ಲೂ ಭಾರಿವಾಹನಗಳ ಸಂಚಾರದಿಂದ ಸಾರ್ವಜನಿಕರಿಗೆ ಕಿರಿಕಿರಿ, ಅಪಘಾತಗಳನ್ನು ತಪ್ಪಿಸುವ ಉದ್ದೇಶದಿಂದ ಭರದಿಂದ ಸಾಗಿದ್ದ ಬೈಪಾಸ್ ಕಾಮಗಾರಿ ಬಾಕಿಬಿಲ್ ಬಾರದೆ ಇದ್ದರಿಂದ ಗುತ್ತಿಗೆದಾರರಿಬ್ಬರ ಜಗಳದಿಂದ ಕಳೆದ 3 ತಿಂಗಳಿಂದ ಕಾಮಗಾರಿ ಸ್ಥಗಿತಗೊಳಿಸಿ ಕೈಕಟ್ಟಿ ಕುಳಿತಿರುವ ಘಟನೆ ವರದಿಯಾಗಿದೆ.

ನರಗುಂದ ನಗರದಿಂದ ಕಿಮಿ ದೂರದ ಕಲಕೇರಿ ಪಕ್ಕದ ಕಾಲುವೆಯಿಂದ ಬನಹಟ್ಟಿ, ಕುರ್ಲಗೇರಿ, ರೋಣ ರಸ್ತೆ ದಾಟಿಕೊಂಡು ಹೆದ್ದಾರಿ ಸೇರುವ 7.3ಕಿಮಿ ಬೈಪಾಸ್ ಹೆದ್ದಾರಿ ನಿರ್ಮಾಣ ಕಾಮಗಾರಿಗೆ ಕಳೆದ ವರ್ಷ ಚಾಲನೆ ನೀಡಲಾಗಿತ್ತು. 66ಕೋಟಿ ವೆಚ್ಚದ ಕಾಮಗಾರಿ ನವಂಬರ್, ಡಿಸೆಂಬರ್ ತಿಂಗಳಲ್ಲಿ ಶೇ.25ರಷ್ಟು ಕಾಮಗಾರಿ ಕೈಗೊಂಡಿದ್ದರೂ ಟೆಂಡರ್ ಪಡೆದ ಮಹಾರಾಷ್ಟ್ರದ ಮೂಲದ ಆರ್‌ಬಿ ವೆಲ್ಲಾಲ್ ಕಂಪನಿಯಿಂದ ಸಬ್ ಗುತ್ತಿಗೆ ಪಡೆದ ಗೋವಿಂದ ಬಿಲ್ಡೆಕ್ ಕಂಪನಿಯವರಿಗೆ ಬಿಲ್ ಕೊಡದೆ ಸತಾಯಿಸಿದ್ದರಿಂದ 3 ತಿಂಗಳಿಂದ ಬೈಪಾಸ್ ಹೆದ್ದಾರಿ ನಿರ್ಮಾಣ ಕಾಮಗಾರಿ ಸ್ಥಗಿತಗೊಳ್ಳಲು ಕಾರಣ ಎನ್ನಲಾಗಿದೆ.

ಎಫ್‌ಐಆರ್ ದಾಖಲು: ಬೈಪಾಸ್ ಹೆದ್ದಾರಿ ಕಾಮಗಾರಿ ಕೈಗೊಂಡಿದ್ದ ಗೋವಿಂದ ಬಿಲ್ಡೆಕ್ ಕಂಪನಿಗೆ ಬಿಲ್ ಪಾವತಿ ಮಾಡುವುದಾಗಿ ಹೇಳುತ್ತಲೆ ಇದ್ದ. ಮೂಲಗುತ್ತಿಗೆ ಪಡೆದ ಮಹಾರಾಷ್ಟ್ರದ ವೆಲ್ಲಾಲ್ ಕಂಪನಿ ಗುತ್ತಿಗೇದಾರರು ಗುಂಪೊಂದು ಕುರ್ಲಗೇರಿ ರಸ್ತೆಗೆ ಹೊಂದಿಕೊಂಡು ಸೈಟ್‌ಗೆ ಬಂದು ವೆಲ್ಲಾಲ್ ಕಂಪನಿಯ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದು ಅಲ್ಲದೆ ಕಚೇರಿಯಲ್ಲಿರುವ ದಾಖಲೆಗಳನ್ನು ತೆಗೆದುಕೊಂಡಿರುವುದು ನರಗುಂದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

2 ತಿಂಗಳಿಂದ ಕಾಮಗಾರಿ ಸ್ಥಗಿತಗೊಂಡಿದ್ದು ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳು, ಜನಪ್ರತಿನಿಧಿಗಳು ಸ್ಥಗಿತಗೊಂಡಿರುವ ಬೈಪಾಸ್ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ.

ನರಗುಂದ ಹೊರವಲಯದಲ್ಲಿ ಬರದಿಂದ ಸಾಗಿದ್ದ ಬೈಪಾಸ್ ಹೆದ್ದಾರಿ ನಿರ್ಮಾಣ ಕಾಮಗಾರಿ ಸ್ಥಗಿತಗೊಂಡಿರುವುದು.

> **ನಗರದ ಮಧ್ಯ ಹೆದ್ದಾರಿಯಲ್ಲಿ ವಾಹನಗಳ ದಟ್ಟನೆ ಹೆಚ್ಚಾಗಿದೆ, ಶಾಲಾ ಮಕ್ಕಳು, ವೃದ್ದರು ಜೀವ ಕೈಯಲ್ಲಿ ಹಿಡಿದು ಹೆದ್ದಾರಿ ದಾಟುವ ಪರಿಸ್ಥಿತಿ ಇದೆ. ಈಗಾಗಲೆ ಸಾಕಷ್ಟು ಅಪಘಾತಗಳು ನಡೆದಿದ್ದು ಬೇಗ ಬೈಪಾಸ್ ಆದರೆ ಅಪಘಾತಗಳು, ವಾಹನಗಳ ಕಿರಿಕಿರಿ ತಪ್ಪುತ್ತದೆ.**
> **-ಶಾಲಾ ಮಕ್ಕಳ ಪಾಲಕರು ನರಗುಂದ**

> **ನರಗುಂದ ಬೈಪಾಸ್ ಹೆದ್ದಾರಿ ನಿರ್ಮಾಣ ಕಾಮಗಾರಿ ಗುತ್ತಿಗೆದಾರರು, ಕೆಲಸ ಮಾಡಿದ ಸಬ್ ಗುತ್ತಿಗೆದಾರರ ಮಧ್ಯ ಜಗಳವಾಗಿ ದೂರು ದಾಖಲಾಗಿದೆ. ಕಾಮಗಾರಿ ಸ್ಥಗಿತಗೊಂಡಿರುವ ಕುರಿತು ಮೇಲಾಧಿಕಾರಿಗಳಿಗೆ ದೂರು ನೀಡಿ ಕ್ರಮ ಕೈಗೊಳ್ಳುತ್ತೇವೆ. ಈ ವಾರದಲ್ಲಿ ಕಾಮಗಾರಿ ಆರಂಭವಾಗುತ್ತದೆ.**
> ರಾಜು ಕಾರ್ಯನಿರ್ವಾಹಕ ಅಭಿಯಂತರ,
> ರಾಷ್ಟ್ರೀಯ ಹೆದ್ದಾರಿ ನಿಗಮ ನರಗುಂದ.

> **ನರಗುಂದ ಬೈಪಾಸ್ ಹೆದ್ದಾರಿ ಕಾಮಗಾರಿ ಶೇ.25 ರಷ್ಟು ಕೆಲಸ ಮಾಡಿ ಮಹಾರಾಷ್ಟ್ರದ ಆರ್‌ಬಿ ಬಿಲ್ಲಾಲ್ ಕಂಪನಿಯವರಿಗೆ 5.35 ಕೋಟಿ ಬಿಲ್ ಸಲ್ಲಿಸಿದ್ದರೂ ಹಣ ನೀಡುತ್ತಿಲ್ಲ. ಹಣಕೊಡದೆ ಸತಾಯಿಸುತ್ತಿದ್ದರಿಂದ ಡಿ.26ಕ್ಕೆ ಕೆಲಸ ನಿಲ್ಲಿಸಿದ್ದೇವೆ. ಬಿಲ್ ಬಂದ ಮೇಲೆ ಕಾಮಗಾರಿ ಆರಂಭಿಸುತ್ತೇವೆ. ಜತೆಗೆ ಸೈಟ್‌ಗೆ ಅಕ್ರಮವಾಗಿ ನುಗ್ಗಿ ಬೀಜ ಒಡೆದು ದಾಖಲೆ ತೆಗೆದುಕೊಂಡ ಹೋಗಿರುವ ವೆಲ್ಲಾಲ್ ಕಂಪನಿ ಗುತ್ತಿಗೆದಾರರ ವಿರುದ್ದ ಎಫ್‌ಐಆರ್ ದಾಖಲಿಸಿದ್ದೇವೆ.**
> **-ಶ್ರೀಕಾಂತರಡ್ಡಿ,** ಗೋವಿಂದ ಬಿಲ್ಡೆಕ್ ಕಂಪನಿ

ಸಮಾಚಾರ ಸಣ್ಣದಲ್ಲ

ಜಯ ಕರ್ನಾಟಕದಿಂದ ರಕ್ತ ದಾನ ಶಿಬಿರ

ಧಾರವಾಡ: ಜಯ ಕರ್ನಾಟಕ ಸಂಘಟನೆಯನ್ನು ರಾಜ್ಯದ 31 ಜಿಲ್ಲೆಯಲ್ಲಿ ಬಹಳ ಅಚ್ಚುಕಟ್ಟಾಗಿ ನಡೆದುಕೊಂಡು ಬರುತ್ತಿದೆ. ಅದಕ್ಕೆ ಮೂಲ ಕಾರಣ ಸಂಘಟನೆಯ ಕೇಂದ್ರಬಿಂದು ಜಯ ಕರ್ನಾಟಕ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಬಿ.ಎನ್. ಜಗದೀಶ ಅವರ ಹುಟ್ಟು ಹಬ್ಬದ ಪ್ರಯುಕ್ತವಾಗಿ ಧಾರವಾಡದ ಜಿಲ್ಲಾ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ ನಡೆಸಲಾಯಿತು. ರಕ್ತದಾನ ಶಿಬಿರವನ್ನು ಜಯ ಕರ್ನಾಟಕ ಸಂಘಟನೆಯ ಗೌರವ ಅಧ್ಯಕ್ಷ ಲಕ್ಷ್ಮಣ ಬಿ. ದೊಡ್ಡಮನಿ, ನೇತೃತ್ವದಲ್ಲಿ ರಕ್ತದಾನ ಶಿಬಿರವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಮಂಜುನಾಥ್ ಸುತಗಟ್ಟಿ, ಪ್ರಜ್ವಲ್ ಚಿಕ್ಕೋಡಿ, ಯಶವಂತ ದೊಡ್ಡಮನಿ, ಶಶಾಂಕ್ ದೊಡ್ಡಮನಿ, ದುರ್ಗಪ್ಪ ಕಡೆಮನಿ ಪರಶುರಾಮ ದೊಡ್ಡಮನಿ ರಾಜು ಜುನ್ನಾಯ್ಕರ್, ಯೂಸುಫ್ ದೊಡ್ಡವಾಡ, ಗಂಗಪ್ಪ ದೊಡ್ಡಮನಿ, ನಾರಾಯಣ ಮಾದರ್ ಹನುಮಂತ ಮೊರಬ್ ಶಬ್ಬೀರ್ ಅತ್ತಾರ್ ಮುತ್ತು ಕುಲಕರ್ಣಿ ಪ್ರಕಾಶ್ ಹೂಗಾರ್ ಶ್ರೀಕಾಂತ್ ತಳವಾರ ಹರೀಶ್ ಇಟ್ಟಿಗೇಕರ್ ಹರೀಶ್ ಹವಲ್ದಾರ್ ಮಣಿಕಂಠ ಇನ್ನೂ ಅನೇಕರು ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಪ್ರಕೃತಿ ವಿಕೋಪ ಹಾನಿ ಪರಿಹಾರಕ್ಕೆ ಆಗ್ರಹ

ಧಾರವಾಡ: ಅತಿಯಾದ ಮಳೆಯಿಂದ ಪ್ರಾಕೃತಿಕ ವಿಕೋಪದಿಂದ ಹಾನಿಯಾದ ಮನೆಗಳಿಗೆ ಸೂಕ್ತ ಪರಿಹಾರ ಕಲ್ಪಿಸುವಂತೆ ರಾಜ್ಯದ ಮುಖ್ಯಮಂತ್ರಿಯನ್ನು ಒತ್ತಾಯಿಸಿ ಧಾರವಾಡ ತಾಲೂಕ ಗ್ರಾಮೀಣ ಕಾಂಗ್ರೆಸ್ ಸಮಿತಿ (71) ಹಿಂದುಳಿದ ವರ್ಗಗಳ ವಿಭಾಗ ಅಧ್ಯಕ್ಷರು ಹಾಗೂ ತಡಕೋಡ ಗ್ರಾಪಂ ಸದಸ್ಯರಾದ ಭಿಮಪ್ಪ.ವಾಯ್.ಕಸಾಯಿ ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.ತಾಲೂಕಿನ ತಡಕೋಡ ಗ್ರಾಮ ಸೇರಿದಂತೆ ಬಹುತೇಕ ತಾಲೂಕಿನಲ್ಲಿ ಅಪಾರ ಮಳೆಯಿಂದಾಗಿ ಬಹುತೇಕ ಬಡ ಕುಟುಂಬಗಳು ವಾಸಿಸುವ ಮನೆಗಳು ಸಂಪೂರ್ಣ ಜಲಾವೃತಗೊಂಡು ಮತ್ತು ಹಲವು ಮನೆಗಳು ಈ ಮಳೆಯಿಂದಾಗಿ ಹಾಳಾಗಿದ್ದು, ಅವುಗಳನ್ನು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮತ್ತು ತಾಂತ್ರಿಕ ತಜ್ಞರ ತಂಡದ ಜತೆಗೆ ಸಮೀಕ್ಷೆ ಮಾಡಿ ಅವುಗಳ ಸತ್ಯಾಸತ್ಯಗಳ ಕುರಿತು ಅಧ್ಯಯನ ಮಾಡಿ ಜಿಲ್ಲಾಡಳಿತಕ್ಕೆ ಮತ್ತು ಸರಕಾಕ್ಕೆ 5 ಲಕ್ಷ ಮಂಜೂರು ಮಾಡಲು ವರದಿ ಮಾಡಿದೆ ಎಂದಿದ್ದಾರೆ. ಅರ್ಹ ಫಲಾನುಭವಿಗಳಿಗೆ ತಮ್ಮ ಮನೆ ಕಟ್ಟಲು ಅಧಿಕೃತ ಸರಕಾರದ ಆದೇಶವನ್ನು ನಂಬಿದ ಬಡ ಹಾಗೂ ಮಧ್ಯಮ ವರ್ಗದ ಜನರು ತಮ್ಮ ಮನೆ ಕಟ್ಟಲು ಪ್ರಾರಂಭಿಸಿದ ನಂತರ ಸಂಬಂಧಿಸಿದ ಇಲಾಖೆಯಿಂದ ಈ ಕುಟುಂಬದ ಯಜಮಾನ ಮತ್ತು ಯಜಮಾನಿಯವರ ಹೆಸರಿನಲ್ಲಿ 5 ಲಕ್ಷದಲ್ಲಿ 1.20 ಲಕ್ಷ ಜಮಾ ಮಾಡಿರುತ್ತಾರೆ. ಆದ್ದರಿಂದ ಈ ಕುಟುಂಬದ ರಕ್ಷಣೆಗೆ ಮುಖ್ಯಮಂತ್ರಿಗಳು ಮತ್ತು ವಸತಿ ಸಚಿವರು ಮತ್ತು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಆದಷ್ಟು ಬೇಗನೆ ಪರಿಹಾರ ದೊರಕಿಸಿಕೊಡುವಂತೆ ಭಿಮಪ್ಪ. ವಾಯ್.ಕಸಾಯಿ ಆಗ್ರಹಿಸಿದ್ದಾರೆ.

ಪ್ರಾಥಮಿಕ ಶಾಲೆಯ ಮಕ್ಕಳ ಕಲಿಕಾ ಹಬ್ಬ

ನವಲಗುಂದ: ಕಲಿಕೆಯು ಬಲವರ್ಧನೆಗೊಳ್ಳಬೇಕು ಸಂತಸದಾಯಕ ಕಲಿಕೆಯಾಗಬೇಕೆಂದರೆ, ಮಕ್ಕಳಲ್ಲಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ ಸಾಮರ್ಥ್ಯಗಳಕೊಳ್ಳಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಸ್.ಬಿ. ಮಲ್ಲಾಡ ಹೇಳಿದರು. ನವಲಗುಂದ ತಾಲೂಕಿನ ಜಾವೂರ ಕ್ಲಸ್ಟರ್ ಮಟ್ಟದ ಎಫ್ಎಲ್ಎನ್ ಆಧಾರಿತ ಮಕ್ಕಳ ಕಲಿಕಾ ಹಬ್ಬ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಲಿಕಾ ಹಬ್ಬದ ಸಮಾರಂಭವನ್ನು ಉದ್ಘಾಟಿಸಿದರು. ಗ್ರಾಪಂ ಅಧ್ಯಕ್ಷೆ ಗಂಗವ್ವ ಅಡಿಡ ಮುಖ್ಯ ಅತಿಥಿಸ್ಥಾನ ವಹಿಸಿದ್ದರು. ಎಸ್ ಡಿಎಂಸಿ ಅಧ್ಯಕ್ಷರಾದ ಮಂಜುನಾಥ ಹಿರೇಗೌಡರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಮೂಹ ಸಂಪನ್ಮೂಲ ವ್ಯಕ್ತಿ ಗಣೇಶ ಹೊಳೆಯಣ್ಣವರ ಮಾತನಾಡಿ, ಎಫ್ಎಲ್ಎನ್ ಕಲ್ಪನೆ 2020 ಹೊಸ ಶಿಕ್ಷಣ ನೀತಿಯ ಅನ್ವಯ ಕೊಡುಗೆ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಈ ಕಲಿಕಾ ಹಬ್ಬದ ಮಕ್ಕಳ ಸರ್ವತೋಮುಖ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಪೂರಕವಾಗಿದೆ ಎಂದರು. ಈ ವೇಳೆಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ತಾಲೂಕ ನೌಕರ ಸಂಘದ ಅಧ್ಯಕ್ಷ ವಿ.ಡಿ.ರಂಗಣ್ಣವರ, ಎಸ್. ಎನ್. ಅಕ್ಕಿಮರದ, ಮುತ್ತು ನಾಯ್ಕರ, ಸರಿತಾ ಕೊಪ್ಪದ, ಅಶ್ವಿನಿ ಧೂಳಗಣ್ಣವರ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಎ.ಎಮ್. ನಾಯಕ, ಬಿ.ಎಂ ಎಲಿಗಾರ, ವೆಂಕಟೇಶ ಭಜಂತ್ರಿ, ಮಹಾಂತೇಶ ಬೆಳಹಾರ ಹಾಗೂ ಜಯಶ್ರೀ ಪಾಟೀಲ ಜಾವೂರ ಕ್ಲಸ್ಟರ್ ನ ಸಮಸ್ತ ಗುರು ವೃಂದ ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಎಸ್.ಬಿ.ಕುರಿ ಕಾರ್ಯಕ್ರಮ ನಿರೂಪಿಸಿದರು, ಬಸವರಾಜ ಮಾಡ್ಯೋಳ ಪ್ರಾರ್ಥನೆಗೈದರು, ಜಗದೀಶ ಬಸರಿ ಸ್ವಾಗತಿಸಿದರು, ಎಂ.ಪಿ.ಶಿವಪ್ಪೂಜಿಮಠ ವಂದಿಸಿದರು.

{ಜಗದೀಶ ಶೆಟ್ಟರ್} ಸಂಸದ

ಸಿಎಂ ಸಿದ್ದರಾಮಯ್ಯ ಅವರು ಮಂಡನೆ ಮಾಡುವ ಆಯ-ವ್ಯಯದ ಬಗ್ಗೆ ಯಾವುದೇ ನಿರೀಕ್ಷೆ ಹೊಂದಲು ಸಾಧ್ಯವಿಲ್ಲ, ಗ್ಯಾರಂಟಿಗಳಿಗೆ ಹಣ ಹೊಂದಿಸಲು ಹೆಣಗಾಡುವ, ಹೊಸ ಅಭಿವೃದ್ಧಿ ಯೋಜನೆಗಳಿಲ್ಲದ ಬ್ಯಾಲೆನ್ಸ್ ಶೀಟ್ ಆಯ-ವ್ಯಯವಾಗಲಿದೆ.

ಅಂತಾರಾಷ್ಟ್ರೀಯ ಖಗೋಳಶಾಸ್ತ್ರ ಶಿಬಿರಕ್ಕೆ ಹುಬ್ಬಳ್ಳಿ ವಿದ್ಯಾರ್ಥಿನಿ ಕೃಷಿ ಆಯ್ಕೆ

ಕಠಿಣ ಪರಿಶ್ರಮವಿದ್ದರೆ ಸಾಧನೆ ಸಾಧ್ಯ

ಮಹಾಂತೇಶ ಕಂಬಳಿ ಹುಬ್ಬಳ್ಳಿ

ಕಠಿಣ ಪರಿಶ್ರಮ ಹಾಗೂ ಸಾಧಿಸುವ ಛಲವಿದ್ದರೆ ಎನ್ನನ್ನಾದರೂ ಸಾಧಿಸಬಹುದು ಎನ್ನುವುದಕ್ಕೆ ಹುಬ್ಬಳ್ಳಿಯ 10 ನೇ ತರಗತಿ ವಿದ್ಯಾರ್ಥಿನಿ ಸಾಕ್ಷಿಯಾಗಿದ್ದಾಳೆ. ಸಾಧನೆಗೆ ಯಾವುದೇ ಅಡ್ಡಿ ಬರುವುದಿಲ್ಲ ಎನ್ನುವುದಕ್ಕೆ ಹುಬ್ಬಳ್ಳಿಯ ವಿದ್ಯಾರ್ಥಿನಿ ಮಾದರಿಯಾಗಿದ್ದಾಳೆ. ಅಂತಾರಾಷ್ಟ್ರೀಯ ಖಗೋಳಶಾಸ್ತ್ರ ಶಿಬಿರಕ್ಕೆ ಆಯ್ಕೆಯಾಗುವ ಮೂಲಕ ಹುಬ್ಬಳ್ಳಿಯ ಹೆಸರನ್ನು ಹಾಗೂ ಕೇಂದ್ರೀಯ ವಿದ್ಯಾಲಯದ ಕೀರ್ತಿ ಬೆಳಗಿಸಲು ಸಜ್ಜಾಗಿದ್ದಾಳೆ.

ಅಂದಹಾಗೆ ಇಂತಹ ಅತ್ಯದ್ಭುತ ಸಾಧನೆ ಮಾಡಲು ಹೊರಟಿರುವ ವಿದ್ಯಾರ್ಥಿನಿ ಹೆಸರು ಕೃಷಿ ಸಂಗಮೇಶ ಮಣಕಿಕಾಯಿ. ಹುಬ್ಬಳ್ಳಿಯ ಕೇಂದ್ರೀಯ ವಿದ್ಯಾಲಯ ನಂ.1 ರ 10ನೇ ತರಗತಿ ವಿದ್ಯಾರ್ಥಿನಿ. ಮಾ.11 ರಿಂದ 14ರವರೆಗೆ ಥೈಲ್ಯಾಂಡ್‌ನ ಚಿಯಾಂಗ್ ಮಾಯ್ (Chiang Mai) ಪ್ರಾಂತ್ಯದಲ್ಲಿ ನಡೆಯಲಿರುವ ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘ (ಅಸಿಯಾನ್) ಆಸ್ಟ್ರೋನೊಮಿ ಕ್ಯಾಂಪ್ ಗೆ (ASEAN Astronomy Camp-ಎ.ಎ.ಸಿ.) ಆಯ್ಕೆಯಾಗಿದ್ದಾಳೆ.

ನ್ಯಾಷನಲ್ ಆಸ್ಟ್ರೋನೊಮಿ ರಿಸರ್ಚ್ ಇನ್ಸ್ಟಿಟ್ಯೂಟ್ ಆಫ್ ಥೈಲ್ಯಾಂಡ್ (NARIT- ನಾರಿಟ್) ಹಾಗೂ ಯುನೆಸ್ಕೊದ ಅಂತಾರಾಷ್ಟ್ರೀಯ ಖಗೋಳ ತರಬೇತಿ ಕೇಂದ್ರಗಳು (International Training Center in Astronomy under UNESCO - ITCA) ಜಂಟಿಯಾಗಿ, 15 ರಿಂದ 19 ವರ್ಷದೊಳಗಿನ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗುತ್ತಿರುವ ಈ ಶಿಬಿರಕ್ಕೆ ವಿಶ್ವದ ಹಲವಾರು ದೇಶಗಳ 316 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು.ಅವರಲ್ಲಿ ಕೇವಲ 30 ವಿದ್ಯಾರ್ಥಿಗಳನ್ನು, ಅವರು ಬರೆದಿರುವ ಖಗೋಳಶಾಸ್ತ್ರದ ನಿಬಂಧದ ಆಧಾರ ಮೇಲೆ ಶಿಬಿರಕ್ಕೆ ಆಯ್ಕೆ ಮಾಡಲಾಗಿದೆ ಎಂದು ಎ.ಎ.ಸಿ. ಪ್ರಕಟಣೆ ತಿಳಿಸಿದೆ.

ಭಾರತದಿಂದ ಇಬ್ಬರು ವಿದ್ಯಾರ್ಥಿನಿಯರು ಆಯ್ಕೆಯಾಗಿದ್ದು, ಅದರಲ್ಲಿ ಕೃಷಿ ಒಬ್ಬಳಾಗಿದ್ದಾಳೆ. ಏಪ್ರಿಲ್ 2024ರಲ್ಲಿ ಕೇಂದ್ರೀಯ ವಿದ್ಯಾಲಯ ನಂ.1 ರ ಶಿಕ್ಷಕರು, ಪಿಎಂ ಶ್ರೀ ಯೋಜನೆ (PM Schools for Rising India) ಅನುದಾನದಲ್ಲಿ, ಬೆಂಗಳೂರಿನ ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆಗೆ (ಇಸ್ರೋ) ವಿಜ್ಞಾನ ಪ್ರವಾಸ ಕರೆದೊಯ್ದಿದ್ದರು.

ಆ ಸಂದರ್ಭದಲ್ಲಿ ಇಸ್ರೋದ ವಿವಿಧ ವಿಭಾಗಗಳಿಗೆ ಭೇಟಿ ನೀಡಿದ್ದರು. ಅಲ್ಲಿ ವಿಜ್ಞಾನಿಗಳೊಂದಿಗೆ ಸಂವಾದ ಕಾರ್ಯಕ್ರಮ ನಡೆದಿತ್ತು. ಇಂತಹ ಕಾರ್ಯಕ್ರಮ ಕೃಷಿ ಭಾರತವನ್ನು ಪ್ರತಿನಿಧಿಸಲು ಕಾರಣವಾಗಿದೆ.

> ನಾನೂ ಈ ಹಿಂದೆ ಇಸ್ರೋಗೆ ಭೇಟಿ ನೀಡಿದ್ದೆ, ಅಲ್ಲಿನ ವಿಜ್ಞಾನಿಗಳಾದ ಪಿ. ವೀರಮುತುವೇಲ್, ನಿಗಾರ್ ಶಾಜಿ, ಪ್ರಶಾಂತ ಬಾಗಲಕೋಟ ಹಾಗೂ ಇತರರ ಜತೆ ಸಣ್ಣ ಸಂವಾದ ನಡೆಸಿದ್ದೆ. ಅವರ ಮಾತುಗಳಿಂದ ಅಂತರಿಕ್ಷ ಮತ್ತು ಖಗೋಳಶಾಸ್ತ್ರದಲ್ಲಿ ಹೆಚ್ಚಿನ ಆಸಕ್ತಿ ಉಂಟಾಯಿತು. ಈ ಶಿಬಿರದ ಆಯ್ಕೆ ನನ್ನ ಶಾಲೆ ಪಿ.ಎಂ.ಶ್ರೀ ಅನುದಾನ, ಇಸ್ರೋ ಹಾಗೂ ಅಲ್ಲಿನ ವಿಜ್ಞಾನಿಗಳ ಪ್ರೇರಣೆಯೇ ನನಗೆ ಕಾರಣ.
> -ವಿದ್ಯಾರ್ಥಿನಿ, ಕೃಷಿ, ಅಂತಾರಾಷ್ಟ್ರೀಯ ಖಗೋಳಶಾಸ್ತ್ರ ಶಿಬಿರಕ್ಕೆ ಆಯ್ಕೆಯಾದ ಹುಬ್ಬಳ್ಳಿ

> ಕಠಿಣ ಪರಿಶ್ರಮದಿಂದ ಕೃಷಿ ಉತ್ತಮ ಸಾಧನೆಗೈದಿದ್ದಾಳೆ. ಅಂತಾರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿರುವುದು ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾಳೆ ಅವಳ ಸಾಧನೆ ನಮಗೆಲ್ಲಾ ಸಂತಸ ತಂದಿದೆ.
> -ರಂಗಪ್ಪ, ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲರು

ಚಿಯಾಂಗ್ ಮಾಯ್ ಪ್ರಾಂತ್ಯದ ಮೇರಿಮ್ ಜಿಲ್ಲೆಯ ಪ್ರಿನ್ಸೆಸ್ ಸಿರಿಂಧೋರ್ನ್ ಆಸ್ಟ್ರೋಪಾರ್ಕ್ ಮತ್ತು ಚೊಮ್ ಥಾಂಗ್ ಜಿಲ್ಲೆಯ ಆಸ್ಟ್ರೋನೊಮಿ ಇನ್ಫರ್ಮೇಷನ್ ಅಂಡ್ ಟ್ರೇನಿಂಗ್ ಸೆಂಟರ್ ಹಾಗೂ ಡೊಯ್ ಇಂಥನಾನ್ ನ್ಯಾಷನಲ್ ಪಾರ್ಕ್‌ನಲ್ಲಿ ನಡೆಯುವ ಈ ಶಿಬಿರದಲ್ಲಿ ವಿದ್ಯಾರ್ಥಿಗಳು ಅಲ್ಲಿನ ಪ್ರಯೋಗಾಲಯಗಳಿಗೆ ಭೇಟಿ ನೀಡಿ, 40 ಮೀಟರ್ ಉದ್ದದ ಥಾಯ್ ನ್ಯಾಷನಲ್ ರೇಡಿಯೊ ಟೆಲಿಸ್ಕೋಪ್ ಮತ್ತು 2.4 ಮೀಟರ್ ಉದ್ದದ ಥಾಯ್ ನ್ಯಾಷನಲ್ ಟೆಲಿಸ್ಕೋಪನ್ನು ವೀಕ್ಷಿಸಲಿದ್ದಾರೆ. ಥೈಲ್ಯಾಂಡ್‌ನ ಅತಿ ಎತ್ತರದ ಶಿಖರದಲ್ಲಿ ನಕ್ಷತ್ರ ವೀಕ್ಷಣೆಯಂಥ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ನಾರಿಟ್‌ನ ಕಾರ್ಯನಿರ್ವಾಹಕ ನಿರ್ದೇಶಕ ಸರನ್ ಪೊಷ್ಯಾಚಿಂದ (Saran Poshyachinda) ಅವರು ಕೃಷಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಸಾಧನೆ ಮಾಡಲು ಹೊರಟಿರುವ ಕೃಷಿ ನಿಜಕ್ಕೂ ಭಾರತೀಯರಾದ ನಮಗೆ ಹೆಮ್ಮೆ, ಖಗೋಳಶಾಸ್ತ್ರದ ಅಧ್ಯಯನದಲ್ಲಿ ಮತ್ತಷ್ಟು ಸಾಧನೆ ಮಾಡಿ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಯಶಸ್ವಿಯಾಗಿ ವಿಜ್ಞಾನಿಯಾಗಲಿ ಎನ್ನುವುದು ನಮ್ಮೆಲ್ಲರ ಆಶಯ.

ಕೃಷಿಗೆ ಓಟದ ಸ್ಪರ್ಧೆಯಲ್ಲಿ ಸಮಾಧಾನಕರ ಬಹುಮಾನ

ಕೃಷಿ ಕೈಕ್ಷಣಿಕ ವರ್ಷದಲ್ಲಿ ಕೇರಳದ ಎರ್ನಾಕುಲಂನಲ್ಲಿ ನಡೆದ ಕೇಂದ್ರೀಯ ವಿದ್ಯಾಲಯಗಳ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 3000 ಮೀ. ಮತ್ತು 1.500 ಮೀಟರ್ ಓಟಗಳಲ್ಲಿಯೂ ಬೆಂಗಳೂರು ಪ್ರಾದೇಶಿಕ ವಿಭಾಗವನ್ನು ಪ್ರತಿನಿಧಿಸಿ, ಸಮಾಧಾನಕರ ಬಹುಮಾನ ಪಡೆದಿದ್ದಾಳೆ.

ಕೃತಕ ಬುದ್ಧಿಮತ್ತೆ ಉದ್ಯಮ ಕ್ಷೇತ್ರಕ್ಕೆ ಪೂರಕ

ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರವಾಸೋದ್ಯಮ ಅಧ್ಯಯನ ವಿಭಾಗವು ಆಯೋಜಿಸಿದ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಕಿರಣ ಜಾಧವ್ ಉದ್ಘಾಟಿಸಿದರು.

ಧಾರವಾಡ: ಕೃತಕ ಬುದ್ಧಿಮತ್ತೆಯ ಅಪ್ಲಿಕೇಶನ್‌ಗಳನ್ನು ವಿಮಾನಯಾನ, ಪ್ರವಾಸೋದ್ಯಮ ಮತ್ತು ಮಾಧ್ಯಮ, ಸಿನೆಮಾ ಕ್ಷೇತ್ರದಲ್ಲಿ ಹೆಚ್ಚು ಬಳಕೆ ಮಾಡಲಾಗುತ್ತಿದ್ದು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಉದ್ಯಮ ಸೇರಿದಂತೆ ಎಲ್ಲ ಕ್ಷೇತ್ರಗಳಿಗೆ ಪೂರಕವಾಗಿ ಸಹಾಯಕವಾಗಿದೆ ಎಂದು ಥೈಲ್ಯಾಂಡಿನ ನಾರ್ಥ್ ಚಾಂಗ್ಯಾಯ ಯುನಿವರ್ಸಿಟಿಯ ಸ್ಕೂಲ್ ಆಫ್ ಆರ್ಟಿಫಿಷಿಯಲ್ ಇಂಟೆಲಿಜನ್ಸ್ ವಿಭಾಗದ ನಿರ್ದೇಶಕ ಕಿರಣ ಜಾಧವ ಅಭಿಪ್ರಾಯಪಟ್ಟರು.

ಕರ್ನಾಟಕ ಕಲಾ ಕಾಲೇಜಿನ ಸ್ನಾತಕ ಮತ್ತು ಸ್ನಾತಕೋತ್ತರ ಪ್ರವಾಸೋದ್ಯಮ ಅಧ್ಯಯನ ವಿಭಾಗವು ಗುರುವಾರದಂದು ಥೈಲ್ಯಾಂಡಿನ ನಾರ್ಥ್ ಚಾಂಗ್ಯಾಯ ಯುನಿವರ್ಸಿಟಿಯ ಸಹಯೋಗದಲ್ಲಿ ಪ್ರವಾಸೋದ್ಯಮ ವಿಭಾಗದ ಭುವನ ವಿಜಯ ಸಭಾಂಗಣದಲ್ಲಿ 'ವಿಮಾನಯಾನ, ವಸತಿ ಉದ್ಯಮ ಮತ್ತು ಪ್ರವಾಸೋದ್ಯಮ ಬದಲಾವಣೆಯಲ್ಲಿ ಕೃತಕ ಬುದ್ಧಿಮತ್ತೆಯ ಹೊಸ ಆಯಾಮಗಳು' ಎಂಬ ವಿಷಯದ ಕುರಿತು ಆಯೋಜಿಸಿದ ಒಂದು ದಿನದ ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ 'ಪ್ರವಾಸೋದ್ಯಮ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯ ಹೊಸ ದಿಗಂತಗಳು' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು.

ಇಂದು ಡೇಟಾ ಸೈನ್ಸ್ ಪ್ರಸ್ತುತ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದೆ ಎಂದರು. ಡೇಟಾ ವಿಶ್ಲೇಷಣೆ ಪ್ರಸ್ತುತ ಬಹಳ ಜನಪ್ರಿಯವಾದ ಪರಿಕಲ್ಪನೆ ಆಗಿದೆ. ಡೇಟಾ ಸೈನ್ಸ್ ಪ್ರಸ್ತುತ ಉದ್ಯಮ ಕ್ಷೇತ್ರದಲ್ಲಿ ಬಳಕೆ ಮಾಡಲಾಗುತ್ತಿದ್ದು, ತ್ವರಿತವಾಗಿ ನಿರ್ಧಾರ ಕೈಗೊಳ್ಳಲು ಡೇಟಾ ಸೈನ್ಸ್ ಬಹಳ ಪ್ರಯೋಜನಕಾರಿಯಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಕಲಾ ಕಾಲೇಜಿನ ಪ್ರವಾಸೋದ್ಯಮ ವಿಭಾಗದ ಸಂಯೋಜಕ ಡಾ. ಐ.ಸಿ.ಮುಳಗುಂದ ಮಾತನಾಡಿ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಹೆಚ್ಚು ಬಳಕೆಯಲ್ಲಿರುವ ತಂತ್ರಜ್ಞಾನವಾಗಿದ್ದು ವಿವಿಧ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯನ್ನು ಸಹಕಾರಿಯಾಗಿದ್ದು, ಇಂದು ಕೃತಕ ಬುದ್ಧಿಮತ್ತೆಯನ್ನು ಆಡಳಿತ, ಸಾರಿಗೆ, ಪೊಲೀಸ್, ಮಾಧ್ಯಮ, ಶಿಕ್ಷಣ ಕ್ಷೇತ್ರದಲ್ಲಿ ಬಳಕೆಯಾಗುತ್ತಿದೆ ಎಂದ ಅವರು ಇಂದು ಮಷಿನ್ ಲರ್ನಿಂಗ್, ಧ್ವನಿ ಗುರುತಿಸುವಿಕೆ, ಅನುವಾದ ಸೇರಿದಂತೆ ಬಳಕೆಮಾಡಲಾಗುತ್ತಿದೆ ಎಂದರು. ಯಾವುದೇ ರೀತಿಯ ತಂತ್ರಜ್ಞಾನ ಬಂದರೂ ಮಾನವ ಸಂಪನ್ಮೂಲ ಹೆಚ್ಚಿನ ಶಕ್ತಿಯಾಗಿದೆ ಎಂದರು.

ಕರ್ನಾಟಕ ಕಾಲೇಜಿನ ಪ್ರವಾಸೋದ್ಯಮ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಜಗದೀಶ್.ಕೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಕವಿವಿ ವಿತ್ತಾಧಿಕಾರಿ ಪ್ರೊ.ಎಸ್. ರಾಜಶೇಖರ ಶಾಂತಿನಿಕೇತನ ಪಾಸ್ಲೆ, ವಿನಾಯಕ ಕಟ್ಟಿ, ಡಾ.ಇಂದ್ರಾಣಿ ಕಟ್ಟಿ, ಪ್ರೊ.ರೋಜಿಟ್ ದದ್ದಾಪುರಿ, ಡಾ.ಸುಷ್ಮಾ, ಪ್ರೊ.ಸಂದೀಪ.ಡಾ.ರಾಣಿ ಇದ್ದರು.

> ಪ್ರಸ್ತುತ ತಂತ್ರಜ್ಞಾನವನ್ನು ಬ್ಯಾಂಕಿಂಗ್, ವಾಣಿಜ್ಯ ವ್ಯವಹಾರ, ಆರ್ಥಿಕ, ಸ್ಟಾಕ್ ಮಾರುಕಟ್ಟೆ, ಆರೋಗ್ಯ ಕ್ಷೇತ್ರಗಳಲ್ಲಿ ಡೇಟಾ ಸೈನ್ಸ್ ಹೆಚ್ಚು ಮತ್ತು ಕೃತಕ ಬುದ್ಧಿಮತ್ತೆ ಹೆಚ್ಚು ಉಪಯುಕ್ತವಾಗಿದೆ. ಭವಿಷ್ಯದಲ್ಲಿ ಡೇಟಾ ಸೈನ್ಸ್, ಡಿಜಿಟಲ್ ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಎಲ್ಲ ಉದ್ಯಮ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ವಹಿಸಿದೆ.
> -ಕಿರಣ ಜಾಧವ, ಎಐ ವಿಭಾಗದ ನಿರ್ದೇಶಕ

ರೌಡಿ ಶೀಟರ್‌ಗಳ ಪರೇಡ್

ಧಾರವಾಡ: ವಿವಿಧ ಅಪರಾಧ ಪ್ರಕರಣಗಳಡಿ ಭಾಗಿಯಾಗಿ ರೌಡಿ ಶೀಟರ್‌ಗಳೆಂದು ಪರಿಗಣಿಸಲಾದ ಸುಮಾರು 25ಕ್ಕೂ ಹೆಚ್ಚು ರೌಡಿ ಶೀಟರ್‌ಗಳ ಪರೇಡ್‌ನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಗೋಪಾಲ ಬ್ಯಾಕೋಡ ಅವರು ಮಾ.6ರಂದು ಬೆಳಗ್ಗೆ ನಡೆಸಿದರು.

ಧಾರವಾಡ ಗ್ರಾಮೀಣ ಠಾಣೆ ಹಾಗೂ ಗರಗ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿವಿಧ ಅಪರಾಧ ಪ್ರಕರಣಗಳ ಅಡಿ ಭಾಗಿಯಾದ ಎಲ್ಲ ರೌಡಿಶೀಟರ್‌ಗಳನ್ನು ಧಾರವಾಡ ಗ್ರಾಮೀಣ ಪೊಲೀಸ್ ಠಾಣೆಗೆ ಕರೆಯಿಸಿ ಎಸ್ಪಿ ಅವರು ವಿಚಾರಣೆ ನಡೆಸಿದರು.

ಯಾವ ವ್ಯಕ್ತಿ ಯಾವ ಅಪರಾಧ ಮಾಡಿದ್ದ, ಆತನ ಮೇಲೆ ಹಲವಾರು ಪ್ರಕರಣಗಳಿವೆ. ಇನ್ನೂ ಅಪರಾಧ ಕೃತ್ಯಗಳಲ್ಲಿ ಭಾಗವಹಿಸುತ್ತಾರೆಯೇ ಎಂಬ ಎಲ್ಲ ಮಾಹಿತಿಯನ್ನು ಸ್ವತಃ ರೌಡಿ ಶೀಟರ್‌ಗಳಿಂದಲೇ ಮಾಹಿತಿ ಪಡೆದು ಮುಂದೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದೇ ಆದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆಯನ್ನು ಎಸ್ಪಿ ಬ್ಯಾಕೋಡ ಅವರು ರೌಡಿಶೀಟರ್‌ಗಳಿಗೆ ನೀಡಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಾರಾಯಣ ಬರಮಣಿ, ಡಿವೈಎಸ್ಪಿ ಶಿವಾನಂದ ಕಟಗಿ, ಇನ್ಸಪೆಕ್ಟರ್ ಎಸ್.ಎಸ್.ಕಮತಗಿ, ಸಮೀರ್ ಮುಲ್ಲಾ ಸೇರಿದಂತೆ ಇದ್ದರು.

ಬಿಆರ್‌ಟಿಎಸ್ ಖಂಡಿಸಿ ಪ್ರತಿಭಟನೆ

ಧಾರವಾಡ: ಬಿಆರ್‌ಟಿಎಸ್ ಅವೈಜ್ಞಾನಿಕವಾಗಿರುವುದನ್ನು ಖಂಡಿಸಿ, ಧಾರವಾಡದಲ್ಲಿ ಧ್ವನಿ ಸಂಘಟನೆಯಿಂದ ಪ್ರತಿಭಟನೆ ಮಾಡಲಾಯಿತು.

ಪ್ರಮುಖ ಬೇಡಿಕೆಯಾದ ಧಾರವಾಡ ಜ್ಯೂಬಲಿ ಸರ್ಕಲ್‌ದಿಂದ ನವಲೂರವರೆಗೆ ಬಿಆರ್‌ಟಿಎಸ್ ರಸ್ತೆಯಲ್ಲಿ ಎಲ್ಲಾ ವಾಹನಗಳಿಗೂ ಸಂಚರಿಸಲು ಅನುಮತಿ ನೀಡುವಂತೆ ಬಿಆರ್‌ಟಿಎಸ್ ಎಂಡಿ ಅವರಿಗೆ ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ಧಾರವಾಡ ಧ್ವನಿ ಅಧ್ಯಕ್ಷರಾದ ಈಶ್ವರ ಶಿವಳ್ಳಿ, ಪ್ರಧಾನ ಕಾರ್ಯದರ್ಶಿ ಮಂಜು ನಡಟ್ಟಿ, ಶಂಭು ಸಾಲಮನಿ, ಬಸವರಾಜ ಜಾಧವ, ಬಿ.ಎಂ ಕೇದಾರಂತಾಳ, ಪರಮೇಶಿ ಕಾಳೆ, ಸಂತೋಷ ಪಟ್ಟಣಶೆಟ್ಟಿ, ವೆಂಕಟೇಶ ರಾಯ್ಕರ, ತುಳಸಪ್ಪ ಪೂಜಾರ, ಮಂಜು ನೀರಲಕಟ್ಟಿ, ಮತ್ತು ಬಸ್ನೂರ, ಪುಂಡಲೀಕ ತಳವಾರ, ಸುರೇಖಾ ಪೂಜಾರ, ಮಂಜುನಾಥ ಬೋವಿ ಪಮ್ಮೋಜಿ, ರಾಜೇಶ ಮನಗುಂಡಿ, ಇಮಾಮ ತಾಳಿಕೋಟಿ, ಪ್ರಕಾಶ ಬೆಂಗೇರಿ, ಮನೋಜ ಸಂಗೊಳ್ಳಿ, ಪರಶುರಾಮ ಚುರಮರಿ, ಹಾಗೂ ಧಾರವಾಡ ಧ್ವನಿಯ ಎಲ್ಲಾ ಸದಸ್ಯರು ಪದಾಧಿಕಾರಿಗಳು ಮತ್ತು ಧಾರವಾಡದ ಸಾರ್ವಜನಿಕ ಭಾಗವಹಿಸಿದ್ದರು.

'ಧರ್ಮವೀರ' ಚಲನಚಿತ್ರ ಪ್ರದರ್ಶನ ಇಂದು

ಧಾರವಾಡ: ನಗರದ ಶ್ರೀನಿವಾಸ ಚಿತ್ರಮಂದಿರದಲ್ಲಿ ಹೆತ್ತೊಡಲು ಸಿನಿ ಕಂಬೈನ್ಸ್ ಅವರ ಮಾಜಿ ಮುಖ್ಯ ಸಚೇತಕರಾದ ಡಿ.ಎಂ ಸಾಲಿ ಅರ್ಪಿಸುವ ಧಾರವಾಡದ ಡಾ. ಕಲ್ಲೇಶ್. ಡಿ.ಹಾವೇರಿಪೇಟ್ ಅವರು ನಾಯಕ ನಟರಾಗಿ ಅಭಿನಯಿಸಿದ ಧರ್ಮವೀರ ಚಲನಚಿತ್ರದ ವಿಶೇಷ ಪ್ರದರ್ಶನಗಳು, ಮಾ.7 ರಿಂದ ಪ್ರತಿದಿನ 2 ಶೋ 3 ಹಾಗೂ ಸಂಜೆ 6 ಒಂದು ವಾರದವರೆಗೆ ಪ್ರದರ್ಶನಗೊಳ್ಳಲಿದೆ ಎಂದು ಚಲನಚಿತ್ರ ನಾಯಕರು ಹಾಗೂ ನಿರ್ಮಾಪಕರಾದ ಡಾ. ಕಲ್ಲೇಶ್ ಡಿ. ಹಾವೇರಿಪೇಟ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಚಲನಚಿತ್ರ ಸಾಮಾಜಿಕ ಕೌಟುಂಬಿಕ ಹಿನ್ನೆಲೆಯಲ್ಲಿ ಮೂಡಿಬಂದಿದೆ.

ಈ ಚಲನಚಿತ್ರದ ಉದ್ಘಾಟನೆಯನ್ನು ಧಾರವಾಡದ ಶಾಸಕರಾದ ಅರವಿಂದ ಬೆಲ್ಲದ ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ಮಹಾಪೌರರಾದ ರಾಮಣ್ಣ ಬಡಿಗೇರ, ನ್ಯಾಯವಾದಿಗಳಾದ ಅರುಣ ಜೋಶಿ, ವೃತ್ತಿ ರಂಗಭೂಮಿ ಹಾಗೂ ಚಲನಚಿತ್ರ ನಟರಾದ ಡಾ. ರಾಜು ತಾಳಿಕೋಟಿ, ಧಾರವಾಡ ಗ್ರಾಮೀಣ ಮಾಜಿ ಶಾಸಕರಾದ ಸೀಮಾ ಮಸೂತಿ ಹಾಗೂ ಅಮೃತ ದೇಸಾಯಿ, ಮಾಜಿ ವಿಧಾನ ಪರಿಷತ್ ಸದಸ್ಯರಾದ ನಾಗರಾಜ ಛಬ್ಬಿ, ಕರ್ನಾಟಕ ರಾಜ್ಯ ರೇಷ್ಮೆ ನಿಗಮದ ಮಾಜಿ ಅಧ್ಯಕ್ಷರಾದ ಸವಿತಾ ಅಮರಶೆಟ್ಟಿ ಆಗಮಿಸಲಿದ್ದಾರೆ ಎಂದರು.

ಡಾ.ಕಲ್ಲೇಶ್ ಹಾವೇರಿಪೇಟ್ ಅವರು ಈ ಚಲನಚಿತ್ರದ ನಿರ್ಮಾಪಕರಾಗಿದ್ದು, ಎಂ. ರಂಗನಾಥ ನಿರ್ದೇಶನ ಮಾಡಿದ್ದಾರೆ. ಈ ಚಿತ್ರಕ್ಕೆ ಗುರುದತ್ತ ಮುಸುರಿ ಅವರ ಛಾಯಾಗ್ರಹಣವಿದ್ದು, ಮುಖ್ಯ ಭೂಮಿಕೆಯಲ್ಲಿ ನಾಯಕ ನಟರಾಗಿ ಡಾ.ಕಲ್ಲೇಶ್ ಹಾವೇರಿಪೇಟ್, ಜಯಸಿಂಹ ಮುಸುರಿ, ಹು.ಧಾಮ.ನ. ಪಾಲಿಕೆಯ ಮಾಜಿ ಸದಸ್ಯರಾದ ಸುಭಾಷ ಶಿಂಧೆ, ನಾಯಕಿಯಾಗಿ ಸಿಂಧುರಾವ್ ಹಾಗೂ ರಂಜಿತಾ, ಚಿತ್ರಲಾ ಬಿರಾದಾರ, ವೀಣಾ ಕಟ್ಟಿ ಮಂತಾದವರು ಅಭಿನಯಿಸಿದ್ದಾರೆ ಎಂದರು.

ಚಲನಚಿತ್ರವನ್ನು ಧಾರವಾಡ ಬೆಂಗಳೂರು, ಬಳ್ಳಾರಿ, ಬನವಾಸಿ ಸೇರಿದಂತೆ ನಾಡಿನ ವಿವಿಧ ಭಾಗಗಳಲ್ಲಿ ಚಿತ್ರೀಕರಣ ಮಾಡಲಾಗಿದೆ ಎಂದರು. ಬರುವ ದಿನಗಳಲ್ಲಿ ಹರಹರ ಶಂಕರ, ಸರ್ಜ್ ಕಿರಣ, ಮಾನಸಿ ಸೊಸೆಳು ಚಲನಚಿತ್ರಗಳನ್ನು ನಿರ್ಮಿಸಲಾಗುತ್ತಿದೆ ಎಂದರು.

ಪತ್ರಿಕಾ ಗೋಷ್ಠಿಯಲ್ಲಿ ಡಾ.ಪ್ರಭು ಹಂಚಿನಾಳ, ರಾಹುಲ್ ದತ್ತಪ್ರಸಾದ, ಡಾ. ಅರವಿಂದ ಮುಳಗುಂದ ಉಪಸ್ಥಿತರಿದ್ದರು.

ಉದ್ಯೋಗ ಮೇಳ ಮಾ.9ರಂದು

ಹುಬ್ಬಳ್ಳಿ: ಉತ್ತರ ಕರ್ನಾಟಕ ಭಾಗದ ನಿರುದ್ಯೋಗಿ ಯುವಕರಿಗೆ ಉದ್ಯೋಗಗಳನ್ನು ಒದಗಿಸುವ ಉದ್ದೇಶದಿಂದ ಮೊಟ್ಟಮೊದಲ ಬಾರಿಗೆ ಸ್ವಾಭಿಮಾನಿ ಜಾಬ್ ಫೇರ್ ಮಾ.9 ರಂದು ಇಲ್ಲಿನ ವಿದ್ಯಾನಗರದ ಹನ್ಸ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಮುಖ್ಯಸ್ಥ ಸುಬ್ರಹ್ಮಣ್ಯ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ನಡೆಯುವ ಜಾಬ್ ಫೇರ್‌ನಲ್ಲಿ 20 ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು, ನೇರವಾಗಿ ಕಂಪನಿಗಳ ಮಾಲೀಕರೆ ಸಂದರ್ಶನ ನಡೆಸಿ ಅಭ್ಯರ್ಥಿಗಳ ಆಯ್ಕೆ ಮಾಡಿಕೊಳ್ಳಲಿದ್ದಾರೆ. ಹೀಗಾಗಿ ಅಭ್ಯರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಹುಬ್ಬಳ್ಳಿ ಸೇರಿದಂತೆ ರಾಜ್ಯದ ಎಲ್ಲ ಜಿಲ್ಲೆಗಳ ಉದ್ಯಮ ವಿಸ್ತರಿಸುವ ಕಂಪನಿಗಳು ಇದರಲ್ಲಿ ಭಾಗವಹಿಸುತ್ತಿದ್ದಾರೆ. ಎಸ್ಎಸ್ಎಲ್‌ಸಿ ಯಿಂದ ಹಿಡಿದು ಪಿಎಚ್.ಡಿ ಮುಗಿಸಿದ ಅಭ್ಯರ್ಥಿಗಳು ಜಾಬ್‌ಫೇರ್‌ನಲ್ಲಿ ಭಾಗವಹಿಸಬಹುದು ಎಂದು ತಿಳಿಸಿದರು. ಇನ್ನು ಈಗಾಗಲೇ 500 ಕ್ಕೂ ಹೆಚ್ಚು ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಹೀಗಾಗಿ ಅಭ್ಯರ್ಥಿಗಳು ಆದಷ್ಟು ಬೇಗ ನೋಂದಣಿ ಮಾಡಿಕೊಳ್ಳಬೇಕು ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ನಾಗರಾಜ್ ನಡಕಟ್ಟಿ, ಆನಂದ ಬೈದೂರ ಇದ್ದರು.

ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾ.10ಕ್ಕೆ

ಧಾರವಾಡ: ಡಾ.ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಸ್ಮಾರಕ (ೞ) ಟ್ರಸ್ಟ್‌ದಿಂದ ಡಾ. ಮಲ್ಲಿಕಾರ್ಜುನ ಮನಸೂರ ಅವರ ಜನ್ಮ ದಿನಾಚರಣೆ ಪ್ರಯುಕ್ತ ಮಾ.10 ರಂದು ಸಂಜೆ 5.30 ಗಂಟೆಗೆ ನಗರದ ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ ಡಾ. ಮಲ್ಲಿಕಾರ್ಜುನ ಮನಸೂರ ಟ್ರಸ್ಟ್‌ನಿಂದ ಹಿರಿಯ ಸಂಗೀತಗಾರರಿಗೆ ಡಾ. ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಪ್ರಶಸ್ತಿ ಹಾಗೂ ಯುವ ಸಂಗೀತಗಾರರಿಗೆ ರಾಷ್ಟ್ರೀಯ ಯುವ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದ್ದು ಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರ ಪಂ.ಡಿ.ಕುಮಾರ ದಾಸ್ ಅವರಿಗೆ ಪ್ರದಾನ ಮಾಡಲಾಗುತ್ತದೆ. ಶಿರಸಿ ತಾಲೂಕು ಮುತ್ತಮುರ್ಡ ಗ್ರಾಮದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರ ವಿನಾಯಕ ಹೆಗಡೆ ಅವರಿಗೆ ಡಾ. ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಯುವ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತಿದೆ. ಸಚಿವ ಸಂತೋಷ್.ಎಸ್.ಲಾಡ್ ಅವರು ಕಾರ್ಯಕ್ರಮನ್ನು ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡುವರು. ಸಚಿವ ಪ್ರಲ್ಹಾದ ಜೋಶಿ ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ಘನ ಉಪಸ್ಥಿತಿ ವಹಿಸುವರು. ಶಾಸಕ ಅರವಿಂದ ಚಂದ್ರಕಾಂತ ಬೆಲ್ಲದ ಅವರು ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ದಿವ್ಯ ಪ್ರಭು, ಸದಸ್ಯ ಪಂ.ಎಂ. ವೆಂಕಟೇಶಕುಮಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬೆಳಗಾವಿ ವಿಭಾಗದ ಜಂಟಿ ನಿರ್ದೇಶಕ ಕೆ.ಹೆಚ್.ಚನ್ನೂರ ಇರುವರು.

ಶ್ರೀಮಹಾಬಲೇಶ್ವರ, ವೀರಭದ್ರೇಶ್ವರ ರಥೋತ್ಸವ

ಶ್ರೀಮಹಾಬಲೇಶ್ವರ ಹಾಗೂ ರಾಯಚೋಟ ವೀರಭದ್ರೇಶ್ವರ 18ನೇ ವರ್ಷದ ಜಾತ್ರೋತ್ಸವವು ವಿಜೃಂಭಣೆಯಿಂದ ನಡೆಯಿತು.

ಹುಬ್ಬಳ್ಳಿ: ಇಲ್ಲಿನ ವೀರಾಪೂರ ಓಣಿಯ ಶ್ರೀಮಹಾಬಲೇಶ್ವರ ಹಾಗೂ ರಾಯಚೋಟಿ ವೀರಭದ್ರೇಶ್ವರ 18ನೇ ವರ್ಷದ ಜಾತ್ರೋತ್ಸವ ಭಾನುವಾರ ವಿಜೃಂಭಣೆಯಿಂದ ನಡೆಯಿತು.

ಎರಡೆತ್ತಿನ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಪ್ರಸಾದ ಅಬ್ಬಯ್ಯ ರಥೋತ್ಸವಕ್ಕೆ ಚಾಲನೆ ನೀಡಿದರು. ಉಪ ಮಹಾಪೌರ ದುರ್ಗಮ್ಮ ಬಿಜವಾಡ, ಶಶಿಕಾಂತ ಬಿಜವಾಡ, ಈರಣ್ಣ ಶಿಂತ್ರಿ, ಪ್ರಭು ನವಲಗುಂದಮಠ, ಶಿವಾನಂದ ಮುತ್ತಣ್ಣವರ, ನಾಗರಾಜ ಗೌರಿ, ದೀಪಾ ಗೌರಿ, ಆಣ್ಣಪ್ಪ ಗೋಕಾಕ, ಚಂದ್ರಶೇಖರಗೌಡ ಪಾಟೀಲ, ಮಲ್ಲು ವಿಠ್ಠಮಠ, ಕಲ್ಲಯ್ಯ ಚೌಕಿಮಠ, ಸಿದ್ದಪ್ಪ ಮುತ್ತಣ್ಣವರ, ರವಿ ಮುಖಣ್ಣವರ, ರವಿ ಕುಬಸದ, ಮಾರುತಿ ಚಾಕಲಬ್ಬಿ, ವಿನೋದ ಹಿರೇಮಠ ಇತರರಿದ್ದರು.

ವಾದ್ಯ ಮೇಳದೊಂದಿಗೆ ರಥೋತ್ಸವವು ಶ್ರೀ ಮಹಾಬಲೇಶ್ವರ ದೇವಸ್ಥಾನ ಮುಖ್ಯದ್ವಾರದಿಂದ ಎರಡೆತ್ತಿನ ಮಠ ವರೆಗೆ ನೆರವೇರಿತು. ಈ ಸಂದರ್ಭದಲ್ಲಿ ಮಾರ್ಗದುದ್ದಕ್ಕೂ ಹರ ಹರ ಮಹಾದೇವ, ರಾಯಚೋಟಿ ಶ್ರೀ ವೀರಭದ್ರೇಶ್ವರ ಮಹಾರಾಜ ಕೀ ಜೈ, ಶಿವಾಯ ನಮಃ, ಜೈ ಶ್ರೀ ರಾಮ ಘೋಷಣೆಗಳು ಮೊಳಗಿದವು. ಭಕ್ತರು ರಥಕ್ಕೆ ಪುಷ್ಪಗಳನ್ನು ಸಮರ್ಪಿಸಿ ಭಕ್ತಿಯಿಂದ ನಮಿಸಿದರು.

ಮಾರಾಟ ಮಳಿಗೆ ಇಂದಿನಿಂದ ಆರಂಭ

ಹುಬ್ಬಳ್ಳಿ: ನಗರದಲ್ಲಿ ಮೊಟ್ಟ ಮೊದಲ ಬಾರಿಗೆ ರೇಣುಕಾ ಶಿಕ್ಷಣ ಮತ್ತು ಕಲ್ಯಾಣ ಕೇಂದ್ರ ಹಾಗೂ ಸುಪ್ರಿಯಾ ಅಸೋಸಿಯೇಷನ್ ಸಹಯೋಗದಲ್ಲಿ ಸ್ವಯಂ ಉದ್ಯೋಗ ಮಾಡುವ ಮಹಿಳೆಯರಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತವಾಗಿ ಮಾ.7, 8 ರಂದು ಸಿಟಿಕ ಬಹುಮಹಡಿ ಕಟ್ಟಡದಲ್ಲಿ ಮಾರಾಟ ಮಳಿಗೆ (ಎಕ್ಸಿಬಿಷನ್ ಹಾಲ್)ಯನ್ನು ಆಯೋಜಿಸಲಾಗಿದೆ ಎಂದು ಕೇಂದ್ರದ ಅಧ್ಯಕ್ಷ ಡಾ.ಸುನೀತಾ ದಿವಟೆ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 20 ವರ್ಷಗಳಿಂದ ಮಹಿಳೆಯರಿಗೆ ವಿವಿಧ ಇಲಾಖೆಯಿಂದ ಉದ್ಯೋಗ ಮತ್ತು ಸ್ವಯಂ ಉದ್ಯೋಗ ನೀಡಲಾಗುತ್ತಿದೆ. ಅದರಿಂದ ಇದೀಗ ಸಣ್ಣ ಗುಡಿ ಕೈಗಾರಿಕಾ ಘಟಕದಲ್ಲಿ ಉತ್ಪಾದನೆ ಮಾಡುವಂತಹ ಮಹಿಳೆಯರಿಗೆ ಸಹಾಯವಾಗಲೆಂಬ ಉದ್ದೇಶದಿಂದ ಮಾರಾಟ ಮಳಿಗೆಯನ್ನು (ವಾರದ ಸಂತೆ) ಆಯೋಜಿಸುತ್ತಿದೆ ಎಂದರು. ಈ ಮಾಹಿತಿಯು ಪ್ರತಿ ತಿಂಗಳ 2 ನೇ ವಾರದ 3 ದಿನ ನಡೆಯಲಿದ್ದು, ಕೈಯಿಂದ ತಯಾರಿಸಿ ಉತ್ಪಾದನೆ ಮಾಡಿರಂತಹ ವಸ್ತುಗಳ ಮಾರಾಟ ಮಾಡಲಾಗುತ್ತದೆ. ಅಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ 50 ಕರಕುಶಲಕರ್ಮಿಗಳಿಗೆ ಉಚಿತ ಹೊಲಿಗೆಯಂತ್ರ ಹಾಗೂ ಎಂಬ್ರಾಯಿಡರಿ ಕಿಟ್‌ಗಳನ್ನು ಬೆಳಗಾವಿ ವಿಭಾಗದ ದರ್ಶನ ಸಹಾಯಕ ನಿರ್ದೇಶಕ ನೇತೃತ್ವದಲ್ಲಿ ನೀಡಲಾಗುವುದು ಎಂದರು. ಪತ್ರಿಕಾಗೋಷ್ಠಿಯಲ್ಲಿ ಶೋಭಾ ಮೈಸೂರು ಇದ್ದರು.

ಸಮಾಚಾರ ಸಣ್ಣದಲ್ಲ

ಪ್ರಗತಿಪರ ಕೃಷಿಕ ಸುಬ್ರಾಯ ಹೆಗಡೆ ಮತ್ತಿಗಾರ ನಿಧನ



ಸಿದ್ದಾಪುರ: ಸಂಪಗೋಡ ಗ್ರಾಮ ವಾಜಗದ್ದೆ ಸಮೀಪದ ಮತ್ತಿಗಾರಿನ ಪ್ರಗತಿಪರ ಕೃಷಿಕರಾಗಿದ್ದ ಸುಬ್ರಾಯ ಗಣೇಶ ಹೆಗಡೆ (76) ಗುರುವಾರ ಬೆಳಗಿನ ಜಾವ ಸ್ವಗೃಹದಲ್ಲಿ ಮೃತರಾಗಿದ್ದಾರೆ. ವಾಜಗದ್ದೆಯ ದುರ್ಗಾವಿನಾಯಕ ದೇವಾಲಯ ಅಭಿವೃದ್ಧಿ ಸಮಿತಿಯ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದರು. ಯಕ್ಷಗಾನ ಕಲಾವಿದರ ಕುಟುಂಬದ ಸದಸ್ಯರಾಗಿ ಹವ್ಯಾಸಿ ಯಕ್ಷಗಾನ ಕಲಾವಿದರಾಗಿಯೂ ಗುರುತಿಸಿಕೊಂಡಿದ್ದರು. ಕೃಷಿಯಲ್ಲಿ ವಿಶೇಷ ಅನುಭವ ಹೊಂದಿದ್ದ ಇವರ ಜ್ಞಾನವನ್ನು ಸಾಕಷ್ಟು ಜನರು ಬಳಸಿಕೊಂಡು ಪ್ರಯೋಜನ ಪಡೆದಿದ್ದರು. ಮೃತರು ಪತ್ನಿ, ಪುತ್ರ ಲೋಕಧ್ವನಿ ಸ್ಥಾನಿಕ ಸಂಪಾದಕ ನಾಗರಾಜ ಮತ್ತಿಗಾರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಸಂತಾಪ: ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಲೋಕಧ್ವನಿ ಸಂಪಾದಕ ಲೋಕೇಶ ಕಾಯರ್ಗ ಸೇರಿದಂತೆ ಲೋಕಧ್ವನಿ ಹಾಗೂ ವಿಶ್ವವಾಣಿ ಸಮಸ್ತ ಬಳಗ ಸುಬ್ರಾಯ ಹೆಗಡೆ ಆತ್ಮಕ್ಕೆ ಶಾಂತಿ ಸಿಗಲೆಂದು ಸಂತಾಪ ಸೂಚಿಸಿದ್ದಾರೆ.

ಬದಲಿ ಪರೀಕ್ಷೆಗೆ ಹಾಜರ್: ಕಾಂಗ್ರೆಸ್ ಕಾರ್ಯಕರ್ತೆ ಸೆರೆ

ಕಲಬುರಗಿ: ನಗರದ ಮಿಲಿಂದ್ ಕಾಲೇಜಿನಲ್ಲಿ ಬೇರೊಬ್ಬ ಪಿಯು ವಿದ್ಯಾರ್ಥಿನಿ ಬದಲಿಗೆ ರಾಜ್ಯಶಾಸ್ತ್ರ ಪರೀಕ್ಷೆ ಬರೆಯಲು ಹಾಜರಾದ ಕಾಂಗ್ರೆಸ್ ಕಾರ್ಯಕರ್ತೆಯನ್ನು ಇಲ್ಲಿನ ಬ್ರಹ್ಮಪುರ ಪೊಲೀಸರು ಬಂಧಿಸಿದ ಘಟನೆ ನಡೆದಿದೆ. ಮಾ.5 ರಂದು ನಡೆದ ರಾಜ್ಯಶಾಸ್ತ್ರ ಪರೀಕ್ಷೆಯ ವೇಳೆ ಕಲಬುರಗಿ ನಗರದ ಮಿಲಿಂದ್ ಕಾಲೇಜ್‌ನಲ್ಲಿ ಅಕ್ರಮ ನಡೆದಿದ್ದು, ಅರ್ಚನಾ ಬಸವರಾಜ್ ಕಾಂಬಳೆ ಎನ್ನುವ ವಿದ್ಯಾರ್ಥಿನಿ ಬದಲಿಗೆ ಕಾನೂನು ವಿದ್ಯಾರ್ಥಿನಿ ಆಗಿರುವ ಕಾಂಗ್ರೆಸ್ ಕಾರ್ಯಕರ್ತೆ ಸಂಪೂರ್ಣಾ ಪಾಟೀಲ್ ಪರೀಕ್ಷೆ ಬರೆದು ಅಕ್ರಮ ನಡೆಸಿದ್ದಾರೆ. ದಲಿತ ಸೇನೆ ಕಾರ್ಯಕರ್ತರು ಕಾಲೇಜಿಗೆ ತೆರಳಿ ಅಕ್ರಮವನ್ನು ಪ್ರಶ್ನಿಸಿದಾಗ ಬದಲಿ ಅಭ್ಯರ್ಥಿ ಪರೀಕ್ಷೆ ಬರೆದಿರುವುದು ಬೆಳಕಿಗೆ ಬಂದಿದೆ. ಸದ್ಯ ಮಿಲಿಂದ್ ಶಾಲೆಯ ಪ್ರಾಂಶುಪಾಲರು ಬ್ರಹ್ಮಪೂರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪೊಲೀಸರು ಸಂಪೂರ್ಣ ಪಾಟೀಲ್‌ಳನ್ನು ಬಂಧಿಸಿದ್ದಾರೆ.

ವಿದ್ಯಾರ್ಥಿನಿ ಆತ್ಮಹತ್ಯೆ

ಕಾರವಾರ: ಇಲ್ಲಿನ ಬಾಲಕಿಯರ ಬಾಲಮಂದಿರದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿಯೋರ್ವಳು ಗುರುವಾರ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಇಲ್ಲಿನ ಸರಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ನಗರದವಳೇ ಆದ ಬಾಲಕಿಗೆ ತಂದೆ ಇಲ್ಲದ ಕಾರಣದಿಂದ ಬಾಲಕಿಯರ ಬಾಲಮಂದಿರದಲ್ಲಿ ಆಸರೆ ಕಲ್ಪಿಸಲಾಗಿತ್ತು. ಸಾವಿಗೆ ಕಾರಣ ಏನೆಂಬುದು ಸ್ಪಷ್ಟವಾಗಿಲ್ಲ ಎಂದು ನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ವೈವಾಹಿಕ ಜೀವನಕ್ಕೆ ಕಾಲಿಸಿದ ತೇಜಸ್ವಿ ಸೂರ್ಯ ದಂಪತಿಗೆ ಶುಭಕೋರಿದ 'ವಿಶ್ವವಾಣಿ' ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಹಾಗೂ ಪತ್ನಿ ಸುಷ್ಮಾ ಭಟ್.

ತೇಜಸ್ವಿ ಸೂರ್ಯ-ಶಿವಶ್ರೀ ಸ್ಕಂದಪ್ರಸಾದ್ ಅವರಿಗೆ ಆದಿ ಚುಂಚನಗಿರಿ ಮಠದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವದಿಸಿದರು. ಶಾಸಕ ರವಿ ಸುಬ್ರಹ್ಮಣ್ಯ ಮೊದಲಾದವರಿದ್ದರು.

ಗಾಯಕಿ ಶಿವಶ್ರೀ ಜತೆ ಸಂಸದ ತೇಜಸ್ವಿ ವಿವಾಹ | ವಿವಿಧ ರಾಜಕೀಯ ಗಣ್ಯರು ಭಾಗಿ

ಸಪ್ತಪದಿ ತುಳಿದ ತೇಜಸ್ವಿ ಸೂರ್ಯ

ಬೆಂಗಳೂರು: ಕಿರಿಯ ವಯಸ್ಸಿಗೆ ಸಂಸದರಾಗಿ ಆಯ್ಕೆಯಾಗಿರುವ ಮೋಸ್ಟ್ ಎಲಿಜಿಬಲ್ ಬ್ಯಾಚ್ಯುಲರ್ ತೇಜಸ್ವಿ ಸೂರ್ಯ, ಶಿವಶ್ರೀ ಸ್ಕಂದ ಪ್ರಸಾದ್ ಅವರೊಂದಿಗೆ ಗುರುವಾರ ಸಪ್ತಪದಿ ತುಳಿದಿದ್ದಾರೆ.

ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಹಾಗೂ ಗಾಯಕಿ ಶಿವಶ್ರೀ ಸ್ಕಂದಪ್ರಸಾದ್ ಗುರುವಾರ ಹಸೆಮಣೆ ಏರಿದ್ದಾರೆ. ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ರೆಸಾರ್ಟ್‌ನಲ್ಲಿ ಆತ್ಮೀಯರು, ಕುಟುಂಬ ಸದಸ್ಯರು ಹಾಗೂ ಗಣ್ಯರ ನಡುವೆ ನಡೆದ ಆಪ್ತ ಸಮಾರಂಭದಲ್ಲಿ ಇಬ್ಬರೂ ವೈವಾಹಿಕ ಜೀವನಕ್ಕೆ ಕಾಲಿರಿಸಿದ್ದಾರೆ. ಗುರುವಾರ ಬೆಳಗ್ಗೆ 10.45 ತುಲಾ ಲಗ್ನದಲ್ಲಿ ಶಿವಶ್ರೀ ಕೊರಳಿಗೆ ತೇಜಸ್ವಿ ಸೂರ್ಯ ಮಾಂಗಲ್ಯಧಾರಣೆ ಮಾಡಿದರು. ಮದುವೆಗೆ ಎರಡೂ ಕುಟುಂಬದ ಸದಸ್ಯರು ಮತ್ತು ಆತ್ಮೀಯರಿಗೆ ಮಾತ್ರ ಆಹ್ವಾನ ನೀಡಲಾಗಿತ್ತು.

ವರಪೂಜೆ ಶಾಸ್ತ್ರ: ಬುಧವಾರ ಸಂಜೆಯಿಂದಲೇ ತೇಜಸ್ವಿ ಸೂರ್ಯ ಮನೆಯಲ್ಲಿ ವರಪೂಜೆ ಸೇರಿದಂತೆ ಮದುವೆ ಶಾಸ್ತ್ರಗಳು ನಡೆದಿದ್ದವು. ಗುರುವಾರ ಮಾಂಗಲ್ಯಧಾರಣೆ, ಕನ್ಯಾದಾನ ಶಾಸ್ತ್ರಗಳು ಸಾಂಪ್ರದಾಯಿಕ ರೀತಿಯಲ್ಲಿ ನೆರವೇರಿದವು. ಮಾರ್ಚ್ 9ರಂದು ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ತೇಜಸ್ವಿ ಸೂರ್ಯ ಮತ್ತು ಶಿವಶ್ರೀ ಸ್ಕಂದ ಪ್ರಸಾದ್ ಮದುವೆಯ ಆರತಕ್ಷತೆ ನಡೆಯಲಿದೆ. ಈ ವೇಳೆ ರಾಜ್ಯ-ದೇಶದ ರಾಜಕೀಯ ಗಣ್ಯರು ಭಾಗಿಯಾಗಲಿದ್ದಾರೆ.

ಗುರುವಾರ ವಿವಾಹ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ವಿ.ಸೋಮಣ್ಣ, ಸಂಸದ ಸಿಎನ್ ಮಂಜುನಾಥ್, ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿಎಲ್ ಸಂತೋಷ್, ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಕೆ. ಅಣ್ಣಾಮಲೈ, ಅವಧೂತ ವಿನಯ್ ಗುರೂಜಿ, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಹಲವು ರಾಜಕೀಯ ಮತ್ತು ರಾಜಕೀಯೇತರ ಮುಖಂಡರು ಬಂದು ನವಜೋಡಿಗೆ ಆಶೀರ್ವದಿಸಿದರು. ತಮಿಳುನಾಡು ಮೂಲದ ಶಿವಶ್ರೀ ಅವರು ಗಾಯನದಿಂದ ಖ್ಯಾತರಾಗಿದ್ದಾರೆ. ಶಿವಶ್ರೀ ಅವರು ಭರತನಾಟ್ಯ ಕಲಾವಿದೆ ಕೂಡ ಹೌದು. ಮದ್ರಾಸ್ ವಿಶ್ವವಿದ್ಯಾಲಯದಿಂದ ಭರತನಾಟ್ಯದಲ್ಲಿ ಪದವಿಯನ್ನೂ ಗಳಿಸಿದ್ದಾರೆ. ಆಯೋಧ್ಯೆ ರಾಮಮಂದಿರ ಉದ್ಘಾಟನೆ ಸಂದರ್ಭದಲ್ಲಿ ಶಿವಶ್ರೀ ಹಾಡಿದ್ದ ರಾಮನ ಕುರಿತ ಗೀತೆಯನ್ನು ಮೆಚ್ಚಿ ಪ್ರಧಾನಿ ಮೋದಿ ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಇತ್ತೀಚೆಗೆ ಆರ್ಟ್ ಆಫ್ ಲಿವಿಂಗ್‌ನಲ್ಲಿ ನಡೆದ ಕಾರ್ಯಕ್ರಮದ ವೇಳೆ ಇಬ್ಬರೂ ಒಟ್ಟಿಗೆ ಕಾಣಿಸಿಕೊಂಡಿದ್ದರು.

ಚಿನ್ನ ಕಳ್ಳಸಾಗಣೆ: ರನ್ಯಾ ಜತೆ ಪ್ರಭಾವಿಗಳ ಕೈವಾಡ?

ಮೊದಲಪುಟದಿಂದ

ರಾಜಕೀಯ ವ್ಯಕ್ತಿಗಳು, ಉದ್ಯಮಿಗಳು ಮತ್ತು ಪೊಲೀಸ್ ಅಧಿಕಾರಿಗಳನ್ನು ಒಳಗೊಂಡಿರುವ ದೊಡ್ಡ ಕಳ್ಳಸಾಗಣೆ ಜಾಲದೊಂದಿಗೆ ರನ್ಯಾಗೆ ಸಂಪರ್ಕವಿದೆ ಎಂದು ಅಧಿಕಾರಿಗಳು ಶಂಕಿಸಿದ್ದಾರೆ. ಮದುವೆಯಾಗಿ ಮೂರೇ ತಿಂಗಳಿಗೆ ಸ್ಮಗ್ಲಿಂಗ್ ನಟಿ ರನ್ಯಾ, ಮೂರು ತಿಂಗಳ ಹಿಂದೆಯಷ್ಟೇ ರಾಜ್ಯದ ಹೆಸರಾಂತ ರಾಜಕೀಯ ಕುಟುಂಬದ ಸಂಬಂಧಿಕರ ಜತೆ ತಾಜ್‌ವೆಸ್ಟ್‌ಎಂಡ್‌ನಲ್ಲಿ ಮದುವೆ ಮಾಡಿಕೊಂಡಿದ್ದರು. ಗಂಡ ಹೆಸರಾಂತ ಆರ್ಕಿಟೆಕ್ಟ್ ಕೂಡ ಆಗಿದ್ದಾನೆ. ಮೂರು ತಿಂಗಳ ಹಿಂದೆಯಷ್ಟೇ ಹೊಸ ಲಾವೆಲ್ಲಾ ಫ್ಲ್ಯಾಟ್‌ಗೆ ಶಿಫ್ಟ್ ಆಗಿದ್ದರು. ಹೀಗೆ ಹನಿಮೂನ್ ಸಂಭ್ರಮದಲ್ಲಿ ಇರಬೇಕಾದ ರನ್ಯಾ, ಚಿನ್ನದ ಸ್ಮಗ್ಲಿಂಗ್ ಇಳಿದು ಲಾಕ್ ಆಗಿದ್ದಾಳೆ. ಒಮ್ಮೆ ಚಿನ್ನ ಸಾಗಿಸಿದರೆ ಈಕೆಗೆ 50 ಲಕ್ಷ ಕಮಿಷನ್ ಸಿಗುತ್ತಿತ್ತು ಎನ್ನುವುದು ತನಿಖೆಯಲ್ಲಿ ಗೊತ್ತಾಗಿದೆ. ಈಕೆಯ ಜತೆಗೆ ಹಲವು ಪ್ರಭಾವಿಗಳು, ದೊಡ್ಡ ದೊಡ್ಡ ತಂಡವೇ ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದೆ.

ಜೈಶಂಕರ್ ಎದುರು ಖಲಿಸ್ತಾನಿಗಳ ಪುಂಡಾಟ

ಮೊದಲಪುಟದಿಂದ

'ವಿಶ್ವದ ಅಭಿವೃದ್ಧಿಯಲ್ಲಿ ಭಾರತದ ಪಾತ್ರ' ಎಂಬ ವಿಷಯದ ಮೇಲಿನ ಸಂವಾದದಲ್ಲಿ ಭಾಗವಹಿಸಲು ಜೈಶಂಕರ್ ಲಂಡನ್‌ನ ಚಾಥಮ್ ಹೌಸ್ ಚಿಂತಕರ ಚಾವಡಿಗೆ ತೆರಳಿದ್ದರು. ಈ ವೇಳೆ ರಸ್ತೆಬದಿಯಲ್ಲಿ ಜಮಾಯಿಸಿದ ಖಲಿಸ್ತಾನಿ ಉಗ್ರರು ಭಾರತ ವಿರೋಧಿ ಘೋಷಣೆಗಳನ್ನು ಕೂಗುತ್ತಿದ್ದರು. ಜೈ ಶಂಕರ್, ಕಾರ್ಯಕ್ರಮ ಮುಗಿಸಿ ಕಾರಿನಲ್ಲಿ ಸಿದ್ದರಾಗುತ್ತಿದ್ದಂತೆಯೇ, ಒಬ್ಬ ವ್ಯಕ್ತಿ ಅವರ ಕಾರಿನ ಕಡೆಗೆ ಓಡಿ ಬಂದು ಭಾರತ ವಿರೋಧ ಘೋಷಣೆಗಳನ್ನು ಕೂಗಿ ಕೈಯಲ್ಲಿದ್ದ ತ್ರಿವರ್ಣ ಧ್ವಜವನ್ನು ಹರಿದು ಹಾಕಿದ್ದಾನೆ. ತಕ್ಷಣ ಲಂಡನ್ ಪೊಲೀಸರು ಈ ವ್ಯಕ್ತಿಯನ್ನು ಹಿಡಿದು ಜೈಶಂಕರ್ ಅವರನ್ನು ಅಲ್ಲಿಂದ ಸುರಕ್ಷಿತವಾಗಿ ಕಳುಹಿಸಿದ್ದಾರೆ. ಆದರೆ ಸಾಕಷ್ಟು ಸಂಖ್ಯೆಯ ಭದ್ರತಾ ಸಿಬ್ಬಂದಿಗಳಿದ್ದರೂ ಖಲಿಸ್ತಾನಿ ವ್ಯಕ್ತಿಯ ದಾಳಿ ಯತ್ನವನ್ನು ತಡೆಯದೇ ಹೋಗಿದ್ದು ಚರ್ಚೆಗೆ ಕಾರಣವಾಗಿದೆ. ಕೆನಡಾ, ಅಮೆರಿಕ, ಬ್ರಿಟನ್‌ನಲ್ಲಿರುವ ಖಲಿಸ್ತಾನಿ ಉಗ್ರಗಾಮಿಗಳಿಂದ ಭಾರತದ ರಾಜತಾಂತ್ರಿಕರು, ವಲಸಿಗರಿಗೆ ಪದೇ ಪದೇ ಬೆದರಿಕೆ ಎದುರಾಗುತ್ತಿದೆ. ಇದೇ ವಿಚಾರ ಭಾರತ-ಕೆನಡಾ ನಡುವೆ ವಿರಸಕ್ಕೆ ಕಾರಣವಾಗಿದೆ.

ಭ್ರಷ್ಟರ ಕೋಟೆಗೆ ಲೋಕಾ ಮುತ್ತಿಗೆ

ಮೊದಲಪುಟದಿಂದ

ಕೋಲಾರದಲ್ಲಿ ಬೆಸ್ಕಾಂ ಎಇಇ ನಾಗರಾಜ್‌ಗೆ ಸೇರಿದ ಮೂರು ಕಡೆ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ರು. ಬೆಂಗಳೂರಿನ ರಾಜಾಜಿನಗರ ಬೆಸ್ಕಾಂ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಕೆಆರ್.ಪುರ ಬಳಿಕ ಪ್ರಿಯದರ್ಶಿನಿ ಬಡಾವಣೆಯ ಮನೆ, ರಾಜಾಜಿನಗರ ಕಚೇರಿ, ಸಂಬಂಧಿಕರ ಮನೆ ಮೇಲೂ ದಾಳಿ ಮಾಡಲಾಗಿದೆ. ದಾಳಿ ವೇಳೆ ಕೋಟ್ಯಂತರ ರುಪಾಯಿ ಮೌಲ್ಯದ ಆಸ್ತಿ ಪತ್ತೆಯಾಗಿದೆ. ಕೊಳ್ಳೇಗಾಲದಲ್ಲಿ 6 ಎಕರೆ ಜಮೀನು, ಬೆಂಗಳೂರಿನಲ್ಲಿ ಒಂದು ಮನೆ, ಎರಡು ನಿವೇಶನಗಳು ಪತ್ತೆಯಾಗಿದೆ. ಬಾಗಲಕೋಟೆಯಲ್ಲಿ ಪಂಚಾಯತ್ ರಾಜ್ ಇಲಾಖೆ ಲೆಕ್ಕಪರಿಶೋಧಕ ಮಲ್ಲೇಶ್, ವಿಜಯಪುರದಲ್ಲಿ ಕೆಎಚ್‌ಬಿ ಪ್ರಥಮ ದರ್ಜೆ ಸಹಾಯಕ ಶಿವಾನಂದ ಕೆಂಬಾವಿ, ತುಮಕೂರಿನಲ್ಲಿ ವೈದ್ಯ ಜಗದೀಶ್ ಮನೆ ಮೇಲೂ ಲೋಕಾಯುಕ್ತ ದಾಳಿ ನಡೆಸಿ ಆಸ್ತಿ, ಪಾಸ್ತಿ ಸಂಬಂಧ ಶೋಧ ಮಾಡಲಾಯಿತು.

ಲೋಕಾಯುಕ್ತ ದಾಳಿ ವೇಳೆ ಪತ್ತೆಯಾದ ಆಸ್ತಿ ವಿವರ

ಹೆಸರು	ಜಿಲ್ಲೆ	ನಿವೇಶನ	ಹಣ	ಚಿನ್ನಾಭರಣ	ವಾಹನಗಳು	ಇತರೆ	ಒಟ್ಟು ಆಸ್ತಿ
ಟಿ.ಡಿ.ನಂಜುಂಡಪ್ಪ	ಬೆಂಗಳೂರು	74647466	440000	5605487	3930000	84622953	
ಎಚ್.ಬಿ.ಕಲ್ಲೇಶಪ್ಪ	ಬೆಂಗಳೂರು	49734000	3292700	1610963	3515000	7000000	65052663
ಜಿ.ನಾಗರಾಜ್	ಕೋಲಾರ	15787000	798000	2000000	2100000	1200000	21885000
ಜಗನ್ನಾಥ್	ಕಲಬುರಗಿ	28500000	190000	7200000	1920000	7700000	45510000
ಜೆ.ಎಸ್.ನಾಗರಾಜು	ದಾವಣಗೆರೆ	44902100	117900	9420075	3818000	3200000	61458075
ಪಿ.ಜಗದೀಶ್	ತುಮಕೂರು	19624000	115380	8756000	1825500	800000	31120880
ಮಲ್ಲಪ್ಪ ಸಾಬಣ್ಣ ದುರ್ಗದ	ಬಾಗಲಕೋಟೆ	9415000	16354	256530	8050000	1487682	19225566
ಶಿವಾನಂದ ಶಿವಶಂಕರ್ ಕೆಂಬಾವಿ	ವಿಜಯಪುರ	22100000	1508000	2622600	5700000	4500000	36430600
ಒಟ್ಟು	264709566	6478334	37371655	30858500	25887682	365305737	

ವಿವಿ ಬಂದ್: ಸದನದಲ್ಲಿ ಕೋಲಾಹಲ

ಮೊದಲಪುಟದಿಂದ

ಈಗಾಗಲೇ ಆರಂಭಿಸಿರುವ ವಿಶ್ವವಿದ್ಯಾಲಯಗಳನ್ನು ಮುಚ್ಚಲು ಹೊರಟಿರುವುದು ಶಿಕ್ಷಣ ವಿರೋಧಿ ನಡೆ ಎಂದು ಮಾಜಿ ಡಿಸಿಎಂ, ಉನ್ನತ ಶಿಕ್ಷಣರಾಗಿದ್ದ ಅಶ್ವತ್ಥನಾರಾಯಣ ಟೀಕಿಸಿದರು. ಇದಕ್ಕೆ ಪ್ರತಿಯಾಗಿ, ಸುಧಾಕರ್ ಅವರು, ಅನುದಾನ ನೀಡದೆ ವಿಶ್ವವಿದ್ಯಾಲಯ ನಡೆಸಲು ಹೊರ ಟಿದ್ದು ನಿಮ್ಮ ಅವಧಿಯಲ್ಲಿ ಎಂದು ತಿರುಗೇಟು ನೀಡಿದರು.

ಸದನ ಪ್ರತಿಧ್ವನಿಸಿದ ವಾಗ್ವಾದ: ಈ ವೇಳೆ ಆಡಳಿತ, ವಿರೋಧ ಪಕ್ಷದ ನಡುವ ವಾಕ್ಸಮರ ನಡೆಯಿತು. ವಿಶ್ವವಿದ್ಯಾಲಯಗಳ ವಿಚಾರದಲ್ಲಿ ಹಾಲಿ -ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹಾಗೂ ಮಾಜಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ನಡುವೆ ಕೆಲಕಾಲ ವಾಗ್ವಾದ ನಡೆಯಿತು. ಅಶ್ವತ್ಥನಾರಾಯಣ ಬೆಂಬಲಕ್ಕೆ ನಿಂತು ಬಿಜೆಪಿ ಸದಸ್ಯರು ಮಾತನಾಡಿದರೆ, ಆಡಳಿತ ಪಕ್ಷದ ಶಾಸಕರು ಸುಧಾಕರ್ ಬೆಂಬಲವಾಗಿ ನಿಂತಿದ್ದರಿಂದ ಸದನದಲ್ಲಿ ಗದ್ದಲ ಉಂಟಾಯಿತು. ಸುಮಾರು ಹೊತ್ತು ಪರ-ವಿರೋಧ ಚರ್ಚೆ ನಡೆದ ನಂತರ ಸಭಾಧ್ಯಕ್ಷ ಯು.ಟಿ.ಖಾದರ್ ಎರಡೂ ಕಡೆಯ ಶಾಸಕರನ್ನು ಸಮಾಧಾನಪಡಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಈ ಮಧ್ಯೆ ಸಚಿವ ಬೈರತಿ ಸುರೇಶ್ ಮಾತನಾಡಿ, ಬಿಜೆಪಿಯವರು ಬೇಕಾಬಿಟ್ಟಿ ವಿ.ವಿ.ಗಳನ್ನು ಆರಂಭಿಸಿದ್ದಾರೆ. ಪ್ರತಿ ಕ್ಷೇತ್ರಕ್ಕೂ ವಿವಿ ಕೊಟ್ಟುಬಿಡಿ ಎಂದು ವ್ಯಂಗ್ಯವಾಡಿದರು.

> **9 ವಿಶ್ವವಿದ್ಯಾಲಯಗಳನ್ನು ಮುಚ್ಚಲು ಮುಂದಾ ಗಿದ್ದು, ಸಚಿವರು ಹೇಳಿಕೆಯನ್ನೂ ನೀಡಿದ್ದಾರೆ. ಈಗ ಅಸಂಬದ್ಧವಾಗಿ ಮಾತನಾಡುತ್ತಿದ್ದಾರೆ. ಕಾಂಗ್ರೆಸ್‌ನವರು ಶಿಕ್ಷಣ ವಿರೋಧಿಗಳು.**
> -**ಡಾ.ಸಿ.ಎನ್. ಅಶ್ವತ್ಥನಾರಾಯಣ**, ಶಾಸಕ

> **ಬಿಜೆಪಿ ಸರಕಾರದ ಅವಧಿ ಯಲ್ಲಿಯೇ ಈ 9 ವಿಶ್ವ ವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ. ಕೇವಲ 2 ಕೋಟಿ ಅನುದಾನ ನೀಡಿದ್ದು ನೀವು. ನಿಮ್ಮ ಆಡಳಿತದಲ್ಲಿ ಮಾಡಿದ ಮಂಜೂರು ಮಾಡಿ ಷರತ್ತು ವಿಧಿಸಲಾಗಿದೆ.**
> -**ಡಾ.ಎಂ.ಸಿ. ಸುಧಾಕರ್,** ಉನ್ನತ ಶಿಕ್ಷಣ ಸಚಿವ

5 ವರ್ಷ ಸಿದ್ದರಾಮಯ್ಯ ಸಿಎಂ

ಚಾಮರಾಜನಗರ: ಹೈಕಮಾಂಡ್ ಹಾಗೂ ಶಾಸಕರ ಬೆಂಬಲ ಎಲ್ಲಿಯವರೆಗೂ ಸಿದ್ದರಾಮಯ್ಯ ಅವರಿಗೆ ಇರುತ್ತೋ ಅಲ್ಲಿಯವರೆಗೂ ಅವರೇ ಸಿಎಂ ಎಂದು ಸಂಸದ ಸುನೀಲ್ ಬೋಸ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದೀಗ ಸಿಎಂ ಬದಲಾವಣೆ ಬಗ್ಗೆ ಚರ್ಚೆಯಾಗ್ತಿಲ್ಲ. ಸಿದ್ದರಾಮಯ್ಯ 5 ವರ್ಷ ಸಿಎಂ ಆಗಿ ಮುಂದುವರಿಯುತ್ತಾರೆಂಬ ವಿಶ್ವಾಸವಿದೆ ಎಂದರು.

ಮುಡಾ ಕೇಸ್ ವಿಚಾರದಲ್ಲಿ ಕಾಂಗ್ರೆಸ್ ನಾಯಕರೇ ಹೆಚ್ಚು ದಾಖಲೆ ಕೊಟ್ಟಿದ್ದಾರೆಂದು ಸ್ನೇಹಮಯಿ ಕೃಷ್ಣ ಹೇಳಿಕೆಗೆ ಪ್ರತಿಕ್ರಿಯಿಸಿ, ಸಿದ್ದರಾಮಯ್ಯ ಸಿಎಂ ಆಗದಿದ್ದ ಅವಧಿಯಲ್ಲಿ ಅಧಿಕಾರಿಗಳು ಸೈಟ್ ಕೊಟ್ಟಿರೋದು. 14 ಸೈಟ್‌ಗಳ ಬಗ್ಗೆ ಎಷ್ಟು ದೊಡ್ಡ ಮಟ್ಟದ ಚರ್ಚೆಯಾಗಿದೆ. ಕಾಂತರಾಜು ಕಮಿಷನರ್ ಆಗಿದ್ದ ಅವಧಿಯಲ್ಲಿ 9 ಸಾವಿರ ಸೈಟ್‌ಗಳು ಎಲ್ಲೋದವು?. ಇದರ ಬಗ್ಗೆ ಯಾರೂ ಕೂಡ ಚರ್ಚೆ ಮಾಡ್ತಿಲ್ಲ. 14 ಸೈಟ್ ವಿಚಾರ ಮಾತ್ರ ಪ್ರಚಾರ ಪಡೀತಿದೆ ಎಂದು ಬಿಜೆಪಿಗೆ ಟಾಂಗ್ ಕೊಟ್ಟರು.

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ, ಬಂದರು ವಿಭಾಗ,
ಬೈತಖೋಲ್, ಕಾರವಾರ, ಉತ್ತರ ಕನ್ನಡ ಜಿಲ್ಲೆ-581302
ದೂ: 08382-229672 ಇ-ಮೇಲ್: eepdkwr4@gmail.com / eepdk@rediffmail.com
ನಂ:ಕಾನಿಇಂ/ಬಂವಿಕಾ/ಟೆಂಡರ್/2024-25/763 ದಿನಾಂಕ: 04-03-2025

ಟೆಂಡರು ಪ್ರಕಟಣೆ
(ಕೆ.ಪಿ.ಪಿ.ಪಿ ಪದ್ಧತಿಯಲ್ಲಿ ಮಾತ್ರ) (ದ್ವಿ ಲಕೋಟೆ ಪದ್ಧತಿ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಕೆ.ಪಿ.ಪಿ.ಪಿ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು www.kppp.karnataka.gov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
"ಜಿಎಸ್‌ಟಿಯನ್ನು ಅನುಮೋದಿತ ಟೆಂಡರ್ ಮೊತ್ತಕ್ಕೆ ಅನುಗುಣವಾಗಿ ಪ್ರತ್ಯೇಕವಾಗಿ ಪಾವತಿಸಲಾಗುವುದು"
ಕಾಮಗಾರಿಯ ಹೆಸರು ಮತ್ತು ಇಂಡೆಂಟ ನಂ: (1) ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ತೆಂಗಿನಗುಂಡಿಯಲ್ಲಿ ಕುಸಿದ ಕಾಂಕ್ರೀಟ ಪ್ಲಾಟ್‌ಫಾರಂನ ಹಿಂಭಾಗದಲ್ಲಿ ಡಯಾಫ್ರಮ್ ವಾಲ್ ನಿರ್ಮಾಣ ಕಾಮಗಾರಿ. Indent no: IDD/2024-25/OW/WORK_INDENT121, ಟೆಂಡರಿಗಿಟ್ಟ ಮೊತ್ತ ರೂ. 6,05,43,580.00, ಟೆಂಡರ್ ಬಗ್ಗೆ ಸ್ಪಷ್ಟನೆಗಳಿಗಾಗಿ ಕೋರಿಕೆ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ: 03-04-2025 ಸಂಜೆ 16.00 ಘಂಟೆಯವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ: 04-04-2025 ಸಂಜೆ 16.30 ಘಂಟೆಯವರೆಗೆ.
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್,
ಬಂದರು ವಿಭಾಗ, ಕಾರವಾರ (ಉ.ಕ)
DIPR/ADK/KSMCA/946/24-25 Dt.05.03.25

ಪುರಸಭೆ ಕಾರ್ಯಾಲಯ ಸವಣೂರ
ಶಿಗ್ಗಾಂವ ರಸ್ತೆ, ಸವಣೂರ - 581118, ಜಿ॥ ಹಾವೇರಿ
Ph: 08378 241623 Help Line: 08378 241724
website: http://savanurtown.mrc.gov.in e-mail: itstaff_ulb_savanur@yahoo.co.in
ಕ್ರ.ಸಂ/ಪುಸಸ/ತಾವಿ/ಟೆಪ್ರ/ವಹಿ/2024-25 ದಿನಾಂಕ:-05-03-2025

ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರ ಪ್ರಕಟಣೆ

ಸವಣೂರ ಪುರಸಭೆಗೆ ಸನ್ 2024-25ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಲ್ಲಿ 01 ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000 ಪ್ರಕಾರ ನೊಂದಾಯಿತ ಅರ್ಹ ತಯಾರಕರು/ಏಜೇನ್ಸಿದಾರರಿಂದ ಐಟಂವಾರ ಟೆಂಡರಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಕರ್ನಾಟಕ ಸ್ಟ್ಯಾಂಡರ್ಡ ಟೆಂಡರ ಡಾಕ್ಯುಮೆಂಟ್ಸ್ KW-1 ರಂತೆ ಆಹ್ವಾನಿಸಲಾಗಿದೆ. ಇ-ಪ್ರೋಕ್ಯೂರ್‌ಮೆಂಟ್ ಟೆಂಡರನಲ್ಲಿ ಬಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಕಾಮಗಾರಿಗಳ ವಿವರ, ಇ.ಎಂ.ಡಿ, ಟೆಂಡರ್ ಫಾರ್ಮ ಫೀ ಮತ್ತು ಗುತ್ತಿಗೆದಾರರ ದರ್ಜೆಗಳ ಬಗ್ಗೆ ಹಾಗೂ ಇತರೆ ಯಾವುದೇ ಹೆಚ್ಚಿನ ಮಾಹಿತಿ ಬೇಕಾದಲ್ಲಿ https://kppp.karnataka.gov.in/ನ ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ತಿಳಿದುಕೊಳ್ಳಬಹುದು ಹಾಗೂ ಕಛೇರಿ ವೇಳೆಯಲ್ಲಿ ಪುರಸಭೆಯ ತಾಂತ್ರಿಕ ವಿಭಾಗದಲ್ಲಿ ಕೇಳಿ ತಿಳಿದುಕೊಳ್ಳಬಹುದು. ಟೆಂಡರಗಳ ವಿವರಗಳು ಈ ಕೆಳಗಿನಂತಿವೆ.
ಕಾಮಗಾರಿಯ ವಿವರ : INDENT36476- 6.00 ಲಕ್ಷಗಳು.
1) ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಆನಲೈನ್‌ನಲ್ಲಿ ಅರ್ಜಿ ಸಲ್ಲಿಸಿ ದರವಾರು ಸಲ್ಲಿಸಲು ಕೊನೆಯ ದಿನಾಂಕ : 14-03-2025 ಸಂಜೆ 5.00 ಘಂಟೆವರೆಗೆ.
2) ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 15-03-2025 ಮುಂಜಾನೆ 5.30 ಘಂಟೆ ನಂತರ ಆನಲೈನ್ ಮೂಲಕ.
ಸಹಿ/- ಮುಖ್ಯಾಧಿಕಾರಿ ಪುರಸಭೆ ಸವಣೂರ
ಸಹಿ/- ಅಧ್ಯಕ್ಷರು ಪುರಸಭೆ ಸವಣೂರ

ನಗರಸಭಾ ಕಾರ್ಯಾಲಯ, ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರಜಿಲ್ಲೆ - 562123.
ದೂರವಾಣಿ: 08023718487, E-Mail: itstaff_ulb_mnhalli@yahoo.com
ಸಂಖ್ಯೆ:ಮಾ.ನ.ಕಾ/ಆ.ಶಾ/ಸಿ.ಆರ್/198/2024-25 ದಿನಾಂಕ: 05.03.2025

"ಅಲ್ಪಾವಧಿ ಟೆಂಡರ್ ಪ್ರಕಟಣೆ" (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ಅರ್ಹ ಸರಬರಾಜುದಾರರು/ಎಜೆನ್ಸಿ/ಇತರೆ ಭಾಗವಹಿಸಬಹುದಾಗಿದೆ.
ಮಾದನಾಯಕನಹಳ್ಳಿ ನಗರಸಭೆಗೆ ಘನ ತ್ಯಾಜ್ಯ ವಸ್ತು ನಿರ್ವಹಣೆಗಾಗಿ ಹೊರಗುತ್ತಿಗೆ ಮೂಲಕ ಮಾನವ ಸಂಪನ್ಮೂಲವನ್ನು ಸರಬರಾಜು ಮಾಡುವ ಕೆಲಸದ ಇಂಡೆಂಟ್ ನಂ.DMA/2024-25/SE4668, ಅಂದಾಜು ಮೊತ್ತ ರೂ.74.18 ಲಕ್ಷ, ಇ.ಎಂ.ಡಿ ರೂ.1,48,374/- ಮತ್ತು ಇಂಡೆಂಟ್ ನಂ. DMA/2024-25/SE4705, ಅಂದಾಜು ಮೊತ್ತ ರೂ.83.24 ಲಕ್ಷ, ಇ.ಎಂ.ಡಿ ರೂ.1,66,500/- ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:- 13.03.2025 ಮತ್ತು ಸಮಯ: 16:00 ಘಂಟೆಯವರೆಗೆ, ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:- 14.03.2025 ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ:- 15.03.2025. ಹೆಚ್ಚಿನ ವಿವರಗಳನ್ನು ಕಛೇರಿಯ ಆರೋಗ್ಯ ಶಾಖೆಯಿಂದ ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ. ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಇ-ಪ್ರೊಕ್ಯೂಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಸಲಾಗುವುದು.
ಸಹಿ/- ಪೌರಾಯುಕ್ತರು, ನಗರಸಭೆ, ಮಾದನಾಯಕನಹಳ್ಳಿ
ವಾಸಾಸಂಇ/ವಾ.ಪ್ರ/5503/ಎಸ್‌ಎಸ್‌ಸಿ/2024-25

ತೋಟಗಾರಿಕೆ ಇಲಾಖೆ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ
ಕಛೇರಿ (ರಾವ) ತುಮಕೂರು
E_mail: sadhsstmk@gmail.com Phone No: 0816-2278647
ಸಂ/ಹಿಸತೋನಿ/ರಾವ/ತು/ವಿನಿ1/18/2024-25 ದಿನಾಂಕ:03-03-2025

ಟೆಂಡರ್ ಪ್ರಕಟಣೆ

ತುಮಕೂರು ಜಿಲ್ಲೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ತುಮಕೂರು ರವರ ಅಧೀನದ ತೋಟಗಾರಿಕೆ ಕ್ಷೇತ್ರಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ತೋಟಗಾರರ ಸೇವೆಯನ್ನು ಒದಗಿಸಲು ಏಜೆನ್ಸಿ ಮೂಲಕ ನೇಮಕ ಮಾಡಿಕೊಳ್ಳಲು ಇ-ಟೆಂಡರ್ ದರಗಳನ್ನು ಆಹ್ವಾನಿಸಿದ್ದು, ಆಸಕ್ತರು ದಿನಾಂಕ: 17-03-2025 ರೊಳಗೆ ಇ-ಪೋರ್ಟಲ್ ನಲ್ಲಿ ಟೆಂಡರ್‌ಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 0816-2278647 ರ ಮೂಲಕ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/-
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
(ರಾಜ್ಯ ವಲಯ) ತುಮಕೂರು
DIPR/TUM/RO-204/24-25/Oysters

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಲೋಕೋಪಯೋಗಿ ಇಲಾಖೆ, ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವು:ಸಇಂ-1:ಟೆಂಡರ್48/2024-25
ದಿನಾಂಕ : 05.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.48/2024-25
ದಿನಾಂಕ: 05.03.2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 48/2024-25:ದಿನಾಂಕ 05-03-2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 8443 ಠೇವಣಿ ವಂತಿಕೆ (ಗಣಿ ಪುನಃಶ್ಚೇತನ ಯೋಜನೆ-CEPMIZ) ಲೆಕ್ಕ ಶೀರ್ಷಿಕೆ ಅಡಿಯಲ್ಲಿ 08 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.2691.90 ಲಕ್ಷಗಳು, ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ: 393.11 ಲಕ್ಷಗಳು, ಇ.ಎಂ.ಡಿ ಗರಿಷ್ಠ ಮೊತ್ತ ರೂ.2691899/- ಮತ್ತು ಕನಿಷ್ಠ ಮೊತ್ತ ರೂ.589662/-, ಅರ್ಹ ಗುತ್ತಿಗೆದಾರರು 2 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 9 ರಿಂದ 11 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 20-03-2025 ರ 17-30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 06-03-2025 ರಿಂದ 21-03-2025 ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 21-03-2025 ರ 16-00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 24-03-2025 ರ 11-00 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 25-03-2025 ರ 16-30 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು
ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/687/KSMCA/2024-25

ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ
ಜಂಟಿ ನಿರ್ದೇಶಕರುರವರ ಕಛೇರಿ
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, E3. ವಿಶ್ವವಿದ್ಯಾನಿಲಯ ವಸತಿ ಸಮುಚ್ಚಯ, ಅಗ್ನಿಶಾಮಕ ದಳದ ಎದುರು, 1ನೇ ಮುಖ್ಯರಸ್ತೆ, ಸರಸ್ವತಿಪುರಂ, -570009
ದೂರವಾಣಿ ಸಂಖ್ಯೆ: 0821-2420173
Email:aclacmysore@gmail.com
ಸಂಖ್ಯೆ:ಜಂ.ನಿ.ಕ/ಸ್ಥ.ಲೆ.ಪ.ವ./ಮೈ/ವಾ.ಟೆಂ/2025-26/1277
ದಿನಾಂಕ : 04.03.2025

ಟೆಂಡರ್ ಅಧಿಸೂಚನೆ

2025-26 ನೇ ಸಾಲಿನ (01.04.2025 00 31.03.2026) ಅರ್ಥಿಕ ವರ್ಷಕ್ಕೆ ಜಂಟಿ ನಿರ್ದೇಶಕರ ಕಛೇರಿ, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಮೈಸೂರು ಇಲ್ಲಿಗೆ 02 ಹವಾನಿಯಂತ್ರಣ ಸೌಲಭ್ಯವುಳ್ಳ ವಾಹನ ಸೇವೆಯನ್ನು ಒದಗಿಸುವ ಬಗ್ಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ದ 17 ರ ಉಪನಿಯಮ 2 ರ ಅನುಸಾರ ಟೆಂಡರ್ ಅನ್ನು ಕರೆಯಲಾಗಿದೆ.
ಟೆಂಡರ್ ವೇಳಾಪಟ್ಟಿ :-
ಟೆಂಡರ್ ಪ್ರಾರಂಭ ದಿನಾಂಕ : 04.03.2025
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 18.03.2025 (5.00 PM)
ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ : 20.03.2025 (11.00 AM)
ಹಣಕಾಸು ಬಿಡ್ ತೆರೆಯುವ ದಿನಾಂಕ : 24.03.2025 ಅಥವಾ ನಂತರ
ಟೆಂಡರ್ ತೆರೆಯುವ ಸ್ಥಳ : ಜಂಟಿ ನಿರ್ದೇಶಕರ ಕಛೇರಿ, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, E3, ವಿಶ್ವವಿದ್ಯಾನಿಲಯ ವಸತಿ ಸಮುಚ್ಚಯ, ಅಗ್ನಿಶಾಮಕ ದಳದ ಎದುರು, 1ನೇ ಮುಖ್ಯರಸ್ತೆ, ಸರಸ್ವತಿಪುರಂ, -570009
ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ಈ ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು. ಪೂರ್ಣ ವಿವರಗಳು ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ದೊರೆಯುತ್ತದೆ.
ಸಹಿ/- ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹಾಗೂ ಜಂಟಿ ನಿರ್ದೇಶಕರು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಮೈಸೂರು.
DIPR/DDMYS/1393/KSMCA/1024/2024-25

ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ,
7ನೇ ಮುಖ್ಯ ರಸ್ತೆ, ಬಿ.ಟಿ.ಎಂ. 2ನೇ ಹಂತ, ಬೆಂಗಳೂರು-560 076.
ದೂರವಾಣಿ: 080-26548829, E-mail: cclsouthzone@gmail.com
ಸಂಖ್ಯೆ::ನಕೇಗ್ರಂ/ದವ/ಎ2/ಎಂ.ಟಿ-4/ಮ.ಆ.ಸಾ/2067/2024-25 ದಿನಾಂಕ: 04-03-2025

ದರಪಟ್ಟಿ ಪ್ರಕಟಣೆ

2024-25ನೇ ಸಾಲಿಗೆ ನಗರ ಕೇಂದ್ರ ಗ್ರಂಥಾಲಯ ದಕ್ಷಿಣ ವಲಯ ಬೆಂಗಳೂರು ಈ ಕಛೇರಿ ವ್ಯಾಪ್ತಿಯಲ್ಲಿ ಬರುವ ಶಾಖಾ/ಸೇವಾ ಕೇಂದ್ರ ಗ್ರಂಥಾಲಯಗಳಿಗೆ ಮಕ್ಕಳ ಆಟಿಕೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಈ ಕೆಲಸದಲ್ಲಿ ಅನುಭವ ಹೊಂದಿರುವ ನೊಂದಾಯಿತ ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅನುಭವ ಇರುವ ನೊಂದಾಯಿತ ಸಂಸ್ಥೆಯವರು ದರಪಟ್ಟಿಗಳನ್ನು ಸಲ್ಲಿಸಬಹುದು.
1. ದರಪಟ್ಟಿ ಸಂಖ್ಯೆ:ನಕೇಗ್ರಂ/ದವ/ಎ2/ಎಂ.ಟಿ-4/ಮ.ಆ.ಸಾ/2067/2024-25, ದಿನಾಂಕ: 04-03-2025. 2. ದರಪಟ್ಟಿ ಫಾರಂಗಾಗಿ ಬೇಡಿಕೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಹಾಗೂ ಸಮಯ: 11-03-2025 ರಂದು ಮಧ್ಯಾಹ್ನ 12.30 ಗಂಟೆಯೊಳಗೆ ದರಪಟ್ಟಿ ಫಾರಂ ಶುಲ್ಕ 1000 ಯೊಂದಿಗೆ ಅರ್ಜಿ ಸಲ್ಲಿಸಬೇಕು. 3. ಖಾಲಿ ದರಪಟ್ಟಿ ಫಾರಂ ವಿತರಿಸಲು ಕೊನೆಯ ದಿನಾಂಕ ಹಾಗೂ ಸಮಯ: 12-03-2025 ರಂದು ಮಧ್ಯಾಹ್ನ 2.00 ಗಂಟೆಯೊಳಗೆ ಮೇಲಿನಂತೆ ಅರ್ಜಿದಾರರಿಗೆ ಮಾತ್ರ ದರಪಟ್ಟಿ ಫಾರಂ ವಿತರಿಸಲಾಗುವುದು. 4. ಅಂದಾಜು ಮೊತ್ತ: 2 ಲಕ್ಷ (ಎರಡು ಲಕ್ಷ ರೂಪಾಯಿಗಳು ಮಾತ್ರ). 5. ಇ.ಎಂ.ಡಿ. ಮೊತ್ತ : 4,000/- (ರೂಪಾಯಿ ನಾಲ್ಕು ಸಾವಿರ ಮಾತ್ರ) ಗಳನ್ನು ಈ ಕಛೇರಿಯಲ್ಲಿ ಪಾವತಿ ಮಾಡಿ ರಶೀದಿ ಪಡೆದು ರಶೀದಿಯನ್ನು ದರಪಟ್ಟಿಗೆ ಫಾರಂನೊಂದಿಗೆ ಲಗತ್ತಿಸತಕ್ಕದ್ದು. 6. ಭರ್ತಿ ಮಾಡಿದದರಪಟ್ಟಿ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ: 13-03-2025ರಂದು ಸಾಯಂಕಾಲ 4.00 ಗಂಟೆಯೊಳಗೆ ಹಾಗೂ ಅದೇ ದಿನ ಸಂಜೆ 5.00 ಗಂಟೆಗೆ ಹಾಜರಿದ್ದ ದರಪಟ್ಟಿದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. 7. ದರಪಟ್ಟಿ ಸ್ವೀಕರಿಸುವ ಅಧಿಕಾರಿ: ಉಪ ನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ, ಬಿ.ಟಿ.ಎಂ. 2ನೇ ಹಂತ, ಬೆಂಗಳೂರು-560 076. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/- (ಸರಸ್ವತಿ ಎನ್.) ಉಪನಿರ್ದೇಶಕರು,
ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ, ಬೆಂಗಳೂರು.
DIPR/CP/AAPL/RO5495/24-25

ಕರ್ನಾಟಕ ಸರ್ಕಾರ
(ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352-277816, ಫ್ಯಾಕ್ಸ್:08352-277817
ಇ-ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇ.ವಿ/ವಿಜ/ಇಪ್ರಾ/ಟೆಂಡರ್/2024-25/8390 ದಿನಾಂಕ:03.03.2025

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2024-25 ನೇ ಸಾಲಿನ ಈ ಕಚೇರಿಯ ಟೆಂಡರ ಪ್ರಕಟಣೆ ಸಂಖ್ಯೆ: 8390 ದಿನಾಂಕ: 03.03.2025 ರಂತೆ ಇಂಡೆಂಟ ನಂ: RDPR/2024-25/SE2236 ರೂ. 20.00 ಲಕ್ಷಗಳಿಗೆ ಸರ್ವಿಸಸ್‌ನಲ್ಲಿ ಇ-ಟೆಂಡರ್‌ನ್ನು ಅಹ್ವಾನಿಸಿದ್ದು. ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.kppp.karnataka.gov. in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/747/ಕೆಎಸ್‌ಎಂಸಿಎ/2024-25

ಮಂಗನ ಕಾಯಿಲೆ ಹಿನ್ನೆಲೆಯಲ್ಲಿ ಕಾಡಿಗೆ ಹೋಗಬೇಡಿ ಎಂದು ಆರೋಗ್ಯ ಅಧಿಕಾರಿಗಳು ಸಲಹೆ ಮಾಡುತ್ತಾರೆ. ಆದರೆ ಕಾಡಲ್ಲೇ ನಮ್ಮ ವಾಸ ಕಾಡಲ್ಲೇ ನಮ್ಮ ಮನೆ ಎಂಬುದು ಇವರಿಗೆ ತಿಳಿಯುವುದಿಲ್ಲವೇ? ಇಷ್ಟು ಭಯಾನಕ ಕಾಯಿಲೆಗೆ ಇದುವರೆಗೆ ಒಂದು ಲಸಿಕೆ ಕಂಡು ಹಿಡಿಯಲಾಗಿಲ್ಲ ಎಂಬುದು ನಿಜಕ್ಕೂ ತಲೆ ತಗ್ಗಿಸಬೇಕಾದ ಸಂಗತಿ.

– ಆರಗ ಜ್ಞಾನೇಂದ್ರ, ಶಾಸಕ

ಬಿಜೆಪಿ ಸರಕಾರ ಚಿಕ್ಕಮಗಳೂರಿಗೆ ಮೆಡಿಕಲ್ ಕಾಲೇಜು ಮಂಜೂರು ಮಾಡಿ, ಶಂಕುಸ್ಥಾಪನೆ ನೇರವೇರಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ನಮ್ಮ ಸರಕಾರ 100 ಕೋಟಿ ಹಣ ನೀಡಿದೆ. ಆಸ್ಪತ್ರೆ ಮತ್ತು ಕಾಲೇಜಿನಲ್ಲಿ ನೀರಿನ ಸಮಸ್ಯೆ ಸೃಷ್ಟಿಯಾಗಿದೆ. 10 ಬೋರ್‌ವೆಲ್ ಕೊರೆದರೂ ನೀರು ಸಿಗುತ್ತಿಲ್ಲ. ಮಳೆ ಕೊಯ್ಲು ವ್ಯವಸ್ಥೆ ಮಾಡಿದರೆ ನೀರಿನ ಸೌಲಭ್ಯ ಸರಿಪಡಿಸಬಹುದು.

-ಶರಣಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವ

ಅಧಿಕಾರಗಳನ್ನು ಕಿತ್ತುಕೊಂಡು ಅವರಿಂದಲೇ ಸುಳ್ಳು ಹೇಳಿಸಲಾಗಿದೆ | ವಿಶ್ವವಿದ್ಯಾಲಯಗಳನ್ನು ಮುಚ್ಚಿ ಬಾರ್‌ಗಳನ್ನು ತೆರೆಯುತ್ತಿದ್ದಾರೆ, ಜನಸಂಖ್ಯೆಗೆ ಪೂರಕವಾಗಿ ವಿವಿಗಳು ಹೆಚ್ಚಿಸಿ: ಅಶೋಕ್

ರಾಜ್ಯಪಾಲರ ಬಾಯಿಂದ ಸುಳ್ಳು ಹೇಳಿಸಿದ ಕಾಂಗ್ರೆಸ್

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ರಾಜ್ಯ ಸರಕಾರ ರಾಜ್ಯಪಾಲರ ಬಾಯಿಂದ ಸಾಕಷ್ಟು ಸುಳ್ಳುಗಳನ್ನು ಹೇಳಿಸಿದೆ. ರಾಜ್ಯಪಾಲರ ಎಲ್ಲ ಅಧಿಕಾರಗಳನ್ನು ಕಿತ್ತುಕೊಂಡು ಅವರನ್ನೇ ಬಳಸಿಕೊಂಡು ಸರಕಾರವನ್ನು ಶ್ಲಾಘಿಸಿಕೊಳ್ಳಲಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿ, ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಥ್ ಅವರ ಬಾಯಿಂದ ಸುಳ್ಳಿನ ಸರಮಾಲೆಯನ್ನೇ ಹೇಳಿಸಲಾಗಿದೆ. ಸರಕಾರ ಮತ್ತು ರಾಜ್ಯಪಾಲರ ನಡುವೆ ಸಂಘರ್ಷ ತರಲಾಗಿದೆ. ರಾಜ್ಯಪಾಲರ ಅಧಿಕಾರಗಳನ್ನು ಕಿತ್ತುಕೊಂಡಿರುವುದು ಪ್ರಜಾಪ್ರಭುತ್ವಕ್ಕೆ ಮಾಡಿರುವ ಅವಮಾನ. ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಇವ ನಮ್ಮವ ಎಂಬ ಬಸವಣ್ಣನವರ ವಚನ ಹೇಳುತ್ತಾರೆ. ಆದರೆ ರಾಜ್ಯಪಾಲರ ವಿಚಾರ ಬಂದಾಗ ಮಾತ್ರ ಇವರು ನಮ್ಮವರಲ್ಲ ಎಂದು ಭೇದ ತೋರುತ್ತಾರೆ. ರಾಜ್ಯಪಾಲರು ಇತ್ತೀಚೆಗೆ ಮೈಕ್ರೋ ಫೈನಾನ್ಸ್ ಕಾನೂನು ತಿದ್ದುಪಡಿ ವಾಪಸ್ ಕಳುಹಿಸಿದ್ದರು. ಅದನ್ನು ವಿವೇಚನೆ ಮಾಡದೆ ಸರಕಾರದಿಂದ ದ್ವೇಷ ಸಾಧಿಸಲಾಗುತ್ತಿದೆ. ವಿಧಾನಪರಿಷತ್ ಸದಸ್ಯ ಐವನ್ ಡಿಸೋಜ ಅವರು ಬಾಂಗ್ಲಾ ಪ್ರಧಾನಿಯೇ ಗತಿಯೇ ಬರಲಿದೆ ಎಂದು ಬೆದರಿಕೆ ಹಾಕಿದ್ದರು. ರಾಜ್ಯಪಾಲರಿಗೆ ತಿಳಿವಳಿಕೆ ಇಲ್ಲವೆಂದು ಸಚಿವ ಜಮೀರ್ ಅಹ್ಮದ್ ಹೇಳಿದ್ದರು ಎಂದು ದೂರಿದರು.

ಆಡಳಿತದಲ್ಲಿ ಪಾರದರ್ಶಕತೆ ತಂದಿದ್ದರೆ, ವಾಲ್ಮೀಕಿ ನಿಗಮದಲ್ಲಿ 187 ಕೋಟಿ ರು. ಹೇಗೆ ಲೂಟಿಯಾಯಿತು? ಪಿಎಸ್‌ಐ ಪರಶುರಾಮ್ ಹೇಗೆ ಸತ್ತರು? ಅಬಕಾರಿ ಇಲಾಖೆಯಲ್ಲಿ ಹಗರಣ ಹೇಗೆ ನಡೆಯಿತು? ಆಕ್ಸ್‌ಫರ್ಡ್ ಬ್ಲಾಗ್‌ನಲ್ಲಿ ಆರ್ಥಿಕ ತಜ್ಞರೊಬ್ಬರು ಸರಕಾರವನ್ನು ಶ್ಲಾಘಿಸಿ ಶೈನಿಂಗ್ ಲೈಟ್ ಇನ್ ದಿ ಡಾರ್ಕ್‌ನೆಸ್ ಎಂದು ಬರೆದಿದ್ದಾರೆ ಎಂದು ಭಾಷಣದಲ್ಲಿ ಉಲ್ಲೇಖಿಸಲಾಗಿದೆ. ಇದು ಯಾರೆಂದು ಹುಡುಕಿದರೆ, ಇವರು ಮುಖ್ಯಮಂತ್ರಿ ಸಚಿವಾಲಯದಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿ ಎಂದು ತಿಳಿಯಿತು. ಕಾಂಗ್ರೆಸ್ ನಾಯಕರ ಕಚೇರಿಯಲ್ಲೇ ಸಂಬಳಕ್ಕಾಗಿ ಕೆಲಸ ಮಾಡುತ್ತಿರುವ ವ್ಯಕ್ತಿ ಬರೆದಿರುವುದನ್ನು ಬಜೆಟ್ ಭಾಷಣದಲ್ಲಿ ಏಕೆ ಉಲ್ಲೇಖಿಸಬೇಕು? ಇದನ್ನು ಬಿರುದು ಎಂದು ಪರಿಗಣಿಸಬೇಕೆ? ಇದನ್ನು ರಾಜ್ಯಪಾಲರ ಬಾಯಿಂದ ಹೇಳಿಸಬೇಕೆ? ರಾಷ್ಟ್ರಪತಿಯವರಿಂದ ಬಿರುದು ಪಡೆಯಬೇಕೆ ಹೊರತು, ಸಿಎಂ ಕಚೇರಿಯಲ್ಲಿ ಕೆಲಸ ಮಾಡುವವರಿಂದ ಬಿರುದು ಪಡೆಯಬಾರದು ಎಂದು ಹೇಳಿದರು.

ಬೆಂಗಳೂರಿನಲ್ಲಿ ಎಲ್ಲೆಡೆ ಕಸದ ರಾಶಿ ಕಂಡುಬರುತ್ತಿದೆ. ರಾಜಧಾನಿಯ ಪ್ರಗತಿಗೆ ಅನುದಾನವೇ ಇಲ್ಲ. ಎರಡು ವರ್ಷದಿಂದ ಅಭಿವೃದ್ಧಿ ನಡೆದಿಲ್ಲ. ನನ್ನ ಕ್ಷೇತ್ರಕ್ಕೆ ಕೇವಲ 10 ಕೋಟಿ ರು. ನೀಡಲಾಗಿದೆ. ಬಿಜೆಪಿ ಸರಕಾರವಿದ್ದಾಗ ಭೈರತಿ ಸುರೇಶ್ ಕ್ಷೇತ್ರಕ್ಕೆ ಒಂದು ವರ್ಷಕ್ಕೆ 100 ಕೋಟಿ ರು. ನೀಡಲಾಗಿತ್ತು. ಆದರೆ ಈಗಿನ ಸರಕಾರದಿಂದ ಹಣ ಬರುತ್ತಿಲ್ಲ. ಮಳೆಗಾಲ ಬರುವ ಮುನ್ನ ಡಾಂಬರೀಕರಣ ಮಾಡಬೇಕಿತ್ತು. ಈಗ ಬ್ರ್ಯಾಂಡ್ ಬೆಂಗಳೂರು ಹೋಗಿ ಬ್ಯಾಡ್ ಬೆಂಗಳೂರು ಆಗಿದೆ.

ಆರ್.ಅಶೋಕ್, ಪ್ರತಿಪಕ್ಷ ನಾಯಕ

ಮಂಡ್ಯಕ್ಕೆ ಹೋದ್ರೆ ಗಾಣಕ್ಕೆ ಹಾಕಿ ರುಬ್ಬುತ್ತಾರೆ

ಒಂಬತ್ತು ವಿಶ್ವವಿದ್ಯಾಲಯಗಳ ಮುಚ್ಚುವ ವಿಚಾರದ ಬಗ್ಗೆ ಅಶೋಕ್ ಪ್ರಸ್ತಾಪಿಸಿ, ಡಿಸಿಎಂ ಶಿವಕುಮಾರ್ ನೇತೃತ್ವದಲ್ಲಿ ಸಮಿತಿ ಮಾಡಿ 9 ವಿವಿ ಮುಚ್ಚುವ ನಿರ್ಧಾರವನ್ನು ಸರಕಾರ ಮಾಡಿದೆ. ನಾವು ವಿಶ್ವ ವಿದ್ಯಾಲಯಗಳನ್ನು ಮಾನದಂಡಗಳ ಮೇಲೆ ಆರಂಭಿಸಿದ್ದೆವು, ಸುಮ್ಮಸುಮ್ಮನೆ ವಿವಿಗಳಿಗೆ ಅನುಮತಿ ಕೊಡಲಿಲ್ಲ. ಮಂಡ್ಯ ವಿವಿಗೆ ಕೇಂದ್ರ 50 ಕೋಟಿ ರು. ನೀಡಿದೆ. ಆದ್ದರಿಂದ ಮಂಡ್ಯದಲ್ಲಿ ಉತ್ತಮ ಕಟ್ಟಡವೂ ಇದೆ, ವಿದ್ಯಾರ್ಥಿಗಳು ಸಹ ಇದ್ದಾರೆ. ಹೀಗಿರುವಾಗ ಕಾಂಗ್ರೆಸ್ ಸರಕಾರ ಮಂಡ್ಯ ವಿವಿ ರದ್ದು ಮಾಡ್ತೀವಿ ಅಂದ್ರೆ ಹೇಗೆ? ಶಾಸಕ ರವಿ ಗಣಿಗ ಎಲ್ಲಪ್ಪ? ರವಿ ಗಣಿಗ ನೀನು ಮಂಡ್ಯಕ್ಕೆ ಹೋದರೆ ಅಲ್ಲಿನವ್ರು ಗಾಣಕ್ಕೆ ಹಾಕಿ ರುಬ್ಬಿಬಿಡ್ತಾರೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ರವಿ ಗಣಿಗ, ನಾನು ಈಗಾಗಲೇ ಡಿಸಿಎಂಗೆ ಹಾಗೂ ಮಂತ್ರಿಗಳಿಗೆ ಮಂಡ್ಯ ವಿವಿ ರದ್ದು ಬೇಡ ಅಂತ ಕೇಳ್ಕೊಂಡಿದ್ದೀನಿ. ಮಂಡ್ಯದ ಜನರ ಪರವಾಗಿ ವಿಶ್ವ ವಿದ್ಯಾಲಯ ಬೇಕು ಅಂದಿದ್ದೀನಿ ಎಂದರು. ಈ ಮಾತು ಕೇಳಿದ ಅಶೋಕ, ರವಿ ಗಣಿಗ ಮಾತಿಗೆ ಶ್ಲಾಘನೆ ವ್ಯಕ್ತಪಡಿಸಿ ಚಾಲೆಂಜ್ ಅಂದ್ರೆ ಇದು ಎಂದು ಹೇಳಿದರು. ಅಲ್ಲದೆ, ಮಂಡ್ಯ ಉಸ್ತುವಾರಿ ಸಚಿವರು ಕೆಲಸಕ್ಕೆ ಬಾರದವ್ರು, ರವಿ ಗಣಿಗ ಗೆ ಇರೋ ಧಮ್ ಮಂಡ್ಯ ಉಸ್ತುವಾರಿ ಸಚಿವರಿಗಿಲ್ಲ ಎಂದು ಪರೋಕ್ಷವಾಗಿ ಚಲುವರಾಯಸ್ವಾಮಿ ಹೆಸರು ಹೇಳದೇ ಕಾಲೆಳೆದರು.

ಬಿಜೆಪಿ ಸರಕಾರ ಸುಮ್ಮಸುಮ್ಮನೆ ವಿವಿಗಳನ್ನು ಮಂಜೂರು ಮಾಡಿಲ್ಲ. ದಕ್ಷಿಣ ಕನ್ನಡದಲ್ಲಿ ಪದವಿ ಶಿಕ್ಷಣಕ್ಕೆ ಶೇ. 65.58, ಬಾಗಲಕೋಟೆಯಲ್ಲಿ ಶೇ.25, ಚಾಮರಾಜನಗರದಲ್ಲಿ ಶೇ.10, ಮಂಡ್ಯದಲ್ಲಿ ಶೇ.20 ಕೊಡಗಿನಲ್ಲಿ ಶೇ.16, ಹಾಸನದಲ್ಲಿ ಶೇ.15, ಹಾವೇರಿಯಲ್ಲಿ ಶೇ.45, ಕೊಪ್ಪಳದಲ್ಲಿ ಶೇ.16 ಇದೆ. ಪದವಿ ಶಿಕ್ಷಣ ಕಡಿಮೆ ಇರುವ ಜಿಲ್ಲೆಗಳಲ್ಲಿ ಅವಕಾಶ ವಂಚಿತರಿಗೆ ಅವಕಾಶ ನೀಡಲು ವಿವಿಗಳನ್ನು ನೀಡಲಾಗಿತ್ತು. ವಿವಿಗಳಿಗೆ ಒಟ್ಟಾರೆಯಾಗಿ 450 ಕೋಟಿ ರು. ಬೇಕು ಎಂದರು.

ಮಂಡ್ಯ ವಿಶ್ವವಿದ್ಯಾಲಯವಾಗಲು ಅಂಬರೀಷ್ ಅವರ ಪ್ರಯತ್ನ ದೊಡ್ಡದಿದೆ. ಯುವಕರು ಬೇರೆ ಜಿಲ್ಲೆಗಳಿಗೆ ಪ್ರಯಾಣ ಮಾಡಬಹುದು. ಆದರೆ ಹೆಣ್ಣುಮಕ್ಕಳು ದೂರ ಹೋಗುವುದು ಕಷ್ಟ ಎಂಬ ಕಾರಣಕ್ಕೆ ಮನೆಯಲ್ಲೇ ಉಳಿದು ಸಾಕ್ಷರತೆ ಪ್ರಮಾಣ ಇಳಿಕೆಯಾಗುತ್ತದೆ. ಯುಜಿಸಿ ಕೂಡ ಪ್ರತಿ ಜಿಲ್ಲೆಗೆ ಒಂದು ವಿವಿ ಬೇಕು ಎಂದು ಹೇಳಿದೆ. ಅಮೆರಿಕದಲ್ಲಿ 60 ಸಾವಿರ ಜನರಿಗೆ ಒಂದು ವಿವಿ ಇದ್ದರೆ, ನಮ್ಮಲ್ಲಿ 1.18 ಲಕ್ಷ ಜನರಿಗೆ ಒಂದು ವಿವಿ ಇದೆ. ವಿವಿಗಳನ್ನು ಮುಚ್ಚಿದರೆ ಅಲ್ಲಿ ಕೆಲಸ ಮಾಡುವವರಿಗೆ ಸಮಸ್ಯೆಯಾಗುತ್ತದೆ. ತಾಲೂಕುಗಳನ್ನು ಹೆಚ್ಚಿಸಿ ಎಂದು ಇದೇ ಕಾಂಗ್ರೆಸ್ ನಾಯಕರು ಈ ಹಿಂದೆ ಒತ್ತಾಯ ಮಾಡುತ್ತಿದ್ದರು. ಆದರೆ ಶಿಕ್ಷಣದ ವಿಚಾರದಲ್ಲಿ ಮಾತ್ರ ಈ ಮನೋಭಾವ ಇಲ್ಲ. ಬಾರ್‌ಗಳನ್ನು ಹೆಚ್ಚಿಸಬೇಕೋ, ವಿವಿಗಳನ್ನು ಹೆಚ್ಚಿಬೇಕೋ ಎಂದು ಇವರೇ ತೀರ್ಮಾನಿಸಲಿ ಎಂದರು.

ರಾಜ್ಯದಲ್ಲಿ ಎಲ್ಲದಕ್ಕೂ ದರ ಏರಿಕೆ

ಪೆಟ್ರೋಲ್, ಆಲ್ಕೋಹಾಲ್, ಮೆಟ್ರೋ, ಬಸ್ ಟಿಕೆಟ್, ಮದ್ಯ, ದತ್ತು ಸ್ವೀಕಾರ, ಮದುವೆ ಪ್ರಮಾಣಪತ್ರ, ಹಾಲು, ಮಾರ್ಗಸೂಚಿ ದರ ಎಲ್ಲಕ್ಕೂ ದರ ಏರಿಕೆ ಮಾಡಲಾಗಿದೆ. ಏರಿಕೆ ನಂತರವೂ ಜನಪರ ಸರಕಾರ ಎಂದು ಯಾವ ಬಾಯಲ್ಲಿ ಹೇಳುತ್ತಾರೆ? ಚುನಾವಣೆಯಲ್ಲಿ ಕೊಟ್ಟ ಭರವಸೆಯಂತೆ ಹಾಲಿನ ಪ್ರೋತ್ಸಾಹಧನವನ್ನು 5 ರಿಂದ 7 ರೂ.ಗೆ ಏರಿಸಿಲ್ಲ. 2,329 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮುಖ್ಯಮಂತ್ರಿ ಸಲಹೆಗಾರ ಬಿ.ಆರ್.ಪಾಟೀಲ್ ಅವರೇ ಹಣಕಾಸಿನ ಸ್ಥಿತಿ ಬಗ್ಗೆ ಮಾತಾಡಿದ್ದಾರೆ. ಕಮಿಶನ್ ಶೇ.40 ಗಿಂತ ಹೆಚ್ಚಾಗಿದೆ ಎಂದು ಗುತ್ತಿಗೆದಾರರು ಸಿಎಂ ಬಳಿ ಹೇಳಿದ್ದಾರೆ. ಆದರೂ ಸರಕಾರ ಪಾರದರ್ಶಕತೆ ಬಗ್ಗೆ ಹೇಳುತ್ತದೆ. 32 ಸಾವಿರ ಕೋಟಿ ರು. ಬಿಲ್ ಬಾಕಿ ಇದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.

ಡಿಸಿಎಂ ಡಿಕೆಶಿ ಹೇಳಿಕೆಗೆ ಬಿಜೆಪಿ ಶಾಸಕರು ಆಕ್ರೋಶ

ಸದನದಲ್ಲಿ ನಟ್ಟು-ಬೋಲ್ಟು ಫೈಟ್

ವಿಧಾನಸೌಧ: ಚಿತ್ರರಂಗದವರ ವಿರುದ್ಧ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಟ್ಟು-ಬೋಲ್ಟು ಹೇಳಿಕೆಗೆ ಸದನದಲ್ಲಿ ಬಿಜೆಪಿ ಶಾಸಕರು ತೀವ್ರ ಆಕ್ರೋಶ ವ್ಯಕ್ತಪಡಿ ಸಿದ್ದು, ಕಲಾವಿದರಿಗೆ ಬೆದರಿಕೆ ಹಾಕುವ ಸಂಸ್ಕೃತಿ ಬಿಡಬೇಕು ಎಂದು ಹೇಳಿದರು.

ಪ್ರತಿಪಕ್ಷದ ನಾಯಕ ಆರ್.ಅಶೋಕ ವಿಷಯ ಪ್ರಸ್ತಾಪಿಸಿ, ಉಪಮುಖ್ಯಮಂತ್ರಿ ಹುದ್ದೆಯಲ್ಲಿರುವವರು ನಟ್ಟು-ಬೋಲ್ಟು ಸರಿಪಡಿಸುತ್ತೇವೆ ಎಂದು ಬೆದರಿಕೆ ಹಾಕತ್ತಾರೆ. ಈ ರೀತಿಯ ಕೆಟ್ಟ ಸರಕಾರ ಇತಿಹಾರದಲ್ಲಿಯೇ ನೋಡಿಲ್ಲ ಎಂದರು. ಇದಕ್ಕೆ ಆಕ್ರೋಶಗೊಂಡ ಕಾಂಗ್ರೆಸ್ ಶಾಸಕರು, ಚಿತ್ರರಂಗದವರಿಗೆ ಹಾಗೆ ಹೇಳದೆ ಇನ್ನೇನು ಮಾಡಬೇಕು. ಕನ್ನಡಪರ ಹೋರಾಟಕ್ಕೆ, ನೀರಾವರಿ ಯೋಜನೆಗಳ ಪರವಾದ ಹೋರಾಟಗಳಿಗೆ ಯಾವುದೇ ನಟರೂ ಬರುವುದಿಲ್ಲ. ಹೀಗಾಗಿಯೇ ಆ ರೀತಿಯ ಹೇಳಿಕೆ ನೀಡಿದ್ದಾರೆ. ಅದರಲ್ಲಿ ತಪ್ಪೇನಿದೆ ಎಂದು ಸಮಜಾಯಿಸಿ ನೀಡಿದರು.

ಆಗ ಆರ್.ಅಶೋಕ , ಮೇಕೆದಾಟು ಪಾದಯಾತ್ರೆ ಕಾಂಗ್ರೆಸ್ ಪಕ್ಷದಿಂದ, ಡಿ.ಕೆ. ಶಿವಕುಮಾರ್ ಅವರು ವೈಯಕ್ತಿಕ ವರ್ಚಸ್ಸನ್ನು ಹೆಚ್ಚಿಸಿಕೊಳ್ಳಲು ಆಯೋಜಿಸಿದ್ದಾಗಿತ್ತು. ಒಂದು ಪಕ್ಷದ ಬಾವುಟ ಇರುವ ಪ್ರತಿಭಟನೆಗೆ ಚಲನಚಿತ್ರ ನಟರು ಬರಬೇಕೆ ಎಂದು ಪ್ರಶ್ನಿಸಿದರು. ಈ ವೇಳೆ ಬಿಜೆಪಿಯ ಡಾ. ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿ, ಚಿತ್ರರಂಗದವರು ರಸ್ತೆ ಬಂದರೆ ಸರಕಾರ ಅವರನ್ನು ಎದುರಿಸಲು ಆಗುತ್ತದೆಯೇ? ಅವರು ಬಂದರೆ ಲಕ್ಷಾಂತರ ಜನರು ಅವರ ಬೆನ್ನಿಗೆ ನಿಲ್ಲುತ್ತಾರೆ. ರಾಜಕಾರಣಿಗಳ ಹಿಂದೆ 10 ಜನ ಇರುವುದಿಲ್ಲ. ಅದು ಹೇಗೆ ನೆಟ್ಟು-ಬೋಲ್ಟು ಸರಿಪಡಿಸುತ್ತೀರಾ ನಾನು ನೋಡುತ್ತೇನೆ. ನಾನು ಸವಾಲು ಹಾಕುತ್ತೇನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಡಿಸಿಎಂ ಡಿ.ಕೆ. ಶಿವಕುಮಾರ್ ಮಾತನಾಡಿ, ಈ ಹಿಂದೆ ಸಚಿವರಾಗಿದ್ದಾಗ ಡಾ. ಅಶ್ವತ್ಥನಾರಾಯಣ ರಾಮನಗರದಲ್ಲಿ ಯಾವ ರೀತಿ ಭಾಷಣ ಮಾಡಿದ್ದರು ಎಂಬುದನ್ನು ನೋಡಿದ್ದೇನೆ. ಗಂಡಸ್ತನದ ಬಗ್ಗೆ ಮಾತನಾಡಿದ್ದ ಅವರಿಗೆ, ರಾಮನಗರದಲ್ಲಿ ಬಿಜೆಪಿ ಪಕ್ಷದ ಕಚೇರಿಯನ್ನೇ ಮಾಡಲು ಸಾಧ್ಯವಾಗಲಿಲ್ಲ ಎಂದು ವ್ಯಂಗ್ಯವಾಡಿದರು. ಅಂತಿಮವಾಗಿ ಉಪಮುಖ್ಯಮಂತ್ರಿಗಳು ಚಿತ್ರರಂಗದವರ ಮೇಲೆ ಬಳಸಿದ ಭಾಷೆ ಸರಿಯಲ್ಲ ಎಂದು ಹೇಳಿ ಆರ್.ಅಶೋಕ ಪರಿಸ್ಥಿತಿ ತಿಳಿಗೊಳಿಸಿದರು.

ಬೆಂಗಳೂರು ಅಂತಾರಾಷ್ಟ್ರೀಯ ಉದ್ಘಾಟನಾ ಕಾರ್ಯಕ್ರಮದಲ್ಲಿ, ಕನ್ನಡಪರ ಹೋರಾಟ, ಕಾರ್ಯಕ್ರಮಕ್ಕೆ ಬರದ ಚಿತ್ರರಂಗದವರ ನಟ್ಟು-ಬೋಲ್ಟು ಸರಿ ಮಾಡುತ್ತೇನೆ ಎಂದು ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದ್ದರು. ಅದರ ವಿರುದ್ಧ ಚಲನಚಿತ್ರ ರಂಗದವರು ಸೇರಿದಂತೆ ಹಲವು ಆಕ್ರೋಶ ವ್ಯಕ್ತಪಡಿಸಿದ್ದರು. ಇದೀಗ ಸದನದಲ್ಲೂ ಡಿ.ಕೆ. ಶಿವಕುಮಾರ್ ಹೇಳಿಕೆಗೆ ವಿರೋಧ ವ್ಯಕ್ತವಾಗಿದೆ.

ಕೇಂದ್ರದಿಂದ ವಯೋ ವಂದನಾ ಯೋಜನೆ ಸಹಕಾರ ಸಿಗದಿದ್ದರೆ ಯೋಜನೆ ಜಾರಿ ಅಸಾಧ್ಯ: ದಿನೇಶ್

ರಾಜ್ಯದ ದುಡ್ಡಲ್ಲಿ ಕೇಂದ್ರ ಯೋಜನೆಗೆ ಒಪ್ಪಿಗೆ ಇಲ್ಲ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ರಾಜ್ಯ ಸರಕಾರದ ಅನುದಾನದೊಂದಿಗೆ ಕೇಂದ್ರ ಸರಕಾರದ ಯೋಜನೆಗಳನ್ನು ನಡೆಸಲು ಅಸಾಧ್ಯವೆಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಶಾಸಕ ವೇದವ್ಯಾಸ ಕಾಮತ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಹಣ ರಾಜ್ಯ ಸರಕಾರದ್ದು, ಹೆಸರು ಕೇಂದ್ರ ಸರಕಾರದ್ದು ಎಂದಾದರೆ ಆರೋಗ್ಯ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ನಮ್ಮ ಒಪ್ಪಿಗೆಯಿಲ್ಲ. ಆಯುಷ್ಮಾನ್ ಭಾರತ – ಕರ್ನಾಟಕ ಯೋಜನೆಯ ಕೇಂದ್ರದ ಪಾಲು ಹೆಸರಿಗಷ್ಟೇ ಎಂಬಂತಾಗಿದೆ. ಕರ್ನಾಟಕವು ಶೇ.75ರಷ್ಟು ಪಾಲನ್ನು ಕೊಡುತ್ತಿದ್ದರೆ ಕೇಂದ್ರ ಕೇವಲ ಶೇ.25ರಷ್ಟನ್ನು ಮಾತ್ರ ಭರಿಸುತ್ತಿದೆ. ಕೇಂದ್ರ ತನ್ನ ಪಾಲಿನ ಶೇ.60ರಷ್ಟು ಅನುದಾನ ಕೊಡಬೇಕು. ರಾಜ್ಯವು ಶೇ.40ರಷ್ಟನ್ನು ಭರಿಸಬೇಕು ಎಂಬುದು ಆಯುಷ್ಮಾನ್ ಯೋಜನೆಯ ನಿಯಮವಾಗಿ ಎಂದು ಹೇಳಿದರು.

ಇದೇ ರೀತಿ ಮುಂದುವರಿದರೆ ಕೇಂದ್ರದ 'ವಯೋ ವಂದನಾ' ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನ ಮಾಡುವುದು ಅಸಾಧ್ಯ. ಇದು ಖಂಡಿತವಾಗಿಯೂ ಒಳ್ಳೆಯ ಯೋಜನೆ. ಆದರೆ ಇದನ್ನು ರಾಜ್ಯದಲ್ಲಿ ಜಾರಿಗೊಳಿಸಬೇಕಾದರೆ ವರ್ಷಕ್ಕೆ 68.98 ಕೋಟಿ ರು. ಬೇಕಾಗುತ್ತದೆ. ಇದರಲ್ಲಿ 36.58 ಕೋಟಿ ರು.ಗಳಷ್ಟು ಕೇಂದ್ರ ಸರಕಾರ ಭರಿಸಬೇಕು. ಈ ಬಗ್ಗೆ ಕೇಂದ್ರದಿಂದ ಬದ್ಧತೆ ದೊರಕಿದರೆ ಖಂಡಿತ ವಯೋ ವಂದನ ಯೋಜನೆಯನ್ನು ಜಾರಿಗೊಳಿಸುತ್ತೇವೆ. ಈ ಯೋಜನೆಗೆ ನಮ್ಮ ವಿರೋಧ ಇಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಈಗಿರುವ ಅಲೋಪತಿ ಸಾಮಾನ್ಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲೇ ಆಯುಷ್ ವಿಭಾಗಕ್ಕೆ 5ರಿಂದ 10 ಹಾಸಿಗೆಗಳನ್ನು ನೀಡುವ ಮೂಲಕ ಸಮನ್ವಯಿತ ಚಿಕಿತ್ಸೆಗೆ ಕ್ರಮ ತೆಗೆದುಕೊಳ್ಳಲಾ ಗುತ್ತದೆ. ಅಲ್ಲದೇ, ಈಗಿರುವ ಸರಕಾರಿ ಆಸ್ಪತ್ರೆಗ ಳಲ್ಲೇ ಆಯುಷ್ ಜತೆಗೆ, ನಿಸರ್ಗ – ಯೋಗ ಮೊದಲಾದ ಪದ್ಧತಿಗಳನ್ನು ಆರಂಭಿಸಲಾಗುತ್ತದೆ ಎಂದು ತಿಳಿಸಿದರು.

ಕೇಂದ್ರ ಸರಕಾರಕ್ಕೆ ಪತ್ರ

ರಾಜ್ಯದ ನಿಲುವನ್ನು ಕೇಂದ್ರ ಸರಕಾರಕ್ಕೆ ಈಗಾಗಲೇ ಪತ್ರದ ಮೂಲಕ ತಿಳಿಸಲಾಗಿದೆ. ರಾಜ್ಯದ ಆರೋಗ್ಯ ಕಾರ್ಯದರ್ಶಿಗಳು ಕೇಂದ್ರ ಆರೋಗ್ಯ ಕಾರ್ಯದರ್ಶಿಗಳೊಂದಿಗೆ ಈ ಸಂಬಂಧ ಸಂಪರ್ಕದಲ್ಲಿದ್ದಾರೆ. ಆದರೆ ಇದುವರೆಗೂ ಕೇಂದ್ರದಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಆಯುಷ್ಮಾನ್ ರೀತಿಯಲ್ಲಿ ನಾವೇ ವಯೋ ವಂದನ ಯೋಜನೆಯ ಹಣವನ್ನೂ ನೀಡುವುದಾದರೆ ರಾಜ್ಯಕ್ಕೆ ಹೊರೆಯಾಗಲಿದೆ. ಆಯುಷ್ಮಾನ್ ಭಾರತದ ಅಡಿ ನಾವು ಈಗ 70 ವಯೋಮಾನದವರೂ ಸೇರಿ ಎಲ್ಲರಿಗೂ ಪರಿಣಾಮಕಾರಿಯಾಗಿ ಸೌಲಭ್ಯ ನೀಡುತ್ತಿದ್ದೇವೆ. ಆದ್ದರಿಂದ ಚಿಂತೆ ಬೇಡ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ 2022 ಪ್ಯಾಕೇಜನ್ನು ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಈ ಪ್ಯಾಕೇಜ್‌ನಲ್ಲಿ ಒಟ್ಟು 1953 ಚಿಕಿತ್ಸಾ ವಿಧಾನಗಳು ಲಭ್ಯವಾಗಲಿವೆ. ಯೋಜನೆಯು 1 ಕೋಟಿ 12 ಲಕ್ಷ ಕುಟುಂಬಗಳಿಗಾಗಿ ಇರುವ ಯೋಜನೆಯಾಗಿದ್ದು 60:40ಅನುಪಾತದಂತೆ ಕೇಂದ್ರ ಸರಕಾರದ ಶೇ.60 ಹಾಗೂ ರಾಜ್ಯದ ಶೇ.40 ಚಿಕಿತ್ಸಾ ವೆಚ್ಚ ಭರಿಸಬೇಕು. ಈ ಯೋಜನೆಗೆ ವಾರ್ಷಿಕ 68.98ಕೋಟಿ ಅನುದಾನ ಬೇಕಾಗಬಹುದು.

-ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಕಾನೂನು ಸುವ್ಯವಸ್ಥೆ ಕಾಪಾಡಲು ನಿಗಾ

ವಿಧಾನ ಪರಿಷತ್: ಅಪಾಯಕಾರಿ ವೀಲಿಂಗ್ ಮಾಡಿ ಚಾಕು, ಚೂರಿ ತೋರಿಸಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುತ್ತಿದ್ದವರ ವಿರುದ್ಧ ಮುಲಾಜಿಲ್ಲದೆ ಪ್ರಕರಣ ದಾಖಲಿಸಿ ಬಂಧಿಸಲಾಗುತ್ತಿದೆ.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 1342 ಪ್ರಕರಣಗಳು ದಾಖಲಾ ಗಿದ್ದು, 1046 ಜನರನ್ನು ಬಂಧಿಸಲಾಗಿದೆ. ವೀಲಿಂಗ್ ಮಾಡುವುದಲ್ಲದೆ ಚಾಕು, ಚೂರಿ ಹಾಗೂ ಲಾಂಗ್ ಹಿಡಿದುಕೊಂಡು ಓಡಾಡಿ ಸಮಾಜದ ಸ್ವಾಸ್ಥ್ಯ ಕದಡುತ್ತಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ರಾಜ್ಯದೆಲ್ಲೆಡೆ ದಾಖಲಾದ ಒಟ್ಟು ವೀಲಿಂಗ್ ಪ್ರಕರಣಗಳಲ್ಲಿ ಬೆಂಗಳೂರು ನಗರದಲ್ಲಿ 893 ಪ್ರಕರಣ ದಾಖಲಾಗಿದ್ದು, 788 ಮಂದಿಯನ್ನು ಬಂಧಿಸಲಾಗಿದೆ. ರಾಜ್ಯದ ಇತರೆಡೆ 449 ಪ್ರಕರಣ ದಾಖಲಾಗಿದ್ದು, 258 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪ್ರಶೋತ್ತರ ವೇಳೆಯಲ್ಲಿ ಬಿಜೆಪಿ ಸದಸ್ಯ ಎಸ್.ಎಲ್.ಭೋಜೇಗೌಡ ಪ್ರಶ್ನೆಗೆ ಸಚಿವರು ಮಾಹಿತಿ ನೀಡಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆ ಟ್ಟಿಲ್ಲ. ಸಮಾಜದ ಶಾಂತಿ ಹಾಳು ಮಾಡುವ ಉದ್ದೇಶದಿಂದ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹಬ್ಬಿಸಿ ಗಲಭೆ ಸೃಷ್ಟಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ. ಗೂಂಡಾ ಕಾಯಿದೆಯಡಿ ಮೂರು ವರ್ಷಗಳಲ್ಲಿ 139 ಗೂಂಡಾಗಳನ್ನು ಬಂಧಿಸಿ ಜೈಲಿಗಟ್ಟಲಾಗಿದೆ. ಪೊಲೀಸ್ ಠಾಣೆಗಳಲ್ಲಿ ಬೀಟ್ ವ್ಯವಸ್ಥೆ ಹೆಚ್ಚಿಸಲಾಗಿದೆ. ಹೊಯ್ಸಳ ಗಸ್ತು ಕರ್ತವ್ಯ ಬಲಪಡಿಸಲಾಗಿದೆ. ನಗರದ ಯಾವುದೇ ಸ್ಥಳದಿಂದ 112ಗೆ ಕರೆ ಮಾಡಿದರೆ ಸರಾಸರಿ 9 ನಿಮಿಷಗಳಲ್ಲಿ ಸ್ಥಳಕ್ಕೆ ಹೊಯ್ಸಳ ಬರುವ ವ್ಯವಸ್ಥೆ ಮಾಡಲಾಗಿದೆ ಎಂದರು.

7,500 ಸಿಸಿಟಿವಿ ಕ್ಯಾಮೆರಾ ಅಳವಡಿಕೆ

ಬೆಂಗಳೂರು ನಗರ ಸುರಕ್ಷತೆ ದೃಷ್ಟಿಯಿಂದ 1,640 ಕಡೆಗಳಲ್ಲಿ 7,500 ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ನಗರದ ಪ್ರಮುಖ ಜಂಕ್ಷನ್‌ಗಳಲ್ಲಿ ಎಐ ಕ್ಯಾಮೆರಾ ಹಾಕಲಾಗಿದೆ. ತಂತ್ರಜ್ಞಾನ ಸದ್ಬಳಕೆ ಮಾಡಿಕೊಂಡು ಆರೋಪಿಗಳ ಹೆಡೆಮುರಿ ಕಟ್ಟುವ ಕೆಲಸ ಮಾಡಲಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಹತ್ಯೆ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿವೆ ಎಂದು ಅಂಕಿ-ಅಂಶ ಸಮೇತ ವಿವರಿಸಿದರು.ಬೆಂಗಳೂರು ಮಾತ್ರವಲ್ಲದೆ ರಾಜ್ಯದಲ್ಲಿ ಸೈಬರ್ ಅಪರಾಧಗಳು ದಿನೇ ದಿನೆ ಹೆಚ್ಚಾಗುತ್ತಿವೆ. ದಿನನಿತ್ಯ ಕೋಟ್ಯಂತರ ರೂಪಾಯಿ ಹಣವನ್ನು ಜನರು ಕಳೆದುಕೊಳ್ಳುತ್ತಿದ್ದಾರೆ. 2022ರಲ್ಲಿ 10,575 ಸೈಬರ್ ಪ್ರಕರಣಗಳು ದಾಖಲಾದರೆ, 2024ರ ಅಂತ್ಯಕ್ಕೆ 21,984 ಪ್ರಕರಣಗಳು ದಾಖಲಾಗಿವೆ. ಸೈಬರ್ ವಂಚನೆ ನಿಯಂತ್ರಣಕ್ಕಾಗಿ ಮೊದಲ ಬಾರಿಗೆ ಪ್ರತ್ಯೇಕ ಡಿಜಿಪಿ ಹುದ್ದೆ ಸೃಷ್ಟಿಸಲಾಗಿದೆ. ಇವರ ನೇತೃತ್ವದಲ್ಲಿ ಓರ್ವ ಐಜಿಪಿ, ಏಳು ಮಂದಿ ಎಸ್ಪಿ ಸೇರಿ ಇನ್ನಿತರ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದರು.

ದೇಗುಲಗಳಿಗೆ ಭೇಟಿ ಶೈಕ್ಷಣಿಕ ಪ್ರವಾಸಕ್ಕೆ ಒತ್ತು

ವಿಧಾನಪರಿಷತ್: ಧಾರ್ಮಿಕ ಹೆಸರಿನಲ್ಲಿ ಶೈಕ್ಷಣಿಕ ಪ್ರವಾಸಕ್ಕೆ ವಿಶೇಷ ಒತ್ತು ನೀಡಲಾಗಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ದೇವಸ್ಥಾನಗಳಿಗೆ ಮೂಲಭೂತ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೇಂದ್ರ ಪ್ರವಾಸೋದ್ಯಮ ಇಲಾಖೆಯ ಪ್ರಸಾದ್ ಯೋಜನೆಯಡಿಯಲ್ಲಿ ಭರಿಸಲು ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪವಿತ್ರ ಕ್ಷೇತ್ರಗಳಿಗೆ ಮೂಲಭೂತ ಸೌಕರ್ಯಗಳಾದ ಶೌಚಾಲಯ, ಕ್ಲೋಕ್ ರೂಮ್, ವಿಶ್ರಾಂತಿ ಕೊಠಡಿ, ಮಾಹಿತಿ ಫಲಕಗಳು ಸೈನೇಜ್‌ಗಳು, ಪ್ರವಾಸಿ ಮಾಹಿತಿ ಕೇಂದ್ರ, ಇಂಟಪ್ರಿಟೇಷನ್ ಕೇಂದ್ರಗಳು, ರಸ್ತೆಬದಿ ಸೌಲಭ್ಯ, ವಾಹನಗಳ ಪಾರ್ಕಿಂಗ್ ಸೌಲಭ್ಯ, ನೀರಿನ ಕಾರಂಜಿ, ಫೆನ್ ಸಿಂಗ್, ಲೈಟಿಂಗ್ಸ್, ಪಾಥ್ ವೇ, ಆಸನಗಳು, ಕುಡಿಯುವ ನೀರಿನ ಸೌಲಭ್ಯ ಕಸದ ಬುಟ್ಟಿಗಳು ಪ್ರಥಮ ಚಿಕಿತ್ಸಾ ಕೇಂದ್ರ, ಅಭಿವೃದ್ಧಿ ಮುಂತಾದವುಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಕೇಂದ್ರ ಸರಕಾರದ ಪ್ರಸಾದ ಯೋಜನೆಯಡಿ ಮಂಜೂರು ಮಾಡಲು 16 ಪ್ರಸ್ತಾವನೆಗಳನ್ನು ಸಲ್ಲಿಸಲಾಗಿತ್ತು. ಆದರೆ ಬೆಳಗಾವಿಯ ಸವದತ್ತಿ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನಕ್ಕೆ 18.00 ಕೋಟಿ ಬೀದರ್‌ನ ಪಾಪನಾಶಂಗೆ 20 ಕೋಟಿ ರು. ಹಾಗೂ ಚಾಮುಂಡಿ ದೇವಸ್ಥಾನಕ್ಕೆ 45 ಕೋಟಿ ರು. ಸೇರಿದಂತೆ ಒಟ್ಟು 3 ಪ್ರಸ್ತಾವನೆಗಳು ಪ್ರಸಾದ್ ಯೋಜನೆಯಡಿ ಮಂಜೂರಾಗಿವೆ ಎಂದು ತಿಳಿಸಿದರು.

ಮಾತಾ ಮಾಣಿಕೇಶ್ವರಿ ಪ್ರವಾಸಿ ತಾಣಕ್ಕೆ ಕ್ರಮ

ಗುರಮಿಟಕಲ್ಲಿನ ಯಾಣಗುಂದಿಯಲ್ಲಿರುವ ಮಾತಾ ಮಾಣಿಕೇಶ್ವರಿ ದೇವಸ್ಥಾನವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಲು ಸರಕಾರದಿಂದ ಅಗತ್ಯ ಕ್ರಮ ವಹಿಸಲಾಗುವುದು ಎಂದು ಸಚಿವ ಎಚ್. ಕೆ. ಪಾಟೀಲ್ ತಿಳಿಸಿದರು. ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು ಇದು ಗುಡಿ ಅಲ್ಲ, ಮಠ ಅಲ್ಲ, ದೇವಸ್ಥಾನವಲ್ಲ ಇದೊಂದು ಸುಂದರವಾದ ಸ್ಥಳ. ಇದಕ್ಕೆ ವಿಶೇಷ ಒತ್ತು ನೀಡಿ ಮುಂದಿನ ದಿನಗಳಲ್ಲಿ ಈ ಸ್ಥಳವನ್ನು ಪ್ರವಾಸಿ ತಾಣವಾಗಿ ರೂಪಿಸಲು ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮುಸ್ಲಿಂ ಮೀಸಲು ಸಿ.ಟಿ.ರವಿ ಟೀಕೆ

ಬೆಂಗಳೂರು: ಸರಕಾರಿ ಕಾಮಗಾರಿಗಳಲ್ಲಿ ಮುಸ್ಲಿಂರಿಗೆ ಶೇ.4 ರಷ್ಟು ಮೀಸಲು ಕೊಡುವ ಯೋಚನೆಯನ್ನು ಪಾಕಿಸ್ತಾನದ ಅಪ್ಪಂದಿರಿಗೆ ಹುಟ್ಟಿರೋರು ಮಾತ್ರ ಮಾಡುತ್ತಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆಕ್ರೋಶ ಹೊರಹಾಕಿದ್ದಾರೆ.

ವಿಧಾನಸೌಧದಲ್ಲಿ ಮಾತನಾಡಿದ ಅವರು, ನಮ್ಮ ಭಾರತದ ಸಂವಿಧಾನದ ರಚನೆ ವೇಳೆ ಮತೀಯ ಆಧಾರದ ಮೀಸಲಾತಿ ಬಗ್ಗೆ ಚರ್ಚೆ ನಡೆಯುತ್ತದೆ. ಆಗ ಮುಸ್ಲಿಂರಿಗೆ ಮತೀಯ ಆಧಾರದ ಮೀಸಲು ಕೊಡುವ ಬಗ್ಗೆ ಚರ್ಚೆಯಾಗುತ್ತದೆ. ಆಗ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಎಳೆಎಳೆಯಾಗಿ ವಿವರಿಸುತ್ತಾರೆ. ಮತೀಯ ಆಧಾರದ ಮೀಸಲಿಗೆ ಅವರು ಒಪ್ಪಿಗೆ ಕೊಡುವುದಿಲ್ಲ. ಧರ್ಮ ಆಧಾರಿತ ಮೀಸಲಾತಿ ಸಂವಿಧಾನ ವಿರುದ್ಧವಾಗುತ್ತದೆ ಎಂದು ವಾದಿಸಿದ್ದರು. ಆದರೆ ಕರ್ನಾಟಕ ಸರಕಾರ ಸಂವಿಧಾನ ವಿರುದ್ಧವಾಗಿ ಮೀಸಲು ನೀಡಲು ಮುಂದಾಗಿದೆ ಎಂದು ಕಿಡಿಕಾರಿದರು.

ಸಂವಿಧಾನಕ್ಕೆ ವಿರುದ್ಧ ಇರುವವರು, ಅಂಬೇಡ್ಕರ್‌ಚಿಂತನೆಗೆ ವಿರುದ್ಧ ಇರುವವರು ಮೀಸಲು ಕೊಡುತ್ತಾರೆ. ಇದನ್ನ ನಾವು ಖಂಡಿಸುತ್ತೇವೆ. ಜಿನ್ನಾನ ಸಮರ್ಥನೆ ಮಾಡುವವರು, ಪಾಕಿಸ್ತಾನ ಸಮರ್ಥನೆ ಮಾಡುವವರು ಮಾತ್ರ ಇದನ್ನ ಪ್ರಸ್ತಾಪಿಸುತ್ತಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಮಲ್ಟಿಪ್ಲೆಕ್ಸ್‌ಗಳಲ್ಲಿ ಏಕರೂಪ ದರ

ವಿಧಾನ ಪರಿಷತ್: ರಾಜ್ಯದಲ್ಲಿರುವ ಮಲ್ಟಿಪ್ಲೆಕ್ಸ್ ಚಿತ್ರ ಮಂದಿರಗಳಲ್ಲಿ ಏಕರೂಪದ ದರವನ್ನು ಅದಷ್ಟು ಶೀಘ್ರವಾಗಿ ಜಾರಿ ಮಾಡಲು ಕ್ರಮ ವಹಿಸಲಾಗುವುದು ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಭರವಸೆ ನೀಡಿದರು.

ಪ್ರಶ್ನೋತ್ತರ ಕಲಾಪದ ವೇಳೆ ವಿಧಾನ ಪರಿಷತ್ ಸದಸ್ಯ ಗೋವಿಂದರಾಜ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಮಾನ್ಯ ಸಚಿವರು, 2017– 18ನೇ ಸಾಲಿನ ಆಯವ್ಯಯದಲ್ಲಿ ಎಲ್ಲಾ ಚಿತ್ರ ಮಂದಿರಗಳನ್ನು ಏಕ ರೂಪದ ದರ ಜಾರಿ ಮಾಡಲು ಘೋಷಣೆ ಮಾಡಲಾಗಿತ್ತು. ಆಯವ್ಯಯದ ಘೋಷಣೆಯಂತೆ 2018, ಮೇ 11ರಂದು ಸರಕಾರದ ಆದೇಶವೂ ಸಹ ಆಗಿತ್ತು. ಆದರೆ ಆ ಸರಕಾರಿ ಆದೇಶಕ್ಕೆ ತಡೆಯಾಜ್ಞೆ ತಂದ ನಿಟ್ಟಿನಲ್ಲಿ ಆದೇಶವನ್ನು ವಾಪಸ್ಸು ತೆಗೆದುಕೊಳ್ಳಲಾಯಿತು. ಚಿತ್ರಮಂದಿರಗಳ ಟಿಕೆಟ್ ದರಗಳನ್ನು ಚಿತ್ರಮಮದಿರಗಳ ಮಾಲೀಕರೇ ನಿರ್ಧಾರ ಮಾಡುವ ಪದ್ಧತಿ ಜಾರಿಯಲ್ಲಿದೆ. ಮಲ್ಟಿಪ್ಲೆಕ್ಸ್ ಚಿತ್ರಮಂದಿಗಳ ಮಾಲಿಕರು ಚಿತ್ರ ಮಂದಿಗಳನ್ನು ವಾಣಿಜ್ಯ ಚಟುವಟಿಕೆಗಳಾಗಿ ರೂಪಿಸಿಕೊಂಡಿದ್ದಾರೆ. ಆವಶ್ಯವೆನಿಸಿದಲ್ಲಿ ದರ ನಿಗದಿ ಮಾಡುವ ಅಧಿಕಾರ ಸರಕಾರಕ್ಕೆ ಇದೆ. ಈ ಸಂಬಂಧ ಕೂಡಲೇ ಅಗತ್ಯ ನಿಯಮಗಳನ್ನು ರೂಪಿಸಿ ಎಲ್ಲಾ ಚಿತ್ರಮಂದಿರಗಳಲ್ಲಿ ಏಕರೂಪದ ದರ ಜಾರಿ ಮಾಡಲು ಆದಷ್ಟು ಬೇಗ ಕ್ರಮ ವಹಿಸಿ ಜಾರಿಗೊಳಿಸಲಾಗುವುದು ಎಂದು ಭರವಸೆ ನೀಡಿದರು

ಕೊಡವ ಹೆರಿಟೇಜ್ ಅಭಿವೃದ್ಧಿಗೆ ಒತ್ತು

ವಿಧಾನ ಪರಿಷತ್: ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಕೊಡವ ಹೆರಿಟೇಜ್ ಕೇಂದ್ರದ ಕಾಮಗಾರಿಯನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸಿ ಬರುವ ಆರ್ಥಿಕ ವರ್ಷದೊಳಗಾಗಿ ಪೂರ್ಣಗೊಳಿಸಲಾಗುವುದು ಎಂದು ಸಚಿವ ಎಚ್. ಕೆ. ಪಾಟೀಲ್ ತಿಳಿಸಿದರು.

ಕುಶಾಲಪ್ಪ ಎಂ.ಪಿ (ಸುಜಾ) ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು, 2013–14ನೇ ಸಾಲಿನಲ್ಲಿ ಕೊಡವ ಹೆರಿಟೇಜ್ ಕೇಂದ್ರದ ಕಾಮಗಾರಿಯನ್ನು 268.04 ಲಕ್ಷ ರು. ಅಂದಾಜು ವೆಚ್ಚದಲ್ಲಿ ಪ್ರಾರಂಭಿಸಲಾಯಿತು. ನಂತರ ಈ ಕಾಮಗಾರಿಯನ್ನು 330.45 ಲಕ್ಷ ರು.ಗಳಲ್ಲಿ ಮುಗಿಸಲು ಆಡಳಿತಾತ್ಮಕ ಅನುಮೋದನೆಯನ್ನು ಮಡೆದು ಕೊಂಡು 6 ಕಂತುಗಳಲ್ಲಿ ಹಣ ಬಿಡುಗಡೆ ಮಾಡಲಾಗಿದೆ. ಆದರೆ ಇನ್ನೂ ಈ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ ಎಂದರು.

ಸದರಿ ಕಾಮಗಾರಿಯನ್ನು ಪಿಪಿಪಿ ಮಾದರಿಯಲ್ಲಿ ಪೂರ್ಣಗೊಳಿಸಿ ನಿರ್ವಹಣೆ ಹಾಗೂ ಕಾರ್ಯಾಚರಣೆ ಮಾಡುವ ಬಗ್ಗೆ ಮಾರ್ಗದರ್ಶನ ಕೋರಿ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಕ್ರಮ

ವಿಧಾನ ಪರಿಷತ್: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಕೋರಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ಅವರು ಕೋರಿರುವ ವಿದ್ಯಾರ್ಥಿ ನಿಲಯಗಳಲ್ಲಿ ಅಥವಾ ಸಮೀಪದಲ್ಲಿರುವ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವ ಎನ್.ಎಸ್. ಬೋಸರಾಜು ಅವರು ತಿಳಿಸಿದರು.

ಸದಸ್ಯ ಡಿ.ಟಿ. ಶ್ರೀನಿವಾಸ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಒಟ್ಟು 270 ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿದ್ದು, 2024–25ನೇ ಸಾಲಿನಲ್ಲಿ 29867 ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗಿದ್ದು, ಒಟ್ಟಾರೆ 23,938 ಮಂಜೂರಾತಿ ಸಂಖ್ಯೆಗೆ ಎದುರಾಗಿ 5929 ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ಪ್ರವೇಶ ನೀಡಲಾಗಿರುತ್ತದೆ. 2024–25ನೇ ಸಾಲಿನ ಆಯವ್ಯಯ ಘೋಷಣೆಯಂತೆ ಭೋಜನಾ ವೆಚ್ಚದ ದರವನ್ನು ಮಾಸಿಕ ಪ್ರತಿ ವಿದ್ಯಾರ್ಥಿಗೆ 100 ರು. ರಂತೆ ಹೆಚ್ಚಿಸಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ 1750 ರು. ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ 1850 ರು. ದರಗಳಲ್ಲಿ ಉತ್ತಮ ಗುಣ ಮಟ್ಟದ ಆಹಾರ ನೀಡಲಾಗುತ್ತಿದೆ ಎಂದು ತಿಳಿಸಿದರು.

ಅನುಕೂಲ ತಕ್ಕಂತೆ ಚೆಕ್‌ಡ್ಯಾಮ್

ವಿಧಾನ ಪರಿಷತ್: ಎಲ್ಲೆಲ್ಲಿ ನೀರು ಪೋಲಾಗುತ್ತಿದೆಯೋ ಅಲ್ಲಿ ನೈಸರ್ಗಿಕಕ್ಕೆ ಅನುಕೂಲವಾಗುವಂತೆ ಚೆಕ್ ಡ್ಯಾಮ್‌ಗಳನ್ನು ನಿರ್ಮಾಣ ಮಾಡಲಾಗಿದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಅವರು ತಿಳಿಸಿದರು.

ಪರಿಷತ್ ಸದಸ್ಯೆ ಭಾರತಿ ಶೆಟ್ಟಿ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು, ಸಣ್ಣ ನಿರಾವರಿ ಇಲಾಖೆಯಿಂದ ಕೃಷಿ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಕೆರೆಗಳು, ಅಣೆಕಟ್ಟು, ಪಿಕಪ್, ಬಂದಾರ, ಚೆಕ್ ಡ್ಯಾಮ್, ಕಿಂಡಿ ಅಣೆಕಟ್ಟು, ಏತ ನೀರಾವರಿ ಯೋಜನೆ, ಕೆರೆಗಳಿಗೆ ನಿರು ತುಂಬಿಸುವ ಯೋಜನೆಗಳನ್ನು ಕರಾವಳಿ ಪ್ರದೇಶಗಳಲ್ಲಿ ಕೃಷಿ ಭೂಮಿಗೆ ಉಪ್ಪು ನೀರು ನುಗ್ಗುವುದನ್ನು ತಡೆಗಟ್ಟಲು ಕ್ಷಾರ ಭೂಮಿ ಯೋಜನೆ ಕೈಗೊಳ್ಳಲಾಗುತ್ತಿದೆ.

ಸದರಿ ಯೊಜನೆಗಳು ಅಂತರ್ಜಲ ಅಭಿವೃದ್ಧಿಗೆ ಪರೋಕ್ಷವಾಗಿ ಸಹಕಾರಿ. 2 ವರ್ಷಗಳಲ್ಲಿ 763 ಚೆಕ್ ಡ್ಯಾಮ್ ನಿರ್ಮಾಣ ಮಾಡಲಾಗಿದೆ. ಸದರಿ ಚೆಕ್ ಡ್ಯಾಮ್‌ಗಳಲ್ಲಿ 2424.10 ಎಂಸಿಎಫ್ ನೀರು ಸಂಗ್ರಹಿಸಲಾಗುತ್ತಿದೆ ಎಂದು ತಿಳಿಸಿದರು.

ವಿಶ್ವವಾಣಿ

ಸಂಪಾದಕೀಯ

ದರ ಏರಿಕೆಯೊಂದೇ ಪರಿಹಾರವಲ್ಲ

ಆಸ್ತಿ ತೆರಿಗೆ, ಬಸ್ ಮತ್ತು ಮೆಟ್ರೋ ಪ್ರಯಾಣ ದರವನ್ನು ಹೆಚ್ಚಿಸಿದ ಬೆನ್ನಿಗೇ ರಾಜ್ಯ ಸರಕಾರ ಹಾಲಿನ ದರವನ್ನು ಮತ್ತೊಮ್ಮೆ ಹೆಚ್ಚಿಸುವ ಸುಳಿವು ನೀಡಿದೆ. ಇದರ ಬೆನ್ನಿಗೇ ಆಟೋ ರಿಕ್ಷಾ ಸಂಘಟನೆಗಳು ದರವನ್ನು 2ನೇ ಬಾರಿಗೆ ಏರಿಸಲು ಪ್ರಸ್ತಾವನೆ ಸಲ್ಲಿಸಿವೆ. ನೀರಿನ ದರ ಹೆಚ್ಚಿಸುವುದು ಅನಿವಾರ್ಯ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಈಗಾಗಲೇ ತಿಳಿಸಿದ್ದಾರೆ. ಬೆಸ್ಕಾಂ ಸೇರಿದಂತೆ ಎಲ್ಲಾ ವಿದ್ಯುತ್ ಪ್ರಸರಣ ನಿಗಮಗಳು ವಿದ್ಯುತ್ ದರ ಏರಿಕೆ ಸಂಬಂಧ ವಿದ್ಯುತ್ ನಿಯಂತ್ರಣ ಆಯೋಗದ ಮುಂದೆ ಅಹವಾಲು ಸಲ್ಲಿಸಿವೆ. ಆಯೋಗ ತನ್ನ ನಿರ್ಧಾರ ಪ್ರಕಟಿಸುವ ಮುನ್ನವೇ ಬೆಸ್ಕಾಂ ಹೊಸದಾಗಿ ಮನೆ ಕಟ್ಟುವವರಿಗೆ ಕಡ್ಡಾಯ ಗೊಳಿಸಲಾಗಿರುವ ತಾತ್ಕಾಲಿಕ ಸ್ಮಾರ್ಟ್ ಮೀಟರ್‌ನ ಠೇವಣಿ ಮತ್ತು ವಿದ್ಯುತ್ ದರವನ್ನು 900ರು.ಗಳಿಂದ 5 ಸಾವಿರ ರು.ಗಳ ತನಕ ಏರಿಸಿದೆ. ಒಟ್ಟಾರೆಯಾಗಿ ಬಜೆಟ್ ಮಂಡನೆಗೆ ಮುನ್ನವೇ ರಾಜ್ಯದಲ್ಲಿ ಬೆಲೆ ಏರಿಕೆ ಜಮಾನಾ ಆರಂಭವಾಗಿದೆ. ರಾಜ್ಯ ಸರಕಾರ 2023ರ ಜುಲೈನಲ್ಲಿ ಹಾಲಿನ ದರವನ್ನು 3 ರು.ಗಳಷ್ಟು ಹೆಚ್ಚಿಸಿತ್ತು. 2024ರ ಜೂನ್‌ನಲ್ಲಿ ಈ ದರವನ್ನು ಮತ್ತೆ 2 ರು. ಹೆಚ್ಚಿಸಲಾಗಿತ್ತು. ಇದೀಗ ಮತ್ತೆ ಹಾಲು ಉತ್ಪಾದಕರ ಹಿತದೃಷ್ಟಿಯಿಂದ ಏರಿಕೆ ಅನಿವಾರ್ಯ ಎಂದು ಕೆಎಂಎಫ್ ಹೇಳಿಕೊಂಡಿದೆ. ಹೈನುಗಾರರ ಹೆಸರಿನಲ್ಲಿ ದರ ಏರಿಕೆ ಪ್ರಸ್ತಾಪ ಮುಂದಿಟ್ಟಿರುವ ಸರಕಾರ 6 ತಿಂಗಳಿನಿಂದ 656 ಕೋಟಿ ರು. ಪ್ರೋತ್ಸಾಹ ಧನವನ್ನು ಬಾಕಿ ಉಳಿಸಿಕೊಂಡಿದೆ. ಈ ಹಿಂದೆ ದರ ಏರಿಕೆಯ ಬಳಿಕವೂ ರೈತರಿಗೆ ಏರಿಕೆ ಹಣದ ಪೂರ್ತಿ ಲಾಭ ವರ್ಗಾವಣೆಯಾಗಿರಲಿಲ್ಲ. ನಂದಿನಿ ಉತ್ಪನ್ನಗಳಿಗೆ ಹೊರರಾಜ್ಯಗಳಿಂದಲೂ ಬೇಡಿಕೆ ಇದೆ. ಈ ಬೇಡಿಕೆಯನ್ನು ಬಳಸಿಕೊಂಡು ಹಾಲು ಒಕ್ಕೂಟವನ್ನು ಲಾಭದತ್ತ ಒಯ್ಯುವ ಪ್ರಯತ್ನವಾಗ ಬೇಕೇ ಹೊರತು ನಷ್ಟದ ವಿಚಾರವನ್ನು ಮುಂದಿಟ್ಟು ಏಳೆಂಟು ತಿಂಗಳಿಗೊಮ್ಮೆ ಹಾಲಿನ ದರವನ್ನು ಏರಿಸುವುದು ಸಲ್ಲ. ರಾಜಕೀಯ ನಾಯಕರ ಹಸ್ತಕ್ಷೇಪ ದಿಂದ ಎಲ್ಲ ಒಕ್ಕೂಟಗಳಲ್ಲೂ ಅಗತ್ಯಕ್ಕಿಂತ ಹೆಚ್ಚು ಸಿಬ್ಬಂದಿಗಳನ್ನು ನೇಮಿಸಿ ಕೊಳ್ಳಲಾಗಿದೆ. ಅಲ್ಲಲ್ಲ ಹಗರಣಗಳ ದೂರುಗಳಿವೆ. ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ನಿಯಂತ್ರಣದಲ್ಲಿಡುವುದು ಸರಕಾರದ ಕರ್ತವ್ಯ. ಇದಕ್ಕೆ ಬೇಕಿರುವುದು ದಕ್ಷ ಆಡಳಿತ. ಕೆಎಂಎಫ್ ಈ ನಿಟ್ಟಿನಲ್ಲಿ ಯೋಚಿಸಬೇಕಾಗಿದೆ.

ಸೊಂಪಾದಕೀಯ

ಇವರದ್ದು 'ಚಿನ್ನ ಚಿನ್ನ' ಆಸೈ

ಕನ್ನಡದ ಚಿತ್ರನಟಿ ರನ್ಯಾ ರಾವ್ ಈಗ ಜೈಲಿನಲ್ಲಿ ಕಂಬಿ ಎಣಿಸಲು ಸಿದ್ಧರಾಗಿದ್ದಾಳೆ. ಗೋಲ್ಡ್ ಸ್ಮಗ್ಲಿಂಗ್ ವಿಷಯದಲ್ಲಿ ಈ ನಟಿ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾಳೆ. ಪ್ರವಾಸದ ನೆಪದಲ್ಲಿ ಆಗಾಗ ದುಬೈಗೆ ಹೋಗಿಬರುತ್ತಿದ್ದ ಈಕೆ ಅಲ್ಲಿಂದ ಅಕ್ರಮವಾಗಿ ಚಿನ್ನ ತರುತ್ತಿದ್ದಳಂತೆ. ಡಿಜಿಪಿ ಒಬ್ಬರ ಮಲಮಗಳಾಗಿರೋ ಈಕೆ ತನ್ನ ತಂದೆಯ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಚಿನ್ನದ ಸಾಗಣೆ ಮಾಡುತ್ತಿದ್ದಳಂತೆ. ಪ್ರತಿ ಬಾರಿ ತಂದೆಯ ಪೊಲೀಸ್ ವಾಹನವನ್ನು ಏರ್‌ಪೋರ್ಟ್‌ಗೆ ಕರೆಸಿಕೊಂಡು ತನ್ನ ಚಿನ್ನವನ್ನು ಸೇಫ್ ಆಗಿ ಮನೆ ತಲುಪಿಸುತ್ತಿದ್ದ ಈಕೆ ಈಗ ಸಿಕ್ಕಿಬಿದ್ದಿದ್ದಾಳೆ. ಇದುವರೆಗೆ ಸುಮಾರು 17 ಕೋಟಿ ರು. ಮೌಲ್ಯದ ಚಿನ್ನ ಮತ್ತು 2 ಕೋಟಿ ರು. ದಾಖಲೆ ಇಲ್ಲದ ನಗದು ಹಣವನ್ನು ಈಕೆಯಿಂದ ವಶಪಡಿಸಿಕೊಳ್ಳಲಾಗಿದೆ. ಅಂದಹಾಗೆ ಈಕೆ ಕನ್ನಡದ ಸ್ಟಾರ್ ನಟ ಸುದೀಪ್ ಅವರ 'ಮಾಣಿಕ್ಯ' ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಿದ್ದಳು. ಪಾಪ, ಮಾಣಿಕ್ಯ ಹೆಸರಿನ ಸಿನಿಮಾದಲ್ಲಿ ನಟಿಸಿದ ಮೇಲೆ ಅಟ್‌ಲೀಸ್ಟ್ ಚಿನ್ನವನ್ನಾದ್ರೂ ಕಳ್ಳ ಸಾಗಣೆ ಮಾಡಬೇಕು ಅನ್ನೋದು ಈಕೆಯ ಇರಾದೆಯೋ ಏನೋ ಗೊತ್ತಿಲ್ಲ. ಇತ್ತೀಚಿನ 1 ವರ್ಷದಲ್ಲಿ ಈಕೆ 30 ಬಾರಿ ದುಬೈಗೆ ಪ್ರವಾಸ ಕೈಗೊಂಡಿದ್ದಳಂತೆ. ಆದರೆ ಚಿತ್ರನಟಿ ಅಂದಮೇಲೆ ದುಬೈ, ಮಾಲ್ಡೀವ್ಸ್ ಅಂತ ತಿರುಗಾಡೋದು ಕಾಮನ್ ಅಂತ ಪೊಲೀಸರು ಸುಮ್ಮನಾಗಿದ್ದಾರೆ. ಅದನ್ನೇ ಬಂಡವಾಳವನ್ನಾಗಿಸಿಕೊಂಡ ಈಕೆ ಅಲ್ಲಿಂದ ಸಾಕಷ್ಟು ಚಿನ್ನದ ರೂಪದ ಬಂಡವಾಳವನ್ನು ಹೊತ್ತು ತಂದಿದ್ದಾಳೆ. ಈಗ ಈಕೆಗೆ ಚಿನ್ನದ ಮೇಲಿರುವ ಚಿನ್ನ ಚಿನ್ನ ಆಸೈ ಈಕೆಯನ್ನು ಕಬ್ಬಿಣದ ಸರಳುಗಳ ಹಿಂದೆ ಹೋಗುವಂತೆ ಮಾಡಿದೆ. ಅಲ್ಲದೆ ಅಕ್ರಮ ಹಣಕಾಸು ವರ್ಗಾವಣೆ ವಿಷಯದಲ್ಲಿ 'ಇ.ಡಿ.' ಕೂಡಾ ಈಕೆಯ ವಿರುದ್ಧ ತನಿಖೆ ಮಾಡುತ್ತಿದೆ. ಈಗ ಈಕೆಯ ಮಲತಂದೆ ಕೂಡಾ 'ನನಗೂ ಇದಕ್ಕೂ ಸಂಬಂಧ ಇಲ್ಲ' ಅಂತ ಹೇಳಿ ಕೈ ತೊಳೆದುಕೊಂಡಿದ್ದಾರೆ. ಈಕೆಗೆ ಇತ್ತೀಚೆಗೆ ಮದುವೆ ಆಗಿತ್ತು. ಅದಾದ ನಂತರ ನಮ್ಮ ಸಂಪರ್ಕದಲ್ಲಿ ಇಲ್ಲ ಎಂದಿದ್ದಾರೆ ಈಕೆಯ ತಂದೆ. ಹಾಗಾಗಿ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಅಂತ ಹೇಳಿ ಅಪ್ಪ ಅನಿಸಿಕೊಂಡ ಮಲತಂದೆ ಜಾರಿಕೊಂಡಿದ್ದಾರೆ. ಆದರೆ ಅಪ್ಪ ಜಾರಿಕೊಂಡರೆ ಜಾರಿ ನಿರ್ದೇಶನಾಲಯ ಸುಮ್ಮನೇ ಇರುತ್ತದೆಯೇ. ಹಾಗಾಗಿ ಈಕೆಯ ವಿರುದ್ಧ ತನಿಖೆ ಶುರು ಆಗಿದೆ.

ಸಂಪಾದಕರ ಸದ್ಯಶೋಧನೆ

ಗುರುವಿನ ಅಗತ್ಯ

ಇತ್ತೀಚೆಗೆ ನಾನು ವಿಮಾನ ನಿಲ್ದಾಣದ ಪುಸ್ತಕದ ಅಂಗಡಿಯಲ್ಲಿ ಒಂದು ಪುಸ್ತಕವನ್ನು ಖರೀದಿಸಿ, ವಿಮಾನ ಪ್ರಯಾಣದುದ್ದಕ್ಕೂ ಅದನ್ನು ಓದುತ್ತಿದ್ದೆ. ರಾಧಾಕೃಷ್ಣ ಪಿಳ್ಳೈ ಅವರು ಬರೆದ Chanakya In Daily Life ಎಂಬುದು ಕೃತಿಯ ಶೀರ್ಷಿಕೆ. ಚಾಣಕ್ಯನ ನೀತಿ ಮತ್ತು ಸಿದ್ಧಾಂತ ದೈನಂದಿನ ಜೀವನದಲ್ಲಿ ಎಷ್ಟು ಪ್ರಸ್ತುತ ಮತ್ತು ದಿನನಿತ್ಯ ಅವನ್ನು ಹೇಗೆ ಸಮರ್ಪಕವಾಗಿ ಬಳಸಬಹುದು ಎಂಬುದನ್ನು ಲೇಖಕರು ಈ ಪುಸ್ತಕದಲ್ಲಿ ವಿವರಿಸಿದ್ದಾರೆ. ವೈಯಕ್ತಿಕ ತರಬೇತುದಾರನ ಪರಿಕಲ್ಪನೆಯು ಕ್ರೀಡಾ ಕ್ಷೇತ್ರದಲ್ಲಿ ಸಾಮಾನ್ಯವಾಗಿದೆ. ಯಾವುದೇ ಯಶಸ್ವಿ ಕ್ರೀಡಾಪಟುವಿಗೆ ಅವನ/ಅವಳ ವೈಯಕ್ತಿಕ ತರಬೇತುದಾರನ ಪ್ರಾಮುಖ್ಯವೇನು ಎಂಬುದು ಗೊತ್ತು. ನೀವು ಜಿಮ್‌ಗೆ ಹೋದರೆ, ವೈಯಕ್ತಿಕ ತರಬೇತುದಾರರು ನಿಮ್ಮ ಪ್ರಗತಿಯನ್ನು ವೇಗಗೊಳಿಸಲು ಸಹಾಯ ಮಾಡಬಹುದು. ನಿಮ್ಮ ನಿರ್ದಿಷ್ಟ ಅವಶ್ಯಕತೆಗೆ ಅನುಗುಣವಾಗಿ ಅವರು ನಿಮಗೆ ಮಾರ್ಗದರ್ಶನ ನೀಡು ತ್ತಾರೆ. ಅದೇ ರೀತಿಯಲ್ಲಿ, ಎಲ್ಲಾ ಕ್ಷೇತ್ರಗಳಲ್ಲಿ ತರಬೇತುದಾರರು, ಮಾರ್ಗ ದರ್ಶಕರು ಮತ್ತು ಸಹಾಯಕರು ಇದ್ದಾರೆ. ಭಾರತದಲ್ಲಿ, ಅಂಥ ಶಿಕ್ಷಕರು, ತಜ್ಞರು ಮತ್ತು ಮಾರ್ಗದರ್ಶಕರನ್ನು ಗುರುಗಳು ಎಂದು ಕರೆಯುತ್ತಾರೆ. ವ್ಯಾಪಾರ ತರಬೇತುದಾರರು, ರಾಜಕೀಯ ಮಾರ್ಗದರ್ಶಕರು ಮತ್ತು ತಾಂತ್ರಿಕ ಸಲಹೆಗಾರರು ಇದ್ದಾರೆ. ಭಾರತದಲ್ಲಿ ನಮಗೆ ಆಧ್ಯಾತ್ಮಿಕ ಗುರುಗಳೂ ಇದ್ದಾರೆ. ಹಾಗಾದರೆ ಈ ಜನರ ಪಾತ್ರವೇನು? ಪ್ರತಿ ಹಂತ ದಲ್ಲೂ ನಿಮಗೆ ಸಹಾಯ ಮಾಡಲು ಮತ್ತು ಮಾರ್ಗದರ್ಶನ ನೀಡಲು ಇವರು ಬೇಕು. ಚಂದ್ರಗುಪ್ತ ಮೌರ್ಯ ಚಾಣಕ್ಯನಿಂದ ವೈಯಕ್ತಿಕ ಮಾರ್ಗದರ್ಶನವನ್ನು ಪಡೆಯದಿದ್ದರೆ, ಅವನು ಭಾರತದ ಶ್ರೇಷ್ಠ ಚಕ್ರವರ್ತಿಗಳಲ್ಲಿ ಒಬ್ಬನಾಗುತ್ತಿರಲಿಲ್ಲ. ಹಾಗಾದರೆ ಪ್ರಶ್ನೆಯೆಂದರೆ, ನಿಮ್ಮ ವೈಯಕ್ತಿಕ ಗುರುವನ್ನು ನೀವು ಹೇಗೆ ಕಂಡುಹಿಡಿಯುತ್ತೀರಿ? ಈ ಗುರುಗಳ ಬಗ್ಗೆ ಚಾಣಕ್ಯ ಹೇಳಿದ ಮಾತುಗಳಿಂದ ಆರಂಭಿಸೋಣ. ಒಬ್ಬ ರಾಜನು ರಾಜನಾಗುತ್ತಾನೆ, ಏಕೆಂದರೆ ಅವನು ಗುರುವಿನ ಮಾರ್ಗದರ್ಶನಕ್ಕೆ ಬದ್ಧನಾಗಿರುತ್ತಾನೆ. ಒಬ್ಬ ರಾಜನ ಸ್ವಂತ ಮಗು ಸಿಂಹಾಸನವನ್ನೇರಲು ಅರ್ಹನಾದರೆ, ಅವನಿಗೆ ರಾಜ, ನೀತಿ ವಿಜ್ಞಾನದಲ್ಲಿ ತರಬೇತಿ ನೀಡಲು ತಜ್ಞರನ್ನು ನೇಮಿಸುತ್ತಾನೆ. ಅದೇ ರೀತಿ, ಇಂದಿನ ಜಗತ್ತಿನಲ್ಲಿ, ಮಗು ಕಲಿಯಲು ಸಿದ್ಧವಾದಾಗ, ಪೋಷಕರು ಅವನಿಗೆ ಉತ್ತಮ ಶಿಕ್ಷಣ, ಉತ್ತಮ ಶಾಲೆ ಮತ್ತು ಅಗತ್ಯವಿದ್ದರೆ ಖಾಸಗಿ ಕೋಚಿಂಗ್ ತರಗತಿಗಳನ್ನು ಒದಗಿಸಲು ಪ್ರಯತ್ನಿಸುತ್ತಾರೆ. ಅಲ್ಲದೆ, ಮಗುವಿಗೆ ಕ್ರೀಡೆ, ವಿದೇಶಿ ಭಾಷೆಗಳು, ಕಲೆಗಳು ಮುಂತಾದ ಇತರ ಕ್ಷೇತ್ರಗಳಲ್ಲಿ ಆಸಕ್ತಿ ಇದ್ದಾಗ, ಅವುಗಳನ್ನು ಕಲಿಯಲು ಸಂಬಂಧಿತ ಸಂಸ್ಥೆಗಳಿಗೆ ಕಳುಹಿಸಲಾಗುತ್ತದೆ. ಏನೇ ಇರಲಿ, ನಮ್ಮಲ್ಲಿ ಉತ್ತಮ ಮಾರ್ಗದರ್ಶಕ, ತರಬೇತಿದಾರ, ಗುರುವಿರುವುದು ಬಹಳ ಮುಖ್ಯ ಎಂದು ಚಾಣಕ್ಯ ಹೇಳುತ್ತಾನೆ. ನಮ್ಮ ವೃತ್ತಿಜೀವನಕ್ಕಾಗಿ ನಾವು ಆಯ್ಕೆ ಮಾಡಿದ ನಿರ್ದಿಷ್ಟ ಕ್ಷೇತ್ರವಿದ್ದರೂ, ನಾವೆಲ್ಲರೂ ಏಕಕಾಲದಲ್ಲಿ ಇತರ ಕ್ಷೇತ್ರಗಳಿಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಬಯಸುತ್ತೇವೆ. ಏಕೆಂದರೆ ನಮ್ಮ ಕೆಲಸದ ಹೊರತಾಗಿ, ನಮ್ಮ ಇತರ ಸಮಯವನ್ನು ಕಳೆಯಲು ಇಷ್ಟಪಡುವ ಆಸಕ್ತಿಯ ವಿಷಯಗಳನ್ನು ಕಲಿಯಲು ಹಂಬಲಿಸುತ್ತೇವೆ. ನೀವು ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿ ಯರ್ ಆಗಿದ್ದರೆ, ಅದು ನಿಮ್ಮ ಕೆಲಸದ ಕ್ಷೇತ್ರವಾಗಿದೆ. ಆದರೆ ಅದರ ಹೊರತಾಗಿ, ನೀವು ಈಜು, ಪಿಯಾನೋ ನುಡಿಸುವಿಕೆ ಅಥವಾ ಟ್ರೆಕಿಂಗ್‌ನಲ್ಲಿ ಆಸಕ್ತಿ ಹೊಂದಿರಬಹುದು. ನೀವು ಪ್ರವೇಶಿಸುವ ಪ್ರತಿಯೊಂದು ಕ್ಷೇತ್ರದಲ್ಲೂ ನೀವು ಸಾಧಕರಾಗಲು ಯೋಚಿಸಬೇಕು. ಆದ್ದರಿಂದ, ನೀವು ಸಾಫ್ಟ್‌ವೇರ್ ಎಂಜಿನಿಯರ್ ಆಗಿ ನಿಮ್ಮ ವೃತ್ತಿಜೀವನವನ್ನು ಪ್ರಾರಂಭಿಸುತ್ತಿದ್ದರೆ, ಒಳ್ಳೆಯದೇ. ಆದರೆ ಅಷ್ಟಕ್ಕೇ ಸಂತೃಪ್ತರಾಗಬಾರದು. ಪಿಯಾನೋವಾದಕರಾಗಿ ತರಬೇತಿ ಪಡೆದರೆ, ಅಷ್ಟಕ್ಕೇ ಸುಮ್ಮನಾಗಬಾರದು. ಅಲ್ಲಿಯೂ ಶ್ರೇಷ್ಠತೆ ಪಡೆಯಲು ಶ್ರಮಿಸಬೇಕು. ಸಾಫ್ಟ್‌ವೇರ್ ಕೆಲಸದ ಮಧ್ಯೆ ಟ್ರೆಕಿಂಗ್ ಅಭಿರುಚಿ ಹೊಂದಿದ್ದರೆ, ಮೌಂಟ್ ಎವರೆಸ್ಟ್ ಏರುವ ಬಗ್ಗೆಯೂ ಕನಸು ಕಾಣಬೇಕು.

ನಮ್ಮ ತಲೆ ಹಿಂದಿಗಿಂತ ದೊಡ್ಡದಾಗುತ್ತಿದೆಯೇ?

ರೂಪಾಂತರ-ಮ್ಯುಟೇಷನ್ ಎಂಬ ಶಬ್ದಗಳನ್ನು ಅಜೀರ್ಣವಾಗುವಷ್ಟು ಕೇಳುತ್ತಲೇ ಇದ್ದೇವೆ. ವೈರಸ್‌ನಿಂದ ಹಿಡಿದು ಸಕಲ ಜೀವವೂ ರೂಪಾಂತರ ಹೊಂದಲೇಬೇಕು. ಆದರೆ ಈಗ ಬಂದಿರುವ ಪ್ರಶ್ನೆ ಮನುಷ್ಯ ಇಂದಿಗೂ ರೂಪಾಂತರವಾಗುತ್ತಿದ್ದಾನೆಯೇ? ರೂಪಾಂತರ ಎನ್ನುವುದು ಜೀವಿಗಳ ಸ್ಪರ್ಧೆಯಲ್ಲಿ ಆಗುವ ಬದಲಾವಣೆ ಅಥವಾ ಹೊಂದಾಣಿಕೆ. ಬ್ಯಾಕ್ಟೀರಿಯಾ ಆ್ಯಂಟಿಬಾಡಿ ರೆಸಿಸ್ಟನ್ಸ್ ಹೊಂದುವುದರಿಂದ ಹಿಡಿದು ಹಮ್ಮಿಂಗ್ ಹಕ್ಕಿಯ ಚುಂಚು ಉದ್ದವಾಗುವವರೆಗೆ ಎಲ್ಲವೂ ರೂಪಾಂತರಗಳೇ. ಅವೆಲ್ಲ ಅವುಗಳ ಉಳಿವಿನ ಪ್ರಶ್ನೆಯಿಂದಾಗಿ ಆದ ಬದಲಾವಣೆಗಳು.

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಇಂದಿಗೂ ಬಹುದೊಡ್ಡ ವರ್ಗಕ್ಕೆ, ಡಾರ್ವಿನ್‌ನ ವಿಕಾಸವಾದವನ್ನು ಅತ್ತ ಸಂಪೂರ್ಣ ಒಪ್ಪಲಿಕ್ಕೂ ಆಗುವುದಿಲ್ಲ- ಇತ್ತ ಬಿಡಲಿಕ್ಕೂ ಪೂರ್ಣ ಸಾಧ್ಯವಿಲ್ಲ. ಆತನ ವಾದದಲ್ಲಿ ಒಂದಿಷ್ಟು ಪ್ರಶ್ನೆಗಳಿಗೆ ಉತ್ತರ ಸರಿ ಹೊಂದಿದರೆ ಇನ್ನೊಂದಿಷ್ಟಕ್ಕೆ ತಾಳ-ಮೇಳವಾಗುವುದೇ ಇಲ್ಲ ಎಂಬ ವಾದ. ಅದೆಷ್ಟೋ ಬಾರಿ ಅನ್ನಿಸಿದ್ದಿದೆ- ಇದನ್ನೆಲ್ಲಾ ಕಟ್ಟಿಕೊಂಡು ಆಗಬೇಕಾದದ್ದೇನಿದೆ ಅಂತ. ಸನಾತನ ಧರ್ಮವೂ ಅಂಥದ್ದಕ್ಕೆಲ್ಲ ಅಷ್ಟು ತಲೆಕೆಡಿಸಿಕೊಂಡಿಲ್ಲ. ಆದರೆ ಡಾರ್ವಿನ್‌ನ ಆ ವಾದ ಅಂದು ಇಡೀ ಕ್ರಿಶ್ಚಿಯನ್ ರಿಲೀಜಿಯನ್‌ನ ನೆಲಗಟ್ಟನ್ನೇ ಅಲುಗಿಸಿತ್ತು- ಇದು ನಿಮಗೆ ಗೊತ್ತಿರುವ ವಿಚಾರ. ಇಂದಿಗೂ ಆತನ ವಿಕಾಸವಾದವನ್ನು ಧಾರ್ಮಿಕ ಕಾರಣಗಳಿಗೆ ಒಪ್ಪದಿರುವ ಒಂದು ಬಹುದೊಡ್ಡ ಪಾಶ್ಚಾತ್ಯ ಪಡೆ ಉಳಿದುಕೊಂಡಿದೆ. ಆತನನ್ನು ಒಪ್ಪಿಬಿಟ್ಟರೆ ಅವರ ಧರ್ಮದ ನೆಲೆಯನ್ನೇ ಪ್ರಶ್ನಿಸಿದಂತೆ. ಡಾರ್ವಿನ್‌ನ ವಾದವನ್ನು ತಿರಸ್ಕರಿಸಲೆಂದೇ ಇಂದಿಗೂ ನೂರಾರು ಜಾಗತಿಕ ವಿಚಾರ ವೇದಿಕೆಗಳು ಚರ್ಚೆಗಳನ್ನು ಏರ್ಪಡಿಸುತ್ತವೆ. ಅಲ್ಲಿನವರು ಅದನ್ನು ಪ್ರಶ್ನಿಸುವ ಲೇಖನಗಳನ್ನು ಬಹು ಪ್ರತಿಷ್ಠಿತ ಪತ್ರಿಕೆಗಳಲ್ಲಿ (ನ್ಯೂಯಾರ್ಕ್ ಟೈಮ್ಸ್ ಆದಿಯಾಗಿ) ಬರೆಯುತ್ತಾರೆ. ನಿರಂತರ ಟಿವಿ ಕಾರ್ಯಕ್ರಮಗಳಾಗುತ್ತವೆ. ಅದೆಷ್ಟೋ ಡಾಕ್ಯುಮೆಂಟರಿಗಳು ನಿರ್ಮಾಣವಾಗಿವೆ. ಅಲ್ಲೆಲ್ಲಿಯೂ ಧಾರ್ಮಿಕ ವಿಚಾರಗಳನ್ನು ಒಳತರದ ನಾಜೂಕುತನವನ್ನು ಪಾಲಿಸುವುದಿದೆ. ಅವರು creationist ಗಳು. ಅಬ್ರಾಹಮಿಕ್ ರಿಲಿಜಿಯನ್ನುಗಳದ್ದೆಲ್ಲ creationism ವಾದಗಳೇ. ದೇವರು ಭೂಮಿ ಮತ್ತು ಸ್ವರ್ಗವನ್ನು ಅದೊಂದು ಮುಹೂರ್ತದಲ್ಲಿ ಸೃಷ್ಟಿಸಿದ ಎಂಬ ವಾದ, ನಂಬಿಕೆ. ಇಂಥ ಕ್ರಿಯೇಶನಿಸ್ಟ್‌ಗಳ ಒಂದು ವಿಚಾರ ವೇದಿಕೆಯಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತ್ತು. ಹತ್ತೆಂಟು ರೀತಿಯ ನಮೂನಾ ವಾದಗಳು. ಒಬ್ಬ ಎದ್ದು ನಿಂತು, ''1960ರಲ್ಲಿ ನಾಸಾ ಸಂಸ್ಥೆಯ ವಿಜ್ಞಾನಿ ಸೂಪರ್ ಕಂಪ್ಯೂಟರ್‌ಗಳನ್ನು ಬಳಸಿ ಸಾವಿರಾರು ವರ್ಷದ ಹಿಂದಿನ ಗ್ರಹಗಳ ಕಕ್ಷೆಯನ್ನು ಕಂಪ್ಯೂಟರ್‌ನಲ್ಲಿ ಮರುಸೃಷ್ಟಿ ಮಾಡುತ್ತಿದ್ದನಂತೆ. ಆಗ ಕಂಪ್ಯೂಟರ್‌ನಲ್ಲಿ ಒಂದು ದೋಷ ಸಂದೇಶ ಕಾಣಿಸಿಕೊಂಡಿತಂತೆ. ಅದರ ಪ್ರಕಾರ ಅದೆಷ್ಟೋ ಸಾವಿರ ವರ್ಷದ ಹಿಂದೆ ಒಂದು ಇಡೀ ದಿನ ಅಲ್ಲಿ ಮಿಸ್ಸಿಂಗ್ ಇತ್ತಂತೆ. ತಕ್ಷಣ ಜೋಶುವಾ ಪುಸ್ತಕದ ಅಧ್ಯಾಯ 10ನ್ನು ಅಲ್ಲಿ ಉಲ್ಲೇಖಿಸಿ, ಅಂದಿನಿಂದ ಇಂದಿನವರೆಗೂ ನಾಸಾ ಕೂಡ ವಿಕಾಸವಾದವನ್ನು ಒಪ್ಪುವುದಿಲ್ಲ'' ಎಂಬ ವಿಸ್ತಾರವಾದ ವಾದವನ್ನು ಮುಂದಿಟ್ಟಿದ್ದ. ಇದೊಂದು ಸಾಂಪಲ್ ಅಷ್ಟೇ. ಅಲ್ಲಿ ಬೆರಳೆಣಿಕೆಯಷ್ಟು ಮಂದಿ ವಿಕಾಸವಾದವನ್ನು ತೀರಾ ಕರಾರುವಾಕ್ಕಾಗಿ ಜಿಜ್ಞಾಸೆಗೆ ಒಳಪಡಿಸಿದ್ದರು. ಅದು ಬಿಟ್ಟರೆ ಉಳಿದವರದ್ದೆಲ್ಲ ಇಂಥ ಎಡಬಿಡಂಗಿ ವಾದಗಳು. ಈ ಸೃಷ್ಟಿವಾದವನ್ನು ನಂಬುವ ವರ್ಗ ತೀರಾ ದೊಡ್ಡದು. ಇವ ರ್ಯಾರೂ ಅಮೀಬಾ, ವೈರಸ್ ಮೊದಲಾದ ಸೂಕ್ಷ್ಮಜೀವಿಗಳಿಂದ ವಿಕಾಸವಾಗಿ ಆಗಿ ಮನುಷ್ಯನವರೆಗೆ ಬಂದಿದ್ದೇವೆ ಎಂಬುದನ್ನು ಒಪ್ಪುವಂತಿಲ್ಲ, ಒಪ್ಪಿದಾಕ್ಷಣ ಅಲ್ಲೊಂದು ಧಾರ್ಮಿಕ ನೆಲಗಟ್ಟು ಬುಡಮೇಲಾಗುತ್ತದೆ.

ಮಂಗನಿಂದ ಮನುಷ್ಯನಾದನೋ ಇಲ್ಲವೋ- ಅದು ಬಿಡಿ. ಅದನ್ನು ಯಾವತ್ತೂ ಪ್ರಶ್ನಾರ್ಥಕವಾಗಿ ನೋಡುವುದೇ ಸರಿ. ವಿಕಾಸವಾದವನ್ನು ನೀವು ಒಪ್ಪಿ ಅಥವಾ ಬಿಡಿ, ಆದರೆ ರೂಪಾಂತರವನ್ನಂತೂ ತಳ್ಳಿಹಾಕುವಂತಿಲ್ಲ. ಇವತ್ತು ರೂಪಾಂತರವೆಂದರೆ ಏನು ಎಂದು ಎಲ್ಲರಿಗೂ ಗೊತ್ತಿದೆ; ಕರೋನಾ ಬಂದ ನಂತರವಂತೂ ರೂಪಾಂತರ-ಮ್ಯುಟೇಷನ್ ಎಂಬ ಶಬ್ದಗಳನ್ನು ಅಜೀರ್ಣವಾಗುವಷ್ಟು ಕೇಳುತ್ತಲೇ ಇದ್ದೇವೆ. ವೈರಸ್‌ನಿಂದ ಹಿಡಿದು ಸಕಲ ಜೀವವೂ ರೂಪಾಂತರ ಹೊಂದಲೇಬೇಕು. ಆದರೆ ಈಗ ಬಂದಿರುವ ಪ್ರಶ್ನೆ ಮನುಷ್ಯ ಇಂದಿಗೂ ರೂಪಾಂತರವಾಗುತ್ತಿದ್ದಾನೆಯೇ? ರೂಪಾಂತರ ಎನ್ನುವುದು ಜೀವಿಗಳ ಸ್ಪರ್ಧೆಯಲ್ಲಿ ಆಗುವ ಬದಲಾವಣೆ ಅಥವಾ ಹೊಂದಾಣಿಕೆ. ಬ್ಯಾಕ್ಟೀರಿಯಾ ಆ್ಯಂಟಿಬಾಡಿ ರೆಸಿಸ್ಟನ್ಸ್ ಹೊಂದುವುದರಿಂದ ಹಿಡಿದು ಹಮ್ಮಿಂಗ್ ಹಕ್ಕಿಯ ಚುಂಚು ಉದ್ದವಾಗುವವರೆಗೆ ಎಲ್ಲವೂ ರೂಪಾಂತರಗಳೇ. ಅವೆಲ್ಲ ಅವುಗಳ ಉಳಿವಿನ ಪ್ರಶ್ನೆಯಿಂದಾಗಿ ಆದ ಬದಲಾವಣೆಗಳು. ಅದಕ್ಕೆ ಅದೆಷ್ಟೋ ವರ್ಷಗಳು ತಗುಲಿವೆ. ಮಧು ಹೀರುವ ಹಕ್ಕಿಯ ಚುಂಚಿನ ಉದ್ದ ಆಯಾ ಜಾಗದಲ್ಲಿನ ಹೂವಿನ ಗಾತ್ರಕ್ಕನುಗುಣವಾದದ್ದು. ಹೀಗೆ- ಇವೆಲ್ಲ ಅವುಗಳ ಬದುಕಿನ ಅವಶ್ಯಕತೆಗಳು. ಆದರೆ ಮನುಷ್ಯನಿಗೆ ಈಗಿನ ದಿನದಲ್ಲಂತೂ ಏನಂದರೆ ಏನೂ ಬದಲಾಗಬೇಕಾದ- ಬದಲಿಸಿಕೊಂಡು ಬದುಕಬೇಕಾದ ದರ್ದು ಇಲ್ಲ. ಹಾಗಾದರೆ ಇಂದು ನಮ್ಮ ರೂಪಾಂತರ ಸಂಪೂರ್ಣ ನಿಂತಿದೆಯೇ ಎನ್ನುವ ಪ್ರಶ್ನೆ. ಕೆಲವರ ವಾದವೆಂದರೆ ನಾವು ದೈಹಿಕವಾಗಿ ರೂಪಾಂತರವಾದದ್ದು, ವಿಕಾಸವಾದದ್ದು ಮುಗಿಯಿತು, ಇನ್ನೇನಿದ್ದರೂ ನಮ್ಮದು ಟೆಕ್ನೋಲಾಜಿಕಲ್, ದೇಹದ ಆಚೆಗಿನ ರೂಪಾಂತರ. ಅದು ನಿಜವೇ?

ಜಾನ್ ಹಾಕ್ಸ್ ಮಾನವಶಾಸ್ತ್ರ ದಲ್ಲಿ ಹೆಸರುವಾಸಿ. ಅವರು ವಿಸ್ಕಾನ್ಸಿನ್ ಮ್ಯಾಡಿಸನ್ ವಿಶ್ವವಿದ್ಯಾಲಯದ ಪ್ರೊಫೆಸರ್. ಆದಿಮಾನವನ ಮೂಳೆ ಮತ್ತು ಜೀನ್ಸ್ ಅಭ್ಯಾಸ ಮಾಡಿ ಅದೆಷ್ಟೋ ಪ್ರಬಂಧ ಮಂಡಿಸಿದ ಜಾನ್ ಬಹುಶಃ ವಿಕಾಸವಾದದ ಬಹುತೇಕ ಕಥೆಗಳ ಸುತ್ತ ಒಂದಿಲ್ಲೊಂದು ರೀತಿಯಲ್ಲಿ ಕೆಲಸ ಮಾಡಿದವರು. ಸುಮಾರು 10 ಸಾವಿರ ವರ್ಷಗಳ ಮಾನವನ ದೈಹಿಕ ಮಾರ್ಪಾಡಿನ ಇತಿಹಾಸ ಇವರಿಗೆ ಗೊತ್ತು. ಅಮೆರಿಕ, ಆಫ್ರಿಕಾ, ಏಷ್ಯಾ ಮತ್ತು ಯುರೋಪ್ ಇಲ್ಲೆಲ್ಲ ಹತ್ತಿಪ್ಪತ್ತು ಪಳೆಯುಳಿಕೆಯ ಜಾಗದಲ್ಲಿ ಸಿಕ್ಕ ಮನುಷ್ಯನ ಸಾವಿರಾರು ಮೂಳೆಯ ಸಾಂಪಲ್ ಅನ್ನು ಅಭ್ಯಸಿಸಿದವರು ಜಾನ್. ಯುಟ್ಯೂಬ್‌ನಲ್ಲಿ ಅವರ ಮಾತುಗಳನ್ನು ಕೇಳುತ್ತಿದ್ದರೆ ಅದ್ಯಾವುದೋ ಒಂದು ಲೋಕಕ್ಕೆ ನಮ್ಮನ್ನು ಕರೆದುಕೊಂಡು ಹೋಗುವ ಮೋಡಿ, ಜ್ಞಾನ ಅವರಲ್ಲಿದೆ. ಅವರದು ತೀರಾ ಕರಾರುವಾಕ್ಕಾದ ವಾದ, ಜಿಜ್ಞಾಸೆಗಳು. ಅವರ ಪ್ರಕಾರ ಇಂದಿನ ಮನುಷ್ಯ 10 ಲಕ್ಷ ವರ್ಷ ಹಿಂದಿನ ಮನುಷ್ಯನಿಗೆ ಹೋಲಿಸಿದರೆ, ಸುಮಾರು ನೂರು ಪಟ್ಟು ಮಾರ್ಪಾಡನ್ನು ಹೊಂದುತ್ತಿದ್ದಾನಂತೆ! ಇವರು ನಡೆಸಿದ ಜೆನೆಟಿಕ್ ಅನಾಲಿಸಿಸ್‌ನ ಪ್ರಕಾರ ನೈಜೀರಿಯಾ, ಅಮೆರಿಕ, ಜಪಾನ್ ಮತ್ತು ಚೀನಾದ ಪೂರ್ವಜರ ಮೂಲ ಸುಮಾರು 2 ಲಕ್ಷ ವರ್ಷದ ಹಿಂದೆ ಒಂದೇ. ನೈಜೀರಿಯಾದ ಜನರು ಕಪ್ಪು, ಅಮೆರಿಕನ್ನರು ಮೂಲದಲ್ಲಿ ಯುರೋಪಿಯನ್ನರು ಬಿಳಿ, ಜಪಾನಿಯರು ಕುಳ್ಳರು, ಸಣ್ಣ ಕಣ್ಣು. ಈ ಎಲ್ಲ ಮಾರ್ಪಾಡುಗಳಾದದ್ದು ಕಳೆದ 2 ಲಕ್ಷ ವರ್ಷದಲ್ಲಿ ಎಂಬ ವಾದಕ್ಕೆ ನೂರಾರು ಪುರಾವೆಗಳನ್ನು ಜಾನ್ ಒದಗಿಸುತ್ತಾರೆ.

ಹಾಗೆ ನೋಡಿದರೆ ಆಕಳ ಹಾಲು ಅಥವಾ ಇನ್ನೊಂದು ಪ್ರಾಣಿಯ ಹಾಲು ಸ್ವಾಭಾವಿಕ ಆಹಾರವಲ್ಲ. ಆಕಳನ್ನು ಸಾಕುವುದು, ನಂತರದಲ್ಲಿ ಕೃಷಿ ಇವೆಲ್ಲ ಐದಾರು ಸಾವಿರ ವರ್ಷದಿಂದೀಚೆ ನಾವು ಮಾಡಿಕೊಂಡ ಬದಲಾವಣೆ. ಅದಕ್ಕನುಗುಣವಾಗಿ ನಮ್ಮ ಜೀನ್‌ಗಳು ಬದಲಾಗಿವೆ. ಜಾನ್ ಪ್ರಕಾರ ಯಾವಾಗ ನಾವು ಕೃಷಿಯನ್ನು ಆರಂಭಿಸಿದೆವೋ ಆಗ ನಮ್ಮ ವಂಶವಾಹಿನಿಯ ಬದಲಾವಣೆಯ ಗತಿ ತಗ್ಗಿದೆ. ಕೃಷಿ ಆರಂಭವಾದಂದಿನಿಂದ ನಂತರದಲ್ಲಿ ಮನುಷ್ಯನ ಜೀವನ ರೀತಿ, ಆಹಾರ ಇವೆಲ್ಲ ಅಷ್ಟಾಗಿ ಈಗ ಕಳೆದ ನೂರು ವರ್ಷದವರೆಗೆ ಬದಲಾಗಲೇ ಇಲ್ಲ ಎನ್ನುವುದು ಈ ವಾದವನ್ನು ಪುಷ್ಟೀಕರಿಸುತ್ತದೆ. ಮೊದಲನೆಯದು ಆಹಾರ ಮತ್ತು ಜೀವನ ಪದ್ಧತಿ, ಎರಡನೆಯದು ಜನಸಂಖ್ಯೆ. ಇವೆರಡು ತೀವ್ರಗತಿಯಲ್ಲಿ ಬದಲಾದದ್ದು ತೀರಾ ಇತ್ತೀಚೆಗೆ ಸುಮಾರು 100 ವರ್ಷದಲ್ಲಿ. ಮ್ಯುಟೇಷನ್‌ನ ಗತಿ ಹೆಚ್ಚಲು ಇಂದು ಸಡನ್ನಾಗಿ ಬದಲಾದ ಜೀವನ ಪದ್ಧತಿ, ಆಹಾರ ಇವು ಒಂದು ಕಾರಣವಾದರೆ ಇನ್ನೊಂದು ಇಂದಿನ ಜನಸಂಖ್ಯೆ. ಇಂದು ಭೂಮಿಯ ಮೇಲೆ 7.5 ಬಿಲಿಯನ್ ಮನುಷ್ಯರಿದ್ದಾರೆ. ಜಾಗತೀಕರಣದಿಂದಾಗಿ ವಲಸೆ ಸುಲಭವಾಗಿರುವುದರಿಂದ ಮನುಷ್ಯನಲ್ಲಿ ಎಲ್ಲಿಲ್ಲದ ಪ್ರಮಾಣದಲ್ಲಿ ಕ್ರಾಸ್ ಬ್ರೀಡ್‌ಗಳಾಗುತ್ತಿವೆ. ಏಷ್ಯನ್ ಆಫ್ರಿಕನ್ ಅನ್ನು ಮದುವೆಯಾಗುವುದು, ಯುರೋಪಿಯನ್ ಚೈನೀಸ್ ಅನ್ನು ಮದುವೆಯಾಗುವುದು, ಸಸ್ಯಾಹಾರಿ ಮಾಂಸಾಹಾರಿಯನ್ನು ಮದುವೆಯಾಗಿ ಮಕ್ಕಳನ್ನು ಪಡೆಯುವುದು ಇತ್ಯಾದಿ. ಇದೆಲ್ಲ ಇಂದು ಎಲ್ಲಿಲ್ಲದ ಪ್ರಮಾಣದಲ್ಲಿ ನಡೆಯುತ್ತಿದೆ. ಈ ಬದಲಾವಣೆಗೆ ಒಗ್ಗಿಕೊಳ್ಳಲು ಮುಂಬರುವ ಮಿಶ್ರ ತಳಿಯ ಮನುಷ್ಯ ಎಲ್ಲಿಲ್ಲದ ಮಾರ್ಪಾಡನ್ನು ಮಾಡಿಕೊಳ್ಳುತ್ತಿದ್ದಾನೆ ಎನ್ನುವುದು ಜಾನ್ ವಾದ, ಇದು ಒಪ್ಪುವಂಥದ್ದು.

ಕೆಲವು ಬದಲಾವಣೆಗಳು ಪುರಾವೆಯ ಜತೆ ಗೋಚರವಾಗುತ್ತವೆ. ಉದಾಹರಣೆಗೆ ನಮ್ಮ ಮಿದುಳು ಚಿಕ್ಕದಾಗುತ್ತಿರುವುದು. ಕಳೆದ 10 ಸಾವಿರ ವರ್ಷದಲ್ಲಿ ಮನುಷ್ಯನ ಮಿದುಳು ಶೇ.15ರಷ್ಟು ಚಿಕ್ಕದಾಗಿದೆ ಎನ್ನುವುದಕ್ಕೆ ಸಾಕ್ಷ್ಯಗಳು ಸಿಗುತ್ತವೆ. ವಿಜ್ಞಾನಿಗಳ ಪ್ರಕಾರ ಈ ಟ್ರೆಂಡ್ ಇಂದು ಕೂಡ ಮುಂದುವರಿದಿದೆ. ಮಿದುಳು ಚಿಕ್ಕದಾಗುತ್ತಿದೆ ಎಂದರೆ ನಾವು ಇನ್ನಷ್ಟು ದಡ್ಡರಾಗುತ್ತಿದ್ದೇವೆಯೇ? ಹಾಗಲ್ಲ, ಮಿದುಳು ಚಿಕ್ಕದಾದಂತೆ ನ್ಯೂರಾನ್‌ಗಳು ಇನ್ನಷ್ಟು ಹತ್ತಿರಕ್ಕೆ ಬರುವುದರಿಂದ ಅದರ ನಡುವಿನ ಸಂವಹನ ಇನ್ನಷ್ಟು ವೇಗ ಪಡೆದುಕೊಂಡು ನಮ್ಮ ವಿಚಾರ ಶಕ್ತಿ ಮತ್ತು ಪ್ರತಿಕ್ರಿಯೆಯ ವೇಗ ಹೆಚ್ಚುತ್ತಿದೆ. ಒಂದು ರೀತಿಯಲ್ಲಿ ಲ್ಯಾಪ್‌ಟಾಪ್, ಮೊಬೈಲ್ ನಂತೆ ನಮ್ಮ ಮಿದುಳು ಕೂಡ ಕಾಂಪ್ಯಾಕ್ಟ್ ಆಗುತ್ತಿದೆ. ಈಗ ಕಳೆದ ನೂರು ವರ್ಷಗಳಲ್ಲಿ ಮನುಷ್ಯ ಹಿಂದೆಲ್ಲದಕ್ಕಿಂತ ಹೆಚ್ಚಿನ ವಿಚಾರಕ್ಕೆ ತನ್ನ ಮಿದುಳನ್ನು ಒಳಪಡಿಸುತ್ತಿರುವುದರಿಂದ ಮಿದುಳು ಚಿಕ್ಕದಾಗುವ ವೇಗ ಕೂಡ ಹೆಚ್ಚಿದೆ. ಇದಲ್ಲದೆ, ಮನುಷ್ಯ ತನ್ನ ಕಾಲಿನಿಂದ ವಸ್ತುವನ್ನು ಹಿಡಿಯಲು ಬಳಸುವುದು ನಿಲ್ಲಿಸಿ ಬಹಳ ಕಾಲವಾಯಿತು. ಆ ಕಾರಣಕ್ಕೆ ಕಿರುಬೆರಳು ತಲಗಳಿ ಕಳೆದಂತೆ ಚಿಕ್ಕದಾಗುತ್ತಿದೆ. ಕ್ರಮೇಣ ನಮ್ಮ ಕಿರುಬೆರಳು ನಶಿಸುತ್ತದೆ. ಇನ್ನೊಂದು ಬದಲಾವಣೆಯೆಂದರೆ ಬುದ್ಧಿ ಹಲ್ಲು. ಈ ಹಲ್ಲಿನ ಅವಶ್ಯಕತೆಗಿಂತ ಇದರ ಕಿರಿಕಿರಿಯೇ ಜಾಸ್ತಿ. ಆ ಕಾರಣಕ್ಕೆ ಆದ ಬದಲಾವಣೆಯಿಂದಾಗಿ ಇಂದು ಶೇ.10ರಿಂದ 45ರಷ್ಟು ಮಂದಿಗೆ ಈ ಬುದ್ಧಿ ಹಲ್ಲು ಹುಟ್ಟುವುದೇ ಇಲ್ಲ. ಅಪೆಂಡಿಕ್ಸ್ ಬಗ್ಗೆ, ಅದು ಕೊಡುವ ಕಿರಿಕಿರಿಯ ಬಗ್ಗೆ, ಆಪರೇಷನ್ ಮಾಡಿಸಿ ತೆಗೆಸಿಕೊಳ್ಳುವುದರ ಬಗ್ಗೆ ನಿಮಗೆ ಗೊತ್ತೇ ಇದೆ. ಇವೆಲ್ಲ ತುಂಬಾ ವೇಗದಲ್ಲಾಗುತ್ತಿರುವ ಮಾರ್ಪಾಡುಗಳು. ಇದರ ಜತೆ ಕೆಲವು ರಕ್ತನಾಳಗಳು ಕೂಡ ತೀವ್ರಗತಿಯಲ್ಲಿ ಇಂದು ಬದಲಾಗುತ್ತಿವೆ. ಇದಲ್ಲದೇ, ಇಂದು ನಾವು ಬಹುತೇಕ ಕೆಲಸಕ್ಕೆ ಕೈಬೆರಳನ್ನು ಮಾತ್ರ ಬಳಸುವುದು- ಬರವಣಿಗೆಗೆ, ಕಂಪ್ಯೂಟರ್‌ನಲ್ಲಿ ಟೈಪಿಸಲು, ಮೊಬೈಲ್ ಬಳಸುವಾಗ, ಯಂತ್ರೋಪಕರಣ ಚಲಾಯಿಸುವಾಗ ಹೀಗೆ. ಆ ಕಾರಣಕ್ಕೆ ಈಗ 30 ವರ್ಷ ಹಿಂದಿನ ದೇಹರಚನೆಗೆ ಹೋಲಿಸಿದರೆ ಇಂದು ಕೈಬೆರಳಿಗೆ ಹರಿಯುವ ರಕ್ತನಾಳ ಇನ್ನಷ್ಟು ಸದೃಢವಾಗಿವೆ. ಇದು ಮುಂದುವರಿದರೆ ತೋರುಬೆರಳು ಮತ್ತು ಮಧ್ಯದ ಬೆರಳು ಇನ್ನೊಂದು 50 ವರ್ಷದಲ್ಲಿ ಉದ್ದವಾಗುವ ಸಾಧ್ಯತೆ ತೀರಾ ಹೆಚ್ಚಿದೆ.

ನಾವು ನೀವೆಲ್ಲ ಟಿಬೆಟ್‌ನ ಎತ್ತರದ ಬೆಟ್ಟ ಏರಿದರೆ ಅಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆಯಿರುವುದರಿಂದ ಉಸಿರಾಡುವುದು ಕಷ್ಟವಾಗುತ್ತದೆ, ತಲೆ ಸುತ್ತಿ ಬೀಳುತ್ತೇವೆ, ತಲೆನೋವು ಕಾಣಿಸಿಕೊಂಡು ಹೃದಯಬಡಿತ ಹೆಚ್ಚುತ್ತದೆ. ಟಿಬೆಟ್ ಸಮುದ್ರತಟದಿಂದ 4-5 ಕಿಲೋಮೀಟರ್ ಎತ್ತರದ ಪ್ರದೇಶ. ಅಲ್ಲಿ ನಮ್ಮ ಕರಾವಳಿಗೆ ಹೋಲಿಸಿದರೆ ಆಮ್ಲಜನಕ ಪ್ರಮಾಣ ಶೇ.33 ಕಡಿಮೆ. ಆದರೆ ಅಲ್ಲಿ ಕೂಡ ಮನುಷ್ಯವಾಸವಿದೆ. ಅವರೇನು ಹುಟ್ಟಿದಾಗಿನಿಂದ ಅದಕ್ಕೆ ಹೊಂದಿಕೊಂಡವರಲ್ಲ. ಅವರೆಲ್ಲ ಅಲ್ಲಿ ಆರಾಮಾಗಿ ಬದುಕುತ್ತಿರುವುದು ವಂಶವಾಹಿನಿಯಲ್ಲಿ ಮಾರ್ಪಾಡಾಗಿ ಪಡೆದ ಶಕ್ತಿಯಿಂದ. ಈ ಶಕ್ತಿ ಒಲಿದ ಪ್ರದೇಶದವರ ವಂಶವಾಹಿನಿಯಲ್ಲಿ ಶೇ.1ರಷ್ಟು ಜನರಲ್ಲಿ ಮಾತ್ರ ಇದೆ.

ಇನ್ನೊಂದು ದೊಡ್ಡ ಮಾರ್ಪಾಡೆಂದರೆ ನಮ್ಮ ದೇಹದ ಉಷ್ಣತೆಗೆ ಸಂಬಂಧಿಸಿದ್ದು. ಕಳೆದ 150 ವರ್ಷದಲ್ಲಿ ಮನುಷ್ಯನ ಸರಾಸರಿ ದೇಹದ ಉಷ್ಣತೆ 0.5 ಸೆಲ್ಸಿಯಸ್ ಕಡಿಮೆಯಾಗಿದೆ. ಅದರರ್ಥ ಇಂದು ನಾವು ಸ್ವಲ್ಪ ಜ್ವರ ಬಂದಿದೆ ಎನ್ನುವ ದೇಹದ ಉಷ್ಣತೆ 1860-70ರಲ್ಲಿ ಜ್ವರವೇ ಆಗಿರುತ್ತಿರಲಿಲ್ಲ. ಸಾಮಾನ್ಯವಾಗಿ ದೇಹದ ಉಷ್ಣತೆ ಹೆಚ್ಚುವುದೆಂದರೆ ಅದು ದೇಹವು ರೋಗದ ವಿರುದ್ಧ ಸೆಣೆಸಾಟಕ್ಕೆ ತಯಾರಾಗುವುದು. ಇತ್ತೀಚೆ ಸ್ವಚ್ಛತೆ ಹೆಚ್ಚಿರುವುದರಿಂದ, ರೋಗ ಕಡಿಮೆಯಾಗಿ ಕ್ರಮೇಣ ನಾವು ಉಷ್ಣತೆಯನ್ನು ಕಳೆದುಕೊಂಡಿದ್ದೇವೆ. ಇದಕ್ಕೆ ಜಾಗತಿಕ ಉಷ್ಣತೆಯ ಏರಿಕೆಯ ಕಾರಣ ಕೊಡುವುದು ಕೂಡ ಇದೆ. ಒಟ್ಟಾರೆ ಇದೊಂದು ದೊಡ್ಡ ಮಾರ್ಪಾಡು.

ಇಂದು ಮನುಷ್ಯ ತಯಾರಿಸಿದ ಆಹಾರ, ಸುಲಭದಲ್ಲಿ ಜೀರ್ಣವಾಗುವ ಆಹಾರವನ್ನೇ ಆಯ್ಕೆ ಮಾಡಿಕೊಂಡು ಸ್ವೀಕರಿಸುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಮನುಷ್ಯನ ಕರುಳು ಚಿಕ್ಕದಾಗುತ್ತ ಹೋಗುತ್ತದೆ. ಇದರ ಕುರುಹು ಈಗಾಗಲೇ ಮುಂದುವರಿದ ದೇಶಗಳಲ್ಲಿ, ಅಮೆರಿಕ ಮತ್ತು ಇಂಗ್ಲೆಂಡಿನಲ್ಲಿ ಕಾಣಿಸಿಕೊಳ್ಳಲಾರಂಭಿಸಿದೆ. ಅದಲ್ಲದೆ ಆಹಾರಕ್ಕೆ, ಕೆಲಸಕ್ಕೆ ಮನುಷ್ಯ ಓಡಾಡುವುದು ಕೂಡ ಕಡಿಮೆಯಾಗುತ್ತಿರುವುದರಿಂದ ಮನುಷ್ಯನ ಮೂಳೆ ಇನ್ನಷ್ಟು ದುರ್ಬಲವಾಗುತ್ತ ಹೋಗುತ್ತದೆ.

ಇದೆಲ್ಲ ಕಾರಣ ಸಿಗುವ ರೂಪಾಂತರಗಳಾದವು. ಇನ್ನು ಕೆಲವು ಸುಲಭದಲ್ಲಿ ಕಾರಣ ಸಿಗದ ರೂಪಾಂತರಗಳಿವೆ. ಜಪಾನಿನ ಓಕಿನಾವಾ ವಿಶ್ವವಿದ್ಯಾಲಯ ಕೆಲ ತಿಂಗಳ ಹಿಂದೆ ಒಂದು ವಿಚಿತ್ರ ಸುದ್ದಿಯನ್ನು ಪ್ರಕಟಿಸಿತ್ತು. ಅದರ ಪ್ರಕಾರ ಮನುಷ್ಯನ ಎಂಜಲಿನಲ್ಲಿ ಇನ್ನೊಬ್ಬ ಮನುಷ್ಯನಿಗೆ ವಿಷವಾಗುವ ಜೀನ್‌ಗಳು ಮುನ್ನೆಲೆಗೆ ಬರುತ್ತಿವೆಯಂತೆ. ಇದಕ್ಕೆ ಸರಿಯಾದ ಕಾರಣ ಅವರು ಹೇಳಿಲ್ಲವಾದರೂ ಇದಕ್ಕೆ ಬದಲಾದ ಆಹಾರ ಪದ್ಧತಿ, ಅತಿಯಾದ ಮಾಂಸಾಹಾರ ಸೇವನೆ ಕಾರಣ ಎನ್ನಲಾಗುತ್ತಿದೆ. ಈ ರೀತಿ ಅಂದಾಜಿಗೆ ಸಿಗದ ಹತ್ತಾರು ಬದಲಾವಣೆಗಳಿಗೆ ಉತ್ತರ ಇನ್ನೂ ಸಿಕ್ಕಬೇಕಿದೆ.

ಒಟ್ಟಾರೆ ನಮಗರಿವಿಲ್ಲದಂತೆ ಬದಲಾಗುತ್ತಿದ್ದೇವೆ. ಕೆಲ ಬದಲಾವಣೆಗಳು- ಉದಾಹರಣೆಗೆ ಡಯಾಬಿಟಿಸ್, ಬಿಪಿ ಮೊದಲಾದವಕ್ಕೆ ಪರಿಹಾರ ಕೂಡ ಆಗಬಹುದು. ಬಹುತೇಕ ಬದಲಾವಣೆಗಳು ನಮ್ಮ ಜೀವಮಾನದಲ್ಲಿ ಗೋಚರವಾಗದೇ ಹೋಗಬಹುದು. ಆದರೆ ಬದಲಾವಣೆ ನಿರಂತರ.

ಭಾರತದ ಆರ್ಥಿಕ ಬೆಳವಣಿಗೆಯನ್ನು ಹೇಗೆ ನೋಡಬೇಕು?

ಭಾರತ ಇಂದು ವಿಶ್ವದಲ್ಲಿಯೇ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಇದು ಕೇವಲ ಸಾಫ್ಟ್‌ವೇರ್, ಹೊರಗುತ್ತಿಗೆ, ಕಾಲ್ ಸೆಂಟರ್‌ಗಳ ಯಶೋಗಾಥೆಯಿಂದ ಉಂಟಾಗಿದ್ದಲ್ಲ. ದೇಶವಿಂದು ಹಲವಾರು ಕ್ಷೇತ್ರಗಳಲ್ಲಿ ಅಭೂತಪೂರ್ವ ಸಾಧನೆಗಳೊಂದಿಗೆ ಮುನ್ನಡೆಯುತ್ತಿದೆ. ವೈದ್ಯಕೀಯ, ಔಷಧ ಕ್ಷೇತ್ರಗಳಲ್ಲಿ ಜಗತ್ತಿನಲ್ಲೇ ಮುಂಚೂಣಿಯಲ್ಲಿದೆ. ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ದಾಪುಗಾಲಿಕ್ಕಿದೆ.

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಎರಡು ವರ್ಷಗಳ ಹಿಂದೆ ಜರ್ಮನಿಯ ಮಂತ್ರಿಯೊಬ್ಬರು ಬೆಂಗಳೂರಿನ ಬೀದಿಬದಿಯ ತರಕಾರಿ ವ್ಯಾಪಾರಿಯ ಬಳಿಗೆ ತೆರಳಿ, ಬೆಳ್ಳುಳ್ಳಿ ಕೊಂಡು, ಯುಪಿಐ ಬಳಸಿ ಹಣ ವರ್ಗಾವಣೆ ಮಾಡಿದ್ದರು. ನೀವೀಗ 'ಇದರಲ್ಲೇನು ಮಹಾ?' ಎನ್ನಬಹುದು. ಆದರೆ ಅವರು ಈ ತಂತ್ರಜ್ಞಾನ ಕ್ರಾಂತಿಯನ್ನು ಸ್ವತಃ ತಮ್ಮ ದೇಶದಲ್ಲಿ ಕಂಡಿರಲಿಲ್ಲ. ಹೀಗಾಗಿ ಮೊಬೈಲ್ ಮೂಲಕ ಕೆಲವೇ ಸೆಕೆಂಡ್‌ಗಳಲ್ಲಿ ಹಣ ವರ್ಗಾವಣೆಯದಾಗ ಬೆರಗಾಗಿದ್ದರು. ಮಾರನೇ ದಿನ ಪತ್ರಿಕೆಗಳಲ್ಲಿ ಅದು ಫೋಟೊ ಸಮೇತ ವರದಿಯೂ ಆಗಿತ್ತು. ಭಾರತದ ಡಿಜಿಟಲ್ ಮೂಲಸೌಕರ್ಯ ಜಗತ್ತಿನ ಗಮನ ಸೆಳೆದಿರುವ ಪರಿಯಿದು.

ಕಳೆದ 5 ತಿಂಗಳಿನಿಂದ ಭಾರತದ ಸ್ಟಾಕ್ ಮಾರ್ಕೆಟ್‌ನಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿಯ ಕುಸಿತದ್ದೇ ಸುದ್ದಿ. ವಿದೇಶಿ ಸಾಂಸ್ಥಿಕ ಹೂಡಿಕೆದಾರರ ನಿರ್ಗಮನ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡೆಸುತ್ತಿರುವ ಟ್ರೇಡ್ ವಾರ್, ಜಾಗತಿಕ ಆರ್ಥಿಕತೆಯ ಮಂದಗತಿ, ಕಾರ್ಪೊರೇಟ್ ವಲಯದ ತಲ್ಲಣಗಳಿಂದ ಸ್ಟಾಕ್ ಮಾರ್ಕೆಟ್ ಬೀಳುತ್ತಿದೆ ಎಂಬ ಹೌಹಾರುವ ವಿಶ್ಲೇಷಣೆಯೇ ಹೆಚ್ಚು. ಹೀಗಾಗಿ ಮ್ಯೂಚುವಲ್ ಫಂಡ್, ಷೇರುಗಳಲ್ಲಿ ಹೂಡಿಕೆ ಮಾಡಿರುವವರು ಆತಂಕದಲ್ಲಿದ್ದಾರೆ. ಇನ್ನು ಕೆಲವರು ಷೇರಿನ ಬದಲಿಗೆ ಬಂಗಾರದಲ್ಲಿ ಹೂಡಿಕೆ ಮಾಡಿ ನೋಡಿ ಎಂಬ ಸಲಹೆಯನ್ನೂ ಕೊಡುತ್ತಿದ್ದಾರೆ. ಆದರೆ, ಇತಿಹಾಸ ಏನೆನ್ನುತ್ತದೆ ಎಂಬುದನ್ನು ನೀಡಿದರೆ, ಈಗ ಕಂಡುಬಂದಿರುವ ಶೇ.13-15ರ ಸೂಚ್ಯಂಕ ಕುಸಿತ ನಗಣ್ಯ.

ಏಕೆಂದರೆ, 1986ರಿಂದ 2024ರ ತನಕ ಭಾರತೀಯ ಸ್ಟಾಕ್ ಮಾರ್ಕೆಟ್ ಇತಿಹಾಸವನ್ನು ಗಮನಿಸಿದರೆ, ಈಗ ಉಂಟಾಗಿರುವ ಶೇ.13ರ ಕರೆಕ್ಷನ್ ಖಂಡಿತವಾಗಿಯೂ ದೊಡ್ಡದಲ್ಲ. ನಮ್ಮ ಸ್ಟಾಕ್ ಮಾರ್ಕೆಟ್ ಇದಕ್ಕಿಂತ ಭೀಕರವಾದ ಕುಸಿತಕ್ಕೆ ಸಾಕ್ಷಿಯಾಗಿದೆ ಮತ್ತು ಅಷ್ಟೇ ವೇಗವಾಗಿ ಚೇತರಿಸಿಕೊಂಡಿದೆ. ಅಂಕಿ ಅಂಶಗಳ ಪ್ರಕಾರ ಇದುವರೆಗಿನ ಇತಿಹಾಸದಲ್ಲಿ ಸೂಚ್ಯಂಕಗಳು ಭಾರಿ ಕುಸಿತದ ಬಳಿಕ 2 ವಾರಗಳಿಂದ 2 ವರ್ಷದೊಳಗೆ ಚೇತರಿಸಿಕೊಂಡಿವೆ, ಜಿಗಿದು ಹೊಸ ಎತ್ತರಕ್ಕೇರಿವೆ. 1986ರಲ್ಲಿ ವಿತ್ತೀಯ ಕೊರತೆ ತೀವ್ರವಾಗಿ ಸ್ಟಾಕ್ ಮಾರ್ಕೆಟ್ ಮೈನಸ್ ಶೇ.41ರಷ್ಟು ಕುಸಿದಿತ್ತು. 1991ರಲ್ಲಿ ಬ್ಯಾಲೆನ್ಸ್ ಆಫ್ ಪೇಮೆಂಟ್ ಬಿಕ್ಕಟ್ಟು ಉಂಟಾಗಿ ಮೈನಸ್ ಶೇ.39ರಷ್ಟು ಕುಸಿದಿತ್ತು. 1996ರಲ್ಲಿ ಹರ್ಷದ್ ಮೆಹ್ತಾ ಹಗರಣದ ಸಂದರ್ಭ ಮೈನಸ್ ಶೇ.54ರಷ್ಟು ಕುಸಿದಿತ್ತು. 2000ರಲ್ಲಿ ಡಾಟ್ ಕಾಮ್ ವಿವಾದದಿಂದ ಮೈನಸ್ ಶೇ.56ರಷ್ಟು, 2008ರಲ್ಲಿ ಜಾಗತಿಕ ಆರ್ಥಿಕ ಹಿಂಜರಿತದ ಪರಿಣಾಮ ಸ್ಟಾಕ್ ಇಂಡೆಕ್ಸ್ ಶೇ.61ರಷ್ಟು ಕುಸಿತಕ್ಕೀಡಾಗಿತ್ತು. ಇತ್ತೀಚೆಗೆ ಅಂದರೆ ಕೋವಿಡ್ ಸಂದರ್ಭ ಸ್ಟಾಕ್ ಮಾರುಕಟ್ಟೆ ಮೈನಸ್ ಶೇ.38ರಷ್ಟು ಕುಸಿದಿತ್ತು.

ನಮ್ಮವರಿಗೆ ಹಿತ್ತಲ ಗಿಡ ಮದ್ದಲ್ಲ. ಬೇರೆ ಯಾರಾದರೂ ಹೇಳಿದರೆ ಮೈಯೆಲ್ಲ ಕಿವಿಯಾಗಿಸಿ ಕೇಳಬಲ್ಲರು. ಅಮೆರಿಕದ ಬಹುರಾಷ್ಟ್ರೀಯ ಇನ್ವೆಸ್ಟ್‌ಮೆಂಟ್ ಬ್ಯಾಂಕ್ ಗೋಲ್ಡ್‌ಮನ್ ಸ್ಯಾಕ್ಸ್‌ನ ಸಿಇಒ ಡೇವಿಡ್ ಸೋಲೋಮನ್ ಇತ್ತೀಚೆಗೆ 'ಇಟಿ ನೌ'ಗೆ ನೀಡಿದ ಸಂದರ್ಶನದಲ್ಲಿ, India is emerging as a key global investment destination, with its economy poised for significant growth over the next decade ಎನ್ನುತ್ತಾರೆ.

ಭಾರತವು ತಾತ್ಕಾಲಿಕವಾಗಿ ಕೆಲವು ಅಡಚಣೆಗಳನ್ನು ಎದುರಿಸಬಹುದು. ಆದರೆ ಇದರ ಹೊರತಾಗಿಯೂ ಜಾಗತಿಕ ಹೂಡಿಕೆಯ ತಾಣವಾಗಿದೆ. ಗ್ಲೋಬಲ್ ಸಿಇಒಗಳು ಈಗಲೂ ಭಾರತವನ್ನು ಹೊಸ ಅವಕಾಶಗಳ ಅದ್ಭುತ ತಾಣವಾಗಿ ಪರಿಗಣಿಸುತ್ತಿದ್ದಾರೆ. ದೇಶವು ಮಾಡಬೇಕಿರುವುದಿಷ್ಟು. ಬಂಡವಾಳ ಹೂಡಿಕೆ ಹರಿದುಬರಲು ತಪ್ಪನ್ನು ಸರಿಪಡಿಸಬೇಕು. ಆಡಳಿತಶಾಹಿಯನ್ನು ಕಡಿಮೆ ಮಾಡಬೇಕು. ನಿಯಂತ್ರಕ ಕ್ರಮಗಳಲ್ಲಿ ಸ್ಪಷ್ಟತೆ ಇರಬೇಕು. ಆಗ ಮತ್ತಷ್ಟು ಬಹುರಾಷ್ಟ್ರೀಯ ಕಂಪನಿಗಳು ಇಲ್ಲಿ ಆಳವಾಗಿ ಅಸ್ತಿತ್ವವನ್ನು ಕಂಡುಕೊಳ್ಳಲಿವೆ ಎನ್ನುತ್ತಾರೆ ಸೋಲೊಮನ್.



21ನೆಯ ಶತಮಾನ ಭಾರತದ್ದು ಎನ್ನಲು ಹಲವು ಕಾರಣಗಳು ಇವೆ. ಮೊದಲನೆಯದಾಗಿ ಭಾರತ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಇಲ್ಲಿನ ಜನಸಂಪನ್ಮೂಲ ವಿಶ್ವದಲ್ಲಿಯೇ ಅತಿ ದೊಡ್ಡದು. ಹೀಗಾಗಿ ಜಗತ್ತಿನ ಅತಿ ದೊಡ್ಡ ಮತ್ತು ಪ್ರಬುದ್ಧ ಮಾರುಕಟ್ಟೆಯಾಗಿ ವಿಶ್ವವನ್ನೇ ಆಕರ್ಷಿಸುತ್ತಿದೆ. 2008ರಲ್ಲಿ ಜಗತ್ತಿನ ನಾನಾ ದೇಶಗಳು ಆರ್ಥಿಕ ಹಿಂಜರಿತಕ್ಕೆ ತತ್ತರಿಸಿದರೂ, ಭಾರತದಲ್ಲಿ ಅಂಥದ್ದೇನೂ ಸಂಭವಿಸಿರಲಿಲ್ಲ. ಭಾರತ ತನ್ನ ದೇಶೀಯ ಮಾರುಕಟ್ಟೆಯ ಚಟುವಟಿಕೆಗಳಿಂದಲೇ ಜಾಗತಿಕ ಆರ್ಥಿಕ ಹಿಂಜರಿತವನ್ನು ಸಮರ್ಥವಾಗಿ ಎದುರಿಸಿತ್ತು. ಸವಾಲುಗಳನ್ನು ಜೀರ್ಣಿಸಿಕೊಂಡಿತ್ತು.

ಭಾರತ ಇಂದು ವಿಶ್ವದಲ್ಲಿಯೇ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಇದು ಕೇವಲ ಸಾಫ್ಟ್‌ವೇರ್, ಹೊರಗುತ್ತಿಗೆ, ಕಾಲ್ ಸೆಂಟರ್‌ಗಳ ಯಶೋಗಾಥೆಯಿಂದ ಉಂಟಾಗಿದ್ದಲ್ಲ. ದೇಶವಿಂದು ಹಲವಾರು ಕ್ಷೇತ್ರಗಳಲ್ಲಿ ಅಭೂತಪೂರ್ವ ಸಾಧನೆಗಳೊಂದಿಗೆ ಮುನ್ನಡೆಯುತ್ತಿದೆ. ವೈದ್ಯಕೀಯ, ಔಷಧ ಕ್ಷೇತ್ರಗಳಲ್ಲಿ ಜಗತ್ತಿನಲ್ಲೇ ಮುಂಚೂಣಿಯಲ್ಲಿದೆ. ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ದಾಪುಗಾಲಿಕ್ಕಿದೆ. ಸೇವಾ ವಲಯದಲ್ಲಿ ಹೆಸರುವಾಸಿಯಾಗಿದ್ದ ಭಾರತವು ಉತ್ಪಾದನಾ ವಲಯದಲ್ಲೂ ಛಾಪು ಮೂಡಿಸಿದೆ. ಹತ್ತು ವರ್ಷಗಳ ಹಿಂದೆ 11ನೇ ದೊಡ್ಡ ಆರ್ಥಿಕತೆಯಾಗಿದ್ದ ಭಾರತ ಈಗ ಐದಕ್ಕೆ ಏರಿದೆ.

ಪರಂಪರೆಯಿಂದಲೂ ಭಾರತವು ಜಗತ್ತಿಗೆ ನೀಡಿರುವ ಅತಿ ದೊಡ್ಡ ಕೊಡುಗೆ ಅದರ ಆಧ್ಯಾತ್ಮಿಕತೆಯಾದರೆ, ಇತ್ತೀಚಿನ ದಶಕಗಳಲ್ಲಿ ವಿಜ್ಞಾನ-ತಂತ್ರಜ್ಞಾನ, ಬಾಹ್ಯಾಕಾಶ, ಉತ್ಪಾದನೆ, ಕೃಷಿ, ಆಹಾರ, ಸಿನಿಮಾ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ತನ್ನ ಕೊಡುಗೆಯನ್ನು ವಿಶ್ವಕ್ಕೆ ನೀಡುತ್ತಿದೆ. ಫಾರ್ಚ್ಯೂನ್ 500 ಪಟ್ಟಿಯಲ್ಲಿರುವ ಬಹುತೇಕ ಕಂಪನಿಗಳು ಭಾರತದಲ್ಲಿ ತಮ್ಮ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳನ್ನು ಹೊಂದಿವೆ. ಅಮೆರಿಕದ ಆ್ಯಪಲ್ ಕಂಪನಿ ತನ್ನ ಐಫೋನ್‌ಗಳನ್ನು ಚೆನ್ನೈ, ಕೋಲಾರದಲ್ಲಿ ತಯಾರಿಸುತ್ತಿದೆ.

ಭಾರತವು 90ರ ದಶಕದಲ್ಲಿ ಆರ್ಥಿಕ ಉದಾರೀಕರಣಕ್ಕೆ ಹೊರಳಿದ ಬಳಿಕ ಇಲ್ಲಿಯವರೆಗೆ ಅಭೂತಪೂರ್ವ ಬೆಳವಣಿಗೆಯನ್ನು ಸಾಧಿಸಿದೆ. ಈ ಹಿಂದೆ ವಿದೇಶಿಯರಲ್ಲಿ ಭಾರತದ ಬಗ್ಗೆ ಇದ್ದ ಕಲ್ಪನೆಯೇ ಬೇರೆ, ಈಗಿನ ಚಿತ್ರಣವೇ ಬೇರೆ. ಅಂದೆಲ್ಲ ಭಾರತ ಎಂದರೆ ಬಡವರ ದೇಶ, ಪ್ರವಾಸಿಗರ ಮುಂದೆ ಭಿಕ್ಷೆಗೆ ನಿಲ್ಲುವವರು, ಹಾವಾಡಿಗರು, ಆನೆ, ಸಿಂಹ ಮತ್ತು ತಾಜ್‌ಮಹಲ್. ಆದರೆ ಈಗ ಮಹಾಕುಂಭಮೇಳಕ್ಕೆ 15 ಲಕ್ಷ ವಿದೇಶಿಯರು ಬಂದು ಹೋಗಿದ್ದಾರೆ. ಅತ್ಯಾಧುನಿಕ ಚಿಕಿತ್ಸೆ ಅಗ್ಗವಾಗುತ್ತದೆ ಎಂದು ಬೆಂಗಳೂರಿಗೆ ಪ್ರತಿ ವರ್ಷ ಸಾವಿರಾರು ವಿದೇಶಿಯರು ಬಂದು ಹೋಗುತ್ತಾರೆ. ಅಮೆರಿಕದಲ್ಲಿ ಹೃದಯದ ಶಸ್ತ್ರ ಚಿಕಿತ್ಸೆಗೆ 30,000 ಡಾಲರ್‌ನಿಂದ 2 ಲಕ್ಷ ಡಾಲರ್ ತನಕ ಖರ್ಚಾದರೆ, ಬೆಂಗಳೂರಿನಲ್ಲಿ 3ರಿಂದ 5 ಲಕ್ಷ ರುಪಾಯಿಗೆ ಮುಗಿಯುತ್ತದೆ (30 ಸಾವಿರ ಡಾಲರ್ ಅನ್ನು ರುಪಾಯಿಗೆ ಪರಿವರ್ತಿಸಿದರೆ 25 ಲಕ್ಷ ರುಪಾಯಿಗೂ ಹೆಚ್ಚು).

ಷೇರು ಮಾರುಕಟ್ಟೆಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಹೂಡಿಕೆಯನ್ನು ಹಿಂತೆಗೆದುಕೊಂಡರೂ, ದೇಶೀಯ ಹೂಡಿಕೆದಾರರು ಅಷ್ಟೇ ಉತ್ಸಾಹದಿಂದ ಹೂಡಿಕೆ ಮಾಡುವ ಮೂಲಕ ಸೂಚ್ಯಂಕಗಳ ಕುಸಿತದ ವೇಗವನ್ನು ತಡೆಯುತ್ತಾರೆ. 'ಮೇಕ್ ಇನ್ ಇಂಡಿಯಾ' ಅಡಿಯಲ್ಲಿ ಏರೋಸ್ಪೇಸ್, ಡಿಫೆನ್ಸ್, ಆಟೊಮೋಟಿವ್, ಬಯೊಟೆಕ್ನಾಲಜಿ, ಕ್ಯಾಪಿಟಲ್ ಗೂಡ್ಸ್, ಟೆಕ್ಸ್‌ಟೈಲ್, ಕೆಮಿಕಲ್ಸ್, ಪೆಟ್ರೊ ಕೆಮಿಕಲ್ಸ್, ಇಲೆಕ್ಟ್ರಾನಿಕ್ಸ್, ಆಹಾರ ಸಂಸ್ಕರಣೆ, ರೈಲ್ವೇ, ನಿರ್ಮಾಣ ಸೇರಿದಂತೆ ಹಲವಾರು ವಲಯಗಳಲ್ಲಿ ಪ್ರಗತಿ ಸಾಧಿಸಲಾಗಿದೆ. ವಿಶ್ವ ಬ್ಯಾಂಕ್, ಐಎಂಎಫ್, ಗೋಲ್ಡ್‌ಮನ್ ಸ್ಯಾಕ್ಸ್, ಮೂಡೀಸ್ ಹೀಗೆ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಭಾರತದ ಬೆಳವಣಿಗೆಯ ಸಾಧ್ಯತೆಗಳ ಬಗ್ಗೆ ಆಶಾವಾದಿಗಳಾಗಿವೆ. ಭರವಸೆಯ ಮುನ್ನೋಟಗಳನ್ನು ಮಂಡಿಸಿವೆ. ಹೀಗಿದ್ದರೂ, ಭಾರತದಲ್ಲಿಯೇ, ಅರಿವಿದ್ದೋ, ಇಲ್ಲದೆಯೋ ನಿರಾಸೆಯ ಮಾತುಗಳು, ಕುಹಕಗಳು, ರಾಜಕೀಯ ಪ್ರೇರಿತ ಆರೋಪಗಳು ಜನಸಾಮಾನ್ಯರನ್ನು ದಿಕ್ಕು ತಪ್ಪಿಸುತ್ತವೆ. ಆದರೆ ವಸ್ತುನಿಷ್ಠ ಸಂಗತಿ ಏನೆಂಬುದನ್ನು ಮರೆಮಾಚಲು ಸಾಧ್ಯವೇ ಇಲ್ಲ.

ಅಂತಾರಾಷ್ಟ್ರೀಯ ಹಣಕಾಸು ನಿಧಿ ಪ್ರಕಾರವೇ, 2015-2025ರ ನಡುವೆ, ಭಾರತದ ಆರ್ಥಿಕತೆಯು ಶೇ.66ರಷ್ಟು ಬೆಳವಣಿಗೆ ದಾಖಲಿಸಿದೆ. ಈಗ ದೇಶವು 3.8 ಲಕ್ಷ ಕೋಟಿ ಡಾಲರ್ ಮೌಲ್ಯದ ಆರ್ಥಿಕತೆಯಾಗಿದೆ. ಹೀಗಾಗಿ 5 ಟ್ರಿಲಿಯನ್ ಡಾಲರ್ ಇಕಾನಮಿಯಾಗುವ ಸಾಧ್ಯತೆ ದೂರವಿಲ್ಲ. ನಿಜ, ಜಾಗತಿಕ ಮಟ್ಟದಲ್ಲಿ ಸಾಕಷ್ಟು ಬೆಳವಣಿಗೆಗಳಾಗುತ್ತಿವೆ. ಅಮೆರಿಕದ ಅಧ್ಯಕ್ಷ ಟ್ರಂಪ್ ಚೀನಾ, ಕೆನಡಾ, ಯುರೋಪ್ ವಿರುದ್ಧ ತೆರಿಗೆ ಸಮರ ಜಾರಿಗೊಳಿಸಿದ್ದಾರೆ. ಏಪ್ರಿಲ್ 2ರಿಂದ ಭಾರತದ ವಿರುದ್ಧವೂ ಕರಸಮರ ಆರಂಭವಾಗಲಿದೆ. ಆದರೆ ಇಂಥ ಸವಾಲುಗಳು ನಮಗೇನೂ ಹೊಸತಲ್ಲ, ಕಳೆದೊಂದು ದಶಕದಿಂದ ಜಾಗತಿಕ ಸವಾಲುಗಳನ್ನು ಎದುರಿಸಲು ಭಾರತ ಶತಸಿದ್ಧವಾಗಿದೆ. ಟ್ರಂಪ್ ತೆರಿಗೆಯಿಂದ ವರ್ಷಕ್ಕೆ 60 ಸಾವಿರ ಕೋಟಿ ರುಪಾಯಿ ನಷ್ಟವಾಗಬಹುದು ಎಂದು ಅಂದಾಜಿಸಲಾಗಿದೆಯಾದರೂ ಭಾರತದ ಈಗಿನ ಇಕಾನಮಿಯ ಗಾತ್ರಕ್ಕೆ ಹೋಲಿಸಿದರೆ, ಇದು ಸಣ್ಣ ಮೊತ್ತ. ತಿಂಗಳೊಂದಕ್ಕೆ ಜಿಎಸ್‌ಟಿ ಸಂಗ್ರಹವೇ ಒಂದೂ ಮುಕ್ಕಾಲು ಲಕ್ಷ ಕೋಟಿ ದಾಟುತ್ತಿರುವ ದೇಶವಿದು.

ಭಾರತದ ಉಜ್ವಲ ಮಾರುಕಟ್ಟೆ ಮತ್ತು ಸಾಧ್ಯತೆಗಳನ್ನು ಮನಗಂಡೇ ಇವತ್ತು ಪ್ರತಿ ರಾಷ್ಟ್ರವೂ ನಮ್ಮೊಂದಿಗೆ ಆರ್ಥಿಕ-ವಾಣಿಜ್ಯ ಒಪ್ಪಂದಗಳನ್ನು ಬಲಪಡಿಸಲು ಬಯಸುತ್ತಿವೆ. ಇದರ ಲಾಭವನ್ನು ನಮ್ಮ ಉದ್ಯಮ ವಲಯ ಪಡೆಯಬೇಕಾಗಿದೆ. ಅದೇ ರೀತಿ ದೇಶದ ಆರ್ಥಿಕ ಬೆಳವಣಿಗೆಯ ಪ್ರಯೋಜನವನ್ನು ಜನಸಾಮಾನ್ಯರೂ ತಮ್ಮದಾಗಿಸಿಕೊಳ್ಳಬೇಕಾಗಿದೆ. ಇದು ಹೇಗೆನ್ನುತ್ತೀರಾ? ಇದಕ್ಕಾಗಿ ಹೆಚ್ಚೆಚ್ಚು ಜನರು ಉದ್ಯಮಶೀಲರಾಗಬೇಕು. ಸ್ವ-ಉದ್ಯೋಗಿಗಳಾಗಬೇಕು. ಒಂದು ವೇಳೆ ಉದ್ಯಮಿಯಾಗಲು ಸಾಧ್ಯವಿರದಿದ್ದರೆ, ಹಣಕಾಸು ಮಾರುಕಟ್ಟೆಗಳಾದ ಷೇರು ಮಾರುಕಟ್ಟೆ, ಮ್ಯೂಚುವಲ್ ಫಂಡ್, ಇಟಿಎಫ್ ಇತ್ಯಾದಿಗಳಲ್ಲಿ ಹೂಡಿಕೆ ಮಾಡುವ ಮೂಲಕವೂ ದೇಶದ ಆರ್ಥಿಕ ಅಭಿವೃದ್ಧಿಯ ಲಾಭವನ್ನು ಪಡೆಯಬಹುದು. ಹೀಗಾಗಿ ಭಾರತದ ಆರ್ಥಿಕ ಬೆಳವಣಿಗೆಯನ್ನು ಹೇಗೆ ನೋಡುತ್ತಿದ್ದೀರಿ ಮತ್ತು ಅದರ ಲಾಭವನ್ನು ಪಡೆಯಬಲ್ಲಿರಿ ಎಂಬುದು ನಿರ್ಣಾಯಕ ಮತ್ತು ನಿಮ್ಮ ಬದುಕಿನಲ್ಲಿ ಪರಿಣಾಮಕಾರಿಯಾಗುತ್ತದೆ. ನೀವು ನಿರಾಶಾವಾದಿಗಳಾಗಿ ಭಾರತದ ಆರ್ಥಿಕತೆಯನ್ನು ಚೀನಾದ ಜತೆಗೆ ಹೋಲಿಸುತ್ತಾ, ಹಳಹಳಿಸಿದರೆ ಅದರಿಂದ ನಷ್ಟ ಚೀನಾ ಅಥವಾ ಭಾರತಕ್ಕಲ್ಲ, ಸ್ವತಃ ನಿಮಗೇ ಆಗಲಿದೆ ಎಂಬುದನ್ನು ಮರೆಯುವಂತಿಲ್ಲ.

ಭಟ್ಟರ್ ಸ್ಕಾಚ್

- **ಆವಿಕ್ ಬ.ಗೊಂದಿಮನೆ, ಕಡೂರು**
  ಭಟ್ರೇ, ವಿಧಾನಸೌಧ ಸುತ್ತ ನಡೆದ ಪುಸ್ತಕಮೇಳದಲ್ಲಿ ಗ್ರಂಥಾಲಯ ಸಚಿವ ಮಧು ಬಂಗಾರಪ್ಪ ಅವರ ಪಾತ್ರವೇನಿತ್ತು?
- **ಪುಸ್ತಕಗಳಿಗೂ ಮಧು ಬಂಗಾರಪ್ಪನವರಿಗೂ ಯಾವ ಸಂಬಂಧವೂ ಇಲ್ಲವಲ್ಲ?!**

- **ರುಕ್ಕು, ಚಾಮರಾಜಪೇಟೆ**
  ಭಟ್ರೇ, ಅವೆನ್ಯೂ ರೋಡ್ ಬದಿಯಲ್ಲಿ ರಾಶಿ ರಾಶಿ ಮಡಕೆ ನೋಡಿದ ಬೆಂಗಳೂರು ನೀರೆಯರಿಗೆ ಏನು ಯೋಚನೆ ಬರಬಹುದು?
- **ಊರ ಮಧ್ಯೆ ಹರಿಯುವ ವೃಷಭಾವತಿ ಸ್ವಚ್ಛವಾಗಿದ್ದರೆ ಸೊಂಟ ಬಳುಕಿಸುತ್ತ ಒಂದು ಬಿಂದಿಗೆ ನೀರನ್ನಾದರೂ ಒಯ್ಯಬಹುದಿತ್ತು!**

- **ಪೂರ್ಣಯ್ಯ ಕೆ., (ಇಮೇಲ್ ಮೂಲಕ)**
  ಭಟ್ರೇ, ಟೂ ವೀಲರ್ ಹಿಂದೆ ಕೂರುವವರಿಗೆ ಹೆಲ್ಮೆಟ್ ಕಡ್ಡಾಯ ಮಾಡಿದ ಮಾತ್ರಕ್ಕೆ ಜೀವ ಭದ್ರತೆ ಕೊಟ್ಟಂಗಾಯ್ತಾ?
- **ಹೆಲ್ಮೆಟ್ ಕಂಪನಿಯವರಿಗೆ ಮಾತ್ರ ಉದ್ಯೋಗ ಖಾತ್ರಿ ಮಾಡಿದಂಗಾಯ್ತು!**

- **ತಿಟ್ಟೆ ಕೃಷ್ಣಮೂರ್ತಿ, ಸೋಸಲೆ**
  ಭಟ್ರೇ, ಜಾಮ್ ನಗರದ ವನದಲ್ಲಿ ಮೋದಿ ಸಿಂಹದೊಂದಿಗೆ ಫೋಟೋ ಹೊಡೆಸಿಕೊಂಡಿದ್ದನ್ನು ನೋಡಿ ಕಾಂಗ್ರೆಸ್ಸಿಗರು ಏನಂದ್ರು?
- **ಮೂಕ, ಅಶಕ್ತ ಪ್ರಾಣಿಗಳೊಂದಿಗೆ ಫೋಟೋ ತೆಗೆಸಿಕೊಂಡಿದ್ದರಲ್ಲಿ ಹೆಚ್ಚುಗಾರಿಕೆ ಏನು ಬಂತು!?**

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
  ಭಟ್ರೇ, ಮೊಯಿಲಿ ಡಿಕೆಶಿ ಪರ ಬ್ಯಾಟಿಂಗ್ ಮಾಡಿದ್ದಾರಲ್ಲ?
- **ಅವರು ಮಹಾಕಾವ್ಯ ಬರೆದುಕೊಂಡಿದ್ದರೇ ಒಳ್ಳೆಯದಿತ್ತು ಅಂತ ಕಾಂಗ್ರೆಸ್ಸಿಗರಿಗೆ ಅನಿಸಿರಬಹುದು!**

- **ಎಲ್.ವಿ.ಸತೀಶ, ಮೈಸೂರು**
  ಭಟ್ರೇ, ಕೊಚ್ಚೆ ಗುಂಡಿಗಿಂತ ಗಲೀಜಾಗಿರುವುದು ಯಾವುದು?
- **ಮನುಷ್ಯರ ಮನಸ್ಸು!**

- **ವಿ.ಹೇಮಂತಕುಮಾರ, ಬೆಂಗಳೂರು**
  ಭಟ್ರೇ, ಒಂದು ವೇಳೆ ಚಂದ್ರನಿಲ್ಲದಿದ್ದರೆ ಏನಾಗುತ್ತಿತ್ತು?
- **ಸೂರ್ಯನಿಲ್ಲದಿದ್ದರೆ ಏನಾಗುತ್ತಿತ್ತು ಅಂತ ಕೇಳಿದ್ದರೆ ಉತ್ತರಿಸುತ್ತಿದ್ದೆ!**

- **ರಾಜು ಹೊನ್ನಾವರ, ಬೆಂಗಳೂರು**
  ಭಟ್ರೇ, ನಾರಾಯಣ ಗೌಡರ ವಿರುದ್ಧ ನೀವೇಕೆ ಬರೆಯುವುದಿಲ್ಲ?
- **ಅವರ ವಿರುದ್ಧ ಬರೆಯುವಂಥ ಯಾವ ಕೆಲಸವನ್ನೂ ಅವರು ಮಾಡಿಲ್ಲವಲ್ಲ?!**

ಜನಪದ ನಂಬಿಕೆಗಳ ಆಗರ ಈ ಪ್ರಾಕೃತಿಕ ಸೊಬಗಿನ ಬಂಡೆ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಹಳ್ಳಿಯಲ್ಲಿ ವಾಸಿಸುವವರಿಗೆ ಒಂದು ಲಾಭವಿದೆ; ತಮ್ಮ ಊರಿನ ಸುತ್ತಲೂ ಇರುವ ಬಂಡೆ, ಗುಡ್ಡ, ಬಯಲು, ಕೆರೆ, ತೋಡು, ಹಾಡಿ, ಹಕ್ಕಲು, ಕಾನ, ಮದಗ, ಬ್ಯಾಣ ಮೊದಲಾದವುಗಳನ್ನು ಪರಿಶೋಧಿಸುವ ಅಪರೂಪದ ಅವಕಾಶ ಹಳ್ಳಿಯ ಹುಡುಗರಿಗೆ ಮಾತ್ರ ಲಭ್ಯ. ಯಾವುದೇ ಹಳ್ಳಿಯನ್ನು ಗಮನಿಸಿ, ಊರಂಚಿನಲ್ಲಿ ಒಂದು ಕೆರೆ ಅಥವಾ ಒಂದು ಬಂಡೆ ಇದ್ದೇ ಇರುತ್ತದೆ. ಅಲ್ಲೆಲ್ಲಾ ನಾನಾ ರೀತಿಯ ವೈಚಿತ್ರ್ಯಗಳು, ವಿಸ್ಮಯಗಳು ಅಡಗಿರುತ್ತವೆ. ಕೆಲವು ಕಡೆ ಪುರಾತನ ಮಾನವನ ಚಟುವಟಿಕೆಗಳನ್ನು ಸಹ ಗುರುತಿಸಬಹುದು.

ನಮ್ಮ ಹಳ್ಳಿಮನೆಯಿಂದ ಸುಮಾರು 5 ಕಿ.ಮೀ. ದೂರದಲ್ಲಿ ತಾರಿಕಟ್ಟೆ ಎಂಬ ಹಳ್ಳಿಯಿದೆ. ಈಗಿನ ದಿನಗಳಲ್ಲಿ ಬೈಕ್ ಅಥವಾ ಬೇರೊಂದು ವಾಹನ ಏರಿ ಹೊರಟರೆ 20 ನಿಮಿಷಗಳಲ್ಲಿ ತಾರಿಕಟ್ಟೆ ತಲುಪಬಹುದು; ಹಿಂದಿನ ದಿನಗಳಲ್ಲಿ ಅಂದರೆ ಒಂದೂರಿನಿಂದ ಇನ್ನೊಂದು ಊರಿಗೆ ಹೋಗಲು ನಡಿಗೆಯೇ ಪ್ರಧಾನವಾಗಿದ್ದ ದಿನಗಳಲ್ಲಿ, ಅಲ್ಲಿಗೆ 60 ನಿಮಿಷಗಳ ಹಾದಿ. ನಮ್ಮ ಮನೆಯಿಂದ ಪೂರ್ವಕ್ಕೆ ಸಾಗುವ ಚೇರ್ಕಿ ಬೈಲಿನಲ್ಲಿ ಅರ್ಧ ಕಿ.ಮೀ. ನಡೆದು, ಹರನಗುಡ್ಡೆಯ 120 ಕಲ್ಲಿನ ಮೆಟ್ಟಿಲುಗಳನ್ನೇರಿ, ಅಲ್ಲಿ ಎದುರಾಗುವ ದಟ್ಟ ಹಾಡಿಯಲ್ಲಿ ಹತ್ತು ನಿಮಿಷ ಹೆಜ್ಜೆ ಹಾಕಿ, ನಂತರದ ಬಯಲಿನ ಮೂಲಕ ಸಾಗಿ, ಹಿಲಿಯಾಣದ ಬಳಿ ದಾರಿಗೆದುರಾಗುವ ಆಮರಕಲ್ಲನ್ನು ನೋಡುತ್ತಾ, ಬಾವಣೆ ತೋಡು ಮತ್ತು ಕೊಟಬಚ್ಚಲು ಹೊಳೆಗಳನ್ನು ದಾಟಿದ ನಂತರ ಸಿಗುವುದೇ ತಾರಿಕಟ್ಟೆ ಪೇಟೆ. ಹಿಂದಿನ ದಿನಗಳಲ್ಲಿ ಅಲ್ಲಿ ಒಂದೆರಡು ಪುಟ್ಟ ಅಂಗಡಿಗಳಿದ್ದುದರಿಂದ ಪೇಟೆ ಎಂಬ ಹೆಸರು; ಅಲ್ಲಿರುವ ಬೃಹದಾಕಾರದ, ನೂರಾರು ವರ್ಷ ಹಳೆಯದಾದ ತಾರಿಮರದಿಂದಾಗಿ ಆ ಹಳ್ಳಿಗೆ ತಾರಿಕಟ್ಟೆ ಎಂಬ ಹೆಸರು ಬಂದಿದ್ದರೂ, ನಾನೀಗ ಪ್ರಸ್ತಾಪಿಸುತ್ತಿರುವುದು ಅಲ್ಲೇ ಸನಿಹದಲ್ಲಿದ್ದ ಮದಗವನ್ನು.

ತಾರಿಕಟ್ಟೆಯಲ್ಲಿನ ತಾರಿ ಮರದಿಂದ ಸುಮಾರು ಅರ್ಧ ಕಿ.ಮೀ. ದೂರದಲ್ಲಿ, ಮರ-ಗಿಡಗಳ ನಡುವೆ ಒಂದು ಮದಗವಿತ್ತು. ಆ ಮದಗದ ಅಂಚಿನಲ್ಲೇ ಒಂದು ಕಾಲ್ದಾರಿ; ಕುರುಚಲು ಕಾಡು, ಗೋವೆ ಹಾಡಿ, ಅಲ್ಲಲ್ಲಿ ಎತ್ತರವಾದ ಬೋಗಿ ಮರಗಳು ಮತ್ತು ಕರಡದ ನಡುವೆ ಸಾಗುವ ಆ ದಾರಿಯು, ಮದಗದ ನಡುವೆಯೇ ಹಾದುಹೋಗುತ್ತಿತ್ತು. ಮಳೆಗಾಲ ಆರಂಭವಾಗಿ ಒಂದೆರಡು ವಾರಗಳಲ್ಲೇ ಆ ಮದಗದಲ್ಲಿ ನೀರು ತುಂಬುತ್ತಿತ್ತು. ಸುತ್ತಲೂ ಇರುವ ಹಾಡಿ, ಗುಡ್ಡಗಳಲ್ಲಿ ಬಿದ್ದ ಮಳೆಯ ನೀರು, ಮಣ್ಣನ್ನು ಕೊಚ್ಚಿಕೊಂಡು ಹರಿದು ಬಂದು, ಮದಗದಲ್ಲಿ ನಿಲ್ಲುತ್ತದೆ. ಮಳೆನೀರನ್ನು ಸಂಗ್ರಹಿಸಲು ಮಾಡಿದ ಪುಟ್ಟ ಕೆರೆ ಅದು. ನೀರು ತುಂಬಿದಾಗ, ಅದರ 'ಏರಿ'ಯ ಮೇಲೆ ಕಾಲ್ದಾರಿ ಸಾಗುತ್ತಿತ್ತು. ಅಲ್ಲೂ ಮರಗಿಡಗಳು ಬೆಳೆದಿದ್ದವು. ಮಳೆಗಾಲ ಮುಗಿಯುವ ತನಕ, ಅಂದರೆ ಸುಮಾರು ಮೂರ್‍ನಾಲ್ಕು ತಿಂಗಳುಗಳ ಕಾಲ ಅಲ್ಲಿ ನೀರು ನಿಂತಿರುತ್ತಿತ್ತು.

ಆದರೆ ನಾನು ಕಂಡಂತೆ, ಆ ಮದಗದ ನೀರನ್ನು ಕೃಷಿಗೆ ಬಳಸುವುದು ಕಡಿಮೆಯೇ; ಆ ಮದಗದ ಕೆಳಭಾಗದಲ್ಲಿದ್ದ ಕೆಲವೇ ಗದ್ದೆಗಳಿಗೆ ಆ ನೀರಿನ ಬಳಕೆ. ಹಿಂದಿನವರು ಈ ಕಾಡುಗುಡ್ಡದ ನಡುವೆ ನೀರನ್ನು ಸಂಗ್ರಹಿಸುವ ವ್ಯವಸ್ಥೆ ಮಾಡಿದ್ದನ್ನು ಕಂಡು ಸಣ್ಣ ವಿಸ್ಮಯವೂ ಮೂಡುತ್ತಿತ್ತು. ಆ ನೀರಿನ ಸಂಗ್ರಹದಿಂದಾಗಿ, ಮದಗ ಎಂದರೆ ನೀರು ನಿಲ್ಲುವ ಸ್ಥಳ ಎಂದು ಗೊತ್ತಾಗಿತ್ತು; ನಂತರದ ವರ್ಷಗಳಲ್ಲಿ ನಮ್ಮ ನಾಡಿನ ಕಡೂರು, ಮಾಸೂರು ಮೊದಲಾದ ಕಡೆ ಇರುವ 'ಮದಗದ ಕೆರೆ'ಗಳ ವಿಚಾರ ತಿಳಿದು, ಹಿಂದಿನ ಜನರು ಮಳೆನೀರು ಸಂಗ್ರಹಿಸಲು ಮದಗದಂಥ ಕೆರೆಗಳನ್ನು ನಿರ್ಮಿಸುವಲ್ಲಿ ಸಿದ್ಧಹಸ್ತರು ಎಂದು ಗೊತ್ತಾಯಿತು.

ಈಗ ಆ ಮದಗ ಮರೆಯಾಗಿದೆ! ಅಲ್ಲೀಗ ನೀರು ತುಂಬುವುದಿಲ್ಲ! ಆಗಿನ ಕಾಲದ ಮಳೆಗಾಲದಲ್ಲಿ ನೀರು ನಿಲ್ಲುತ್ತಿದ್ದ ಜಾಗದಲ್ಲಿಂದು ಕುರುಚಲು ಕಾಡು, ಕಳೆ ಗಿಡಗಳು ಬೆಳೆದಿವೆ; ಅಲ್ಲಲ್ಲಿ ಅಕೇಶಿಯಾ ಮರಗಳೂ ಕಾಣಿಸಿಕೊಂಡಿವೆ; ಹತ್ತಿರದಲ್ಲೇ ಇದ್ದ 'ಕಿಸ್ಕಾರ್‌ಜಡ್ ಅರೆಕಲ್ಲ'ನ್ನು ಪುಡಿ ಮಾಡಿ ಲಾರಿಗಳಲ್ಲಿ ಸಾಗಿಸುವ ಕ್ವಾರಿಯತ್ತ ಸಾಗುವ ಒಂದು ಕಚ್ಚಾ ರಸ್ತೆಯೂ ಇದರ ಸನಿಹದಲ್ಲಿ ಹಾದುಹೋಗಿದೆ. ಆ ಭಾಗದಲ್ಲೊಂದು ಮಳೆನೀರು ಸಂಗ್ರಹದ ನಿರ್ಮಾಣವಿತ್ತು ಎಂಬುದು ಈಗ ಮರೆತೇಹೋಗಿರುವಂಥ ಸನ್ನಿವೇಶ!

ಇದೇ ತಾರಿಕಟ್ಟೆಗೆ ನಡೆದು ಸಾಗುವ ದಾರಿಗೆ ಅಡ್ಡಲಾಗಿ ಕೊಟಬಚ್ಚಲು ಹೊಳೆ ಎಂಬ ತೊರೆಯಿದೆ. ಆಮರಕಲ್ಲು ಎಂಬ ಬೃಹದಾಕಾರದ ಬಂಡೆಗಿಂತ ತುಸುದೂರದಲ್ಲಿದೆ ಆ ಹೊಳೆ. ಕಾಲ್ದಾರಿಗೆ ಅಡ್ಡಲಾಗಿದ್ದ ಆ ಹೊಳೆಯನ್ನು ನಡೆದು ದಾಟಿ ನಾವು ಮುಂದುವರಿಯಬೇಕಿತ್ತು. ಇಲ್ಲಿ 'ಹೊಳೆ' ಎಂದರೆ ದೊಡ್ಡ ನದಿಯೇನಲ್ಲ, ಬದಲಿಗೆ ಕಾಡಿನ ನಡುವೆ ಹರಿಯುವ ದೊಡ್ಡ ಗಾತ್ರದ ತೊರೆ. ನಮ್ಮೂರಿನ ಜನರು ಚಿಕ್ಕ ಗಾತ್ರದ ತೊರೆಯನ್ನು ತೋಡು ಎಂದು ಕರೆದರು, ತುಸು ದೊಡ್ಡಗಾತ್ರದ ತೊರೆಯನ್ನು 'ಹೊಳೆ' ಎಂದರು. ಹಿಂದೆ ಕಾಡಾಗಿದ್ದ, ಈಗ ಗುಡ್ಡೆಯ ಸ್ವರೂಪ ಪಡೆದಿರುವ ಭೂಪ್ರದೇಶದ ನಡುವೆ ಹರಿಯುವ ಕೊಟಬಚ್ಚಲು ಹೊಳೆಯು, ಮಳೆಗಾಲದಲ್ಲಿ ನೀರಿನಿಂದ ತುಂಬಿ ಹೋಗುತ್ತದೆ. ಜಡಿಮಳೆ ಸುರಿಯುವಾಗ, ಇದನ್ನು ದಾಟುವುದು ಕಷ್ಟ; ಅದಕ್ಕೆಂದೇ ಮಳೆಗಾಲದಲ್ಲಿ ಅದನ್ನು ದಾಟಲು ಒಂದು ಸಾರ ಅಥವಾ ಸಂಕವನ್ನು ತುಸು ಮೇಲ್ಭಾಗದಲ್ಲಿ ಹಳ್ಳಿಯವರೇ ನಿರ್ಮಿಸುತ್ತಿದ್ದರು.

ನಡುನಡುವೆ, ಒಂದೊಂದು ವರ್ಷದ ಮಳೆಗಾಲದಲ್ಲಿ ಆ ಸಂಕವು ನೆರೆಯಲ್ಲಿ ಕೊಚ್ಚಿಹೋಗುತ್ತಿದ್ದುದುಂಟು; ಆಗ ಆ ಹಳ್ಳವು ನಿಜವಾಗಿಯೂ ಹೊಳೆಯೇ! ಮಳೆಗಾಲ ಮುಗಿದು, ಚಳಿಗಾಲದ ಆರಂಭದ ತನಕವೂ ಇದರಲ್ಲಿ ಉಜರು ನೀರು (ಝರಿ) ಹರಿಯುತ್ತದೆ. ಫೆಬ್ರವರಿಯ ಸಮಯದಲ್ಲಿ ಪೂರ್ತಿ ಬತ್ತುತ್ತದೆ. ನಂತರದ ನಾಲ್ಕು ತಿಂಗಳುಗಳ ಕಾಲ, ಆ ಪಾತ್ರದಲ್ಲಿ ಸಣ್ಣ ಪುಟ್ಟ ಕಲ್ಲುಗಳ ದರ್ಶನ. ಜೂನ್‌ನಲ್ಲಿ ಇದು ಮತ್ತೆ ನೀರಿನಿಂದ ತುಂಬಿಕೊಳ್ಳುತ್ತದೆ. ಕೊಟಬಚ್ಚಲು ಹೊಳೆ ಹರಿಯುವ ದಾರಿಯುದ್ದಕ್ಕೂ ಬಹು ಹಿಂದೆ ದಟ್ಟ ಕಾಡಿತ್ತು; ಕ್ರಮೇಣ ಎಲ್ಲಾ ಮರಗಳನ್ನೂ ಮನುಷ್ಯರೇ ಕಡಿದುಹಾಕಲಾಗಿ, ಈಗ ಕುರುಚಲು ಕಾಡು, ಹಕ್ಕಲು ಮತ್ತು ಗುಡ್ಡಗಳಿವೆ. ಅಲ್ಲಲ್ಲಿ ರಬ್ಬರು ತೋಟಗಳೂ ತಲೆ ಎತ್ತಿವೆ. ಆದ್ದರಿಂದ, ಹಿಂದೆ ವರ್ಷಪೂರ್ತಿ ಹರಿಯುತ್ತಿದ್ದಿರಬಹುದಾದ ಆ 'ಹೊಳೆ', ಈಗ ಆರು ತಿಂಗಳುಗಳ ಕಾಲ ಬತ್ತಿರುತ್ತದೆ. ಬೇಸಗೆಯಲ್ಲಿ ಪೂರ್ತಿ ಒಣಗುವ ಕೊಟಬಚ್ಚಲು ಹೊಳೆಯು ಮುಂದೆ ಸಾಗಿ ಸೀತಾನದಿಯನ್ನು ಕೂಡಿಕೊಳ್ಳುತ್ತದೆ.

ನಮ್ಮ ಮನೆಯಿಂದ ಕಾಲ್ದಾರಿ ಹಿಡಿದು ತಾರಿಕಟ್ಟೆಗೆ ಹೊರಟರೆ ಸಿಗುವ ಇನ್ನೊಂದು ದೊಡ್ಡ ತೋಡು ಎಂದರೆ ಬಾವಣೆ ತೋಡು. ಚಳಿಗಾಲದ ತನಕವೂ ಸ್ವಲ್ಪ ತಿಳಿನೀರು ಹರಿಯುವ ಈ ತೋಡಿನಲ್ಲಿ ಕಾಲಾಡಿಸುತ್ತಾ, ನಡಿಗೆಯಿಂದ ಬಳಲಿದ ಮುಖಕ್ಕೆ ನೀರು ಸಿಂಪಡಿಸಿಕೊಂಡು ಮುಂದುವರಿಯುವುದು ಕ್ರಮ. ಕೊಟಬಚ್ಚಲು ಹೊಳೆಗಿಂತ ಬಾವಣೆ ತೋಡು ಸ್ವಲ್ಪ ಚಿಕ್ಕದು. ಆದರೆ ಈ ತೋಡು ಸಾಗುವ ದಾರಿಯುದ್ದಕ್ಕೂ 'ನಾಗೇರ್ತಿ ಕಾನು' ಇರುವುದರಿಂದ, ಈ ತೋಡಿಗೆ ಭೀಮಬಲ. ಕಾನು ಎಂಬ ಪದಕ್ಕೆ ಗೌರವ ತುಂಬಿಕೊಡುವಂಥ ದಟ್ಟವಾದ, ವಿಶಾಲವಾದ ಕಾಡು ಇಲ್ಲಿದ್ದು, ಆ ಪ್ರದೇಶವೆಲ್ಲಾ ದೊಡ್ಡ ದೊಡ್ಡ ಮರಗಳಿಂದ, ಬಳ್ಳಿಗಳಿಂದ ತುಂಬಿಹೋಗಿದೆ. ವಿಶೇಷವೆಂದರೆ, ಕಳೆದ ಹಲವು ದಶಕಗಳಿಂದಲೂ ಅಲ್ಲಿ ಮರಗಳನ್ನು ಕದ್ದು ಮುಚ್ಚಿ ಕಡಿಯುತ್ತಲೇ ಇದ್ದರೂ, ಆ ಕಾಡು ಇಂದಿಗೂ ತಕ್ಕಮಟ್ಟಿಗೆ ಉಳಿದುಕೊಂಡಿದೆ! ಇಂದು ಈ ಕಾಡನ್ನು ಮತ್ತು ಇಂಥ ಹಲವು ಕಾಡುಗಳನ್ನು ರಕ್ಷಿಸಿರುವುದು ಸರಕಾರ ರೂಪಿಸಿರುವ ಕಾನೂನುಗಳು.

ನಾಗೇರ್ತಿ ಕಾನಿನ ಮರಗಳು ನೀಡುವ ಜಲಾಶ್ರಯದಿಂದಾಗಿ, ಬಾವಣೆ ತೋಡಿನಲ್ಲಿ ವರ್ಷದ ಬಹುಭಾಗ ನೀರು ಹರಿಯುತ್ತಿರುತ್ತದೆ. ಐದು ನಾಗಕನ್ನಿಕೆಯರ (ನಾಗ ದೇವತೆಗಳ) ಪ್ರಸಿದ್ಧ ಐತಿಹ್ಯದ ಭಾಗವಾಗಿರುವ ನಾಗರತಿಗೆ ಈ ನಾಗೇರ್ತಿ ಕಾನಿನಲ್ಲಿ ಒಂದು ಪುಟ್ಟ ದೇಗುಲವಿರುವುದೂ ವಿಶೇಷ; ಚಾವಣಿಯಲ್ಲದೇ ಆ ದೇಗುಲವನ್ನು ನಿರ್ಮಿಸಬೇಕೆಂಬ ಪುರಾತನ ನಂಬಿಕೆಗೂ ಇಲ್ಲಿ ಗೌರವ ನೀಡಲಾಗಿದೆ (ಇನ್ನಿತರ ನಾಗದೇವತೆಗಳೆಂದರೆ ಮಂದರ್ತಿ, ಚಾರುರತಿ, ದೇವರತಿ, ನೀಲರತಿ). ನಾಗೇರ್ತಿ ಕಾನು ಎಂಬ ದೇವರ ಕಾಡು, ಅಲ್ಲಿನ್ನೂ ಉಳಿದುಕೊಂಡಿರುವ ಹಸಿರು ಸಿರಿ, ಮರಗಿಡಗಳು, ಆ ಕಾಡಿನಂಚಿನಲ್ಲಿ ಹರಿಯುವ ಬಾವಣೆ ತೋಡು, ಐವರು ನಾಗಕನ್ನಿಕೆಯರ ಐತಿಹ್ಯಗಳು- ಇವೆಲ್ಲವೂ ಈ ಪರಿಸರದ ಜನಪದ ಶ್ರೀಮಂತಿಕೆಯನ್ನು ಕಟ್ಟಿಕೊಡುವುದರ ಜತೆಗೆ, ಜಲಸಂರಕ್ಷಣೆಗೂ ಒತ್ತು ನೀಡುವುದನ್ನು ಗಮನಿಸಬಹುದು. ಆ ಮೂಲಕ ಬದುಕಿಗೆ ಅಗತ್ಯ ಎನಿಸಿರುವ ನೀರಿನ ಲಭ್ಯತೆ, ಗೊಬ್ಬರಕ್ಕಾಗಿ ಹಸಿರು ಸೊಪ್ಪಿನ ಲಭ್ಯತೆಗೆ ಅವಕಾಶವಾಗಿದೆ.

ಇದೇ ಕಾಡುದಾರಿಯಲ್ಲಿ ಎದುರಾಗುವ 'ಆಮರಕಲ್ಲು' ಎಂಬ ಬೃಹದಾಕಾರದ ಬಂಡೆಯು, ಹಲವು ಐತಿಹ್ಯಗಳ ಆಗರ! ಶತಶತಮಾನಗಳಿಂದ ಅದರ ಮೇಲೆ ಮಳೆ ಸುರಿದು, ಪಾಚಿಗಟ್ಟಿ, ಬಿಸಿಲು ಬಿದ್ದು ಒಣಗಿದ್ದರಿಂದಾಗಿ, ಅದರ ಮೇಲ್ಮೈ ಪೂರ್ಣ ಕಪ್ಪು ಬಣ್ಣ. ನಮ್ಮ ಹಳ್ಳಿಯಿಂದ ತಾರಿಕಟ್ಟೆಗೆ ನಡೆದು ಸಾಗುವಾಗ, ನಾವೆಲ್ಲಾ ಒಮ್ಮೊಮ್ಮೆ ಈ ಆಮರಕಲ್ಲನ್ನು ಏರಿ, ಅಲ್ಲಿಂದ ಕಾಣುವ ಭೂದೃಶ್ಯವನ್ನು ನೋಡಲು ಹೋಗುತ್ತಿದ್ದೆವು (ಈಗ ಇದನ್ನು 'ಅಮರಶಿಲೆ' ಎಂಬ ಸಂಸ್ಕೃತೀಕರಿಸಿದ ಹೆಸರಿನಿಂದ, ತುಸು ತಪ್ಪಾಗಿ ಕರೆಯುವುದುಂಟು! ಹಳೆಯ ಹೆಸರೇ ಚಂದ, ಅಲ್ಲವೆ?). ದೊಡ್ಡ ಗಾತ್ರದ ಈ ಕಲ್ಲಿನ ಇಳಿಜಾರಿನಂಥ ಮೇಲ್ಮೈಯನ್ನು ಏರುತ್ತಾ ಹೋದರೆ, ನೆಲಮಟ್ಟದಿಂದ ಸುಮಾರು ಐವತ್ತು ಅಡಿ ಎತ್ತರದ, ಮಟ್ಟಸವಾದ ತುದಿಯನ್ನು ತಲುಪಬಹುದು. ಸುಮಾರು ಮುನ್ನೂರು ಅಡಿ ಉದ್ದ ಮತ್ತು ಇನ್ನೂರು ಅಡಿ ಅಗಲವಿರುವ ಆಮರಕಲ್ಲನ್ನು ಏರುವುದು, ನೋಡುವುದು ಎಂದರೆ ಅದೊಂದು ಅನನ್ಯ ಅನುಭವ.

ಕಲ್ಲಿನ ಮೇಲೇರಿದಂತೆಲ್ಲಾ ವಿಶಾಲವಾದ, ತುಸು ಏರುತಗ್ಗಾದ ಮಟ್ಟಸ ಜಾಗವೂ ಕಾಣುತ್ತದೆ. ಆ ಎತ್ತರದಲ್ಲಿ 'ಅಕ್ಕತಂಗಿಯರ ಹೊಂಡ' ಎಂಬ ಎರಡು ರಚನೆಗಳಿವೆ. ಮೇಲ್ನೋಟಕ್ಕೆ ಎರಡು ದೊಡ್ಡ ಹೊಂಡಗಳು ಒಂದರ ಪಕ್ಕ ಒಂದು ಕಾಣಿಸುತ್ತವೆ. ಮತ್ತು ಆ ಹೊಂಡಗಳಲ್ಲಿ ಸಾಮಾನ್ಯವಾಗಿ ನೀರು ತುಂಬಿರುತ್ತದೆ! ಮಳೆಗಾಲದಲ್ಲಿ ಮತ್ತು ಅಕಾಲದಲ್ಲಿ ಸುರಿಯುವ ಮಳೆನೀರು ಅಲ್ಲಿ ಸಂಗ್ರಹಗೊಳ್ಳುವುದು ವಿಶೇಷ. ಪುರಾತನ ಕಾಲದಲ್ಲಿ ಮಾನವನೇ ಮಳೆನೀರನ್ನು ಸಂಗ್ರಹಿಸಲು ಆ ಎರಡು ಗುಂಡಿಗಳನ್ನು ಮಾಡಿರಲೂ ಬಹುದು!

ಪುರಾತನ ಮಾನವರು ಮಾಡಿರಬಹುದಾದ ಇನ್ನೂ ಕೆಲವು ಕುತೂಹಲಕಾರಿ ರಚನೆಗಳು, ಬಂಡೆಯ ಹಾಸುಗಳು ಆ ಬಂಡೆಯ ಮೇಲೆ ಇವೆ. ಅಂಥವುಗಳಲ್ಲಿ ಕಳ್ಳರ ಕೋಣೆ, ಕೆಲವು ಕಲ್ಲಿನ ಹಾಸುಗಳು, ಚೌಕಾಕಾರ ಎನ್ನಬಹುದಾದ ಕಲ್ಲುಗಳು ಇವೆ. ಆ ಬಂಡೆಯ ಮೇಲೆ ಕುಳಿತು, ಉತ್ತರತುದಿಯಲ್ಲಿ ಕಾಣಿಸುವ ಕೊಡಚಾದ್ರಿ ಶಿಖರ, ಪೂರ್ವ ದಿಗಂತದ ಉದಕ್ಕೂ ಸಾಗಿರುವ ಸಹ್ಯಾದ್ರಿ ಶ್ರೇಣಿಯನ್ನು ನೋಡುವ ಅನುಭವ ವಿಶಿಷ್ಟ. ಗುಡ್ಡ, ಹಾಡಿ, ಹಕ್ಕಲು, ಬ್ಯಾಣಗಳ ನಡುವೆ ಇರುವ ಈ ಬೃಹತ್ ಕಲ್ಲು, ಆ ಕಲ್ಲಿನ ತುದಿಯಲ್ಲಿರುವ ಎರಡು ಹೊಂಡಗಳು, ಆ ಹೊಂಡಗಳಲ್ಲಿ ಸದಾಕಾಲ ತುಂಬಿಕೊಂಡಿರುವ ನೀರು, 'ಅಕ್ಕತಂಗಿಯರ ಹೊಂಡ' ಎಂದು ಜನಪದರು ಮಾಡಿರುವ ನಾಮಕರಣ, ಆ ಬಂಡೆಯನ್ನೇರಿದಾಗ ಕಾಣಿಸುವ ಸುತ್ತಲಿನ ನಿಸರ್ಗ ಎಲ್ಲವೂ, ಒಂದು ಪ್ರಾಕೃತಿಕ ಕಾವ್ಯದ ಭಾಗವಾಗಿ ನನಗೆ ಕಾಣಿಸುತ್ತವೆ.

ಆಮರಕಲ್ಲು ಮತ್ತು ಅದರ ತುದಿಯಲ್ಲಿರುವ 'ಅಕ್ಕತಂಗಿಯರ ಹೊಂಡ'ದಲ್ಲಿರುವ ನೀರನ್ನು (ಮಳೆಗಾಲದಲ್ಲಿ) ಇಂದಿಗೂ ನೋಡಬಹುದು. ಆದರೆ ಈ ರೀತಿಯ ಪ್ರಾಕೃತಿಕ ಬಂಡೆಗಳಿಗೆ, ಈಗಿನ ಆಧುನಿಕ ಮನೋಭಾವದ ಮನುಷ್ಯನಿಂದಲೇ ಅಪಾಯವಿದೆ! ಆಮರಕಲ್ಲಿನ ಸುತ್ತಮುತ್ತಲೆಲ್ಲಾ ಕಲ್ಲುಕ್ವಾರಿಯ ಉದ್ಯಮದ ಚಟುವಟಿಕೆ ನಿರಂತರವಾಗಿ ನಡೆಯುತ್ತಲೇ ಇದೆ. ಇಲ್ಲಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿರುವ, ತಾರಿಕಟ್ಟೆ ಮದಗದ ಹತ್ತಿರವೇ ಇರುವ 'ಕಿಸ್ಕಾರ ಜಡ್ ಅರೆಕಲ್' ಅದಾಗಲೇ ಕಳೆದ ಮೂರ್‍ನಾಲ್ಕು ದಶಕಗಳ ಅವಧಿಯಲ್ಲಿ ಪುಡಿಪುಡಿಯಾಗಿದೆ; ಆಮರಕಲ್ಲಿನ ಗಾತ್ರಕ್ಕೆ ಹೋಲಿಸಬಹುದಾದಷ್ಟು ದೊಡ್ಡದಾಗಿದ್ದ, ಎತ್ತರವಾಗಿದ್ದ ಆ ಕಿಸ್ಕಾರ್ ಜಡ್ ಅರೆಕಲ್ ಎಂಬ ಬೃಹತ್ ಬಂಡೆಯು ಇಂದು ನೆಲಮಟ್ಟಕ್ಕಿಳಿದಿದ್ದು, ಅಲ್ಲಿನ ಕಲ್ಲು, ಜಲ್ಲಿ, ಬೇಬಿ ಜಲ್ಲಿ, ಪುಡಿ ಜಲ್ಲಿ ಎಲ್ಲವೂ ಲಾರಿಗಳಲ್ಲಿ ನಿರಂತರವಾಗಿ ಸಾಗಣೆಯಾಗಿವೆ; ಈ ರೀತಿಯ ಹಲವು ಬಂಡೆಗಳು, ಕಲ್ಲುಗಳು, ಅರೆಕಲ್ಲುಗಳು ಕಳೆದ ನಾಲ್ಕಾರು ದಶಕಗಳಲ್ಲಿ ಬಹುವೇಗವಾಗಿ ನಾಶವಾಗಿದ್ದು, ನಮ್ಮ ನಾಡಿನ ರಸ್ತೆಗಳಿಗೆ, ಕಟ್ಟಡಗಳಿಗಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಈಗಲೂ ಉಳಿದುಕೊಂಡಿರುವ ಆಮರಕಲ್ಲಿನಂಥ ಕೆಲವೇ ಕೆಲವು ಬೃಹತ್ ಬಂಡೆಗಳು, ಸಾವಿರಾರು ವರ್ಷ ಹಿಂದಿನ ಪಳೆಯುಳಿಕೆಗಳಾಗಿ, ಉಳಿದುಕೊಂಡಿವೆ; ಕೆಲವು ಜನಪದ ನಂಬಿಕೆಗಳ ಆಗರಗಳಾಗಿವೆ.

ಅಭಿಮತ

ಹೊಸೂರು ರತ್ನಾಕರ ಶೆಟ್ಟಿ, ಹಿರಿಯಡ್ಕ

ಟ್ರಂಪ್ ಎಂಬ ಎಡಬಿಡಂಗಿ

ವಿಶ್ವದ ದೊಡ್ಡಣ್ಣ ಎನಿಸಿಕೊಂಡಿರುವ ಅಮೆರಿಕವನ್ನು, ಪ್ರಜಾಪ್ರಭುತ್ವ ವ್ಯವಸ್ಥೆಯ ಅಚಲ ಪ್ರತಿಪಾದಕನೆಂದೇ ಜಗತ್ತು ನಂಬಿತ್ತು. ಜಗತ್ತಿನ ಯಾವುದೇ ಮೂಲೆಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಡ್ಡಿ-ಆತಂಕ ಒದಗಿದರೂ ಸೆಟೆದು ನಿಲ್ಲುವ ಛಾತಿ ಅಮೆರಿಕದ್ದಾಗಿತ್ತು. ಹೀಗಾಗಿ ಜಗತ್ತಿನ ಸಣ್ಣ ಪುಟ್ಟ ರಾಷ್ಟ್ರಗಳು ಕೂಡ ನಿರಾತಂಕವಾಗಿ ತಮ್ಮ ಆಳುಗ ವ್ಯವಸ್ಥೆಯೊಂದಿಗೆ ಮುನ್ನಡೆಯುತ್ತಿದ್ದವು.

ಆದರೆ, ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ನೂತನ ಅಧ್ಯಕ್ಷರಾಗಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತಲೇ ಎಲ್ಲವೂ ಅಯೋಮಯವಾಗುತ್ತಿದೆ.

ಅಮೆರಿಕವನ್ನು ತಮ್ಮ ದೃಷ್ಟಿಕೋನದಂತೆ ಮತ್ತಷ್ಟು ಬಲಾಢ್ಯವಾಗಿಸುವ ಪಣ ತೊಟ್ಟಿರುವ ಟ್ರಂಪ್, ಒಬ್ಬ ಸ್ವಾರ್ಥಿ, ಕ್ರೂರ, ಲೋಭಿ ವ್ಯಾಪಾರಿಯಂತೆ ವರ್ತಿಸುತ್ತಿರುವುದನ್ನು ಜಗತ್ತಿಗೆ ಜೀರ್ಣಿಸಿಕೊಳ್ಳಲು ಆಗುತ್ತಿಲ್ಲ. ತಾವು ಅಧಿಕಾರಕ್ಕೆ ಬರುತ್ತಿದ್ದಂತೆ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧವನ್ನು ಸಮಾಪ್ತಿಗೊಳಿಸುವುದಾಗಿ ಟ್ರಂಪ್ ತಮ್ಮ ಚುನಾವಣಾ ಪ್ರಚಾರ ಭಾಷಣದಲ್ಲಿ ಭರವಸೆ ನೀಡಿದಾಗ ಜಗತ್ತಿನ ಶಾಂತಿಪ್ರಿಯರು ಖುಷಿಪಟ್ಟಿದ್ದರು. ರಷ್ಯಾದ ಅಧ್ಯಕ್ಷ ಪುಟಿನ್ ಜತೆಗೆ ಮೊದಲಿನಿಂದಲೂ ಉತ್ತಮ ಬಾಂಧವ್ಯ ಹೊಂದಿದ್ದ ಟ್ರಂಪ್, ಈ ಯುದ್ಧವನ್ನು ನಿಲ್ಲಿಸಿ ಶಾಂತಿಸ್ಥಾಪನೆಗೆ ಯತ್ನಿಸುವರೆಂದೇ ಆಶಿಸಲಾಗಿತ್ತು. ಆದರೆ ಈಗ ನಡೆಯುತ್ತಿರುವುದು ಜಗತ್ತನ್ನೇ ದಿಗ್ಭ್ರಮೆಗೊಳಿಸಿದೆ.

ಹತಾಶ ಸ್ಥಿತಿ ತಲುಪಿದ ವ್ಯಕ್ತಿಗೆ ಬದುಕುವ ದಾರಿ ತೋರಿಸಬೇಕಾಗಿರುವುದು ಮಾನವ ಧರ್ಮ. ಆದರೆ ಯುದ್ಧದಿಂದಾಗಿ ಜರ್ಜರಿತವಾದ ಅಸಹಾಯಕ ಉಕ್ರೇನ್‌ಗೆ ನೆರವಾಗುವ ನೆಪದಲ್ಲಿ, ಅಲ್ಲಿನ ಖನಿಜ ಸಂಪತ್ತುಗಳ ಮೇಲೆ ಅಮೆರಿಕ ಕಣ್ಣಿಟ್ಟಿರುವುದನ್ನು ಅಲ್ಲಿನ ಪ್ರಜ್ಞಾವಂತ ಪ್ರಜೆಗಳು ಕೂಡ ಬೆಂಬಲಿಸಲಾರರು. ಉಕ್ರೇನ್ ಅಧ್ಯಕ್ಷರನ್ನು ಮಾತುಕತೆಗೆಂದು ಶ್ವೇತಭವನಕ್ಕೆ ಕರೆಸಿಕೊಂಡು, ಅವರು ತಮ್ಮ ತಾಳಕ್ಕೆ ತಕ್ಕಂತೆ ಕುಣಿಯಲಿಲ್ಲವೆಂಬ ಕಾರಣಕ್ಕೆ ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡು, ತರುವಾಯ ಅಲ್ಲಿಂದ ಹೊರಗೆ ಕಳಿಸಿದ್ದು ಅಮೆರಿಕದ ಘನತೆಗೆ ತಕ್ಕುದಾದ ಕ್ರಮವಂತೂ ಅಲ್ಲವೇ ಅಲ್ಲ.

(ಲೇಖಕರು ಹವ್ಯಾಸಿ ಬರಹಗಾರರು)

ಪಂಚ್ ಭಕ್ಷ್ಯ ಪರಮಾನ್ನ..!

ಯಗಟಿ ರಘು ನಾಡಿಗ್



ರಾಷ್ಟ್ರಗಳ ಜಗಳದ ಸುತ್ತ ಎದ್ದಿದೆ ಅನುಮಾನದ ಹುತ್ತ!

ಟ್ರಂಪಾಯಣ
ಜಿ. ಪ್ರತಾಪ್ ಕೊಡಂಚ
vveditoped@gmail.com

ಅಮೆರಿಕ ಅಧ್ಯಕ್ಷ ಟ್ರಂಪ್ ಮತ್ತು ಉಕ್ರೇನ್ ಅಧ್ಯಕ್ಷ ಝೆಲೆನ್ಸ್ಕಿ ನಡುವೆ ಇತ್ತೀಚೆಗೆ ಅಮೆರಿಕದ ಶ್ವೇತಭವನದಲ್ಲಿ ಶುರುವಾದ ಸಂಧಾನದ ಮಾತುಕತೆಯು ಚಕಮಕಿಯ ಕ್ರಾಂತಿಯಾಗಿ ಅಂತ್ಯಗೊಂಡಿದ್ದು ಈಗ ಎಲ್ಲೆಡೆಯ ಸುದ್ದಿ. 3 ವರ್ಷಗಳ ಯುದ್ಧ ಅಂತ್ಯವಾಗಲಿದೆ ಎಂಬ ಭರವಸೆಯಲ್ಲಿ ಸೇರಿದ್ದ ಅಮೆರಿಕ-ಉಕ್ರೇನ್ ನಾಯಕರುಗಳ ಮಾತುಕತೆಯು, 'ಮೂರನೆಯ ಮಹಾಯುದ್ಧ ನಡೆಯಲಿದೆಯೇ?' ಎಂಬ ಆತಂಕವನ್ನು ಸೃಷ್ಟಿಸಿದೆ.

ರಾಜಿ-ಸಂಧಾನಕ್ಕೆ ಬಹುಮುಖ್ಯವಾಗಿ ಬೇಕಾಗುವುದು ಜಗಳ ಮಾಡಿಕೊಂಡ 2 ರಾಷ್ಟ್ರಗಳ ನಾಯಕರುಗಳು; ಆದರೆ ರಷ್ಯಾ-ಉಕ್ರೇನ್ ಯುದ್ಧದ ವಿಷಯಕ್ಕೆ ಬಂದರೆ, ಆರಂಭದಿಂದಲೂ ಕಂಡುಬಂದಿದ್ದು ಉಕ್ರೇನ್ ಮತ್ತು ಅದರ ಬೆಂಬಲಕ್ಕೆ ನಿಂತ ಪಾಶ್ಚಾತ್ಯ ರಾಷ್ಟ್ರಗಳು ಒಂದೆಡೆ, ರಷ್ಯಾ ಇನ್ನೊಂದೆಡೆ ಎಂಬ ಇಬ್ಭಾಗದ ಪರಿಸ್ಥಿತಿ. ಉಳಿದ ಬಹುತೇಕ ರಾಷ್ಟ್ರಗಳ ನಿಲುವು- 'ತಾವಾಯ್ತು, ತಮ್ಮ ಪಾಡಾಯ್ತು, ತಂತಮ್ಮ ಲಾಭವೇನಾಯ್ತು' ಎಂಬುದಕ್ಕೆ ಸೀಮಿತಗೊಂಡಿದ್ದೂ ವಿಷಾದದ ವಿಷಯವೇ.

ಯಾವುದೇ ಸಂಧಾನಕ್ಕೆ ಕೂತಾಗ ಚರ್ಚೆ, ಸಮ್ಮತಿ-ಅಸಮ್ಮತಿ ಸಹಜ. ಆದರೆ ಇವೆಲ್ಲ ನಡೆದು ಒಂದು ನಿರ್ಣಾಯಕ ರೂಪರೇಷೆ ದೊರೆತ ನಂತರವೇ ನಾಯಕರುಗಳು ಮಾಧ್ಯಮಗಳೆದುರು ಬಂದು ಸಹಮತ ಪ್ರದರ್ಶಿಸುತ್ತಿದ್ದುದು ರಾಜತಾಂತ್ರಿಕ ನಡಾವಳಿ ಎನಿಸಿಕೊಂಡಿತ್ತು. ಮೊನ್ನೆ ನಡೆದ ವಾಗ್ಯುದ್ಧ, ಅಸಮ್ಮತಿ, ಚಕಮಕಿ ಮಾತ್ರ ಜಗದ್ವ್ಯಾಪಿ ಮಾಧ್ಯಮಗಳಲ್ಲಿ ನೇರ ಪ್ರಸಾರವಾಗುವುದರೊಂದಿಗೆ ಹೊಸ ದಾಖಲೆ ನಿರ್ಮಿಸಿತು ಎನ್ನಬೇಕು. ಅಮೆರಿಕದ ದಬ್ಬಾಳಿಕೆ, ವ್ಯಾಪಾರಿ ಮನೋವೃತ್ತಿಗೆ ಝೆಲೆನ್ಸ್ಕಿ ತೋರಿದ ತೀಕ್ಷ್ಣ ಪ್ರತಿಕ್ರಿಯೆ ಮೆಚ್ಚುಗೆಗೆ ಪಾತ್ರವಾಗಿದೆ; ಅಮೆರಿಕದ ಈಗಿನ ಆಡಳಿತವು ರಷ್ಯಾ ಪರವಾಗಿದೆ ಎಂಬುದರ ನಡುವೆಯೂ, ಅಂಥ ಕ್ಲಿಷ್ಟಕರ ಸನ್ನಿವೇಶದಲ್ಲೂ ಮಂಡಿಯೂರದ ಸ್ವಾಭಿಮಾನ ಮೆರೆದ ಮಹಾನಾಯಕ ಝೆಲೆನ್ಸ್ಕಿ ಎಂಬರ್ಥದ ವಿಶ್ಲೇಷಣೆ ಎಲ್ಲೆಡೆ ಕೇಳಿಬರುತ್ತಿದೆ. ಇವೆಲ್ಲವೂ ಕೊಂಚ ದಿಟ ಮತ್ತು ಕೊಂಚ ಹುಸಿ ಹೌದಾದರೂ, ಯುದ್ಧ ನಿಲ್ಲಿಸುವ ಬದಲು ಯುದ್ಧ ಮುಂದುವರಿಸುವ ಹಿತಾಸಕ್ತಿಗಳು ಪ್ರಭಾವ ಬೀರಿದ ಅಂಶವನ್ನು ಮಾತ್ರ ಅಲ್ಲಗಳೆಯುವಂತಿಲ್ಲ.

ಅಮೆರಿಕದ ಪಾಲಿಗೆ ಇದು ಅರಿಯದೇ ನಡೆದ ಆಘಾತವೇ? ಒಂದೊಮ್ಮೆ ಅರಿತಿದ್ದರೆ, ಮಾಧ್ಯಮಗಳ ಎದುರೇ ನಡೆದ ಈ ಮುಜುಗರವನ್ನು ತಪ್ಪಿಸಿಕೊಳ್ಳಲಿಲ್ಲವೇಕೆ? ಎಂಬ ಪ್ರಶ್ನೆಗಳಿಲ್ಲಿ ಮೂಡುತ್ತವೆ. ಝೆಲೆನ್ಸ್ಕಿ ಈ ಹಾದಿಯನ್ನು ಹಿಡಿಯಬಹುದು ಎಂಬ ಸಣ್ಣ ವಾಸನೆ ಅಮೆರಿಕದ ನಾಯಕರುಗಳಿಗೆ ಇದ್ದಂತಿತ್ತು. ಯಾಕೆಂದರೆ, ಉಕ್ರೇನ್‌ನ ಅಪರೂಪದ ಖನಿಜ ನಿಕ್ಷೇಪಗಳ ಮೇಲೆ ಸ್ವಾಮ್ಯ ಪಡೆಯುವ ಅಮೆರಿಕದ ಒಪ್ಪಂದದ ಪ್ರಸ್ತಾಪವು ಝೆಲೆನ್ಸ್ಕಿಯವರ ಮುಂದೆ ಬಂದದ್ದು ಇದೇ ಮೊದಲಲ್ಲ; ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಹಣಾಹಣಿ ನಡೆಯುತ್ತಿದ್ದ 2024ರ ಸೆಪ್ಟೆಂಬರ್ ಸಂದರ್ಭದಲ್ಲೇ ಝೆಲೆನ್ಸ್ಕಿ ಟ್ರಂಪ್‌ರನ್ನು ನ್ಯೂಯಾರ್ಕಿನ 'ಟ್ರಂಪ್ ಟವರ್'ನಲ್ಲಿ ಭೇಟಿಯಾಗಿದ್ದರು. ಸುದ್ದಿಮೂಲಗಳ ಪ್ರಕಾರ, ಅಮೆರಿಕವು ಉಕ್ರೇನ್‌ನ ಬೆಂಬಲಕ್ಕೆ ನಿಂತು ಹರಿಸಿದ ಹಣದ ವಸೂಲಾತಿಯ ಬಗ್ಗೆ ಟ್ರಂಪ್ ತಂಡವು ಝೆಲೆನ್ಸ್ಕಿಯವರೊಂದಿಗೆ ಅಂದೇ ಚರ್ಚಿಸಿದೆ. ಆಗಲೇ ಝೆಲೆನ್ಸ್ಕಿ ಮತ್ತು ತಂಡದವರು ತಮ್ಮಲ್ಲಿನ ಅಪರೂಪದ ಖನಿಜ ನಿಕ್ಷೇಪಗಳ ಒತ್ತೆ, ಪಾಲುದಾರಿಕೆಯ ಪ್ರಸ್ತಾಪವನ್ನು ಮುಂದಿಟ್ಟು, ಯುದ್ಧಕ್ಕೆ ಅಮೆರಿಕದ ಬೆಂಬಲವನ್ನು ಕೋರಿದ್ದರು ಎನ್ನಲಾಗುತ್ತಿದೆ.

ಈ ನಡುವೆ, 2025ರ ಜನವರಿಯ ಶುರುವಿನಲ್ಲಿ, ಚುನಾಯಿತ ಅಧ್ಯಕ್ಷ ಟ್ರಂಪ್ ಅಮೆರಿಕದಲ್ಲಿ ಅಧಿಕಾರ ವಹಿಸಿಕೊಳ್ಳುವ ಕೆಲವು ದಿನಗಳ ಮುಂಚೆ, ಬ್ರಿಟನ್ ಸರಕಾರವು ಉಕ್ರೇನ್ ಜತೆಗೆ 100 ವರ್ಷಗಳ ಸಹಭಾಗಿತ್ವದ ಒಪ್ಪಂದ ಮಾಡಿಕೊಂಡಿದೆ. ಈಗ ಚರ್ಚಿತವಾಗುತ್ತಿರುವ ಉಕ್ರೇನಿನ ಅಪರೂಪದ ಖನಿಜಗಳ ಸ್ವಾಮ್ಯತೆಯ ನೇರಪ್ರಸ್ತಾಪವು, ಉಕ್ರೇನ್-ಬ್ರಿಟನ್ ಸಹಭಾಗಿತ್ವದ ಒಪ್ಪಂದದಲ್ಲಿ ಇಲ್ಲವಾದರೂ, ಇದು ಉಭಯ ದೇಶಗಳ ನಡುವಿನ ಸೇನಾ ನೆರವು, ಶಕ್ತಿ ಸಂಪನ್ಮೂಲಗಳ ಸಹಿತದ ವಾಣಿಜ್ಯ, ಸಾಂಸ್ಕೃತಿಕ ಸಹಕಾರಗಳ ಒಡಂಬಡಿಕೆಗಳನ್ನು ಒಳಗೊಂಡಿದೆ. ಹೀಗಿದ್ದೂ ಈಗ ಅಮೆರಿಕ ಉಕ್ರೇನಿನ ರಕ್ಷಣೆಗೆ ನಿಲ್ಲುವ ಬದಲು ಉಕ್ರೇನನ್ನು ದೋಚಲು ಹೊರಟಿತ್ತು ಎಂದು ಬಿಂಬಿಸುತ್ತಿರುವ ಬಹುತೇಕ ಮಾಧ್ಯಮಗಳಲ್ಲಿನ ವಿಶ್ಲೇಷಣೆಗಳು, ಈ ವರ್ಷದ ಜನವರಿಯಲ್ಲಾದ ಉಕ್ರೇನ್-ಬ್ರಿಟನ್ ನಡುವಿನ ಒಪ್ಪಂದದ ಕುರಿತು ಜಾಣಮರೆವು-ಜಾಣಮೌನ ತೋರುತ್ತಿರುವುದು ಕೂಡ ಅಚ್ಚರಿಯ ಸಂಗತಿ! ಮುರಿದುಬಿದ್ದ ಉಕ್ರೇನ್-ಅಮೆರಿಕ ಮಾತುಕತೆಯನ್ನು ನೋಡಿ 'ಕೊಳ್ಳೆ ಹೊಡೆಯುವ ಉದ್ದೇಶವಿತ್ತು' ಎಂದು ಹೇಳುತ್ತಿರುವವರಿಗೆ, ಒಪ್ಪಿತಗೊಂಡ 'ಬ್ರಿಟನ್-ಉಕ್ರೇನ್' ಸಹಭಾಗಿತ್ವದ ಹಿಂದೆ ಉದಾತ್ತ ಉದ್ದೇಶವಿದೆ ಎನಿಸುತ್ತಿರುವುದು ಅರ್ಥವಾಗದ ಸಂಗತಿ!

ಅಮೆರಿಕದ ನಿಕಟಪೂರ್ವ ಅಧ್ಯಕ್ಷ ಜೋ ಬೈಡೆನ್ ಮತ್ತು ಅವರ ಡೆಮಾಕ್ರಟಿಕ್ ಪಕ್ಷದ ಸರಕಾರವು ಝೆಲೆನ್ಸ್ಕಿ ಬೆಂಬಲಕ್ಕೆ ನಿಂತಿತ್ತು. ಅವರ ವಿರೋಧಿ ಪಾಳಯದ ಟ್ರಂಪ್ ನೇತೃತ್ವದ

ಸರಕಾರವು ಅಮೆರಿಕದಲ್ಲಿ ನೆಲೆಗೊಳ್ಳಲಿದೆ ಎಂಬುದು ಖಚಿತವಾಗುತ್ತಿದ್ದಂತೆ, ಅಮೆರಿಕದ ನೆರವು ನಿಲ್ಲಲಿದೆ ಎಂಬ ಸುಳಿವು ಝೆಲೆನ್ಸ್ಕಿಯವರಿಗೆ ಮತ್ತು ಅವರ ಬೆಂಬಲಕ್ಕೆ ನಿಂತಿದ್ದ ಐರೋಪ್ಯ ರಾಷ್ಟ್ರಗಳಿಗೆ ಸಿಕ್ಕಿರಲಿಲ್ಲ ಎಂಬುದನ್ನು ನಂಬಲಾಗುತ್ತಿಲ್ಲ, ಹಾಗಾಗಿಯೇ ಅಮೆರಿಕದ ನೂತನ ಸರಕಾರವು ಅಧಿಕಾರ ವಹಿಸಿಕೊಳ್ಳುವ ಕೆಲವೇ ದಿನಗಳಿಗೆ ಮೊದಲು ಉಕ್ರೇನ್-ಬ್ರಿಟನ್ ನಡುವಿನ ಸಹಭಾಗಿತ್ವದ ಒಪ್ಪಂದವನ್ನು ತರಾತುರಿಯಲ್ಲಿ ಮಾಡಿಕೊಳ್ಳಲಾಗಿದೆ ಎಂಬ ಅನುಮಾನ ಮೂಡುತ್ತದೆ.

ಅಂಕಿ-ಅಂಶಗಳ ಪ್ರಕಾರ, ಸುಮಾರು 177 ಬಿಲಿಯನ್ ಡಾಲರ್‌ನಷ್ಟು (ಅಂದರೆ ಸುಮಾರು 1,545 ಕೋಟಿ ರುಪಾಯಿಗಳಷ್ಟು) ನೆರವನ್ನು ಅಮೆರಿಕವು ಉಕ್ರೇನ್‌ಗೆ ನೀಡಿದೆ. 28 ದೇಶಗಳ ಯುರೋಪಿಯನ್ ಒಕ್ಕೂಟವು ನೀಡಿದ ನೆರವು ಸರಿಸುಮಾರು 138 ಬಿಲಿಯನ್ ಡಾಲರ್‌ನಷ್ಟು (ಅಂದರೆ ಸುಮಾರು 1,200 ಕೋಟಿ ರುಪಾಯಿಗಳಷ್ಟು). ಪಕ್ಕದಲ್ಲೇ ಇದ್ದರೂ, ಹಲವು ದೇಶಗಳ ಒಕ್ಕೂಟವಾಗಿದ್ದರೂ ಯುರೋಪಿಯನ್ ಒಕ್ಕೂಟವು ಉಕ್ರೇನ್‌ಗೆ ತನ್ನಷ್ಟು ಸಹಾಯವನ್ನು ನೀಡಿಲ್ಲ ಎಂಬುದು ಕೂಡ ಅಮೆರಿಕದ ಆಡಳಿತದ ಇನ್ನೊಂದು ಆರೋಪ.

ಈ ಎಲ್ಲ ದೇಶಗಳಿಂದ ಹರಿದುಬಂದ ಹಣದಲ್ಲಿ ಅರ್ಧದಷ್ಟು ಹಣವು ಆಯಾ ದೇಶಗಳಲ್ಲಿನ ಕಂಪನಿಗಳಿಗೆ ಹರಿದು, ಅಲ್ಲಿಂದ ಶಸ್ತ್ರಾಸ್ತ್ರ ಸಹಿತದ ಹಲವು ರೀತಿಯ ನೆರವುಗಳು ಉಕ್ರೇನನ್ನು ತಲುಪುವ ಗುರಿ ಹೊಂದಿದ್ದವು. ವಿದೇಶಗಳು ನೀಡುವ ನೆರವಿನ ಹಿಂದೆ ಇಂಥ ವ್ಯಾಪಾರಿ ಹಿತಾಸಕ್ತಿ ಇರುವುದು ಬಹಿರಂಗ ಸತ್ಯ. ಇವೆಲ್ಲವನ್ನೂ ಮೀರಿ, ಅಮೆರಿಕ ನೀಡಿದ 177 ಬಿಲಿಯನ್ ಡಾಲರ್‌ಗಳಲ್ಲಿ ಅರ್ಧದಷ್ಟು ಮೊತ್ತ ಅಥವಾ ಆ ಪ್ರಮಾಣದ ಸಹಾಯ ಉಕ್ರೇನನ್ನು ತಲುಪಿಲ್ಲ ಎಂಬುದು ಅದರ ಅಧ್ಯಕ್ಷ ಝೆಲೆನ್ಸ್ಕಿಯವರ ಇನ್ನೊಂದು ಉವಾಚ! ಹಾಗಿದ್ದರೆ ಅಷ್ಟೊಂದು ದೊಡ್ಡ ಮೊತ್ತದ ಝಣಝಣ ಕಾಂಚಾಣ ಕಾಣೆಯಾಗಿರುವುದೆಲ್ಲಿ? ಎಂಬುದು ಇನ್ನೊಂದು ಅನುಮಾನ! ರಷ್ಯಾ ಅಂದುಕೊಂಡಷ್ಟು ಸುಲಭದಲ್ಲಿ ಗೆಲ್ಲಲಾಗಲಿಲ್ಲ ಎಂಬುದು ಸತ್ಯವಾದರೂ, ಇಷ್ಟೆಲ್ಲಾ ಪ್ರಮಾಣದ ನೆರವಿದ್ದೂ ಉಕ್ರೇನ್ ಗೆದ್ದು ಬೀಗುವ ಸಂಭವವೂ ಕಾಣಿಸುತ್ತಿಲ್ಲ. ಒಟ್ಟು ಪರಿಸ್ಥಿತಿ ಹೀಗಿರುವಾಗ, ಗೆಲ್ಲಲಾಗದ ಕುದುರೆಗೆ ಹಾಕಿದ ಖರ್ಚು ಹಿಂಪಡೆಯುವುದು ಹೇಗೆ ಎಂಬ ಲೆಕ್ಕಾಚಾರವೇ ಎಲ್ಲ ಕಡೆ ಕಾಣುತ್ತಿರುವುದು ಅಸಂಗತವೇನಲ್ಲ.

'ನಮ್ಮ ಸರಕಾರ ಬಂದರೆ ಯುದ್ಧ ನಿಲ್ಲಿಸುತ್ತೇವೆ' ಎಂಬ ಆಶ್ವಾಸನೆಯೊಂದಿಗೆ ಅಧಿಕಾರದ ಚುಕ್ಕಾಣಿ ಹಿಡಿದವರು ಟ್ರಂಪ್. ತಮ್ಮ ತೆರಿಗೆ ಹಣವು ಯುದ್ಧಕ್ಕೆ ಪೋಲಾಗುತ್ತಿರುವುದರ ಬಗೆಗೂ ಅಮೆರಿಕನ್ ಸಮಾಜದಲ್ಲಿ ಬೇಸರವಿದೆ. ಟ್ರಂಪ್ ಆಡಳಿತವು ಆರಂಭವಾಗುವುದಕ್ಕೆ ಕೆಲವೇ ದಿನಗಳ ಮುಂಚೆ ಉಕ್ರೇನ್-ಬ್ರಿಟನ್ ಮಾಡಿಕೊಂಡ 100 ವರ್ಷಗಳ ಸೇನಾ, ಶಕ್ತಿ ಸಂಪನ್ಮೂಲಗಳು, ನಾಗರಿಕ ಹಿತರಕ್ಷಣೆಯ ಅಂಶಗಳನ್ನೂ ಒಳಗೊಂಡ ವಾಣಿಜ್ಯ ಸಹಭಾಗಿತ್ವದ ಒಪ್ಪಂದವು, ಪ್ರಸ್ತುತ ಅಮೆರಿಕ ಸರಕಾರದ ಕೆಂಗಣ್ಣಿಗೆ ಗುರಿಯಾಗಿದೆ. ಬೇರೆ ವಿಷಯಗಳಲ್ಲಿ ತಕರಾರಿದ್ದರೂ, ಜಗಳಗಂಟನೆಂಬ ಹಣೆಪಟ್ಟಿ ಕಟ್ಟಿಕೊಂಡಿದ್ದರೂ, ತಮ್ಮ ಆಡಳಿತದ ಅವಧಿಯಲ್ಲಿ ಯಾರ ಮೇಲೂ ಕಾಲು ಕೆದರಿ ಯುದ್ಧಕ್ಕೆ ಹೋಗದೆ, ಯುದ್ಧವಿದ್ದ ಕಡೆ ಶಾಂತಿ ಬಯಸಿ ಅಮೆರಿಕದ ಪಡೆಗಳನ್ನು ಹಿಂಪಡೆದುಕೊಳ್ಳುವಲ್ಲಿ ತೊಡಗಿಸಿಕೊಂಡ ಅಮೆರಿಕದ ಅಧ್ಯಕ್ಷರು ಟ್ರಂಪ್ ಎಂಬುದು ಒಪ್ಪಿಕೊಳ್ಳಬೇಕಾದ ಸಂಗತಿ.

ಯುದ್ಧಕ್ಕೆ ಬೆಂಬಲ ಕೋರಿ ನಿಂತ ಝೆಲೆನ್ಸ್ಕಿ ಪಡೆಗೆ ಟ್ರಂಪ್ ಆಡಳಿತವು ನೆರವು ನಿಲ್ಲಿಸಿ, ಶಾಂತಿ ಮಾತುಕತೆಗೆ ಸಹಾಯಮಾಡುವ ಪ್ರಸ್ತಾಪವನ್ನು ಮುಂದಿಟ್ಟಿದೆ. ಅಮೆರಿಕದ ನೆರವಿನ ಪ್ರತಿಫಲಕ್ಕಾಗಿ ಅಪರೂಪದ ಖನಿಜ ನಿಕ್ಷೇಪಗಳ ಸ್ವಾಮ್ಯತೆಯ ಒಪ್ಪಂದ ಮಾಡಿಕೊಂಡರೆ, ರಷ್ಯಾ ಕಡೆಯಿಂದಲೂ ಯುದ್ಧ ವಿರಾಮ ಮಾಡಿಸುವ ಮಾತುಕತೆಯಾಗಿದೆ. ಅದರಂತೆ, ಕೃತಕ ಬುದ್ಧಿಮತ್ತೆ ಕ್ಷೇತ್ರಕ್ಕೆ ಸಂಬಂಧಿಸಿ ಪ್ಯಾರಿಸ್‌ನಲ್ಲಿ ಫೆಬ್ರವರಿ ಮೊದಲ ವಾರ ನಡೆದ ಸಮ್ಮೇಳನದ ಸಮಯದಲ್ಲೇ ಈ ಒಪ್ಪಂದವಾಗಬೇಕಿತ್ತು. ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಮತ್ತು ಉಕ್ರೇನ್ ನಾಯಕರ ನಡುವೆ ಪ್ಯಾರಿಸ್‌ನಲ್ಲಿಯೇ ಒಪ್ಪಂದ ಅಂತಿಮಗೊಳ್ಳುತ್ತದೆ ಎಂಬ ಗುಸುಗುಸು ಇತ್ತು. 'ತಾತ್ವಿಕ ಒಪ್ಪಿಗೆಯಿದ್ದರೂ ಅಮೆರಿಕದ ಅಧ್ಯಕ್ಷರೊಡನೆ ಮಾತನಾಡಬೇಕು, ನಮ್ಮ ರಕ್ಷಣೆಯ ಕುರಿತು ಅವರಿಂದ ಅಭಯ ಪಡೆದುಕೊಳ್ಳದೆಯೇ ಮುಂದುವರಿಯಲು ಹಿಂಜರಿಯುತ್ತಿದ್ದೇವೆ' ಎಂಬರ್ಥದ ಸಂದೇಶವನ್ನು ಝೆಲೆನ್ಸ್ಕಿ ಕೊಟ್ಟಿದ್ದರು ಎನ್ನಲಾಗುತ್ತಿದೆ. ತದನಂತರ ಜರ್ಮನಿಯ ಮ್ಯೂನಿಕ್‌ನಲ್ಲಿ ನಡೆದ ಜಾಗತಿಕ ಭದ್ರತಾ ಸಮಾವೇಶದ ಸಮಯದಲ್ಲೂ ಉಭಯ ರಾಷ್ಟ್ರಗಳ ನಡುವೆ ಇನ್ನೊಂದು ಸುತ್ತಿನ ಮಾತುಕತೆ ನಡೆದಿದೆ ಎನ್ನಲಾಗುತ್ತಿದೆ.

ಇಷ್ಟೆಲ್ಲ ಆದ ಮೇಲೆ, ಒಪ್ಪಿಗೆಗೆ ಮುಂಚೆ ಅಮೆರಿಕದ ಅಧ್ಯಕ್ಷರೊಡನೆ ಚರ್ಚಿಸಿ ಮುಂದುವರಿಯುವ ತಮ್ಮ ಭರವಸೆಯ ಆಧಾರದ ಮೇಲೆಯೇ ಝೆಲೆನ್ಸ್ಕಿ ಅವರು ಮಾತುಕತೆಗೆಂದು ಶ್ವೇತಭವನದ ಅಂಗಳವನ್ನು ತಲುಪಿದ್ದು. ಈ ಭೇಟಿಯ ಕೆಲವೇ ದಿನಗಳ ಹಿಂದೆ, ಫ್ರಾನ್ಸ್ ಅಧ್ಯಕ್ಷ ಎಮ್ಯಾನ್ಯುಯೆಲ್ ಮ್ಯಾಕ್ರಾನ್ ಮತ್ತು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಶ್ವೇತಭವನದ ಕದತಟ್ಟಿ, ಟ್ರಂಪ್‌ರನ್ನು ಭೇಟಿಯಾಗಿ ಹೋಗಿದ್ದು ಕೂಡ ಅಚ್ಚರಿಯ ಬೆಳವಣಿಗೆಯೇ! ಇವೆಲ್ಲ ಟ್ರಂಪ್-ಝೆಲೆನ್ಸ್ಕಿ ಭೇಟಿಯ ಪೂರ್ವತಯಾರಿ, ಒಪ್ಪಂದವಾಗಿಯೇಬಿಟ್ಟಿದೆ ಎಂಬ ಸುದ್ದಿ ಪಸರಿಸುತ್ತಿರುವಾಗಲೇ ಮಾತಿನ ಚಕಮಕಿಯ ಸಂಧಾನದ ಸಭೆಯು ಜಗದಗಲ ನೇರಪ್ರಸಾರಗೊಂಡಿದ್ದು.

ಈ ರೀತಿಯ ಪ್ರಹಸನ ನಡೆದು ಟ್ರಂಪ್ ಸರಕಾರದ ಪ್ರಸ್ತಾಪವನ್ನು ಝೆಲೆನ್ಸ್ಕಿ ತಿರಸ್ಕರಿಸುವ ಸಾಧ್ಯತೆಯನ್ನೂ ಶ್ವೇತಭವನದ ಮೂಲಗಳು ತಕ್ಕಮಟ್ಟಿಗೆ ಊಹಿಸಿರಬೇಕು. ಮಾತುಕತೆಯ ಆರಂಭದಿಂದಲೂ ಟ್ರಂಪ್ ಮಾತಿಗೆ ಸಹಮತವಿಲ್ಲವೆಂಬ ಮುಖಭಾವ, ಹಾವಭಾವ ತೋರಿಸುತ್ತಿದ್ದ ಉಕ್ರೇನ್ ಅಧ್ಯಕ್ಷರು, ಕೊನೆಕೊನೆಗೆ ಅಮೆರಿಕದ ನಾಯಕರುಗಳ ಮೇಲೆ ಕೈ ಮಿಲಾಯಿಸುವುದೊಂದನ್ನು ಬಿಟ್ಟು ಮಾತಿನ ಗುದ್ದಾಟ ಪ್ರದರ್ಶಿಸಿಬಿಟ್ಟಿದ್ದಾರೆ. ಮಾತಿಗೆ ಮೊದಲೇ ಸಿಟ್ಟಿಗೇಳುವ ಟ್ರಂಪ್‌ರನ್ನು ಸಿಟ್ಟಿಗೇಳಿಸಿ ಜಗದಗಲ ಕೆಟ್ಟದಾಗಿ ತೋರಿಸುವ ಹುನ್ನಾರವೂ ಇದಾಗಿರಬಹುದೆಂಬ ಗುಮಾನಿಯ ಮಾತುಗಳು ಜಾಗತಿಕ ರಾಜತಾಂತ್ರಿಕ ವಲಯದಲ್ಲಿ ಕೇಳಿಬರುತ್ತಿವೆ. ಪರಿಸ್ಥಿತಿ ಸಂಪೂರ್ಣ ಕೈಮೀರುತ್ತಿದೆ, ತಾವು ಅಂದುಕೊಂಡ ಒಪ್ಪಂದವಾಗುವುದಿಲ್ಲ ಎಂಬ ಅಂಶ ಖಚಿತಗೊಳ್ಳುತ್ತಿದ್ದಂತೆ ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರು, ಶಾಂತಿ ಪ್ರಕ್ರಿಯೆಗೆ ಉಕ್ರೇನ್ ಅಧ್ಯಕ್ಷರ ಬದ್ಧತೆ, ಅಮೆರಿಕದ ನೆರವಿಗೆ ಅವರಲ್ಲಿದ್ದ ಕೃತಜ್ಞತೆಯ ಪ್ರಸ್ತಾಪ ಮಾಡಿದ್ದಾರೆ. 'ಹೀಗಿದ್ದರೆ ಮಾತುಕತೆ ಅಸಾಧ್ಯ. ನಿಮಗೆ ಜಗತ್ತನ್ನೇ 3ನೇ ಮಹಾಯುದ್ಧಕ್ಕೆ ತಳ್ಳುವ ಹಪಾಹಪಿಯಿದ್ದಂತಿದೆ' ಎಂಬ ಮಾತಿನೊಂದಿಗೆ ಮಾತುಕತೆ ಮುರಿದುಬಿದ್ದಿದೆ. ತದನಂತರ, ಉಕ್ರೇನ್ ಅಧ್ಯಕ್ಷರ ತಂಡಕ್ಕೆ ಶ್ವೇತಭವನದಿಂದ ಕೂಡಲೇ ತೆರಳುವಂತೆ ಆದೇಶಿಸಲಾಗಿದೆ ಎಂಬ ವರದಿಗಳು ಹರಿದಾಡುತ್ತಿವೆ. 'ಅಮೆರಿಕವು ಉಕ್ರೇನ್ ಅಧ್ಯಕ್ಷರನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲವೇನೋ?' ಅಂತ ಇಲ್ಲಿಯವರೆಗೆ ಅನಿಸಿದ್ದು ನಿಜ. ಆದರೆ ಅಮೆರಿಕದಿಂದ ನಿರ್ಗಮಿಸಿದ ಝೆಲೆನ್ಸ್ಕಿ ನೇರವಾಗಿ ಬಂದಿಳಿದಿದ್ದು ಲಂಡನ್‌ನಲ್ಲಿ; ಬ್ರಿಟನ್ ಸರಕಾರದೊಂದಿಗೆ ಅವರು ತುರ್ತು ಆರ್ಥಿಕ ನೆರವಿನ ಒಪ್ಪಂದವನ್ನು ಮಾಡಿಕೊಂಡಿದ್ದೂ ಅಲ್ಲದೆ, ಐರೋಪ್ಯ ರಾಷ್ಟ್ರಗಳ ನಾಯಕರುಗಳ ಜತೆಗೆ ಪೂರ್ವನಿರ್ಧರಿತವಲ್ಲದ ತುರ್ತುಸಭೆಯನ್ನು ನಡೆಸಿದ್ದು ನೋಡಿದರೆ, ಝೆಲೆನ್ಸ್ಕಿ ಶ್ವೇತಭವನಕ್ಕೆ ಬಂದಿದ್ದೂ ಶಾಂತಿ-ಸಂಧಾನದ ನಟನೆಗಾಗಿಯೇ? ಎಂಬ ಅನುಮಾನ ಮೂಡುತ್ತಿದೆ.

'ಯುದ್ಧ ನಿಲ್ಲಬೇಕು, ವ್ಯಾಪಾರ ಅವಶ್ಯ' ಎಂದು ಒಬ್ಬರಿಗೆ ಅನಿಸಿದರೆ, ಇನ್ನೊಬ್ಬರಿಗೆ 'ಯುದ್ಧ ಸಹಿತದ ವ್ಯಾಪಾರ ಬೇಕು' ಅನಿಸುತ್ತಿದೆ. ವ್ಯಾಪಾರಿ ಹಿತಾಸಕ್ತಿ, ಈಗಾಗಲೇ ಹೂಡಿದ ಹಣದ ವಸೂಲಿ ಎಲ್ಲರ ಆದ್ಯತೆಯಾಗುತ್ತಿದೆಯೇ? ಎಂಬ ಅನುಮಾನ ಕೂಡ ಕಾಡುತ್ತದೆ. 3 ವರ್ಷಗಳ ಹಿಂದೆ, ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ಮಾಡಿದಾಗಲೇ ಝೆಲೆನ್ಸ್ಕಿ-ಪುಟಿನ್ ನಡುವಿನ ಶಾಂತಿ ಮಾತುಕತೆಗೆ ವೇದಿಕೆ ಸಿದ್ಧಗೊಂಡು, ಉಕ್ರೇನ್ ಕೂಡ ಉತ್ಸುಕತೆ ತೋರಿಸಿತ್ತು. ಆಗಲೂ ಆ ಶಾಂತಿಸಂಧಾನ ಕೈಗೂಡದಂತೆ ನೋಡಿಕೊಂಡು, ರಷ್ಯಾವನ್ನು ಮಣಿಸಲು ಉಕ್ರೇನ್ ಹೋರಾಡುವಂತೆ ಹಿಂದಿನಿಂದ ಪ್ರೇರೇಪಿಸಿದ್ದೂ ಅಂದಿನ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಎಂಬುದು ಚರ್ಚಿತವಾಗಿದ್ದ ಬಹಿರಂಗ ಸತ್ಯ. ಅಂದಿಗೂ ಇಂದಿಗೂ ಯುದ್ಧೋನ್ಮಾದ ಕಡಿಮೆಯಾಗದಂತೆ ನೋಡಿಕೊಳ್ಳುವ, ಸ್ವತಃ ಮುಳುಗುತ್ತಿದ್ದರೂ 'ಸೂರ್ಯ ಮುಳುಗದ ಸಾಮ್ರಾಜ್ಯ' ಎನಿಸಿಕೊಂಡ ಬ್ರಿಟನ್‌ನ ಆಸಕ್ತಿ ಕೂಡ ಇಲ್ಲಿ ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಒಟ್ಟಿನಲ್ಲಿ, ಝೆಲೆನ್ಸ್ಕಿಯವರ ನಿಸ್ಸಹಾಯಕತೆ, ನಟನೆಗಳು ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಟ್ಟಿವೆ. ಶಾಲಾದಿನಗಳಲ್ಲಿ ನಾವು ಕೇಳುತ್ತಿದ್ದ 'ಹೇಳಿಕೊಟ್ಟ ಮಾತು, ಕಟ್ಟಿಕೊಟ್ಟ ಬುತ್ತಿ ಬಹಳ ದಿನ ಬಾಳುವುದಿಲ್ಲ' ಎಂಬ ಮಾತು, ಝೆಲೆನ್ಸ್ಕಿಯವರ ಸದ್ಯದ ಪರಿಸ್ಥಿತಿಯನ್ನು ನೋಡಿದಾಗ ಮತ್ತೆ ನೆನಪಾಗುತ್ತಿದೆ.

ಈಗಂತೂ ಬ್ರಿಟನ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಉಕ್ರೇನಿಗೆ ಸೇನಾನೆರವಿನ ಆಶ್ವಾಸನೆಯನ್ನು ಕೊಡುತ್ತಿರುವಂತಿದೆ. ಬ್ರಿಟನ್ ಸೈನ್ಯವು ನೇರವಾಗಿ ಉಕ್ರೇನ್‌ನ ಪರವಾಗಿ ನಿಂತರೆ, ನ್ಯಾಟೋ ರಾಷ್ಟ್ರಗಳು ಬ್ರಿಟನ್ ಪರವಾಗಿ ನಿಲ್ಲಬೇಕಾದ ಅನಿವಾರ್ಯತೆ ಎದುರಾಗಲಿದೆ. ಹೀಗಾದರೆ, 3ನೇ ಮಹಾಯುದ್ಧಕ್ಕೆ ಬ್ರಿಟನ್ ಮುನ್ನುಡಿ ಬರೆದಂತಾಗುವುದು ನಿಸ್ಸಂಶಯ. ಹೀಗಿದ್ದೂ ನ್ಯಾಟೋ ಪಡೆಯ ಬಹುಮುಖ್ಯ ಪಾಲುದಾರ ಎನಿಸಿಕೊಂಡ ಅಮೆರಿಕ, ನ್ಯಾಟೋದಿಂದ ಹೊರನಡೆಯಲಿದೆಯೇ? ಎಂಬ ಪ್ರಶ್ನೆಯೂ ಹುಟ್ಟಿಕೊಳ್ಳುತ್ತದೆ.

ಗಗನಕ್ಕೇರುತ್ತಿರುವ ಚಿನ್ನದ ಬೆಲೆಯ ಸುದ್ದಿಯ ಜತೆಗೆ, ಇತ್ತೀಚೆಗೆ ಬ್ಯಾಂಕ್ ಆಫ್ ಇಂಗ್ಲೆಂಡ್‌ನಲ್ಲಿಟ್ಟ ಚಿನ್ನವನ್ನು ದೊಡ್ಡ ವರ್ತಕರು, ಕೆಲ ಬ್ಯಾಂಕುಗಳು ಅಮೆರಿಕಕ್ಕೆ ಸಾಗಿಸಿದ ಸುದ್ದಿ ವರದಿಯಾಗಿತ್ತು. ಮಾತೆತ್ತಿದರೆ 'ಸುಂಕ' ಎನ್ನುವ ಟ್ರಂಪ್ ಸಾಹೇಬರ ಸುಂಕದ ಹೊಡೆತದಿಂದ ತಪ್ಪಿಸಿಕೊಳ್ಳುವ ಮಾರ್ಗವಿದು ಎನ್ನುವ ಸುದ್ದಿಯ ಜತೆಗೆ, ಬ್ಯಾಂಕ್ ಆಫ್ ಇಂಗ್ಲೆಂಡ್‌ನಲ್ಲಿ ಘೋಷಿಸಿಕೊಂಡಷ್ಟು ಚಿನ್ನವಿಲ್ಲ ಎಂಬ ಗುಸುಗುಸು ಕೂಡ ಅಲ್ಲಲ್ಲಿ ಕೇಳುತ್ತಿದೆ. ಸದ್ಯ ಜಗತ್ತಿನ ದೃಷ್ಟಿಯನ್ನು ಚಿನ್ನದಿಂದ ಬೇರೆಡೆಗೆ ಹೊರಳುವಂತೆ ಮಾಡುವುದೇ ಚೆನ್ನ ಎಂಬ ನಿಟ್ಟಿನಲ್ಲಿ ಬ್ರಿಟನ್ ದೇಶವು ಅಮೆರಿಕಕ್ಕೆ ಸೆಡ್ಡು ಹೊಡೆದು ರಷ್ಯಾ-ಉಕ್ರೇನ್ ದೇಶಗಳು ಉರಿಯುತ್ತಿರುವಂತೆಯೇ ನೋಡಿಕೊಳ್ಳುತ್ತಿದೆಯೇ ಎಂಬ ಅನುಮಾನ ಮೂಡದಿರುವುದಿಲ್ಲ. ಇವೆಲ್ಲದರ ನಡುವೆ ಯುದ್ಧ ಸಾಕೆನಿಸುತ್ತಿದ್ದರೂ ನಿಲ್ಲಿಸಲಾಗದೆ, ಸದ್ಯದ ಉಕ್ರೇನ್‌ನ ಪರಿಸ್ಥಿತಿ ನೋಡಿ ಸ್ವಲ್ಪವಾದರೂ ಉಸಿರಾಡಬಹುದೆಂದು ನಿಟ್ಟುಸಿರು ಬಿಡುತ್ತಿರುವುದು ರಷ್ಯಾ ಮತ್ತು ಪುಟಿನ್‌ರ ಪಡೆಗಳು. ಇವೆಲ್ಲವನ್ನು ನೋಡಿಯೇ ಅನಿಸಿದ್ದು- 'ರಾಷ್ಟ್ರಗಳ ಜಗಳದ ಸುತ್ತ, ಎದ್ದಿದೆ ಅನುಮಾನದ ಹುತ್ತ!' ಅಂತ.

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:67, Issue: 302

ಸಮಾಚಾರ ಸಣ್ಣದಲ್ಲ

ಕದ್ದ ಭೂಮಿ ಮರಳಿಸಿದರೆ ಕಾಶ್ಮೀರ ಸಮಸ್ಯೆ ಇತ್ಯರ್ಥ

ಲಂಡನ್: ಪಾಕಿಸ್ತಾನ ಕದ್ದು ತನ್ನ ವಶದಲ್ಲಿಟ್ಟುಕೊಂಡಿರುವ ಭೂಭಾಗವನ್ನು ಮರಳಿಸುವುದನ್ನು ಭಾರತ ನಿರೀಕ್ಷಿಸುತ್ತಿದೆ. ಆ ಭಾಗ(ಪಿಒಕೆ) ಭಾರತಕ್ಕೆ ಮರಳಿದ ತಕ್ಷಣವೇ ಜಮ್ಮು-ಕಾಶ್ಮೀರದಲ್ಲಿ ಪೂರ್ಣ ಶಾಂತಿ ನೆಲೆಸುತ್ತದೆ ಎಂದು ವಿದೇಶಾಂಗ ಸಚಿವ ಎಸ್ ಜೈಶಂಕರ್ ಲಂಡನ್‌ನಲ್ಲಿ ಹೇಳಿದ್ದಾರೆ. ಕಾಶ್ಮೀರ ಕಣಿವೆಯಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಭಾರತ ಸರಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ ಲಂಡನ್‌ನಲ್ಲಿ ಚಾಥಮ್ ಹೌಸ್ ಚಿಂತಕರ ಚಾವಡಿಯಲ್ಲಿ ಸಂವಾದ ನಡೆಸಿದ ಜೈಶಂಕರ್, 370ನೇ ವಿಧಿ ರದ್ದು, ಪ್ರವಾಸೋದ್ಯಮಕ್ಕೆ ಚೈತನ್ಯ, ಆರ್ಥಿಕ ಬೆಳವಣಿಗೆ, ಉತ್ತಮ ಮತದಾನದೊಂದಿಗೆ ನಿಷ್ಪಕ್ಷಪಾತ ಚುನಾವಣೆ ನಡೆಸುವುದು ಸೇರಿವೆ ಎಂದರು. ಕಾಶ್ಮೀರ ವಿಚಾರದಲ್ಲಿ 3ನೇ ದೇಶದ ಹಸ್ತಕ್ಷೇಪ ತಿರಸ್ಕರಿಸಿದ ಜೈಶಂಕರ್, ಸದ್ಯ ಭಾರತ ಕೈಗೊಳ್ಳುತ್ತಿರುವ ಕ್ರಮಗಳು, ವಿಧಾನವನ್ನು ಸಮರ್ಥಿಸಿಕೊಂಡರು. ಪರಿಸ್ಥಿತಿಯನ್ನು ಸ್ವತಂತ್ರವಾಗಿ ನಿಭಾಯಿಸಲು ಈಗಾಗಲೇ ನಿರ್ಣಾಯಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

‘ಗಂಗಾ ಮಾಯಿ’ಗೆ ಮೋದಿ ವಂಚನೆ: ಖರ್ಗೆ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಗಂಗಾ ಮಾತೆಗೆ ವಂಚನೆ ಎಸಗಿದ್ದಾರೆ. ನದಿಯನ್ನು ಸ್ವಚ್ಛಗೊಳಿಸುವುದಾಗಿ ಹೇಳಿ ಮರೆತೇಬಿಟ್ಟಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗುರುವಾರ ಟೀಕಾಪ್ರಹಾರ ನಡೆಸಿದ್ದಾರೆ.

ಪ್ರಧಾನಿ ಮೋದಿ ಗುರುವಾರ ಉತ್ತರಾಖಂಡ ಪ್ರವಾಸದಲ್ಲಿದ್ದು, ಗಂಗಾ ಮಾತೆಗೆ ಪೂಜೆ ಸಲ್ಲಿಸಿದ ಸುದ್ದಿ ಹೊರಬಿದ್ದ ಬೆನ್ನಿಗೇ ಖರ್ಗೆ ಟೀಕೆ ಮಾಡಿದ್ದಾರೆ. 11 ವರ್ಷಗಳ ಹಿಂದೆ ಆರಂಭಿಸಿದ ನಮಾಮಿ ಗಂಗೆ ಯೋಜನೆಗೆ 2026ರೊಳಗೆ 42,500 ಕೋಟಿ ರು. ಬಳಸಿ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕಿತ್ತು. ಆದರೆ, 2024ರ ಡಿಸೆಂಬರ್‌ವರೆಗೆ ಕೇವಲ 19,271 ಕೋಟಿ ರು. ಮಾತ್ರ ವೆಚ್ಚವಾಗಿದೆ. ಗಂಗಾ ನದಿಯನ್ನು ತಾಯಿಗೆ ಹೋಲಿಸಿ ‘ಗಂಗಾ ಮಾಯಿ’ ಎಂದು ಕರೆದ ಮೋದಿ, ನದಿಯನ್ನು ಸ್ವಚ್ಛಗೊಳಿಸುವುದಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭ ಹೇಳಿದ್ದ ಮಾತುಗಳನ್ನೇ ಮರೆತಿದ್ದಾರೆ. ಗಂಗಾ ಮಾಯಿಗೆ ವಂಚಿಸಿದ್ದಾರೆ ಎಂದು ಖರ್ಗೆ ಕಿಡಿಕಾರಿದ್ದಾರೆ.

ಬಿಜೆಪಿ ತ.ನಾ. ಘಟಕ ಕಾನೂನು ವಿಭಾಗ ಮುಖ್ಯಸ್ಥ ಜಿ.ಎಸ್.ಮಣಿ ಅರ್ಜಿ | ತ.ನಾಡು, ಕೇರಳ, ಪಶ್ಚಿಮ ಬಂಗಾಳದಲ್ಲಿಯೂ ‘ಎನ್‌ಇಪಿ’ ಜಾರಿ ಅಗತ್ಯ

ತ್ರಿಭಾಷಾ ಸೂತ್ರದ ಎನ್‌ಇಪಿ ಜಾರಿಗಾಗಿ ಸುಪ್ರೀಂಗೆ ಅರ್ಜಿ

ದೆಹಲಿ: ‘ತ್ರಿಭಾಷಾ ಸೂತ್ರ’ ಒಳಗೊಂಡಿರುವ ‘ರಾಷ್ಟ್ರೀಯ ಶಿಕ್ಷಣ ನೀತಿ’(ಎನ್‌ಇಪಿ) ಜಾರಿ ವಿಚಾರವೀಗ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಬಿಜೆಪಿ ಮುಖಂಡರೂ ಆಗಿರುವ ತಮಿಳುನಾಡಿನ ವಕೀಲರೊಬ್ಬರು, ‘ಎನ್‌ಇಪಿ’ಯನ್ನು ಯಥಾರೀತಿ ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿಯೂ ಜಾರಿಗೆ ತರಲು ನಿರ್ದೇಶನ ನೀಡಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ಗೆ ಗುರುವಾರ ಅರ್ಜಿ ಸಲ್ಲಿಸಿದ್ದಾರೆ.

ಬಿಜೆಪಿ ತಮಿಳುನಾಡು ಘಟಕದ ಕಾನೂನು ಘಟಕದ ಮುಖ್ಯಸ್ಥ, ವಕೀಲ ಜಿ.ಎಸ್.ಮಣಿ, ತಮಿಳುನಾಡಿನ ಮಕ್ಕಳ ಶ್ರೇಯಸ್ಸಿಗಾಗಿ ರಾಷ್ಟ್ರೀಯ ಶಿಕ್ಷಣ ನೀತಿ ಯನ್ನು ತ್ರಿಭಾಷಾ ಸೂತ್ರದ ಜತೆಗೇ ಜಾರಿಗೊಳ್ಳುವಂತೆ ಮಾಡಬೇಕು. ಅಷ್ಟೇ ಅಲ್ಲ, ತ್ರಿಭಾಷಾ ಸೂತ್ರವನ್ನು ವಿರೋಧಿಸುತ್ತಿರುವ ಪಕ್ಕದ ರಾಜ್ಯ ಕೇರಳ ಹಾಗೂ ದೂರದ ಪಶ್ಚಿಮ ಬಂಗಾಳದಲ್ಲಿಯೂ ಜಾರಿಗೊಳಿಸಲು ಆದೇಶಿಸಬೇಕು ಎಂದು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದಾರೆ.

ನೂತನ ‘ರಾಷ್ಟ್ರೀಯ ಶಿಕ್ಷಣ ನೀತಿ’ಯಲ್ಲಿ ಹಿಂದಿ ಭಾಷೆ ಕಲಿಕೆ ಯನ್ನು ಒಳಪಡಿಸಿರುವುದಕ್ಕೆ ಈ ಮೂರೂ ರಾಜ್ಯಗಳೂ ವಿರೋಧ ವ್ಯಕ್ತಪಡಿಸುತ್ತಿವೆ. ಹಿಂದಿ ಭಾಷೆ ಕಲಿಕೆಯನ್ನು ಬಲವಂತವಾಗಿ ಹೇರುವುದಾದರೆ ತಮ್ಮ ರಾಜ್ಯದಲ್ಲಿ ‘ಎನ್‌ಇಪಿ’ ಜಾರಿಗೊಳಿಸಲು ಅವಕಾಶವನ್ನೇ ನೀಡುವುದಿಲ್ಲ ಎಂದು ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಪಟ್ಟು ಹಿಡಿದಿವೆ. ಇದು ರಾಜಕೀಯ ಕಾರಣ ಹಾಗೂ ಪ್ರತಿಷ್ಠೆಗೆ ಸಂಬಂಧಿಸಿದ ಜಟಾಪಟಿಯಾಗಿದೆ ಎಂದು ಮಣಿ ಅರ್ಜಿಯಲ್ಲಿ ಗಮನ ಸೆಳೆದಿದ್ದಾರೆ.

ರಾಜ್ಯ ಸರಕಾರಗಳ ಈ ನಡೆಯಿಂದಾಗಿ ಮೂರೂ ರಾಜ್ಯಗಳ ವಿದ್ಯಾರ್ಥಿಗಳು ‘ಎನ್‌ಇಪಿ’ಯಂತಹ ಉತ್ತಮ ಶಿಕ್ಷಣ ವ್ಯವಸ್ಥೆಯಿಂದಲೇ ವಂಚಿತರಾಗುತ್ತಾರೆ. ಆಗ ಅವರ ಶಿಕ್ಷಣ ಪಡೆಯುವ ಮೂಲಭೂತ ಹಕ್ಕನ್ನೇ ಕಸಿದುಕೊಂಡಂತಾಗುತ್ತದೆ. ಹಾಗಾಗದಂತೆ ತಡೆಯಲು ಮೂರೂ ರಾಜ್ಯಗಳಲ್ಲಿ ಎನ್‌ಇಪಿ ಜಾರಿ ಕಡ್ಡಾಯಗೊಳಿಸಬೇಕು. ಈ ದಿಶೆಯಲ್ಲಿ ನ್ಯಾಯಾಲಯ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅರ್ಜಿಯಲ್ಲಿ ಒತ್ತಾಯಿಸಿದ್ದಾರೆ.

ಪ.ಬಂಗಾಳ ವಿರೋಧ

ಆಯುಷ್ಮಾನ್ ಭಾರತ್, ಹಿರಿಯ ನಾಗರಿಕರ ಪಿಂಚಣಿ, ಕೃಷಿಕರಿಗೆ ವಾರ್ಷಿಕ 6 ಸಾವಿರ ರು. ಆರ್ಥಿಕ ನೆರವಿನ ಪಿಎಂ ಕಿಸಾನ್ ಸಮ್ಮಾನ್ ನಿಧಿ ಸೇರಿದಂತೆ ಕೇಂದ್ರ ಸರಕಾರ ಜಾರಿಗೊಳಿಸಿದ ಹಲವು ಯೋಜನೆ -ಕ್ರಮಗಳನ್ನು ವಿರೋಧಿಸುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಸರಕಾರ, ಅದೇ ಮಾರ್ಗದಲ್ಲಿ ಹಿಂದಿಯನ್ನು ತೃತೀಯ ಭಾಷೆಯಾಗಿಸಿರುವ ‘ಎನ್‌ಇಪಿ’ಯನ್ನೂ ವಿರೋಧಿಸುತ್ತಿದೆ.

ಎನ್‌ಇಪಿ ಜಾರಿ ಪರ 1ಲಕ್ಷ ಸಹಿ

ಮುಂದಿನ ವರ್ಷವೇ ವಿಧಾನಸಭೆ ಚುನಾವಣೆ ಎದುರಿಸಬೇಕಿರುವ ತಮಿಳುನಾಡಿನಲ್ಲಿ ಈಗ ಪ್ರತಿಯೊಂದು ವಿಚಾರವೂ ರಾಜಕೀಯ ಗೊಳ್ಳುತ್ತಿದೆ.

ಅದರಲ್ಲೂ ಡಿಎಂಕೆ ಸರಕಾರ ಕೇಂದ್ರ ಸರಕಾರದ ಹಲವು ಕ್ರಮಗಳನ್ನು ವಿರೋಧಿಸುತ್ತಲೇ ಬಂದಿದೆ. ಈಗ ಹಿಂದಿ ಭಾಷೆ ಹೇರಿಕೆ ಎಂದು ‘ಎನ್‌ಇಪಿ’ ಜಾರಿಗೆ ವಿರೋಧಿಸುತ್ತಿದೆ. ಅದನ್ನು ರಾಜಕೀಯ ಕದನದ ಭಾಗವಾಗಿಸಿಕೊಂಡಿದೆ.

ಅದಕ್ಕೆ ಪ್ರತ್ಯುತ್ತರ ಎಂಬಂತೆ ಬಿಜೆಪಿ ತಮಿಳುನಾಡು ಘಟಕ ‘ಎನ್‌ಇಪಿ’ ರಾಜ್ಯದಲ್ಲಿ ಜಾರಿಗೊಳ್ಳುವಂತೆ ಮಾಡುವುದನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದೆ. ಅದಕ್ಕಾಗಿ ಸಾಧ್ಯವಿರುವ ಎಲ್ಲಾ ಹೋರಾಟದ ಮಾರ್ಗಗಳನ್ನೂ ಅನುಸರಿಸುತ್ತಿದೆ. ಒಂದೆಡೆ ಪಕ್ಷದ ಕಾನೂನು ಘಟಕದ ಮುಖ್ಯಸ್ಥರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರೆ, ಇನ್ನೊಂದೆಡೆ ರಾಜ್ಯಾಧ್ಯಕ್ಷ ಅಣ್ಣಾಮಲೈ ನೇತೃತ್ವದ ತಂಡ, ಎನ್‌ಇಪಿ ಜಾರಿ ವಿಚಾರದಲ್ಲಿ ಜನಜಾಗೃತಿ ಮೂಡಿಸಲು ಯತ್ನಿಸುತ್ತಿದೆ. ಈಗಾಗಲೇ ತಮಿಳುನಾಡಿನ 1 ಲಕ್ಷ ಮಂದಿ ಎನ್‌ಇಪಿ ಜಾರಿಗೆ ಆಗ್ರಹಿಸುವ ಅಭಿಯಾನ ಪತ್ರಕ್ಕೆ ಸಹಿ ಹಾಕಿದ್ದಾರೆ.

ತ.ನಾಡಿಗೆ ಅನುದಾನ ಕಡಿತ

ತಮಿಳುನಾಡು ಸರಕಾರ ರಾಜ್ಯದಲ್ಲಿ ‘ರಾಷ್ಟ್ರೀಯ ಶಿಕ್ಷಣ ನೀತಿ’ ಜಾರಿಗೆ ಅವಕಾಶ ಮಾಡಿಕೊಡದೇ ಇದ್ದರೆ 2020ರ ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ಕೇಂದ್ರ ಸರಕಾರದಿಂದ ರಾಜ್ಯಗಳಿಗೆ ನೀಡಲಾಗುವ ‘ಸಮಗ್ರ ಶಿಕ್ಷಣ ಯೋಜನೆ’ಯ ಅನುದಾನವನ್ನು ತಡೆ ಹಿಡಿಯಲಾಗುವುದು ಎಂದು ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಮಿಳುನಾಡು ಸರಕಾರಕ್ಕೆ ತಿಳಿಸಿದ್ದಾರೆ.

ಹಿಂದಿ ಹೇರದಿರಿ: ತಮಿಳು ನಾಡು ಪಟ್ಟು

ತಮಿಳುನಾಡು ರಾಜ್ಯದಲ್ಲಿನ ‘ದ್ರಾವಿಡ ಮುನ್ನೇತ್ರ ಕಳಗಂ’ ಪಕ್ಷದ ಸರಕಾರವಂತೂ ನಮ್ಮ ಮಕ್ಕಳಿಗೆ ಹಿಂದಿ ಭಾಷೆ ಬೇಡವೇಬೇಡ. ‘ಸಿಬಿಎಸ್‌ಇ’ ಪಠ್ಯಕ್ರಮ ದಲ್ಲಿಯೂ 3ನೇ ಭಾಷೆಯಾಗಿ ಹಿಂದಿ ಬೇಡವೇ ಬೇಡ. ಹಿಂದಿಯನ್ನು ನಮ್ಮ ಜನರ ಮೇಲೆ ಬಲವಂತವಾಗಿ ಹೇರಲಾಗದು. ಹಾಗೊಮ್ಮೆ ಹಿಂದಿ ಭಾಷೆ ಹೇರುವುದಾದರೆ ನಾವು ‘ದ್ವಿಭಾಷಾ ಸೂತ್ರ’ವನ್ನಷ್ಟೇ ನೆಚ್ಚಿಕೊಳ್ಳುತ್ತೇವೆ ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಮತ್ತು ಡಿಸಿಎಂ ಉದಯನಿಧಿ ಸ್ಟಾಲಿನ್ ಪಟ್ಟು ಹಿಡಿದಿದ್ದಾರೆ.

ದಕ್ಷಿಣ ಭಾರತದ ಹಿಂದಿಯೇತರ ರಾಜ್ಯಗಳ ಮೇಲೆ ಹಿಂದಿ ಭಾಷೆ ಹೇರುವ ಸಲುವಾಗಿಯೇ ತ್ರಿಭಾಷಾ ಸೂತ್ರವನ್ನು ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ‘ಎನ್‌ಇಪಿ’ಯಲ್ಲಿ ಒಳಗೊಳ್ಳುವಂತೆ ಮಾಡಿದೆ. ಹಿಂದಿ ಹೇರಿಕೆಯಿಂದ ರಾಜ್ಯದಲ್ಲಿ ಸ್ಥಳೀಯ ಭಾಷಾ ಸೊಗಡು, ನೆಲದ ಸಂಸ್ಕೃತಿ, ಕಲೆ, ಸಾಹಿತ್ಯ ಮೊದಲಾದ ಅಂಶಗಳ ಮೇಲೆ ದಾಳಿ ಮಾಡಿದಂತಾಗುತ್ತದೆ. ಇದು ತಮಿಳು ಭಾಷೆ-ಸಂಸ್ಕೃತಿಯ ಅಳಿವು-ಉಳಿವಿನ ಪ್ರಶ್ನೆಯಾಗಿದೆ. ಹಾಗಾಗಿ ತ್ರಿಭಾಷಾ ಸೂತ್ರದ ‘ಎನ್‌ಇಪಿ’ ರಾಜ್ಯದಲ್ಲಿ ಜಾರಿಯಾಗಲು ಬಿಡುವುದಿಲ್ಲ ಎಂದಿದ್ದಾರೆ.

ಸುದ್ದಿ ಮೇಲೆ ನಿಗಾಕ್ಕೆ ‘ಮೀಡಿಯ ಸೆಂಟರ್’

ಮುಂಬೈ: ಮಹಾರಾಷ್ಟ್ರ ಸರಕಾರದ ರಾಜ್ಯದಲ್ಲಿನ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುದ್ದಿಗಳು, ಅದರಲ್ಲಿನ ಅಂಶಗಳತ್ತ ನಿಗಾ ಇರಿಸಲು ‘ಮಾಧ್ಯಮ ನಿರ್ವಹಣಾ ಕೇಂದ್ರ’ವನ್ನು ಆರಂಭಿಸಲು ನಿರ್ಧರಿಸಿದೆ. ಅದಕ್ಕಾಗಿ 10 ಕೋಟಿ ರು.ಗಳ ಅನುದಾನವನ್ನೂ ಮೀಸಲಿಟ್ಟಿದೆ. ಈ ಮಾಧ್ಯಮ ನಿರ್ವಹಣಾ ಕೇಂದ್ರವು, ಮುದ್ರಣ, ವಿದ್ಯುನ್ಮಾನ, ಡಿಜಿಟಲ್ ಮಾಧ್ಯಮಗಳತ್ತ ನೋಟ ಹರಿಸಲಿದೆ. ಮಾಧ್ಯಮ ಗಳಲ್ಲಿ ಪ್ರಕಟವಾಗುವ ಸುಳ್ಳು ಸುದ್ದಿಗಳು, ತಪ್ಪು ಮಾಹಿತಿಗಳು, ಜನರ ದಾರಿ ತಪ್ಪಿಸುವ ಸಂಗತಿಗಳನ್ನು ನಿವಾರಿಸಲು ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ರಾಜ್ಯ ಸರಕಾರದ ಮೂಲಗಳು ತಿಳಿಸಿವೆ.

ಎಸ್‌ಡಿಪಿಐ ಪ್ರಧಾನ ಕಚೇರಿ, 11 ಸ್ಥಳಗಳಿಗೆ ಇ.ಡಿ. ದಾಳಿ

ದೆಹಲಿ: ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯ(ಎಸ್‌ಡಿಪಿಐ) ಪ್ರಧಾನ ಕಚೇರಿ ಸೇರಿದಂತೆ ದೇಶದ ವಿವಿಧೆಡೆಯ 12 ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯದ ಹಲವು ತಂಡ ಗುರುವಾರ ಕ್ಷಿಪ್ರ ದಾಳಿ ನಡೆಸಿದೆ.

ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷ ಎಂ.ಕೆ.ಫೈಝಿ ಬಂಧನವಾದ ನಂತರದಲ್ಲಿ ಇ.ಡಿ ಯೋಜಿತ ರೀತಿ ದಾಳಿ ನಡೆಸಿದೆ. ಅಕ್ರಮ ಹಣ ವರ್ಗಾವಣೆ ಪ್ರಕರಣ ಸಂಬಂಧ ಈ ದಾಳಿ ನಡೆಸಲಾಗಿದೆ ಎನ್ನಲಾಗಿದೆ. ಕೇಂದ್ರ ಸರಕಾರದಿಂದ ನಿಷೇಧಕ್ಕೊಳಗಾಗಿರುವ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯ(ಪಿಎಫ್‌ಐ)ದ ರಾಜಕೀಯ ಅಂಗವಾಗಿರುವ ಎಸ್‌ಡಿಪಿಐ ಪ್ರಧಾನ ಕಚೇರಿ ದೆಹಲಿಯಲ್ಲಿದೆ. ಪ್ರಧಾನ ಕಚೇರಿ, ಕೇರಳದ ತಿರುವನಂತಪುರಂ ಮತ್ತು ಮಲಪ್ಪುರಂ, ಬೆಂಗಳೂರು, ಆಂಧ್ರಪ್ರದೇಶದ ನಂದ್ಯಾಲ್, ಥಾಣೆ, ಚೆನ್ನೈ, ಜಾರ್ಖಂಡ್‌ನ ಪಾಕೂರ್, ಕೋಲ್ಕತ್ತ, ಲಖನೌ ಮತ್ತು ಜೈಪುರ ಮತ್ತಿತರೆಡೆಯ 12 ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಹಲವು ತಂಡಗಳು ದಾಳಿ ನಡೆಸಿ ಮೂಲೆ ಮೂಲೆ ಶೋಧಿಸಿ ಹಲವಾರು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿವೆ ಎಂದು ತಿಳಿದು ಬಂದಿದೆ. ಪಿಎಫ್‌ಐ ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದನ್ನು ಉಲ್ಲೇಖಿಸಿ ಕೇಂದ್ರದ ಗೃಹ ಸಚಿವಾಲಯ 2022ರ ಸೆಪ್ಟೆಂಬರ್‌ನಲ್ಲಿಯೇ ನಿಷೇಧಿಸಿದೆ. ಆದರೆ, ಎಸ್‌ಡಿಪಿಐ ರಾಜಕೀಯ ಪಕ್ಷವಾಗಿ ಚುನಾವಣಾ ಆಯೋಗದಲ್ಲಿ ನೋಂದಣಿ ಆಗಿದ್ದರಿಂದ ನಿಷೇಧ ಕ್ರಮ ಸಾಧ್ಯವಾಗಿರಲಿಲ್ಲ.

ಹಣ ಸಂಗ್ರಹಕ್ಕೆ ಎಸ್‌ಡಿಪಿಐ ಬಳಕೆ

ನಿಷೇಧದ ಬಳಿಕ ಪಿಎಫ್‌ಐ, ಎಸ್‌ಡಿಪಿಐ ಬಳಸಿಕೊಂಡು ಹಣ ಸಂಗ್ರಹಿಸಿ ಅಪರಾಧ ಚಟುವಟಿಕೆಗಳನ್ನು ನಡೆಸುತ್ತಿದೆ ಎಂದು ಜಾರಿ ನಿರ್ದೇಶನಾಲಯ(ಇ.ಡಿ.) ಆರೋಪಿಸಿದೆ. ಅದನ್ನು ದೃಢೀಕರಿಸುವಂತೆಯೇ ‘ಎಸ್‌ಡಿಪಿಐ’ನ ಬ್ಯಾಂಕ್ ಖಾತೆ ಗಳಿಂದ ‘ಪಿಎಫ್‌ಐ’ಗೆ ಭಾರೀ ಪ್ರಮಾಣ ದಲ್ಲಿ ಹಣ ವರ್ಗಾವಣೆ ನಡೆದಿರುವುದು ಕಂಡುಬಂದಿದೆ. ಇ.ಡಿ ಅಧಿಕಾರಿಗಳು ಎಸ್‌ಡಿಪಿಐ ಮತ್ತು ಪಿಎಫ್‌ಐ ನಡುವಿನ ಆರ್ಥಿಕ ವ್ಯವಹಾರಗಳ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಶೀಘ್ರಗತಿ ಜನಸಂಖ್ಯಾ ನಷ್ಟ ಅನುಭವಿಸಿದ ದೇಶಗಳು

2022-2023ರಲ್ಲಿ ಭಾರೀ ಪ್ರಮಾಣದಲ್ಲಿ ಜನಸಂಖ್ಯೆ ಕಳೆದುಕೊಂಡ ರಾಷ್ಟ್ರಗಳಿವು.



ವಲಸೆ ಮತ್ತು ಜನ ಸಮುದಾಯದಲ್ಲಿನ ಬದಲಾವಣೆ ಇದಕ್ಕೆ ಕಾರಣ. ಉಕ್ರೇನ್ ಜನಸಂಖ್ಯೆ ಕುಸಿತಕ್ಕೆ ಯುದ್ಧ ಕಾರಣ ನಿರಾಶ್ರಿತರಾಗಿರುವುದು.
ಮಾಹಿತಿ: ವಿಶ್ವಸಂಸ್ಥೆ ಜನಸಂಖ್ಯಾ ವಿಭಾಗ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
[ICAR, NAAC accredited and UGC u/s 12(B) & 2(f) approved]
ಸರಕುಖರೀದಿ ಅಧಿಕಾರಿಗಳ ಕಾರ್ಯಾಲಯ, ಕೃವಿವಿ, ರಾಯಚೂರು
ಮಿಂಚಂಚೆ:spo@uasraichur.edu.in ದೂರವಾಣಿಸಂಖ್ಯೆ: 08532 220165

ಇ-ಟೆಂಡರ್ ಪ್ರಕಟಣೆ ಸಂಖ್ಯೆ: SPO/UASR/E-Proc-09/2024-25, Dt:06-03-2025

ಅಲ್ಪಾವಧಿಟೆಂಡರ ಪ್ರಕಟಣೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿಗೆ ಸಂಬಂಧಪಟ್ಟಂತೆ Inviting short term tender notification for the supply of 6 benzyle adenine, establishment of smart class room & other scientific equipments ಮತ್ತು ಇನ್ನಿತರ ವಸ್ತುಗಳ ಖರೀದಿಗಾಗಿಟೆಂಡರನ್ನುಕರೆಯಲಾಗಿದ್ದು, ಆಸಕ್ತಸರಬರಾಜುದಾರರು ಆನ್‌ಲೈನ್ ಮುಖಾಂತರ ಅಂದರೆ www.kppp.karnataka.gov.in ಜಾಲತಾಣದಲ್ಲಿ (ಬೇಡಿಕೆ ಸಂಖ್ಯೆ: UASRCR/2024-25/IND0047 TO 0050)ಭಾಗವಹಿಸಬಹುದು. ಈ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಭರ್ತಿಮಾಡಿ ಸಲ್ಲಿಸುವ ಕಡೆ ದಿನಾಂಕ: 13-03-2025 ಆಗಿರುತ್ತದೆ

ಸಹಿ/- ಸರಕು ಖರೀದಿ ಅಧಿಕಾರಿಗಳು,
ಕೃವಿವಿ., ರಾಯಚೂರು.

DIP/RCR/787/KSMCA/788/2024-25

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
Email:itstaff_ulb_channarayapatna@yahoo.co.in, Phone:08176-255411
ಸಂ:ಮುಅ/ಪುಸಚ/ಇಂ.ವಿ/ಜೆಇ-2/ಪುಅ/2024-25 ದಿನಾಂಕ: 05-03-2025

:ಟೆಂಡರ್ ಪ್ರಕಟಣೆ: : ಇ ಪ್ರೊಕ್ಯೂರ್‌ಮೆಂಟ್ ಮೂಲಕ :

ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ 2024-25ನೇ ಸಾಲಿನ ಪುರಸಭಾ ಅನುದಾನದಡಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಅಧ್ಯಾದೇಶ 2000ದ ಅನ್ವಯ ಟೆಂಡರನ್ನು ಕರೆಯಲಾಗಿದ್ದು ಗುತ್ತಿಗೆದಾರರು ಇ-ಪ್ರೊಕ್ಯೂರಮೆಂಟ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: 21-03-2025 ಸಂಜೆ 5.30 ಗಂಟೆಯಾಗಿದ್ದು ಕಾಮಗಾರಿಗಳು ಟೆಂಡರ್ ದಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಕ್ಕಾಗಿ ಪುರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿಕೋಶ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಮತ್ತು https://kppp.karnataka.gov.in ಪಡೆಯಬಹುದು ದೂರವಾಣಿ:08176-254544. ಕಾಮಗಾರಿಗಳ ಇಡೆಂಟ್ ವಿವರ ಕೆಳಕಂಡತಿದೆ:- ಪುರಸಭಾ ಅನುದಾನ 2024-25 ಕ್ರ.ಸಂ.1)ಕಾಮಗಾರಿ ಹೆಸರು: ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿನ ವಾರ್ಡ್ ನಂ:03 ಚೆನ್ನಿಗರಾಯ ಬಢಾವಣೆಯಲ್ಲಿನ ವಿವಿಧ ಸ್ಥಳಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ. DMA/2024-25/RD/WORK_INDENT36550 ಅಂದಾಜು ಮೊತ್ತ 19.40 ಕಾಲಾವಧಿ: 3 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-1 2.ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.04 ರ ಉಷಾ ಕ್ಲಿನಿಕ್ ಚರಂಡಿ ನಿರ್ಮಾಣ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿ. DMA/2024-25/RD/WORK_INDENT36551 ಅಂದಾಜು ಮೊತ್ತ 13.35 ಕಾಲಾವಧಿ: 3 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-1 3.ವಾರ್ಡ್ ನಂ-04ರ ಕ್ರೈಸ್ಟ್ ಸ್ಕೂಲ್ ಹಿಂಭಾಗ ಸಿಸಿ ಚರಂಡಿ ಕಾಮಗಾರಿ. DMA/2024-25/OW/WORK_INDENT36569 ಅಂದಾಜು ಮೊತ್ತ 29.05 ಕಾಲಾವಧಿ: 3 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-2 4.ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿನ ವಾರ್ಡ್ ನಂ:03 ಚೆನ್ನಿಗರಾಯ ಬಢಾವಣೆಯಲ್ಲಿನ ವಿವಿಧ ಸ್ಥಳಗಳಲ್ಲಿ ಚರಂಡಿ ನಿರ್ಮಾಣ ಕಾಮಗಾರಿ. DMA/2024-25/OW/WORK_INDENT36549 ಅಂದಾಜು ಮೊತ್ತ 24.00 ಕಾಲಾವಧಿ: 3 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-2 ಸೂಚನೆ:- ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವತ್ರಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಮುಂದಿನ ದಿನಾಂಕವನ್ನು ಪರಿಗಣಿಸತಕ್ಕದ್ದು.

ಸಹಿ/- ಅಧ್ಯಕ್ಷರು, ಪುರಸಭೆ ಚನ್ನರಾಯಪಟ್ಟಣ
ಸಹಿ/-ಮುಖ್ಯಾಧಿಕಾರಿ. ಪುರಸಭೆ ಚನ್ನರಾಯಪಟ್ಟಣ

ವಾಸಾಸಂಇ/ಹಿಸನಿ/ಹಾಸನ/1028/ಕೆಎಸ್‌ಎಂಸಿಎ/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.

ಸಂ: ಬೆಂಅಪ್ರಾ/ನಯೋಸ/CLU-328/3231/2024-25 ದಿನಾಂಕ: 06.03.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀಮತಿ ಸುನಂದಮ್ಮ	ಆನೇಕಲ್	ಸರ್ಜಾಪುರ	ಕೊಮ್ಮಸಂದ್ರ	57	3-36 (0-08ಗುಂ ಖರಾಬು ಪ್ರದೇಶ ಹೊರತುಪಡಿಸಿ)	ವ್ಯವಸಾಯ ವಲಯ	ವಸತಿ

ಷರಾ: ಅರ್ಜಿದಾರರು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ, ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಹಾಗೂ ಕಾನೂನು ಬದ್ಧವಾದ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು **‘ವ್ಯವಸಾಯ ವಲಯ’** ದಿಂದ **‘ವಸತಿ ಉಪಯೋಗಕ್ಕೆ’** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಬಲೂಚಿಸ್ತಾನ: ಐಇಡಿ ಸ್ಫೋಟಕ್ಕೆ 4 ಜೀವಬಲಿ

ಇಸ್ಲಾಮಾಬಾದ್: ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದಲ್ಲಿನ ಖುಜ್ದಾರ್ ಜಿಲ್ಲೆಯ ಮಾರುಕಟ್ಟೆಯಲ್ಲಿ ಮೋಟಾರ್ ಬೈಕ್‌ನಲ್ಲಿ ಐಇಡಿ ಜೋಡಿಸಿ ಸ್ಫೋಟಗೊಳಿಸಿದ ಪರಿಣಾಮ ನಾಲ್ವರು ಸಾವನ್ನಪ್ಪಿದ್ದು, ಐವರು ಗಾಯಗೊಂಡಿದ್ದಾರೆ. ಒಬ್ಬ ಗಾಯಾಳು ಸ್ಥಿತಿ ಗಂಭೀರವಾಗಿದೆ. ನಾಲ್ ಪೊಲೀಸ್ ಠಾಣೆ ಅಧಿಕಾರಿ ಬಹಾವಲ್ ಖಾನ್ ಪಿಂದ್ರಾನಿ ಘಟನೆ ದೃಢಪಡಿಸಿದ್ದು, ಸ್ಫೋಟಕವನ್ನು ಮೋಟಾರ್ ಬೈಕ್‌ಗೆ ಜೋಡಿಸಲಾಗಿತ್ತು. ಕಾರಿನ ಪಕ್ಕದಲ್ಲಿ ಬೈಕ್ ನಿಲ್ಲಿಸಿ ಬಳಿಕ ರಿಮೋಟ್ ಕಂಟ್ರೋಲ್ ಮೂಲಕ ಸ್ಫೋಟವಾಗುವಂತೆ ಮಾಡಲಾಗಿದೆ ಎಂದು ವರದಿಯಾಗಿದೆ. ಬಾಂಬ್ ನಿಷ್ಕ್ರಿಯ ದಳ ಸ್ಥಳಕ್ಕೆ ಬಂದಿದ್ದು, ಪರಿಶೀಲನೆ ನಡೆಸುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಖುಜ್ದಾರ್‌ನ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಜಾವೇದ್ ಜೆಹ್ರಿ, ಮಾರುಕಟ್ಟೆ ಸಮೀಪದ ಕಾಲೇಜು ಬಳಿ ಸ್ಫೋಟವಾಗಿದೆ. ವಾಹನಗಳು ಕೂಡ ಸುಟ್ಟುಹೋಗಿವೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಖುಜ್ದಾರ್ ಬೋಧನಾ ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದಿದ್ದಾರೆ.

ಮಹಾರಾಷ್ಟ್ರದಲ್ಲಿ ಕಿಚ್ಚು ಹಚ್ಚಿದ ಆರೆಸ್ಸೆಸ್ ನಾಯಕನ ಹೇಳಿಕೆ

ಮುಂಬೈನಲ್ಲಿ ಮರಾಠಿ ಕಲಿಯಲೇಬೇಕಿಲ್ಲ

ಮುಂಬೈ: ಮಹಾರಾಷ್ಟ್ರದ ರಾಜಧಾನಿ ನಗರ ಮುಂಬೈನಲ್ಲಿ ವಾಸಿಸಲು ಮರಾಠಿ ತಿಳಿದಿರಲೇಬೇಕಾದ ಅಗತ್ಯವಿಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಹಿರಿಯ ಮುಖಂಡ ಭಯ್ಯಾಜಿ ಜೋಶಿ ಹೇಳಿದ್ದು, ಹೊಸ ವಿವಾದಕ್ಕೆ ಕಾರಣವಾಗಿದ್ದಾರೆ.



ಜೋಷಿ ಹೇಳಿಕೆ ಆಡಳಿತಾರೂಢ ಮಹಾಯುತಿ ಮತ್ತು ಪ್ರತಿಪಕ್ಷಗಳ ಒಕ್ಕೂಟ ‘ಮಹಾವಿಕಾಸ ಅಘಾಡಿ’ ನಡುವೆ ವಾಕ್ಸಮರ ಶುರುವಾಗಿದೆ.

ಮುಂಬೈ ಮಹಾನಗರಿಯಲ್ಲಿ ಒಂದೇ ಭಾಷೆಯಿಲ್ಲ, ಹಲವಾರು ಭಾಷೆಗಳು ಬಳಕೆಯಲ್ಲಿವೆ. ಕೆಲ ಪ್ರದೇಶಗಳಲ್ಲಿ ಸ್ಥಳೀಯರದ್ದೇ ಸ್ವಂತ ಭಾಷೆ ಬಳಕೆಯಲ್ಲಿವೆ. ಉದಾಹರಣೆಗೆ ಘಾಟ್ಕೋಪರ್ ಪ್ರದೇಶದ ಭಾಷೆ ಗುಜರಾತಿ. ಗಿರ್‌ಗಾಂವ್‌ನಲ್ಲಿ ಕಡಿಮೆ ಹಿಂದಿ ಮಾತನಾಡುವ, ಹೆಚ್ಚು ಮರಾಠಿ ಮಾತನಾಡುವ ಜನರೇ ಇದ್ದಾರೆ. ಇದು ಇಡೀ ಮುಂಬೈ ಒಂದೇ ಭಾಷೆ ಮಾತನಾಡುವುದಿಲ್ಲ. ಹಲವು ಭಾಷೆಗಳ ಬಳಕೆಯನ್ನು ಹೊಂದಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಹಾಗಾಗಿ ಮುಂಬೈಗೆ ಬರುವ ವ್ಯಕ್ತಿ ಮರಾಠಿ ಕಲಿಯುವ ಅಗತ್ಯವಿಲ್ಲ ಎಂದಿದ್ದಾರೆ.

ಜೋಷಿ ಅವರ ಹೇಳಿಕೆ ಬಗ್ಗೆ ರಾಜ್ಯ ಸರಕಾರ ತನ್ನ ನಿಲುವು ಸ್ಪಷ್ಟಪಡಿಸಬೇಕು ಎಂದು ಶಿವಸೇನೆ(ಉದ್ಧವ್ ಬಣ) ಶಾಸಕ ಭಾಸ್ಕರ್ ಜಾಧವ್ ಆಗ್ರಹಿಸಿದ್ದಾರೆ.

ಮರಾಠಿ ರಾಜ್ಯ ಭಾಷೆ ಮತ್ತು ಅದರ ವಿರುದ್ಧವಾದ ಜೋಷಿ ಅವರ ಹೇಳಿಕೆ ದೇಶದ್ರೋಹಕ್ಕೆ ಸಮನಾಗಿದೆ. ಮರಾಠಿ ಭಾಷೆ ಮತ್ತು ಮರಾಠಿಗರ ಪ್ರತಿಷ್ಠೆಗೆ ಮಾಡಿದ ಅವಮಾನ ಎಂದು ಶಿವಸೇನೆ (ಉದ್ಧವ್ ಬಣ) ಸಂಸದ ಸಂಜಯ್ ರಾವತ್ ಕಿಡಿಕಾರಿದ್ದಾರೆ.

ಮರಾಠಿ ಕಡ್ಡಾಯ

ಮರಾಠಿ ಭಾಷೆಯು ಕೇವಲ ಮುಂಬೈ ಮಾತ್ರವಲ್ಲ, ಇಡೀ ಮಹಾರಾಷ್ಟ್ರದ ಭಾಷೆಯಾಗಿದೆ. ಮಹಾರಾಷ್ಟ್ರ, ಮುಂಬೈನಲ್ಲಿ ವಾಸಿಸುವವರೆಲ್ಲರೂ ಮರಾಠಿ ಕಲಿತು ಮಾತನಾಡಬೇಕು ಎಂದು ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವೀಸ್ ವಿಧಾನಸಭೆಯಲ್ಲಿ ಗುರುವಾರ ಹೇಳಿದ್ದಾರೆ.

ಭಯ್ಯಾಜಿ ಹೇಳಿದ್ದನ್ನು ನಾನು ಕೇಳಿಲ್ಲ. ಆದರೆ ಮುಂಬೈ ಮತ್ತು ಮಹಾರಾಷ್ಟ್ರದ ಭಾಷೆ ಮರಾಠಿಯೇ ಆಗಿದೆ. ಇಲ್ಲಿರುವ ಪ್ರತಿಯೊಬ್ಬರೂ ಮರಾಠಿ ಕಲಿಯಬೇಕು, ಅದರಲ್ಲೇ ಮಾತನಾಡಬೇಕು ಎಂದು ಫಡ್ನವಿಸ್ ಹೇಳಿದರು.

ಐಎಸ್‌ಐ ಸಂಪರ್ಕದಲ್ಲಿದ್ದ ಖಲಿಸ್ತಾನಿ ಉಗ್ರ ಬಂಧನ

ಲಖನೌ: ಪಾಕಿಸ್ತಾನದ ಐಎಸ್‌ಐ ಜತೆ ಸಂಪರ್ಕ ಹೊಂದಿದ್ದ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್ ಸಂಘಟನೆಯ ಉಗ್ರನನ್ನು ಉತ್ತರ ಪ್ರದೇಶದ ಎಸ್‌ಟಿಎಫ್ ಮತ್ತು ಪಂಜಾಬ್ ಪೊಲೀಸ್ ಜಂಟಿ ಕಾರ್ಯಾಚರಣೆ ನಡೆಸಿ ಗುರುವಾರ ಮುಂಜಾನೆ ಕೌಶಂಬಿ ಜಿಲ್ಲೆಯಲ್ಲಿ ಬಂಧಿಸಿದ್ದಾರೆ.

ಪಂಜಾಬ್‌ನ ಅಮೃತಸರದ ರಾಮದಾಸ್ ಪ್ರದೇಶದ ಕುರ್ಲಿಯನ್ ಗ್ರಾಮದ ಲಾಜರ್ ಮಸಿಹ್‌ನನ್ನು ಕೌಶಂಬಿಯ ಕೊಖ್ರಾಜ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿ ಗುರುವಾರ ನಸುಕಿನ 3.20ರಲ್ಲಿ ಬಂಧಿಸಲಾಯಿತು ಎಂದು ಉತ್ತರಪ್ರದೇಶದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಎಸ್‌ಟಿಎಫ್) ಅಮಿತಾಭ್ ಯಶ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಬಂಧಿತ ಉಗ್ರ, ಲಾಜರ್, ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್‌ನ(ಬಿಕೆಐ) ಜರ್ಮನಿ ಮಾಡ್ಯೂಲ್ ಮುಖ್ಯಸ್ಥ ಸ್ವರ್ಣಸಿಂಗ್ ಅಲಿಯಾಸ್ ಜೀವನ್ ಫೌಜಿಗೆ ಕೆಲಸ ಮಾಡುತ್ತಿದ್ದ. ಬಂಧಿತ ಉಗ್ರನ ಬಳಿ ಇದ್ದ ಕೆಲವು ಸ್ಫೋಟಕಗಳು ಮತ್ತು ಶಸ್ತ್ರಾಸ್ತ್ರಗಳನ್ನು ವಶಪಡಿಸಿ ಕೊಳ್ಳಲಾಗಿದೆ. 3 ಹ್ಯಾಂಡ್ ಗ್ರನೇಡ್, 2 ಡಿಟೋನೇಟರ್, 1 ವಿದೇಶಿ ಪಿಸ್ತೂಲ್ ಮತ್ತು 13 ಕಾಟ್ರಿಡ್ಜ್, ಬಿಳಿ ಬಣ್ಣದ ಸ್ಫೋಟಕ ಪೌಡರ್, ಗಾಜಿಯಾಬಾದ್ ವಿಳಾಸದ ಆಧಾರ್ ಕಾರ್ಡ್, ಮೊಬೈಲ್ ಫೋನ್ ವಶವಾಗಿದೆ.

ಸುದೀರ್ಘ ಲಿವ್- ಇನ್: ಅತ್ಯಾಚಾರ ಆರೋಪ ಸಲ್ಲ

ದೆಹಲಿ: ಸುದೀರ್ಘಾವಧಿಗೆ ಲಿವ್ ಇನ್ ಸಂಬಂಧದಲ್ಲಿದ್ದ ಮಹಿಳೆ, ಬಳಿಕ ಜತೆಗಾರನ ಅತ್ಯಾಚಾರ ಆರೋಪ ಹೊರಿಸಲು ಬರುವುದಿಲ್ಲ ಎಂದು ಸುಪ್ರೀಂಕೋರ್ಟ್ ಗುರುವಾರ ಹೇಳಿದೆ.

16 ವರ್ಷ ಲಿವ್-ಇನ್‌ನಲ್ಲಿದ್ದ ಮಹಿಳೆ, ನಂತರದ ದಿನಗಳಲ್ಲಿ ಸಂಗಾತಿಯ ವಿರುದ್ಧ ಅತ್ಯಾಚಾರ ಆರೋಪ ಹೊರಿಸಲಾಗದು ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ವಿಕ್ರಮನಾಥ್ ಮತ್ತು ನ್ಯಾ.ಸಂದೀಪ್ ಮೆಹ್ತಾ ಅವರ ಪೀಠ ಹೇಳಿದೆ.

ಲಿವ್ ಇನ್ ಸಂಬಂಧದ ಶುರುವಿನಿಂದಲೂ ಮಹಿಳೆಯನ್ನು ಮದುವೆಯಾಗುವ ಉದ್ದೇಶ ಆರೋಪಿಗೆ ಇರಲಿಲ್ಲ ಎಂಬುದು ಸಾಬೀತಾಗಬೇಕು. ಅದರ ಹೊರತು ವಿವಾಹದ ಭರವಸೆ ಉಲ್ಲಂಘಿಸಿದರೆ ಅದು ಅತ್ಯಾ ಚಾರ ಎನಿಸಿಕೊಳ್ಳುವುದಿಲ್ಲ ಎಂದು ಪೀಠ ಸ್ಪಷ್ಟವಾಗಿ ಹೇಳಿದೆ. ಸಂಗಾಗಿ ವಿರುದ್ಧ ಮಹಿಳೆ ಹೂಡಿದ್ದ ಕ್ರಿಮಿನಲ್ ಮೊಕದ್ದಮೆ ಯನ್ನು ರದ್ದುಪಡಿಸಿದೆ. ಅಲ್ಲದೇ, ಈ ಪ್ರಕರಣದಲ್ಲಿ ಇಬ್ಬರ ಸಮ್ಮತಿಯಿಂದಲೇ ಲೈಂಗಿಕ ಸಂಬಂಧ ಮುಂದುವರೆದಿದೆ. ಬಲವಂತವಾಗಲೀ, ವಂಚನೆಯಾಗಲೀ ಕಾಣುತ್ತಿಲ್ಲ. ಅದನ್ನು ಖಚಿತಪಡಿಸಲು 16 ವರ್ಷ ಕಾಲದ ಸುದೀರ್ಘಾವಧಿ ಸಂಬಂಧವೇ ಸಾಕು ಎಂದು ಪೀಠ ಹೇಳಿದೆ.

ನಿರ್ದೇಶಕ ಆರ್‌ಜಿವಿ ವಿರುದ್ಧ ಬಂಧನ ವಾರಂಟ್

ಮುಂಬೈ: ಹೆಸರಾಂತ ಚಿತ್ರ ನಿರ್ದೇಶಕ-ನಿರ್ಮಾಪಕ ರಾಮ್ ಗೋಪಾಲ್ ವರ್ಮಾ(ಆರ್‌ಜಿವಿ) ವಿರುದ್ಧ ಸ್ಥಳೀಯ ನ್ಯಾಯಾಲಯದಿಂದ ಗುರುವಾರ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಲಾಗಿದೆ.

ಚೆಕ್ ಬೌನ್ಸ್ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗದು ರಾಮ್‌ಗೋಪಾಲ್ ವರ್ಮಾ ವಿರುದ್ಧ ಮುಂಬೈನ ಸೆಷನ್ಸ್ ನ್ಯಾಯಾಲಯ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಿದೆ. ಚೆಕ್ ಬೌನ್ಸ್ ಪ್ರಕರಣವೊಂದರಲ್ಲಿ ಅಂಧೇರಿಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್(ಪ್ರಥಮ ದರ್ಜೆ) ನ್ಯಾಯಾಲಯದ ನ್ಯಾಯಾಧೀಶ ವೈ.ಪಿ.ಪೂಜಾರಿ ಅವರು ರಾಮ್‌ಗೋಪಾಲ್ ವರ್ಮಾ ದೋಷಿ ಎಂದು ಜ.21ರಂದು ತೀರ್ಪು ನೀಡಿ ಮೂರು ತಿಂಗಳ ಜೈಲು ಶಿಕ್ಷೆ ವಿಧಿಸಿದ್ದರು. ಈ ಪ್ರಕರಣದಲ್ಲಿ ಶಿಕ್ಷೆ ಅಮಾನತುಗೊಳಿಸುವಂತೆ ಕೋರಿ ರಾಮ್ ಗೋಪಾಲ್ ವರ್ಮಾ ಮುಂಬೈನ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ಗುರುವಾರ ನಡೆದಿದ್ದು, ರಾಮ್‌ಗೋಪಾಲ್ ವರ್ಮಾ ನ್ಯಾಯಾಲಯಕ್ಕೆ ಹಾಜರಾಗದ ಕಾರಣ, ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಎ.ಎ.ಕುಲಕರ್ಣಿ ಅವರು ಅರ್ಜಿಯನ್ನು ವಜಾಗೊಳಿಸಿದರು. ಅಷ್ಟೇ ಅಲ್ಲದೇ, ಆರ್‌ಜಿವಿ ವಿರುದ್ಧ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಿದರು.

ಸಮಾಚಾರ ಸಣ್ಣದಲ್ಲ

ಮೆಮರಿ ಪರೀಕ್ಷೆಯಲ್ಲಿ ಸಂಜನಾ ಪ್ರಥಮ

ಮುದಗಲ್: ಪಟ್ಟಣ ಸಮೀಪದ ಹೂನೂರು ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಂಜನಾ ಮಲ್ಲೇಶ ನಾಯಕ ಈ ವಿದ್ಯಾರ್ಥಿನಿ 2024-25ನೇ ಸಾಲಿನ ಬನ್ನಿಗೋಳ ಕಸ್ತರ ಮಟ್ಟದ ಎಫ್, ಎನ್,ಎಲ್ ಮಕ್ಕಳ ಕಲಿಕಾ ಹಬ್ಬದಲ್ಲಿ ಮೆಮರಿ ಪರೀಕ್ಷೆ ಸ್ಪರ್ಧಾತ್ಮಕ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಿದ್ದಾಳೆ ಈ ವೇಳೆ ಈ ವಿದ್ಯಾರ್ಥಿನಿಗೆ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗಿದೆ.

ರಾಘವೇಂದ್ರ ಸ್ವಾಮಿಗಳ 430 ನೇ ವರ್ಧಂತಿ

ಲಿಂಗಸೂಗೂರು: ಕಲಿಯುಗದ ಕಾಮಧೇನು ಶ್ರೀ ರಾಘವೇಂದ್ರ ಸ್ವಾಮೀಜಿಗಳ 430 ನೇ ವರ್ಧಂತಿ ಮಹೋತ್ಸವ ಸಡಗರ ಸಂಭ್ರಮದಿಂದ ಲಿಂಗಸೂಗೂರಿನ ರಾಯರ ಮಠದಲ್ಲಿ ಆಚರಣೆ ಮಾಡಲಾಯಿತು. ಬೃದಾಂವನಕ್ಕೆ ಕ್ಷೀರಾ ಅಭಿಷೇಕ ವಿಶೇಷ ಪೂಜೆ, ಪಂಚಾಮೃತಾಭಿಷೇಕ ವಿಶೇಷ ಹೂವಿನ ಅಲಂಕಾರವನ್ನು ಮಠದ ಆರ್ಚಕ ಪವನ ಆಚಾರ್ ಮಾಡಿದರು. ನೂರಾರು ಭಕ್ತರು ರಾಯರ ದರ್ಶನ ಮಾಡಿ ಪ್ರಸಾದ, ಮಂತ್ರಾಕ್ಷತೆಯನ್ನು ಪಡೆದರು. ಈ ಸಂದರ್ಭದಲ್ಲಿ ವ್ಯವಸ್ಥಾಪಕ ವಿನಾಯಕ ಪ್ರಸಾದ, ಶೇಷಗಿರಿ ದಾಸ, ಹನುಮೇಶ, ಪವನ ಇದ್ದರು.

ಎಸಿ ವಿರುದ್ಧ ಏಕಾಂಗಿ ಪ್ರತಿಭಟನೆ

ಕೊಪ್ಪಳ: ಉಪ ವಿಭಾಗಾಧಿಕಾರಿ ಗ್ರಾಪಂಗೆ ಸಂಬಂಧಿಸಿದ ಕಡತ ವಿಲೇವಾರಿ ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿ, ನಗರದ ಜಿಲ್ಲಾಡಳಿತ ಭವನದಲ್ಲಿನ ಎಸಿ ಕಚೇರಿ ಮುಂದೆ, ಗ್ರಾಪಂ ಅಧ್ಯಕ್ಷ ಬುಧವಾರ ಏಕಾಂಗಿಯಾಗಿ ಪ್ರತಿಭಟಿಸಿದರು. ಕುಷ್ಟಗಿ ತಾಲೂಕು ದೋಟಿಹಾಳ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಹೇಶ ರಾಮಣ್ಣ ಕಾಳಗಿ, ಎಸಿ ಕ್ಯಾ.ಮಹೇಶ ಮಾಲಗಿತ್ತಿ ವಿರುದ್ಧ ಪ್ರತಿಭಟಿಸಿದರು. ಕಳೆದ 1 ವರ್ಷದಿಂದ ದೋಟಿಹಾಳ ಗ್ರಾಮ ಪಂಚಾಯಿತಿಗೆ ಸಂಭಂದಿಸಿದ ಜಮೀನು ವ್ಯಾಜ್ಯ ವಿಲೇವಾರಿಗೆ ಮಾಡುವಂತೆ ಅಲೆದಾಡುತ್ತಿದ್ದೇನೆ. ಆದರೆ, ಅಧಿಕಾರಿಗಳು ತೀರಾ ನಿರ್ಲಕ್ಷ್ಯದಿಂದ ವರ್ತಿಸುತ್ತಿದ್ದಾರೆ. ಇದರಿಂದ ಬೇಸತ್ತು ಪ್ರತಿಭಟನೆ ಮುಂದಾಗಿದ್ದೇನೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ಕಡತ ವಿಲೇವಾರಿ ಮಾಡುವುದಕ್ಕೆ ಉಪ ವಿಭಾಗಾಧಿಕಾರಿ ವಿಳಂಬ ನೀತಿ ಅನುಸರಿಸುತ್ತಿದ್ದಾರೆ. ಈಗಾಗಲೇ ಕಡತ ವಿಲೇವಾರಿಗೆ ಸಂಬಂಧಿಸಿದ ಎಲ್ಲ ಕಚೇರಿಗೆ ಅರ್ಜಿ ನೀಡಿ, ಉಪ ವಿಭಾಗಾಧಿಕಾರಿ ಕಚೇರಿಗೆ ನೀಡಿದ್ದೇನೆ. ಆದರೆ, ಕಡತ ವಿಲೇವಾರಿ ಮಾಡುತ್ತಿಲ್ಲ ಎಂದು ಗ್ರಾಪಂ ಅಧ್ಯಕ್ಷ ದೂರಿದರು. ಕಡತ ವಿಲೇವಾರಿ ಆಗುವವರೆಗೂ ಅಹೋರಾತ್ರಿ ಹೋರಾಟ ಮುಂದುವರೆಸುತ್ತೇನೆ ಎಂದು ಎಚ್ಚರಿಕೆ ನೀಡಿದರು.

ಶಿಕ್ಷಕ ವರ್ಗಾವಣೆ: ಬೀಳ್ಕೊಡುಗೆ

ಮಸ್ಕಿ: ದೈಹಿಕ ಶಿಕ್ಷಕರು ಬೇರೆ ಶಾಲೆಗೆ ವರ್ಗಾವಣೆ ಆಗಿರುವ ಹಿನ್ನಲೆಯಲ್ಲಿ ಶಿಕ್ಷಕನಿಗೆ ಅಪ್ಪಿಕೊಂಡು ಅಳುತ್ತ ಬಿಳ್ಕೋಡುಗೆ ನೀಡಿರುವ ಘಟನೆ ಪಟ್ಟಣದ ಸರಕಾರಿ ಪ್ರಾಥಮಿಕ ಪಬ್ಲಿಕ್ ಶಾಲೆಯಲ್ಲಿ ಬುಧವಾರ ನಡೆದಿದೆ. 30 ವರ್ಷಗಳ ಕಾಲ ಒಂದೇ ಶಾಲೆಯಲ್ಲಿ ಸೇವೆ ಸಲ್ಲಿಸಿ ಇದೀಗ ಲಿಂಗಸುಗೂರು ತಾಲೂಕಿನ ಬನ್ನಿಗೋಳ ಶಾಲೆಗೆ ವರ್ಗಾವಣೆ ಆಗಿರುವುದರಿಂದ ಶಾಲೆಯಲ್ಲಿ ಬಿಳ್ಕೋಡುಗೆ ಸಮಾರಂಭ ಏರ್ಪಡಿಸ ಲಾಗಿತ್ತು. ಈ ವೇಳೆ ಶಾಲೆಯ ವಿದ್ಯಾರ್ಥಿಗಳು ದೈಹಿಕ ಶಿಕ್ಷಕ ರಾಮಪ್ಪನಿಗೆ ಅಪ್ಪಿಕೊಂಡು ಜೋರಾಗಿ ಅತ್ತರು, ವಿದ್ಯಾರ್ಥಿಗಳು ಅಳುವುದನ್ನು ಕಂಡು ಶಿಕ್ಷಕ ಸಹ ಕಣ್ಣೀರು ಹಾಕಿ ಭಾವುಕರಾದರು. ಮೂಲತಃ ಹುನಗುಂದ ತಾಲೂಕಿನವರಾದ ರಾಮಪ್ಪ 1994ನೇ ಸಾಲಿನಲ್ಲಿ ಮಸ್ಕಿಯ ಪಿಡಬ್ಲೂಡಿ ಪ್ರಾಥಮಿಕ ಶಾಲೆಗೆ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಅನೇಕ ವರ್ಷಗಳಿಂದ ಇದೇ ಶಾಲೆಯಲ್ಲಿ ಸೇವೆ ಸಲ್ಲಿಸುವ ಮೂಲಕ ವಿದ್ಯಾರ್ಥಿಗಳಿಗೆ ಪ್ರೀತಿ ವಾತ್ಸಲ್ಯದಿಂದ ಕಾಣುತ್ತಿದ್ದರು. ತಾಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ವಿದ್ಯಾರ್ಥಿಗಳು ಸ್ಪರ್ಧೆ ಮಾಡುವಂತೆ ಉತ್ತಮವಾಗಿ ತರಬೇತಿ ನೀಡುತ್ತಿದ್ದರು. ಅಷ್ಟೇ ಅಲ್ಲದೇ ಪಟ್ಟಣದ ಎಲ್ಲ ಜನರ ಪ್ರೀತಿ, ವಿಶ್ವಾಸಗಳಿಸಿ ಜನ ಮನ್ನಣೆ ಗಳಿಸಿದ್ದಾರೆ. ತಾಲ್ಲೂಕಿನ ಎಲ್ಲಾ ಶಿಕ್ಷಕರ ಪ್ರೀತಿಗೆ ಪಾತ್ರರಾಗಿದ್ದರು. ಶಾಲೆಯಲ್ಲಿ ನಡೆದ ಬೀಳ್ಕೊಡುಗೆ ನಂತರ ಶಾಲೆಯ ನೂರಾರು ವಿದ್ಯಾರ್ಥಿಗಳು ಶಿಕ್ಷಕ ರಾಮಪ್ಪ ಅವರನ್ನು ಅಪ್ಪಿಕೊಂಡು ಬಿಕ್ಕಿ ಬಿಕ್ಕಿ ಅಳುವ ದೃಶ್ಯ ಎಲ್ಲರ ಮನ ಮಿಡಿಯುವಂತೆ ಮಾಡಿತು. ವಿದ್ಯಾರ್ಥಿಗಳನ್ನು ಸಂತೈಸಲು ಶಾಲೆಯ ಶಿಕ್ಷಕರು ಹರಸಾಹಸ ಪಡಬೇಕಾಯಿತು. ಅನೇಕ ವರ್ಷದಿಂದ ಈ ಶಾಲೆಯಲ್ಲಿ ಸೇವೆ ಸಲ್ಲಿಸಿದ್ದೇನೆ. ವಿದ್ಯಾರ್ಥಿಗಳನ್ನು ಬಿಟ್ಟು ಹೋಗಲು ನೋವಾಗುತ್ತಿದೆ ಎಂದು ಶಿಕ್ಷಕ ರಾಮಪ್ಪ ತಿಳಿಸಿದರು.

{ಗೋವಿಂದ ಕಾರಜೋಳ} ಸಂಸದ

ರಾಜ್ಯದಲ್ಲಿ ಆಡಳಿತಕ್ಕೆ ಬಂದು ಎರಡು ವರ್ಷ ಕಳೆದಿವೆ. ಅಭಿವೃದ್ಧಿಯತ್ತ ಕಣ್ಣಾಡಿಸುವುದನ್ನು ಬಿಟ್ಟು ಕುರ್ಚಿಗಾಗಿ ಕಿತ್ತಾಟ ನಡೆಸಿದ್ದು, ಇದೇ ರೀತಿ ಕಿತ್ತಾಟ ಮುಂದುವರಿದರೆ ಮೂರೇ ತಿಂಗಳಲ್ಲಿ ಈ ಸರಕಾರ ಮನೆಗೆ ಹೋಗುವುದು ಗ್ಯಾರಂಟಿ. ನಮ್ಮ ಪಕ್ಷದಲ್ಲಿನ ಗೊಂದಲಗಳು ಸಹ ಹೈಕಮಾಂಡ್ ಬಗೆಹರಿಸಲಿದೆ. ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆ.



ಬಲ್ಡೋಟ ಕಾರ್ಖಾನೆ ಜಾಗದ ಗೇಟ್ ಕಿತ್ತು ಬೀಸಾಡಿದ ಹೋರಾಟಗಾರರು | ಕೆರೆ ಸಾರ್ವಜನಿಕರಿಗೆ ಮುಕ್ತಗೊಳಿಸಲು ಆಗ್ರಹ

ಮುಖ್ಯ ದ್ವಾರದ ಬ್ಯಾರಿಕೇಡ್ ಧ್ವಂಸ

ಕೊಪ್ಪಳ: ನಗರಕ್ಕೆ ಹೊಂದಿಕೊಂಡು ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ ವಿರೋಧಿ ಹೋರಾಟ ದಿನದಿಂದ ದಿನಕ್ಕೆ ತೀವ್ರತೆ ಪಡೆದುಕೊಳ್ಳುತ್ತಿದೆ. ನಾನಾ ದಲಿತ ಸಂಘಟನೆ ಮುಖಂಡರು ಗುರುವಾರ ಉದ್ದೇಶಿತ ಕಾರ್ಖಾನೆಗಾಗಿ ನಿರ್ಮಿಸಿದ್ದ ಮುಖ್ಯ ದ್ವಾರದ ಮುಂದಿನ ಬ್ಯಾರಿಕೇಡ್ ಕಿತ್ತು ಹಾಕಿ, ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಖಾನೆ ಕೆಐಎಡಿಬಿ ಮೂಲಕ ಭೂ ಸ್ವಾಧೀನ



ಕರ್ನಾಟಕಸರ್ಕಾರ
ಜಿಲ್ಲಾಧಿಕಾರಿಗಳಕಾರ್ಯಾಲಯ, ಕೊಪ್ಪಳಜಿಲ್ಲೆ, ಕೊಪ್ಪಳ - 583231
ದಿನಾಂಕ: 06/03/2025
::ಸ್ಪಷ್ಟೀಕರಣ::
ಬಿ.ಎಸ್.ಪಿ.ಎಲ್ ಕಾರ್ಖಾನೆಯಲ್ಲಿ ನಡೆಯುತ್ತಿದ್ದ ಕಾಮಗಾರಿಯನ್ನು ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರಕಾರ ರವರ ಸೂಚನೆಯ ಮೇರೆಗೆ ಜಿಲ್ಲಾಡಳಿತದಿಂದ ಸ್ಥಗಿತಗೊಳಿಸಲಾಗಿರುತ್ತದೆ. ಪ್ರಸ್ತುತ ಯಾವುದೇ ಕಾಮಗಾರಿಯು ನಡೆಯುತ್ತಿರುವುದಿಲ್ಲವೆಂದು ಈ ಮೂಲಕ ತಿಳಿಸಿದೆ.
6/3/25
ಅಪರ ಜಿಲ್ಲಾಧಿಕಾರಿಗಳು, ಕೊಪ್ಪಳ

ಕೊಪ್ಪಳ ಎಡಿಸಿ ನೀಡಿರುವ ಸ್ಪಷ್ಟನೆ

> **ಕೆರೆ ಸಾರ್ವಜನಿಕರಿಗೆ ಮುಕ್ತವಾಗಿರಬೇಕು ಎಂಬ ಕೋರ್ಟ್ ಆದೇಶವನ್ನೂ ಬಲ್ಡೋಟ ಸಂಸ್ಥೆ ಪಾಲನೆ ಮಾಡಿಲ್ಲ. ಕೂಡಲೇ ಕೆರೆ ತೆರವು ಮಾಡಬೇಕು. ಅದಕ್ಕಾಗಿ ಬ್ಯಾರಿಕೇಟ್ ಕಿತ್ತು ಹಾಕಿದ್ದೇವೆ.**
> – ಮಲ್ಲಿಕಾರ್ಜುನ ಪೂಜಾರ

ಮಾಡಿಕೊಂಡಿರುವ 1 ಸಾವಿರ ಎಕರೆ ಭೂಮಿ ಸುತ್ತಲೂ ಬೃಹತ್ ತಡೆಗೋಡೆ ನಿರ್ಮಾಣ ಮಾಡಿಕೊಂಡಿದೆ. ಜತೆಗೆ ಸುಮಾರು 40 ಎಕರೆ ವ್ಯಾಪ್ತಿಯ ಬಸಾಪುರ ಕೆರೆಯನ್ನೂ ಒಳಗೊಂಡು, ತಡೆಗೋಡೆ ನಿರ್ಮಾಣ ಮಾಡಿಕೊಡಿದ್ದು, ಕೆರೆ ಪಕ್ಕದಲ್ಲೇ ಬೃಹತ್ ಮುಖ್ಯ ದ್ವಾರ ನಿರ್ಮಾಣ ಮಾಡಿದೆ. ಇಲ್ಲಿ ಅಡ್ಡಲಾಗಿ

ಬಲ್ಡೋಟ ಮುಖ್ಯ ದ್ವಾರದ ಮುಂದಿನ ಬ್ಯಾರಿಕೇಡ್ ಗಳನ್ನು ದಲಿತ ಮುಖಂಡರು ಕಿತ್ತು ಹಾಕಿ, ಗುರುವಾರ ಆಕ್ರೋಶ ವ್ಯಕ್ತಪಡಿಸಿದರು.

ಬ್ಯಾರಿಕೇಡ್ ಇಡಲಾಗಿದ್ದು, ಭದ್ರತಾ ಸಿಬ್ಬಂದಿಯನ್ನೂ ಬಲ್ಡೋಟ ನೇಮಿಸಿದೆ.

ಬುಧವಾರ ಉದ್ದೇಶಿತ ಕಾರ್ಖಾನೆ ಜಾಗದಲ್ಲಿ ಕೆಲಸ ಸ್ಥಗಿತ ಆಗಿದ್ದ ಬಗ್ಗೆ ಪರಿಶೀಲನೆಗೆ ತೆರಳಿದ್ದ ದಲಿತ ಮುಖಂಡರಾದ ಮಲ್ಲಿಕಾರ್ಜುನ ಪೂಜಾರ, ಸಿದ್ದು ಮಣ್ಣಿನವರ, ಯಂಕಪ್ಪ ಹೊಸಳ್ಳಿ, ಮೂಕಪ್ಪ ಎನ್. ಮೇಸ್ತ್ರಿ ಬಸಾಪೂರ, ಯಲ್ಲಪ್ಪ ಹಳೇಮನಿ ಅವರನ್ನು ಬಲ್ಡೋಟ ಕಂಪನಿಯ ಭದ್ರತಾ ಸಿಬ್ಬಂದಿ ತಡೆಯಲು ಯತ್ನಿಸಿದರು. ಇದರಿಂದ ಆಕ್ರೋಶಗೊಂಡ ಹೋರಾಟಗಾರರು ಭದ್ರತಾ ಸಿಬ್ಬಂದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕೆಲಸ ಸ್ಥಗಿತಗೊಂಡಿದ್ದನ್ನು ಖಚಿತಪಡಿಸಿಕೊಂಡ ಹೋರಾಟಗಾರರು ಮುಖ್ಯ ದ್ವಾರದ ಮುಂದೆ ಹಾಕಿದ್ದ ಬ್ಯಾರಿಕೇಡ್ ತೆರವು ಮಾಡಿದರು.

ವಾಸ್ತವದಲ್ಲಿ ಸದ್ಯ ಬಲ್ಡೋಟ ಸಂಸ್ಥೆ ನಿರ್ಮಾಣ ಮಾಡಿರುವ ಬೃಹತ್ ದ್ವಾರದ ಜಾಗ ಭೂಸ್ವಾಧೀನ ಆಗಿಲ್ಲ. ಜೊತೆಗೆ ಕಂಪನಿ ವಶದಲ್ಲಿರುವ ಬಸಾಪುರ ಕೆರೆಯನ್ನು ಜನ ಹಾಗೂ ಜಾನುವಾರುಗಳ ಅನುಕೂಲಕ್ಕೆ ಮುಕ್ತಗೊಳಿಸಬೇಕು ಎಂದು ಕೋರ್ಟ್ ಆದೇಶಿಸಿದೆ. ಆದರೂ,ಕೆರೆ ಒಳಗೊಂಡು ತಡೆಗೋಡೆ ನಿರ್ಮಾಣ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ದಲಿತ ಮುಖಂಡರು ಮುಖ್ಯ ದ್ವಾರದ ಮುಂದೆ ಇದ್ದ ಬ್ಯಾರಿಕೇಡ್ ತೆರವು ಮಾಡಿದರು.

ಕೂಡಲೇ ಕೆರೆಯನ್ನು ಜನರ ಬಳಕೆಗೆ ಬಿಟ್ಟು ಕೊಡಬೇಕು ಎಂಬ ನ್ಯಾಯಾಲಯದ ಆದೇಶವನ್ನು ಬಲ್ಡೋಟ ಉಲ್ಲಂಘನೆ ಮಾಡಿದೆ. ಆದರೆ ಕಂಪನಿ ಕರೆಗೆ ಹೋಗುವ ಜಾಗದಲ್ಲಿ ಬ್ಯಾರಿಕೇಡ್ ಅಳವಡಿಸಿ ಜನರಿಗೆ ತೊಂದರೆ ಮಾಡುತ್ತಿದ್ದಾರೆ ಎಂದು ಮುಖಂಡ ಆರೋಪಿಸಿದರು. ಕಂಪನಿ ಇಲ್ಲಿಂದ ತೊಲಗಬೇಕು ಎಂದು ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು. ಇಷ್ಟೆಲ್ಲ ಪ್ರಹಸನ ನಡೆಯುವ ಒಳಗಾಗಿ ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ, ಎಲ್ಲ ಪ್ರಹಸನ ಗಮನಿಸಿದರು.

ಬಲ್ಡೋಟ ಸಂಸ್ಥೆ ಕೆಲಸ ನಿಲ್ಲಿಸಿದೆ; ಎಡಿಸಿ ಸ್ಪಷ್ಟನೆ

ಸಿಎಂ ಸೂಚನೆ ಹಿನ್ನೆಲೆ ಬಲ್ಡೋಟ ಕಾರ್ಖಾನೆ ನಡೆಸುತ್ತಿದ್ದ ಕಾಮಗಾರಿಯನ್ನು ಜಿಲ್ಲಾಡಳಿತದಿಂದ ಸ್ಥಗಿತಗೊಳಿಸಲಾಗಿ. ಪ್ರಸ್ತುತ ಯಾವುದೇ ಕಾಮಗಾರಿ ನಡೆಯುತ್ತಿಲ್ಲ ಎಂದು ಕೊಪ್ಪಳ ಜಿಲ್ಲಾಡಳಿತ ಗುರುವಾರ ಸ್ಪಷ್ಟೀಕರಣ ನೀಡಿದೆ. ಕೊಪ್ಪಳ ಅಪರ ಜಿಲ್ಲಾಧಿಕಾರಿ ಕಚೇರಿಯಿಂದ ಸ್ಪಷ್ಟೀಕರಣವನ್ನು ವಾರ್ತಾ ಇಲಾಖೆ ಮೂಲಕ ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಗಿದೆ. ಬಲ್ಡೋಟ ಸಂಸ್ಥೆ ಬುಧವಾರ ಎಂದಿನಂತೆ ಕಾಮಗಾರಿ ಮುಂದುವರೆಸಿತ್ತು. ಈ ಬಗ್ಗೆ ಕೊಪ್ಪಳ ಡಿಸಿ ನಲಿನ್ ಅತುಲ್ ಯಾವುದೇ ರೀತಿ ತುಟಿ ಬಿಚ್ಚದೇ ಮೌನಕ್ಕೆ ಶರಣಾಗಿದ್ದರು. ಈ ಹಿನ್ನೆಲೆ ಹೋರಾಟಗಾರರು ಕೊಪ್ಪಳ ಜಿಲ್ಲಾಧಿಕಾರಿ ವರ್ಗಾವಣೆಗೆ ಆಗ್ರಹಿಸಿದ್ದರು. ಡಿಸಿ ನಡೆ ಬಗ್ಗೆ ವ್ಯಾಪಕ ಟೀಕೆ ವ್ಯಕ್ತವಾಗಿದ್ದವು. ಈ ಎಲ್ಲ ಬೆಳವಣಿಗೆ ಹಿನ್ನೆಲೆ ಗುರುವಾರ ಎಡಿಸಿ ದಿಢೀರ್ ಸ್ಪಷ್ಟನೆ ನೀಡಿದ್ದಾರೆ.

ಮಂತ್ರಾಲಯದಲ್ಲಿ ರಾಯರ ವರ್ಧಂತಿ ಸಂಭ್ರಮ

ರಾಯಚೂರು: ಭಕ್ತರ ಪಾಲಿನ ಕಾಮಧೇನು, ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ 430 ನೇ ವರ್ಧಂತಿ ಮಹೋತ್ಸವವನ್ನು ಶ್ರದ್ಧಾ ಭಕ್ತಿ ಮತ್ತು ಸಂಭ್ರಮದಿಂದ ಆಚರಿಸಲಾಯಿತು. ರಾಯರ ಮೂಲ ಬೃಂದಾವನಕ್ಕೆ ಪಂಚಾಮೃತಾಭಿಷೇಕ ಸೇರಿದಂತೆ ಧಾರ್ಮಿಕ ಕೈಂಕರ್ಯಗಳು ನೆರವೇರಿಸಲಾಯಿತು. ಮಂತ್ರಾಲಯದ ತುಂಬೆಲ್ಲಾ ರಾಯರ ನಾಮ ಸ್ಮರಣೆ ಅನುರಣಿಸಿತು.

ಗುರು ಸಾರ್ವಭೌಮರ ವರ್ಧಂತಿ ಮಹೋತ್ಸವದ ಅಂಗವಾಗಿ ಗುರುವಾರ ಶ್ರೀಮಠದಲ್ಲಿ ಆಯೋಜಿಸಿರುವ ಶ್ರೀರಾಘವೇಂದ್ರ ಗುರು ವೈಭವೋತ್ಸವದ ಸಂದರ್ಭ ತಿರುಪತಿ ತಿರುಮಲ ದೇವಸ್ಥಾನ ಸಮಿತಿ ವತಿಯಿಂದ ತರಲಾದ ಶ್ರೀವೆಂಕಟೇಶ ದೇವರ ಶೇಷವಸ್ತ್ರವನ್ನು ಶ್ರೀಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರು ರಾಯರಿಗೆ ಸಮರ್ಪಿಸಿದರು.

ನಂತರ ಅನುಗ್ರಹ ಸಂದೇಶ ನೀಡಿ, ಕಲಿಯುಗದ ಕಾಮದೇನು ಕಲ್ಪವೃಕ್ಷ ಎಂದು ಕರೆಯಲು ಪಡುವ ಶ್ರೀ ರಾಘವೇಂದ್ರ ಸ್ವಾಮಿಗಳ ಶ್ರೀರಾಯರ ವರ್ಧಂತಿ ಮಹೋತ್ಸವದ ಕಾರ್ಯಕ್ರಮವನ್ನು ವಿಶ್ವದಲ್ಲಿಯೇ ತಿರುಪತಿಯ ವೆಂಕಟೇಶ ದೇವರ ಸ್ಥಳಕ್ಕೆ ಅದರದ್ದೇ ಆದಂಥ ವಿಶೇಷತೆಯಿದ್ದು, ವೆಂಕಟೇಶ ದೇವರ ಅನುಗ್ರಹದಿಂದ ಜನಿಸಿದ ರಾಯರು ನೆಲೆ ನಿಂತಿರುವ ಮಂತ್ರಾಲಯ ಕ್ಷೇತ್ರದಲ್ಲಿ ಸನಾತನ ಹಿಂದೂ ಧರ್ಮದ ರಕ್ಷಣೆಗೆ ಪೂರಕವಾಗಿ ಧಾರ್ಮಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ ಎಂದರು.

ತಿರುಪತಿ ಮತ್ತು ಮಂತ್ರಾಲಯ ಕ್ಷೇತ್ರಗಳು ಸನಾತನ ಹಿಂದೂ ಧರ್ಮದ ಎರಡು ಪರಮ ಪವಿತ್ರ ಧರ್ಮ ತಾಣಗಳಾಗಿವೆ. ನಿರಂತರವಾಗಿ ಭಕ್ತರನ್ನು ಹರಸುತ್ತಾ ವೆಂಕಟೇಶ ದೇವರು ಹಾಗೂ ರಾಯರು ಕಲಿಯುಗದಲ್ಲಿ ಜನರ ಸಂಕಷ್ಟ ಕಳೆಯುವ ಕಾರ್ಯ ಮಾಡುತ್ತಿದ್ದು, ರಾಯರ ವರ್ಧಂತಿ ಅಂಗವಾಗಿ ವೆಂಕಟೇಶ ದೇವರ ಶೇಷವಸ್ತ್ರ ಸಮರ್ಪಣೆಯಂಥ ಕಾರ್ಯವನ್ನು ಕಳೆದ ಅನೇಕ ವರ್ಷಗಳಿಂದ ಮಾಡಿಕೊಂಡು ಬರುತ್ತಿದ್ದು, ಟಿಟಿಡಿ ಈ ನಿಟ್ಟಿನಲ್ಲಿ ಮಂತ್ರಾಲಯ ಮಠದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ ಎಂದರು.

ರಾಯರ ಮೂಲ ಬೃಂದಾವನಕ್ಕೆ ಪಂಚಾಮೃತಾಭಿಷೇಕ ಸೇರಿದಂತೆ ಧಾರ್ಮಿಕ ಕೈಂಕರ್ಯಗಳು ನೆರವೇರಿಸಲಾಯಿತು.

ಶ್ರೀಮಠದ ಪೀಠಾಧಿಪತಿಗಳಿಗೆ ಶೇಷವಸ್ತ್ರ ಅರ್ಪಣೆ

ತಿರುಪತಿಯಿಂದ ಟಿಟಿಡಿ ಉಪ ಇಓ ಲೋಕನಾಥನಂ ಅವರು ವೆಂಕಟೇಶ ದೇವರ ಶೇಷವಸ್ತ್ರವನ್ನು ಮಂತ್ರಾಲಯದ ದ್ವಾರಬಾಗಿಲಿನಿಂದ ಪೀಠಾಪತಿ ಶ್ರೀಸುಬುಧೇಂದ್ರ ತೀರ್ಥರು ಸ್ವಾಗತಿಸಿ, ತಲೆ ಮೇಲೆ ಹೊತ್ತುಕೊಂಡು ಪ್ರಾಕಾರದಲ್ಲಿ ಪ್ರದಕ್ಷಿಣೆ ಮಾಡಿ ನಂತರ ರಾಯರ ಮೂಲ ಬೃಂದಾವನಕ್ಕೆ ಸಮರ್ಪಿಸಿದರು. ನಂತರ ಟಿಟಿಡಿ ಅಕಾರಿಗಳು ಶ್ರೀಮಠದ ಪೀಠಾಧಿಪತಿಗಳಿಗೆ ಶೇಷವಸ್ತ್ರ ಮತ್ತು ಪ್ರಸಾದವನ್ನು ಅರ್ಪಿಸಿ, ಮಠದ ಪ್ರಾಮಣದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಿದರು. ಸಂಗೀತ ಪ್ರೇಮಿಗಳು ವೀಣಾ ವಾದಕರಾಗಿದ್ದ ಗುರು ಸಾರ್ವಬೌಮರಿಗೆ ಚೆನ್ನೈನ ನಾದಹಾರಂ ಟ್ರಸ್ಸ್ ನವರು ಕಳೆದ 20 ವರ್ಷಗಳಿಂದ 350 ಸಂಗೀತಗಾರರು ಏಕ ಕಾಲಕ್ಕೆ ಸಂಗೀತ ಸೇವೆ ಸಲ್ಲಿಸುವ ಮೂಲಕ ರಾಯರಿಗೆ ಭಕ್ತಿ ಸಮರ್ಪಿಸಿದರು.

ಭಾವೈಕ್ಯತೆ ಬೆಸೆವ ಅಕ್ಷರ ಜಾತ್ರೆ

ನಗರದ ಪಂ.ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಹಮ್ಮಿಕೊಂಡಿದ್ದ 6 ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಗಣ್ಯರು ಉದ್ಘಾಟಿಸಿದರು.

ರಾಯಚೂರು: ಸಾಹಿತಿಗಳು ಸಾಹಿತ್ಯವನ್ನು ಬೆಳೆಸುವುದರ ಜತೆಗೆ ರಾಜಕಾರಣಿಗಳಿಗೆ ಸಾಹಿತ್ಯಭಿಮಾನದ ರುಚಿಯನ್ನು ಹಚ್ಚುವ ಕೆಲಸ ಮಾಡಿದರೆ ಸಾಹಿತ್ಯ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದು ನಾಡೋಜ ಡಾ.ಗೊ.ರು. ಚನ್ನಬಸಪ್ಪ ಅವರು ಹೇಳಿದರು.

ನಗರದ ಪಂ.ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಹಮ್ಮಿಕೊಂಡಿದ್ದ 6 ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ನನ್ನ ಅವಧಿ ಮುಗಿಯುತ್ತಾ ಬಂದಿದೆ ನನಗೆ ಜ್ಯೋತಿಷ್ಯರು 100 ವರ್ಷ ಪೂರೈಸುತ್ತೀರಿ ಎಂದು ಹೇಳಿದ್ದಾರೆ. ನನಗೀಗ 97 ವರ್ಷ ತುಂಬಿದೆ. 6 ನೇ ಸಾಹಿತ್ಯ ಸಮ್ಮೇಳನ ಸಂಭ್ರಮದಿಂದ ಉದ್ಘಾಟಿಸಿದ್ದೇನೆ ಎಂದರು.

ಕಳೆದ 110 ವರ್ಷಗಳ ಹಿಂದೆ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತಿಗೆ ತನ್ನದೇ ಆದ ವಿಶೇಷ ಸ್ಥಾನವನ್ನು ದೇಶದಲ್ಲಿ ಹೊಂದಿದೆ. ಈ ಸಮ್ಮೇಳನ ಕೇವಲ ಜಾತ್ರೆಯಲ್ಲ ಇದು ಕಲೆ, ಸಂಸ್ಕೃತಿ, ಜಾಗೃತಿಯಿಂದ ಕೂಡಿದ ಅಕ್ಷರ ಜಾತ್ರೆಯಾಗಿದೆ. ಈ ಜಾತ್ರೆಯು ಪರಸ್ಪರ ಸಂಬಂಧಗಳನ್ನ ಕೂಡಿಸುವ ಕೆಲಸ ಮಾಡುತ್ತದೆ ಎಂದು ತಿಳಿಸಿದರು.

ರಾಯಚೂರಿನಲ್ಲಿ ನಡೆಯುವುದು ಗುಡಿಯ ತೇರಲ್ಲ, ಕನ್ನಡ ನುಡಿಯ ತೇರನ್ನು ಸಾಹಿತಿಗಳು ಹಾಗೂ ಸಾರ್ವಜನಿಕರು ಎಳೆಯುತ್ತಾರೆ. ಈ ಹಿಂದೆ ಬೆಂಗಳೂರು ಕೇಂದ್ರಿತವಾಗಿ ಸಾಹಿತ್ಯ ಸಮ್ಮೇಳನಗಳು 35 ವರ್ಷ ನಂತರ ತಾವು ಪರಿಷತ್ತಿನ ಅಧ್ಯಕ್ಷರಾದಾಗ ಜಿಲ್ಲಾ ಮತ್ತು ತಾಲೂಕು ಘಟಕಗಳನ್ನ ರಚಿಸಲಾಯಿತು. ನಂತರ ಸಮ್ಮೇಳನ ಎಲ್ಲೆಡೆ ಆಯೋಜಿಸಲಾಗುತ್ತಿದೆ. ಸಾಹಿತ್ಯ ಸಂಸ್ಥೆಗೆ ಜಗತ್ತಿನಲ್ಲಿ ಹೆಚ್ಚಿಗೆ ಸದಸ್ಯರಿದ್ದಾರೆ. ಕನ್ನಡ ಸಮುದಾಯದ ಸಾಕ್ಷಿ ಪ್ರಜ್ಞೆ

ಕಾರ್ಯಕ್ರಮದ ಸಾನಿಧ್ಯವನ್ನು ಕಿಲ್ಲೇ ಮಠದ ಶ್ರೀ ಶಾಂತಮಲ್ಲ ಶಿವಾಚಾರ್ಯರು, ಅಧ್ಯಕ್ಷತೆಯನ್ನು ಕನ್ನಡ ಸಾ,ಪ ಜಿಲ್ಲಾಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ವಹಿಸಿದ್ದರು.

ವೇದಿಕೆಯಲ್ಲಿ ಮಹಾನಗರ ಪಾಲಿಕೆ ಅಧ್ಯಕ್ಷೆ ನರಸಮ್ಮ ನರಸಿಂಹಲು ಮಾಡಗಿರಿ, ಹಿರಿಯ ಸದಸ್ಯ ಜಯಣ್ಣ, ಪತ್ರಕರ್ತ ಅರವಿಂದ ಕುಲಕರ್ಣಿ, ಚನ್ನಬಸವಣ್ಣ, ಸಾಹಿತಿ ಭಗತರಾಜ ನಿಜಾಂಕಾರಿ, ಬಾಬು ಭಂಡಾರಿಗಲ್, ಹಿರಿಯ ವಕೀಲ ನಾಗರಾಜ ಮಸ್ಕಿ, ಜಿ.ಸುರೇಶ ಸ ರೇಖಾ ಬಡಿಗೇರ, ಬಿ. ವಿಜಯರಾಜೇಂದ್ರ, ರಾವುತ್ ರಾವ್ ಬರೂರು ಸೇರಿದಂತೆ ಅನೇಕರು ಇದ್ದರು.

ಈ ಭಾಗದ ಸಂಸದರು ಏಮ್ಸ್ ಜಾರಿಗಾಗಿ ಶ್ರಮಿಸಬೇಕು

ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಜಿಲ್ಲೆಯಲ್ಲಿ ಏಮ್ಸ್ ಮಂಜೂರು ಮಾಡಿದರೆ ಜಿಲ್ಲೆಯ ಜನರಿಗೆ ಆರೋಗ್ಯದ ಜತೆಗೆ ಅಭಿವೃದ್ಧಿ ಹೊಂದುತ್ತಾರೆ. ಆದರಿಂದ ಈ ಭಾಗದ ಸಂಸದರು ಏಮ್ಸ್ ಜಾರಿಗಾಗಿ ಶ್ರಮಿಸಬೇಕು ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು. ಸಮ್ಮೇಳನಾಧ್ಯಕ್ಷರಾದ ಅಯ್ಯಪ್ಪಯ್ಯ ಹುಡಾ ಮಾತನಾಡಿ, ಐಐಟಿ ಕಳೆದುಕೊಂಡು ರಾಯಚೂರಿನ ಜನತೆಗೆ ಅನಾಥ ಪ್ರಜ್ಞೆ ಕಾಡುತ್ತಿದೆ ಏಮ್ಸ್ ಗಾಗಿ ಸಾವಿರಕ್ಕೂ ಮೇಲ್ಪಟ್ಟು ದಿನಗಳ ಹೋರಾಟಕ್ಕೆ ಜಿಲ್ಲೆಯ ಸಚಿವರು ಸೇರಿದಂತೆ ಸಾರ್ವಜನಿಕರು ಏಮ್ಸ್ ತರುವಲ್ಲಿ ಪ್ರಯತ್ನಿಶೀಲರಾಗಬೇಕು. ಏಮ್ಸ್ ಪಡೆಯುವುದು ಒಕ್ಕೊರಲಿನ ಮಂತ್ರವಾಗಬೇಕು ಎಂದರು. ನಗರದಲ್ಲಿ ಉತ್ತಮ ರಸ್ತೆ, ಶುದ್ಧವಾದ ಕುಡಿಯುವ ನೀರು, ಸ್ವಚ್ಛವಾದ ಗಾಳಿ, ಪರಿಸರ ನೈರ್ಮಲ್ಯದ ಬಗ್ಗೆ ಸರ್ವರಲ್ಲಿಯೂ ಅರಿವು ಮೂಡಲಿ, ಮನಸ್ಸುಗಳು ತಿಳಿಯಾಗಲಿ, ಪ್ರೀತಿ ಪ್ರೇಮ ಅಂತಃಕರಣ ಬಲಗೊಳ್ಳಬೇಕು. ಜನಮತದ ಅಂತಃಸತ್ವ ಭಾವೈಕ್ಯತೆಯ ಕುರುಹಾಗಿದೆ ಎನ್ನುವುದಕ್ಕೆ ಸಾಕ್ಷಿಯಾಗಿ ಹಿಂದು, ಮುಸ್ಲಿಂ, ಕ್ರೈಸ್ತ, ಜೈನರೆಲ್ಲರೂ ಸಹೋದರರಂತೆ ಬಾಳಿ ಬದುಕುತ್ತಿರುವುದು ಇಲ್ಲಿಯ ಪುಣ್ಯ ವಿಶೇಷ. ಕನ್ನಡ ಭಾಷೆಯನ್ನು ಕಾಪಾಡುವುದು ಕನ್ನಡಿಗರ ಆದ್ಯ ಕರ್ತವ್ಯ. ಕನ್ನಡದ ಶ್ರೇಷ್ಠತೆಯನ್ನು ಹೆಚ್ಚಿಸುವುದು ಕನ್ನಡದ ಸೇವೆಗೆ ಕನ್ನಡಿಗರನ್ನು ಒಲಿಸುವುದು, ನಮ್ಮೆಲ್ಲರ ಉಸಿರಾಗಬೇಕು ಎಂದರು. ಸಂಸದ ಜಿ. ಕುಮಾರ್ ನಾಯಕ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರೀಷತ್ತಿನ ಅಧ್ಯಕ್ಷ ವೆಂಕಟೇಶ್ ಬೇವಿನಬೆಂಚಿ ಮಾತನಾಡಿದರು.

ದತ್ತಿನಿಧಿ ಪ್ರಶಸ್ತಿ ಪ್ರದಾನ ಸಮಾರಂಭ ಮಾ.9ಕ್ಕೆ

ಕೊಪ್ಪಳ: ನಗರದ ಭಾಗ್ಯನಗರ ರಸ್ತೆಯಲ್ಲಿನ ಕಠಾರೆ ಕಲ್ಯಾಣ ಮಂಟಪದಲ್ಲಿ ಮಾ. 9 ರಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ದತ್ತಿನಿಧಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಕೆಯುಡಬ್ಲ್ಯೂಜೆ ಕೊಪ್ಪಳ ಜಿಲ್ಲಾಧ್ಯಕ್ಷ ಹನುಮಂತ ಹಳ್ಳಿಕೇರಿ ಹೇಳಿದರು.

ಕೊಪ್ಪಳದ ಮೀಡಿಯಾ ಕ್ಲಬ್ ನಲ್ಲಿ ಸುದ್ದಿಗೋಷ್ಠಿ ನಡೆಸಿ ಗುರುವಾರ ಮಾತನಾಡಿದರು.

ಇದೇ ಮೊದಲ ಬಾರಿಗೆ ಕೊಪ್ಪಳದಲ್ಲಿ ರಾಜ್ಯ ಮಟ್ಟದ ದತ್ತಿನಿಧಿ ಪ್ರಶಸ್ತಿ ಸಮಾರಂಭ ಆಯೋಜಿಸಲಾಗಿದೆ. ಕಳೆದ ಸುಮಾರು 20 ವರ್ಷದ ನಂತರ ಕೊಪ್ಪಳದಲ್ಲಿ ಪತ್ರಕರ್ತರ ರಾಜ್ಯ ಮಟ್ಟದ ಕಾರ್ಯಕ್ರಮ ನಡೆಯುತ್ತಿದೆ ಎಂದು ಮಾಹಿತಿ ನೀಡಿದರು.

ಕೊಪ್ಪಳ ಗವಿಮಠದ ಗವಿಸಿದ್ದೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ. ಸಂಘಟನೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರ ಅಧ್ಯಕ್ಷತೆ ವಹಿಸಲಿದ್ದಾರೆ. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಮಾಧ್ಯಮ ತಜ್ಞ ಬಿ.ಎನ್.ಮೋಹನ್ ಭಾಗವಹಿಸುವರು. ಕೊಪ್ಪಳ ವಿವಿ ಕುಲಪತಿ ಪ್ರೊ.ಬಿ.ಕೆ.ರವಿ, ಶಾಸಕ ರಾಘವೇಂದ್ರ ಹಿಟ್ನಾಳ, ಸಂಸದ ರಾಜಶೇಖರ ಹಿಟ್ನಾಳ, ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್, ಕುಡಾ ಅಧ್ಯಕ್ಷ ಶ್ರೀನಿವಾಸ ಗುಪ್ತ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಸಾದೀಕ್ ಅಲಿ ಮಾತಮಾಡಿ, ಕೊಪ್ಪಳ ಗವಿಮಠದ ಜಾತ್ರೆ ಮತ್ತು ಮಠದ ಶ್ರೀಗಳಿಂದ ಕೊಪ್ಪಳವನ್ನು ಹೆಚ್ಚು ಗುರುತಿಸುತ್ತಿದ್ದಾರೆ. ಗವಿಶ್ರೀಗಳು ಮತ್ತು ಗವಿಮಠ ನೋಡಬೇಕು ಎಂಬ ಕಾರಣಕ್ಕೂ ಕೊಪ್ಪಳಕ್ಕೆ ರಾಜ್ಯ ಮಟ್ಟದ ಕಾರ್ಯಕ್ರಮ ಮಾಡುವ ಅವಕಾಶ ನೀಡಿದ್ದಾರೆ ಎಂದು ತಿಳಿಸಿದರು. ಕಾರ್ಯದರ್ಶಿ ಯು.ನಾಗರಾಜ, ಖಜಾಂಚಿ ಬಿ. ಆರ್. ರಾಜು ಇದ್ದರು.

ಕೊಪ್ಪಳದಲ್ಲಿ ಕೆಯುಡಬ್ಲ್ಯೂಜೆ ಪದಾಧಿಕಾರಿಗಳು ಆಮಂತ್ರಣ ಪತ್ರಿಕೆ ಗುರುವಾರ ಬಿಡುಗಡೆ ಮಾಡಿದರು.

ಶಿವಶಕ್ತಿಪೀಠ ಜಾತ್ರಾ ಮಹೋತ್ಸವ ನಾಳೆ

ಮಸ್ಕಿ: ತಾಲೂಕಿನ ಇರಕಲ್ಲ ಮಠದ ಶಿವಶಕ್ತಿ ಪೀಠದ ಜಾತ್ರಾ ಮಹೋತ್ಸವ ಮಾರ್ಚ್ 8ರಂದು ನಡೆಯಲಿದೆ ಎಂದು ಇರಕಲ್ಲ ಮಠದ ಬಸವಪ್ರಸಾದ ಸ್ವಾಮೀಜಿ ಹೇಳಿದರು. ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಫೆ.26 ರಿಂದ ಮಾರ್ಚ 8 ರವರೆಗೆ ಇರಕಲ್ಲ ಮಠದಲ್ಲಿ ವಿವಿಧ ಕಾರ್ಯಕ್ರಮ ನಡೆಯಲಿದ್ದು, ಸಪ್ತ ಭಜನೆ, ಶಿವಶಕ್ತಿಯರ ಪೂಜೆ, ವಿವಿಧ ಕ್ರೀಡಾ ಕೂಟಗಳ ಉದ್ಘಾಟನೆ, ಪರಿಸರ ರಕ್ಷಿಸಲು ಭಕ್ತರಿಗೆ ಸಸಿ ನೀಡಲು ಸ್ವಚ್ಛತಾ ಆಂದೋಲನ ಹಾಗೂ ಜನ ಜಾಗೃತಿ ಪಾದಯಾತ್ರೆ, ಜನರಿಗೆ ಉಚಿತವಾಗಿ ನೇತ್ರ ತಪಾಸಣೆ ನೀಡಲು ಆರೋಗ್ಯ ಜಾತ್ರೆ, ಉಚಿತ ಆರೋಗ್ಯ ಶಿಬಿರ, ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ರೈತರತ್ನ ಪ್ರಶಸ್ತಿ ಸಮಾರಂಭ, ಶಿಕ್ಷಣ ಮತ್ತು ಸಾಂಸ್ಕೃತಿಕ ಜಾತ್ರೆ, ಅಯ್ಯಚಾರ ಮತ್ತು ಇಷ್ಟಲಿಂಗ ಪೂಜೆ, ಪರಿಸರ ಜಾತ್ರೆ, ಸುಮಂಗಲಿಯರ ಉಡಿ ತುಂಬುವ ಕಾರ್ಯಕ್ರಮ, ಸಸಿ ನೀಡುವ ಕಾರ್ಯಕ್ರಮ, ಧರ್ಮಸಭೆ, ಯುವ ಸ್ಫೂರ್ತಿ ಚೇತನ ಪ್ರಶಸ್ತಿ, ವೀರಯೋಧ, ಶರಣ ದಂಪತಿಗಳ ಸನ್ಮಾನ, ಸಕಲ ವಾದ್ಯಮೇಳದೊಂದಿಗೆ ಶಿವಶಕ್ತಿಯರ ಪಲ್ಲಕ್ಕಿ ಉತ್ಸವ ಹಾಗೂ ಉಚ್ಚಾಯ ಮಹೋತ್ಸವ, ದಾಸೋಹ ಸೇವೆ, ದುಂದುವೆಚ್ಚಕ್ಕೆ ಕಡಿವಾಣ ಹಾಕಲು ಸಾಮೂಹಿಕ ವಿವಾಹ ಕಾರ್ಯಕ್ರಮ ಹೀಗೆ ವಿವಿಧ ಕಾರ್ಯಕ್ರಮ ನಡೆಯಲಿದೆ. ರೈತಾಪಿ ವರ್ಗ ಸಾಕಷ್ಟು ಸಂಕಷ್ಟ ಅನುಭವಿಸಿದ್ದು, ಗುಳೆ ಹೋಗುವ ಪದ್ದತಿ ಇದೆ. ಸುದ್ದಿಗೋಷ್ಠಿಯಲ್ಲಿ ಮುಖಂಡ ಬಸವರಾಜಸ್ವಾಮಿ ಹಸಮಕಲ್ಲ, ಅಮರೇಶ ಉಪಸ್ಥಿತರಿದ್ದರು.

ಮುಖಂಡರಿಗೆ ಬಲ್ಡೋಟ ಸಂಸ್ಥೆ ಆಮಿಷ

ಕೊಪ್ಪಳ: ಬಲ್ಡೋಟ ಸಂಸ್ಥೆ ಕೆಲವು ದಲಿತ ಮುಖಂಡರಿಗೆ ಆಮಿಷ ತೋರಿಸಿ, ಕಾರ್ಖಾನೆ ಪರ ಮಾತನಾಡಿಸುತ್ತಿದ್ದಾರೆ. ಈ ಮೂಲಕ ದಲಿತರ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ ಎಂದು ದಲಿತ ಮುಖಂಡ ಮಲ್ಲಿಕಾರ್ಜುನ ಪೂಜಾರ ಆರೋಪಿಸಿದರು.

ನಗರದ ಕೊಪ್ಪಳ ಮೀಡಿಯಾ ಕ್ಲಬ್ ನಲ್ಲಿ ದಲಿತ ಸಂಘಟನೆಗಳ ಒಕ್ಕೂಟದ ಮುಖಂಡರಾದ ಸಿದ್ದು ಮಣ್ಣಿನವರ, ಯಂಕಪ್ಪ ಹೊಸಳ್ಳಿ, ಮೂಕಪ್ಪ ಎನ್.ಮೇಸ್ತ್ರಿ ಬಸಾಪೂರ, ಯಲ್ಲಪ್ಪ ಹಳೇಮನಿ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿ ನಡೆಸಿ ಗುರುವಾರ ಮಾತನಾಡಿದರು.

ಕಾರ್ಖಾನೆ ವಿರೋಧಿ ಹೋರಾಟಕ್ಕೆ ಕೊಪ್ಪಳದ ಎಲ್ಲ ದಲಿತ ಮುಖಂಡರು ಮತ್ತು ದಲಿತ ಸಮುದಾಯಗಳು ಬೆಂಬಲ ನೀಡಿವೆ. ಆದರೆ, ಗಂಗಾವತಿ ಭಾಗದ ಕೆಲವರು ದಲಿತ ಸಮುದಾಯ, ಸಂಘಟನೆ ಹೆಸರು ಬಳಸಿಕೊಂಡು ಕಾರ್ಖಾನೆ ಪರ ಮಾತನಾಡುತ್ತಿದ್ದಾರೆ. ಕಾರ್ಖಾನೆ ಮತ್ತು ಕೈಗಾರಿಕೆ ಪರ ಮಾತನಾಡುವವರು ಇದರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಕೊಪ್ಪಳದಲ್ಲಿ ಕಾರ್ಖಾನೆ ವಿಸ್ತರಣೆ ಪರ ಮಾತನಾಡುವ ದಲಿತ ಮುಖಂಡರು ನಮ್ಮ ಹಲವು ಪ್ರಶ್ನೆಗೆ ಉತ್ತರ ನೀಡಬೇಕಿದೆ. ಈಗಾಗಲೇ ಇರುವ ಎಂಎಸ್ಪಿಎಲ್ ಕಾರ್ಖಾನೆ ಮತ್ತು ಇತರೇ ಕಾರ್ಖಾನೆಗಳು ಎಷ್ಟು ದಲಿತರಿಗೆ ಕೆಲಸ ಕೊಟ್ಟಿದ್ದಾರೆ ಕಾರ್ಖಾನೆ ಸುತ್ತಲಿನ ಗ್ರಾಮದಲ್ಲಿ ಎಷ್ಟು ದಲಿತ ಯುವಕರು ಕೆಲಸ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಉತ್ತರಿಸಬೇಕು ಎಂದು ಸವಾಲು ಹಾಕಿದರು.

ಕೊಪ್ಪಳ ತಾಲೂಕಿಗೆ ಸಂಬಂಧಿಸಿದಂತೆ ಯಾರೊಬ್ಬ ದಲಿತ ಮುಖಂಡರು ಕಾರ್ಖಾನೆ ಪರ ಇಲ್ಲ. ಗಂಗಾವತಿ ಭಾಗದ ದಲಿತ ಮುಖಂಡರನ್ನು ಸೆಳೆಯುವ ಮೂಲಕ ಒಡೆದಾಳುವ ನೀತಿ ಮಾಡುತ್ತಿದ್ದಾರೆ. ಮಾದಿಗ ಮಹಾಸಭಾದಿಂದ ಕೊಪ್ಪಳ ಬಂದ್ ಗೆ ಬೆಂಬಲ ಕೊಟ್ಟಿದ್ದಾರೆ. ಆದರೆ, ಬಲ್ಡೋಟ ಪರ ಸುದ್ದಿಗೋಷ್ಠಿ ಮಾಡಿರುವ ವ್ಯಕ್ತಿಗಳು ಸಂಘಟನೆಗೆ ಸಂಬಂಧವೇ ಇಲ್ಲ. ಬಲ್ಡೋಟ ಕಂಪನಿ ಡಿವೈಡ್ ಆ್ಯಂಡ್ ರೂಲ್ ಪಾಲಿಸಿ ಮಾಡುತ್ತಿದ್ದಾರೆ. ಕೆಲವರನ್ನು ಖರೀದಿ ಮಾಡಿದ್ದಾರೆ. ಏಕಾಏಕಿ ಗಂಗಾವತಿ ಭಾಗದವರು ಬಂದು ಇಲ್ಲಿ ಮಾತನಾಡುತ್ತಾರೆ ಎಂದರೆ ಏನರ್ಥ? ಎಂದು ಪ್ರಶ್ನಿಸಿದರು.

ಕೊಪ್ಪಳ ಮೀಡಿಯಾ ಕ್ಲಬ್ ನಲ್ಲಿ ದಲಿತ ಸಂಘಟನೆಗಳ ಒಕ್ಕೂಟದ ಮುಖಂಡರು ಗುರುವಾರ ಮಾತನಾಡಿದರು.

ಗ್ರಾಮದ ಅಭಿವೃದ್ಧಿಗೆ ಸಹಕರಿಸಿ : ಸಂಸದ

ಕನಕಗಿರಿ: ಸಾಕಷ್ಟು ಯೋಜನೆಗಳು ಗ್ರಾಮ ಪಂಚಾಯತಿನಿಂದಲೇ ಅನುಷ್ಠಾನವಾಗುತ್ತಿದ್ದು, ಗ್ರಾಮದ ಅಭಿವೃದ್ಧಿಗೆ ಅಧಿಕಾರಿಗಳು, ಜನಪ್ರತಿನಿಧಿಗಳು ಶ್ರಮಿಸಬೇಕು ಎಂದು ಸಂಸದ ಕೆ.ರಾಜಶೇಖರ್ ಹಿಟ್ನಾಳ್ ಹೇಳಿದರು. ಪಟ್ಟಣದ ತಾಲೂಕು ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಕನಕಗಿರಿ ಹೋಬಳಿ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಮೀಣ ಭಾಗದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರದ ಎಲ್ಲಾ ಯೋಜನೆಗಳ ಸದುಪಯೋಗ ಸಾರ್ವಜನಿಕರಿಗೆ ದೊರಕುವಂತಾಗಬೇಕು. ಹಾಗಾಗಿ ಎಲ್ಲಾ ಯೋಜನೆಗಳ ಕುರಿತು ಜಾಗೃತಿಯನ್ನು ಮೂಡಿಸಬೇಕು ಎಂದರು. ನಂತರ ಸಭೆಯಲ್ಲಿ ಹೋಬಳಿ ವ್ಯಾಪ್ತಿಯ ಮುಸಲಾಪುರ, ಚಿಕ್ಕಮಾದಿನಾಳ, ಸುಳೇಕಲ್, ಹಿರೇಖೇಡಾ ಗ್ರಾ.ಪಂ ಗಳ ಮನರೇಗಾ ಯೋಜನೆಗಳು, ವಸತಿ ಯೋಜನೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಅರಣ್ಯ ಇಲಾಖೆ, ಪಿಆರ್.ಡಿ, ಆರ್. ಡಬ್ಲ್ಯೂಎಸ್, ಪಶುಸಂಗೋಪನೆ, ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಪ್ರಗತಿನ್ನು ಪರಿಶೀಲನೆ ನಡೆಸಲಾಯಿತು. ಈ ಸಂದರ್ಭದಲ್ಲಿ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಕೆ.ರಾಜಶೇಖರ್, ಸಹಾಯಕ ನಿರ್ದೇಶಕರಾದ ಶರಪುನ್ನಿಸಾ ಬೇಗಂ, ವೀರಣ್ಣ ನಕ್ರಳ್ಳಿ, ವಿವಿಧ ಇಲಾಖೆಯ ಅಧಿಕಾರಿಗಳಾದ ವಿಜಯಕುಮಾರ್, ವಿರುಪಾಕ್ಷಿ, ರಾಘವೇಂದ್ರ, ಸಂತೋಷ ಪಟ್ಟದಕಲ್, ಅರುಣಗುರು, ದಾರಪ್ಪ ಹಾಜರಿದ್ದರು.

ವಿಶ್ವಮಟ್ಟದ ತಾಂತ್ರಿಕ ಶಿಕ್ಷಣ ನೀಡುವಲ್ಲಿ ಹೆಸರುವಾಸಿಯಾದ ಪಿ.ಇ.ಎಸ್. ವಿಶ್ವವಿದ್ಯಾಲಯ ಮತ್ತು ವಿದ್ಯಾಸಂಸ್ಥೆಯನ್ನು ಕಟ್ಟಿ ಬೆಳೆಸಿದ, ಶಿಕ್ಷಣ ತಜ್ಞ ಪ್ರೊ. ಎಂ. ಆರ್. ದೊರೆಸ್ವಾಮಿಯವರದು ಸೇವಾ ಮನೋಭಾವ. ಅಕ್ಷರಶಃ ಲಕ್ಷಾಂತರ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣ ಪಡೆದು, ವಿಶ್ವ ಮಟ್ಟದಲ್ಲಿ ಸ್ಪರ್ಧೆ ನೀಡಿ, ಉತ್ತಮ ವೃತ್ತಿ ಪಡೆಯುವಲ್ಲಿ ಪಿ.ಇ.ಎಸ್. ವಿದ್ಯಾಸಂಸ್ಥೆ ಮತ್ತು ಅದರ ರೂವಾರಿ ಪ್ರೊ.ಎಂ.ಆರ್. ದೊರೆಸ್ವಾಮಿಯವರ ಕೊಡುಗೆ ಅಪಾರ. ಸರಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಲ್ಯಾಬ್ ಮೊದಲಾದ ಸೌಲಭ್ಯವನ್ನು ನೀಡುವಲ್ಲಿಯೂ ಪ್ರೊ. ದೊರೆಸ್ವಾಮಿ ಅವರಿಗೆ ಅಪಾರ ಆಸಕ್ತಿ. ಅಗಲಿದ ಪ್ರೊ.ಎಂ.ಆರ್.ದೊರೆಸ್ವಾಮಿ ಅವರಿಗೆ ನಮನಗಳು.



ಪ್ರೊ. ಎಂ.ಆರ್. ದೊರೆಸ್ವಾಮಿ

ಆರಿದ ಶಿಕ್ಷಣ ದೀಪ



ಅವರ ದೂರದರ್ಶಿ ನಾಯಕತ್ವ ಅನನ್ಯ

ಪಿ.ಇ.ಎಸ್. ವಿಶ್ವವಿದ್ಯಾಲಯ ಮತ್ತು ವಿದ್ಯಾಸಂಸ್ಥೆಗಳನ್ನು ಕಟ್ಟಿದ ಪ್ರೊಫೆಸರ್ ಎಂ.ಆರ್.ದೊರೆಸ್ವಾಮಿ ಅವರು ತಮ್ಮ ದೂರದರ್ಶಿತ್ವದಿಂದಾಗಿ, ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಪುಟ್ಟ ಕ್ರಾಂತಿಯನ್ನೇ ಮಾಡಿದರು. ಅತ್ಯುತ್ತಮ ಗುಣಮಟ್ಟದ ಶಿಕ್ಷಣಕ್ಕೆ ಇನ್ನೊಂದು ಹೆಸರು ಎಂದೇ ಹೆಸರು ಮಾಡಿದ ಪಿ.ಇ.ಎಸ್. ವಿದ್ಯಾಸಂಸ್ಥೆಗಳು ಇಂದು ದೇಶದಾದ್ಯಂತ ಮತ್ತು ವಿದೇಶಗಳಲ್ಲೂ ಹೆಸರು ಮಾಡಿದೆ. ಇಂದಿನ ಆಂಧ್ರಪ್ರದೇ ಶದ ಚಿತ್ತೂರು ಜಿಲ್ಲೆಯ ನರ್ರವೂರು ಎಂಬ ಹಳ್ಳಿಯಲ್ಲಿ 7.11.1937ರಂದು ಜನಿಸಿದ ದೊರೆಸ್ವಾಮಿ ಅವರದು ಕೃಷಿಕರ ಕುಟುಂಬ. ಆರಂಭದಿಂದಲೇ ಬೆಂಗಳೂ ರಿನಲ್ಲಿ ವಿದ್ಯಾಭ್ಯಾಸ ಪಡೆದ ದೊರೆಸ್ವಾಮಿ ಯವರು, ಆರಂಭಿಕ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ಪಡೆದರು ಎಂಬುದು ವಿಶೇಷ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಮತ್ತು ಬಿ.ಎಲ್. ಪದವಿ ಪಡೆದ ಪ್ರೊಫೆಸರ್ ದೊರೆಸ್ವಾಮಿಯವರು, ಬೆಂಗಳೂರಿನಲ್ಲೇ ಉಪ ನ್ಯಾಸಕರಾಗಿ ತಮ್ಮ ಅಭಿಯಾನ ಆರಂಭಿಸಿದರು.

ನಿರ್ವಹಿಸಿದ ಮುಖ್ಯ ಹುದ್ದೆಗಳು

1. ಪ್ರಾಂಶುಪಾಲರು, ದಯಾನಂದ ಸಂಜೆ ಕಾಲೇಜು, ಬೆಂಗಳೂರು
2. ಪ್ರಾಂಶುಪಾಲರು, ಪಿ.ಇ.ಎಸ್. ಕಾಲೇಜು, ಹನುಮಂತ ನಗರ, ಬೆಂಗಳುರು
3. ಸೆನೆಟ್ ಸದಸ್ಯರು, ಬೆಂಗಳೂರು ವಿಶ್ವವಿದ್ಯಾಲು, ಜ್ಞಾನಭಾರತಿ
4. ಸ್ಥಾಪಕ ಕಾರ್ಯದಶಿ, ಪಿ.ಇ.ಎಸ್. ವಿದ್ಯಾಸಂಸ್ಥೆ, ಬೆಂಗಳುರು
5. ಎಂ.ಎಲ್.ಸಿ., ಕರ್ನಾಟಕ ಸರಕಾರ (2005-2011)
6. ಕುಲಪತಿ, ಪಿ.ಇ.ಎಸ್.ವಿದ್ಯಾಸಂಸ್ಥೆ ಬೆಂಗಳೂರು (2013-2025)
7. ಸಲಹಾಗಾರರು, ಕರ್ನಾಟಕ ಸರಕಾರ (ಜನವರಿ 2020ರಿಂದ)

ಗೌರವಗಳು

- ಕರ್ನಾಟಕ ಸರಕಾರದಿಂದ ರಾಜ್ಯೋತ್ಸವ ಪ್ರಶಸ್ತಿ (1997)
- ಫುಲ್‌ಬ್ರೈಟ್ ಫೆಲೋಶಿಪ್ ಯು.ಎಸ್.(1985)
- ಕೆಂಪೇಗೌಡ ಪ್ರಶಸ್ತಿ (2000)
- ಆರ್ಯಭಟ ಪ್ರಶಸ್ತಿ (2001)
- ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ (2011)

ಗುಣಮಟ್ಟದ ಶಿಕ್ಷಣ

ಎಲ್ಲರಿಗೂ ಗುಣಮಟ್ಟದ ಶಿಕ್ಷಣ ನೀಡಬೇಕೆಂಬ ಬೃಹದುದ್ದೇಶ ದಿಂದ, ಪುಟ್ಟ ಶಾಲೆಯ ಮೂಲಕ ಆರಂಭಗೊಂಡ ಪಿ.ಇ.ಎಸ್. ವಿದ್ಯಾಸಂಸ್ಥೆಯು ಇಂದು ಹಲವು ಕ್ಷೇತ್ರಗಳಲ್ಲಿ ತನ್ನ ವಿದ್ಯಾ ಅಭಿಯಾನವನ್ನು ನಡೆಸಿದೆ. ಕರ್ನಾಟಕ ಮತ್ತು ಆಂಧ್ರಪ್ರದೇಶ ಗಳಲ್ಲಿ ಹರಡಿರುವ ಹಲವು ವಿದ್ಯಾಸಂಸ್ಥೆಗಳು ಜನರಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿವೆ. ಆರಂಭಿಕ ಶಿಕ್ಷಣ ನೀಡುವ ಎಸ್ ಎಸ್‌ಎಂ ಪಬ್ಲಿಕ್ ಶಾಲೆ, ಚಿತ್ತೂರಿನಲ್ಲಿರುವ ಪಿ.ಇಎಸ್.ಎಸ್. ಪಬ್ಲಿಕ್ ಶಾಲೆ ಮತ್ತು ಹನುಮಂತನಗರದ ಪಿ.ಇ.ಎಸ್ ಕಾಲೇಜು, ಪದವಿ ಹಂತದ ತನಕ ಶಿಕ್ಷಣವನ್ನು ನೀಡುತ್ತಿವೆ.

- ತಾಂತ್ರಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣವಾದ ಬಿ.ಇ., ಬಿಟೆಕ್, ಎಂಟೆಕ್, ಎಂಬಿಎ, ಕಾನೂನು, ಪಿಎಚ್‌ಡಿ ಶಿಕ್ಷಣಗಳಲ್ಲು ಬನಶಂಕರಿ ಮತ್ತು ಹೊಸೂರು ರಸ್ತೆಯ ಕ್ಯಾಂಪಸ್‌ನಲ್ಲಿ ನೀಡಲಾಗುತ್ತದೆ.
- **ವೈದ್ಯಕೀಯ ಶಿಕ್ಷಣ :** ಎಂಬಿಬಿಎಸ್, ಎಂಡಿ ಮೊದಲಾದ ಕ್ಷೇತ್ರಗಳಲ್ಲಿ ಶಿಕ್ಷಣವನ್ನು ಆಂಧ್ರಪ್ರದೇಶದ ಕುಪ್ಪಂನಲ್ಲಿರುವ ಪಿ.ಇ.ಎಸ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಮತ್ತು ರಿಸರ್ಚ್ ಇಲ್ಲಿ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಬೆಂಗಳೂರು ದಕ್ಷಿಣ ಕ್ಯಾಂಪಸ್‌ನಲ್ಲಿ 1100 ಹಾಸಿಗೆಗಳ ಸೌಲಭ್ಯದ ಮೆಡಿಕಲ್ ಕಾಲೇಜ್ ಕಾಮಗಾರಿ ಪ್ರಗತಿಯಲ್ಲಿದೆ.

ಪಿ.ಇ.ಎಸ್.ನಿಂದ ಉಪಗ್ರಹ!

ಪಿ.ಇ.ಎಸ್. ರಿಸರ್ಚ್ ಫೌಂಡೇಶನ್ 2017ರಿಂದ ಅಪರೂಪದ ಸಂಶೋಧನೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಿದೆ. ಪಿ.ಇ.ಎಸ್. ರಿಸರ್ಚ್ ಫೌಂಡೇಷನ್‌ನ ಸಾಧನೆಯನ್ನು ಸರಕಾರಗಳು ಗುರಿತಿಸಿವೆ. ರಾಷ್ಟ್ರ ಮಟ್ಟದ ಪ್ರಮುಖ ಪ್ರಾಜೆಕ್ಟ್‌ಗಳಿಗಾಗಿ, 2 ಉಪಗ್ರಹಗಳನ್ನು ಸಿದ್ಧಪಡಿಸಿಕೊಡುವಂತೆ, ಕೇಂದ್ರ ಸರಕಾರದ ಡಿ.ಆರ್.ಡಿ.ಒ. ಸಂಸ್ಥೆಯು ಪಿ.ಇ.ಎಸ್.ಯು. ಗೆ ನಿರ್ದೇಶನ ನೀಡಿದೆ; ಈ ಎರಡು ಉಪಗ್ರಹಗಳನ್ನು ಇಸ್ರೋ ಸಂಸ್ಥೆಯು ನಭಕ್ಕೆ ಹಾರಿಸಿದೆ; ರಾಷ್ಟ್ರೀಯ ಪ್ರಾಮುಖ್ಯತೆಯ ವಿಶಿಷ್ಟ ಪೇಲೋಡ್‌ಗಳನ್ನು ಈ ಉಪಗ್ರಹಗಳು ಹೊಂದಿದ್ದವು.

ದಕ್ಷ ಸಿಬ್ಬಂದಿ

ಪ್ರೊ. ದೊರೆಸ್ವಾಮಿಯವರ ನೇತೃತ್ವದಲ್ಲಿ ಉತ್ತಮ ಮತ್ತು ಗುಣಮಟ್ಟದ ಬೋಧನಾ ಸಿಬ್ಬಂದಿ ಮತ್ತು ಇತರ ಸಿಬ್ಬಂದಿಯ ಪಡೆ ತಯಾರಾಗಿದೆ. ಇವರ ವಿದ್ಯಾ ಸಂಸ್ಥೆಗಳಲ್ಲಿ ಸುಮಾರು 1500 ಬೋಧಕ ಸಿಬ್ಬಂದಿ ಇದ್ದು, ಸುಮಾರು 1000 ಬೋಧಕೇತರ ಸಿಬ್ಬಂದಿ ಇದ್ದಾರೆ. ಪಿ.ಇ.ಎಸ್. ವಿದ್ಯಾಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಪ್ರಗತಿಗೆ ಅಪಾರ ಪ್ರಮಾಣದ ಗಮನ ಮತ್ತು ಪ್ರಾಮುಖ್ಯತೆ ನೀಡಲಾಗುತ್ತಿದೆ.

ವಿದ್ಯಾರ್ಥಿಗಳ ಪ್ರಗತಿ

ಪಿ.ಇ.ಎಸ್. ವಿದ್ಯಾಸಂಸ್ಥೆಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳನ್ನು ವಿವಿಧ ಕಂಪೆನಿಗಳು ಆದ್ಯತೆಯ ಮೇರೆಗೆ ತಮ್ಮ ಸಂಸ್ಥೆಗಳಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುವುದು ವಿಶೇಷ. ಎಲ್ಲಾ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ. ಕ್ಯಾಂಪಸ್ ಸಂದರ್ಶನಕ್ಕಾಗಿ ಸುಮಾರು 120 ಸಂಸ್ಥೆಗಳು ಪಿ.ಇ.ಎಸ್. ವಿದ್ಯಾಸಂಸ್ಥೆಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಗಳನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತಿದ್ದಾರೆ. ಈ ಸಂಸ್ಥೆಗಳ ಪೈಕಿ ಕೆಲವು ಬಹುರಾಷ್ಟ್ರೀಯ ಸಂಸ್ಥೆಗಳು ಎಂಬುದು ಗಮನಾರ್ಹ. ಆದ್ದರಿಂದಲೇ, ಪಿ.ಇ.ಎಸ್. ವಿಶ್ವವಿದ್ಯಾಲಯವು ಪ್ರತಿ ವರ್ಷವೂ ಅತಿ ಉತ್ತಮ ರೇಟಿಂಗ್ (10-15) ಪಡೆಯುತ್ತಿದೆ. ಇವೆಲ್ಲ ಸಾಧನೆಗೆ ಪ್ರೊ. ದೊರೆಸ್ವಾಮಿಯವರ ದೂರದರ್ಶಿತ್ವ, ನಾಯಕತ್ವ ಮತ್ತು ಮಾರ್ಗದರ್ಶನ ಕಾರಣ ಎಂಬುದು ಗಮನಾರ್ಹ.

ವಿದೇಶ ಪ್ರಯಾಣ

ಪ್ರೊ.ಎಂ.ಆರ್. ದೊರೆಸ್ವಾಮಿ ಅವರು 1985ರಲ್ಲಿ ವಿದೇಶಕ್ಕೆ ಹೋಗಿ ಬಂದಿದ್ದರು. ಅದೊಂದು ವಿಶೇಷ ಸಂದರ್ಭ. ಅವರು ಫುಲ್‌ಬ್ರೈಟ್ ಫೆಲೋ ಆಗಿ ಯು.ಎಸ್. ಮತ್ತು ಯು.ಕೆ. ದೇಶಗಳಿಗೆ ಭೇಟಿ ನೀಡಿದ್ದರು. ಆ ಸಮಯದಲ್ಲಿ ಅವರು ವಿಶ್ವ ಮಟ್ಟದ ವಿದ್ಯಾಭ್ಯಾಸದ ಪದ್ಧತಿಗಳನ್ನು ಗಮನವಿಟ್ಟು ನೋಡಲು, ಅಧ್ಯಯನ ಮಾಡಲು ಅವಕಾಶವಾಯಿತು. ಫುಲ್‌ಬ್ರೈಟ್ ಫೆಲೋ ಆಗಿ ಅವರು ನಡೆಸಿದ ವಿದೇಶ ಪ್ರವಾಸವು, ಪಿ.ಇ.ಎಸ್. ವಿದ್ಯಾಸಂಸ್ಥೆಯ ಪ್ರಗತಿಗೆ ಅನುಕೂಲವಾಯಿತು. ಅವರು ಪಡೆದ ಆ ಅನುಭವವನ್ನು ತಮ್ಮ ವಿದ್ಯಾಸಂಸ್ಥೆಗಳಲ್ಲಿ ಅಳವಡಿಸಿದರು. ಅದರ ಫಲವಾಗಿ ಪಿ.ಇ.ಎಸ್. ವಿದ್ಯಾಸಂಸ್ಥೆಗಳು ಇಂದು ವಿಶ್ವಮಟ್ಟದ ಶಿಕ್ಷಣವನ್ನು ನೀಡುತ್ತಿವೆ. ಮತ್ತು ಪಿ.ಇ.ಎಸ್. ವಿಶ್ವವಿದ್ಯಾಲಯವು ನಿರಂತರವಾಗಿ ಉನ್ನತ ಮಟ್ಟವನ್ನು ಕಾಪಾಡಿಕೊಂಡು ಬರಲು ಸಾಧ್ಯವಾಗುತ್ತಿದೆ. ಪಿ.ಇ.ಎಸ್. ವಿದ್ಯಾಸಂಸ್ಥೆಗಳ ಗುಣಮಟ್ಟವನ್ನು ಕರ್ನಾಟಕ ಸರಕಾರವೂ ಗುರುತಿಸಿದೆ; ಅದರ ನಾಯಕನ ದೂರದರ್ಶಿತ್ವಕ್ಕೆ ಗೌರವವನ್ನೂ ನೀಡಿದೆ. 2007-2013ರ ಅವಧಿಯಲ್ಲಿ ಪ್ರೊ. ದೊರೆಸ್ವಾಮಿಯವರನ್ನು ಶಿಕ್ಷಣ ಕ್ಷೇತ್ರದಲ್ಲಿ ಎಂ.ಎಲ್.ಸಿ. ಸ್ಥಾನಕ್ಕೆ ಕರ್ನಾಟಕ ಸರಕಾರವು ನಾಮನಿರ್ದೇಶನ ಮಾಡಿತು. ಆ ಮೂಲಕ ಪ್ರೊ. ದೊರೆಸ್ವಾಮಿಯವರನ್ನು ಗೌರವಿಸಲಾಯಿತು.

ವಿಶ್ವವಿದ್ಯಾಲಯದ ಸ್ಥಾಪನೆ

ಉತ್ತಮ ಮಾರ್ಗದರ್ಶನ, ದೂರದರ್ಶಿತ್ವ ಮತ್ತು ಸಮಾಜಸೇವೆಯು ಪ್ರೊ. ಎಂ.ಆರ್.ದೊರೆಸ್ವಾಮಿಯವರ ವಿಶೇಷತೆ. 2013ರಲ್ಲಿ ಪಿ.ಇ.ಎಸ್. ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮೂಲಕ, ಶಿಕ್ಷಣ ಕ್ಷೇತ್ರದಲ್ಲಿ ಹೊಸ ಅಭಿಯಾನವನ್ನು ಪ್ರೊ.ಎಂ.ಆರ್. ದೊರೆಸ್ವಾಮಿಯವರು ಆರಂಭಿಸಿದರು. 2017ರಲ್ಲಿ ಒಂದು ರಿಸರ್ಚ್ ಫೌಂಡೇಶನ್‌ನ್ನು ಆರಂಭಿಸಿ, ಶಿಕ್ಷಣ ಕ್ಷೇತ್ರದಲ್ಲಿ ಹೊಸ ಹೊಸ ಸಂಶೋಧನೆಗಳನ್ನು ನಡೆಸಲು ಅನುವು ಮಾಡಿಕೊಟ್ಟರು.

ಅಪಾರ ದೇಶಪ್ರೇಮ

ತಮ್ಮ ವಿದ್ಯಾರ್ಥಿ ದೆಸೆಯಿಂದಲೂ, ಪ್ರೊ. ಎಂ.ಆರ್. ದೊರೆಸ್ವಾಮಿಯವರು ಸಮಾಜ ಸೇವೆಯಲ್ಲಿ ಅಪಾರ ಆಸಕ್ತಿಯನ್ನು ತೋರುತ್ತಿದ್ದರು ಮತ್ತು ದೇಶವನ್ನು ಕಟ್ಟುವ ಕೆಲಸದಲ್ಲಿ ಆಸಕ್ತಿ ತೋರುತ್ತಿದ್ದರು. ಬೆಂಗಳೂರಿನ ತ್ಯಾಗರಾಜನಗರದಲ್ಲಿ, ಸ್ಥಳೀಯರ ಸಹಾಯದಿಂದ ಅವರು ಆರಂಭಿಸಿದ ಶಾಲೆಯು ಇದಕ್ಕೆ ಒಂದು ಉದಾಹರಣೆ. ಜನಸಾಮಾನ್ಯರು ಮತ್ತು ಬಡ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯಬೇಕು ಎಂಬುದು ಅವರ ಉದ್ದೇಶವಾಗಿತ್ತು. ಬೆಂಗಳೂರಿನಲ್ಲಿ ಅವರು ವಿದ್ಯಾರ್ಥಿಯಾಗಿದ್ದಾಗ, ಶ್ರೀರಾಂಪುರ ಮತ್ತು ಸಿದ್ದಾಪುರ ಪ್ರದೇಶದ ಸ್ಲಂಗಳಲ್ಲಿನ ಜನರಿಗೆ ಓದು ಮತ್ತು

ಬರಹವನ್ನು ಹೇಳಿಕೊಡುತ್ತಿದ್ದರು. ಇದರ ಮುಂದುವರಿಕೆಯ ಭಾಗವಾಗಿ, ಪಿ.ಇ.ಎಸ್. ವಿಶ್ವವಿದ್ಯಾಲಯವು, ತನ್ನದೇ ಆದ ರೀತಿಯಲ್ಲಿ ಸಮಾಜಸೇವೆಯನ್ನು ಮುಂದುವರಿಸಿದೆ; ಶಾಲೆಯಿಂದ ಹೊರಬಿದ್ದ ಯುವ ಜನತೆಗೆ, ಎಲೆಕ್ಟ್ರಿಕಲ್ ರಿಪೇರಿ, ಟಿ.ವಿ. ರಿಪೇರಿ ಮೊದಲಾದ ಉದ್ಯೋಗಗಳನ್ನು ಹೇಳಿಕೊಡಲಾಗುತ್ತಿದೆ.

ಶಾಲೆಗಳ ದತ್ತು ಸ್ವೀಕಾರ

ಪ್ರೊ.ಎಂ.ಆರ್.ದೊರೆಸ್ವಾಮಿಯವರು ಎಂಎಲ್‌ಸಿ ಆಗಿದ್ದ ಸಮಯದಲ್ಲಿ, ಸರಕಾರಿ ಶಾಲೆಗಳನ್ನು ದತ್ತು ಸ್ವೀಕರಿಸುವ ಕುರಿತು ಅಪಾರ ಆಸಕ್ತಿ ವಹಿಸಿದರು. ಸುಮಾರು 40 ಸರಕಾರಿ ಶಾಲೆಗಳನ್ನು ಪಿ.ಇ.ಎಸ್. ವಿಶ್ವವಿದ್ಯಾಲಯವು ದತ್ತು ತೆಗೆದು ಕೊಂಡು, ಅಲ್ಲಿ ಹಲವು ಸೌಕರ್ಯಗಳನ್ನು ಕಲ್ಪಿಸಿ, ವಿದ್ಯಾಭ್ಯಾಸ ಗುಣಮಟ್ಟವನ್ನು ಹೆಚ್ಚಿಸಲಾಯಿತು. ಜತೆಗೆ, ಚಿಕ್ಕೋಡಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿಯುಂಟಾಗಿ, ಕೆಲವು ಶಾಲೆಗಳ ಕಟ್ಟಡಗಳು ಹಾನಿಗೊಳಗಾದಾಗ, ಅಲ್ಲಿನ 11 ಶಾಲೆಗಳನ್ನು ಸಹ ದತ್ತು ಸ್ವೀಕರಿಸಿ, ಅಲ್ಲಿ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಪ್ರೊ.ದೊರೆಸ್ವಾಮಿಯವರು ಆಸಕ್ತಿ ವಹಿಸಿದರು.ವಿದ್ಯಾ ಕ್ಷೇತ್ರದಲ್ಲಿ ಪರಿಷ್ಕರಣೆ ಮತ್ತು ಬದಲಾವಣೆಗಳನ್ನು ತರುವ ಉದ್ದೇಶದಿಂದ ಕರ್ನಾಟಕ ಸರಕಾರವು ಒಂದು ಸಮಿತಿಯನ್ನು ರಚಿಸಿದ್ದು, ಅದರಲ್ಲಿ ಸಲಹಾಕಾರರಾಗಿ ಭಾಗವಹಿಸುವಂತೆ ಪ್ರೊ. ದೊರೆಸ್ವಾಮಿಯವರನ್ನು ಸರಕಾರವು ಆಹ್ವಾನಿಸಿತ್ತು. ಪ್ರೊ. ದೊರೆಸ್ವಾಮಿಯವರು ಹಲವು ಉತ್ತಮ ಸಲಹೆಗಳನ್ನು ನೀಡಿ, ಆ ಸಮಿತಿಯ ಮೂಲಕ ಅನುಷ್ಠಾನಕ್ಕೆ ತರಲು ಶ್ರಮಿಸಿದರು. ಇವರನ್ನು ಮಂತ್ರಿ ದರ್ಜೆಯ ಸಲಹೆಗಾರರನ್ನಾಗಿ ಕರ್ನಾಟಕ ಸರಕಾರವು ನೇಮಿಸಿದ್ದು, ಆ ಮೂಲಕ ದೊರೆಸ್ವಾಮಿಯವರಿಗೆ ಗೌರವವನ್ನು ಸಮರ್ಪಿಸಿತು. ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣದಲ್ಲಿ ಉನ್ನತ ಗುಣಮಟ್ಟವನ್ನು ತಲುಪಿ, ದೇಶ ಮತ್ತು ವಿದೇಶಗಳಲ್ಲಿ ಪ್ರಖ್ಯಾತವಾದ ಪಿ.ಇ.ಎಸ್. ವಿದ್ಯಾಸಂಸ್ಥೆಗಳನ್ನು ಕಟ್ಟಿ, ಬೆಳೆಸಿದ, ಪ್ರೊ. ಎಂ.ಆರ್.ದೊರೆಸ್ವಾಮಿ ಅವರ ಸೇವಾ ಮನೋಭಾವ, ದೂರದರ್ಶಿತ್ವ ಮತ್ತು ನಾಯಕತ್ವ ಗುಣ ಅನನ್ಯ ಮತ್ತು ಅಪರೂಪದ್ದು. ಜತೆಗೆ, ಶಿಕ್ಷಣ ಕ್ಷೇತ್ರದಲ್ಲಿ ಇದೊಂದು ಅಪಾರ ಸಾಧನೆ ಎನಿಸಿದೆ.

ವಿಶ್ವಮಟ್ಟದ ಸ್ಪರ್ಧೆಗೆ ವಿದ್ಯಾರ್ಥಿಗಳನ್ನು ತಯಾರು ಮಾಡಿದ ಪ್ರೊಫೆಸರ್!

ನಿಖರ ಗುರಿ, ಆ ಗುರಿಯತ್ತ ಸಾಗುವ ಹಾದಿಯ ಕಲ್ಪನೆಯಿದ್ದರೆ ಸಾಮಾನ್ಯ ವ್ಯಕ್ತಿಯೂ ಅಸಮಾನ್ಯ ಮಾಡಬಹುದು ಎಂದು ತೋರಿಸಿದ್ದು ಡಾ.ಎಂ. ಆರ್. ದೊರೆಸ್ವಾಮಿ ಅವರು. ಪ್ರಾಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದ್ದ ದೊರೆಸ್ವಾಮಿ ಅವರು ಪಿಇಎಸ್ ಎನ್ನುವ ಬೃಹತ್ ಶಿಕ್ಷಣ ಸಾಮ್ರಾಜ್ಯದ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದರು. ದೇಶ, ವಿದೇಶಗಳ ಲಕ್ಷಾಂತರ ವಿದ್ಯಾರ್ಥಿಗಳಿಗೆ ದಾರಿ ತೋರಿದ ದೀಪ ಗುರುವಾರ ಸಂಜೆ ಆರಿದೆ.

ಪಿಇಎಸ್ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಾಧಿಪತಿ ಡಾ.ಎಂ.ಆರ್. ದೊರೆಸ್ವಾಮಿ ಅವರು ವಯೋಸಹಜ ಅನಾರೋಗ್ಯ ಸಮಸ್ಯೆಯಿಂದ ಗುರುವಾರ ಸಂಜೆ ಕೊನೆಯುಸಿರುವ ಎಳೆದಿದ್ದು, ಶುಕ್ರವಾರ ಅಂತಿಮ ವಿಧಿವಿಧಾನ ನೆರವೇರಿಲಿದೆ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಮೂಲತಃ ಆಂಧ್ರದ ಚಿತ್ತೂರು ಜಿಲ್ಲೆಯ ದೊರೆಸ್ವಾಮಿ ಅವರು ತಮ್ಮ ಶಿಕ್ಷಣವನ್ನು ಬೆಂಗಳೂರಿನಲ್ಲಿಯೇ ಪಡೆದರು. ಕನ್ನಡದಲ್ಲಿಯೇ ಆರಂಭಿಕ ವಿದ್ಯಾಭ್ಯಾಸ ಪಡೆದ ಬಳಿಕ ದಯಾನಂದ ಕಾಲೇಜಿನ ಪಾಂಶ್ರಪಾಲರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದರು. ಬಳಿಕ ಪಿಇಎಸ್ ಪಿಯು ಕಾಲೇಜನ್ನು ಆರಂಭಿಸುವ ಮೂಲಕ ಶಿಕ್ಷಣದಲ್ಲಿ ಕ್ರಾಂತಿಕಾರಿಕ ಬದಲಾವಣೆ ತರಲು ನಾಂದಿ ಹಾಡಿದರು.

ಸ್ವಂತ ಕಾರಿನಲ್ಲಿ ಕೆಲಸಗಾರರನ್ನು ಕರೆಸಿ ಕೆಲಸ

ದೊರೆಸ್ವಾಮಿ ಅವರು ಸರಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಬೇಕು ಎನ್ನುವ ಸಲುವಾಗಿ ಹೊಸಕೆರೆಹಳ್ಳಿ ಸರಕಾರಿ ಶಾಲೆಗೆ ಭೇಟಿ ನೀಡಿದ ಸಮಯದಲ್ಲಿ, ಅಲ್ಲಿದ್ದ ಶಾಲೆ ರಾಜಕಾಲುವೆಯ ಪಕ್ಕದಲ್ಲಿಯೇ ಇತ್ತು. ಆ ವೇಳೆ ರಾಜಕಾಲುವೆ ಕಟ್ಟಿಕೊಂಡು, ಸಹಿಸಿಕೊಳ್ಳಲು ಸಾಧ್ಯವಾಗದಷ್ಟು ವಾಸನೆ ಬರುತ್ತಿತ್ತು. ಆ ತಕ್ಷಣ, ತಮ್ಮ ಕಾರನ್ನು ಪಿಇಎಸ್ ವಿವಿಗೆ ಕಳಿಸಿ, ಅಲ್ಲಿದ್ದ ಕೆಲಸಗಾರರನ್ನು ಹಾಗೂ ಸಾಮಗ್ರಿಗಳನ್ನು ತರಿಸಿ, ಕಟ್ಟಿಕೊಂಡಿದ್ದ ಮೋರಿಯನ್ನು ಸ್ವಚ್ಛಗೊಳಿಸಿದ್ದರು ಪ್ರೊ. ದೊರೆಸ್ವಾಮಿ ಅವರು!

ನಾಲ್ಕು ಕೋಟಿ ವೆಚ್ಚದಲ್ಲಿ ಶಾಲೆಗಳ ಅಭಿವೃದ್ಧಿ

ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಪ್ರವಾಹದಿಂದ ನೂರಾರು ಸರಕಾರಿ ಶಾಲೆಗಳ ಕಟ್ಟಡ ನೆಲಕಚ್ಚಿದವು. ಇನ್ನು ಕೆಲವು ಅಧ್ಯಯನ ನಡೆಸಲು ಸಾಧ್ಯವಾದಷ್ಟು ಹಾಳಾದವು. ಈ ವೇಳೆ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಒಂದು ಕೋಟಿ ನೆರವನ್ನು ಪಿಇಎಸ್ ಸಂಸ್ಥೆ ನೀಡಿತ್ತು. ಆದರೆ ಅದನ್ನು ಅಲ್ಲಿಗೆ ನಿಲ್ಲಿಸದೇ, ಉತ್ತರ ಕರ್ನಾಟಕ ಭಾಗದ ಏಳು ಶಾಲೆ ಹಾಗೂ ಎರಡು ಅಂಗನವಾಡಿಗಳನ್ನು ದತ್ತು ಪಡೆಯಿತು. 4.01 ಕೋಟಿ ರು. ಖರ್ಚು ಮಾಡಿ ಹಲವು ಶಾಲೆಗಳನ್ನು ನಿರ್ಮಾಣ ಮಾಡಲಾಯಿತು. ಈ ವೇಳೆ ಕೇವಲ ಕಟ್ಟಡ ನಿರ್ಮಾಣ ಮಾತ್ರವಲ್ಲದೇ, ಸ್ಮಾರ್ಟ್ ಕ್ಲಾಸ್ ರೂಂ, ಕಂಪ್ಯೂಟರ್ ಕ್ಲಾಸ್ ಸೇರಿದಂತೆ ಅತ್ಯಾಧುನಿಕ ಸೌಲಭ್ಯವನ್ನು ನೀಡಲಾಗಿದೆ.

ಎಲ್ಲ ಶಿಕ್ಷಣ ಉದ್ಯಮಿಗಳ ರೀತಿಯಲ್ಲಿ ಕೇವಲ ತಮ್ಮ ಶಾಲಾ-ಕಾಲೇಜು ಎಂದು ಯೋಚಿಸದೇ, ಕರ್ನಾಟಕದ ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆ ತರಬೇಕು ಎನ್ನುವ ನಿಟ್ಟಿನಲ್ಲಿ ದಶಕಗಳ ನಿರಂತರ ಹೋರಾಟದಿಂದ ಮನೆಮಾತಾದರು.

1965ರಲ್ಲಿ ಕೇವಲ 40 ವಿದ್ಯಾರ್ಥಿಗಳೊಂದಿಗೆ ಆರಂಭಗೊಂಡ ಪೀಪಲ್ಸ್ ಎಜುಕೇಷನ್ ಸೊಸೈಟಿ ಇಂದು 25 ಸಾವಿರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ. ಈವರೆಗೆ ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿದ ಕೀರ್ತಿ ಪಡೆದಿದೆ. ಆರಂಭದಲ್ಲಿ ಎಂಜಿನಿಯರಿಂಗ್ ಸೇರಿದಂತೆ ವಿವಿಧ ಕೋರ್ಸ್‌ಗಳ ಕಾಲೇಜು ಆರಂಭಿಸಿದ ಪಿಇಎಸ್ 2013ರ ವೇಳೆಗೆ ಸ್ವಾಯತ್ತ ವಿಶ್ವವಿದ್ಯಾಲಯವಾಗಿ ರೂಪುಗೊಂಡಿತ್ತು. ಈ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಾಧಿಪತಿ ಡಾ.ಎಂ.ಆರ್. ದೊರೆಸ್ವಾಮಿ ಅವರು, ಗುಣಮಟ್ಟದ ಶಿಕ್ಷಣಕ್ಕೆ ವಿಶೇಷ ಒತ್ತು ನೀಡಿದರು. ಉತ್ತಮ ಸಿಬ್ಬಂದಿಯನ್ನು ಆಯ್ಕೆ ಮಾಡಿದರು. ತಮ್ಮ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ವಿಶ್ವಮಟ್ಟದಲ್ಲಿ ಸ್ಪರ್ಧೆ ನೀಡುವಂತೆ ಆಗಲು, ಸೂಕ್ತ ಯೋಜನೆ ತಯಾರಿಸಿದರು; ವಿದ್ಯಾರ್ಥಿಗಳನ್ನು ತರಬೇತು ಗೊಳಿಸಿದರು. ಆದ್ದರಿಂದಲೇ, ಪಿ.ಇ.ಎಸ್. ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಎಂದರೆ, ಬಹುರಾಷ್ಟ್ರೀಯ ಕಂಪೆನಿಗಳು ಬೇಗನೆ ಆಯ್ಕೆ ಮಾಡಿಕೊಳ್ಳುತ್ತವೆ. ಇಂತಹ ಗುಣಮಟ್ಟದ ಶಿಕ್ಷಣವನ್ನು ನೀಡುವಂತೆ ಪಿ.ಇ.ಎಸ್. ವಿದ್ಯಾಸಂಸ್ಥೆಯನ್ನು, ಪಿ.ಇ.ಎಸ್. ವಿಶ್ವವಿದ್ಯಾಲಯವನ್ನು ರೂಪಿಸಿದ ಪ್ರೊ. ಎಂ.ಆರ್. ದೊರೆಸ್ವಾಮಿ ಅವರಿಗೆ ಗೌರವಪೂರ್ವಕ ನಮನಗಳು.

ರಜತ ಮಹೋತ್ಸವದ ಅಮೃತ ತೀರ್ಮಾನ

ಅದು 1998-99ರ ಅವಧಿ. ಪಿಇಎಸ್ ಶಿಕ್ಷಣ ಸಂಸ್ಥೆ ಹುಟ್ಟಿ ಅಂದಿನ 25 ವರ್ಷ ಸಂದಿದ್ದವು. ರಜತ ಮಹೋತ್ಸವದ ಸಮಯದಲ್ಲಿ ವಿಶ್ವವಿದ್ಯಾಲಯದಲ್ಲಿ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಆಲೋಚನೆಯಲ್ಲಿ ಇಡೀ ಆಡಳಿತ ಮಂಡಳಿಯಿತ್ತು. ಅದಕ್ಕೆ ದೊರೆಸ್ವಾಮಿ ಅವರೇನು ವಿರೋಧಿಸಲಿಲ್ಲ. ಆದರೆ ಈ ರೀತಿಯ ಕಾರ್ಯಕ್ರಮ ಮೂರು ದಿನ ನೆನಪಲ್ಲಿ ಉಳಿಯುತ್ತವೆ. ಆಮೇಲೆ ಮರೆತು ಹೋಗುತ್ತದೆ. ಆದರೆ ನಾವೇನಾದರೂ ಜೀವನಪೂರ್ತಿ ನೆನಪಿನಲ್ಲಿ ಉಳಿಯುವ ಕಾರ್ಯ ಮಾಡಬೇಕು ಎಂದು ಆಲೋಚಿಸಿದರು. ಆ ಆಲೋಚನೆಯ ಫಲವೇ ಸರಕಾರಿ ಶಾಲೆಗಳ ದತ್ತು ಕಾರ್ಯಕ್ರಮ!

ವಿವಿಧ ಕ್ಷೇತ್ರಗಳಲ್ಲಿ ಆಸಕ್ತಿ

- ಸಮಾಜ ಸೇವೆ ಮತ್ತು ಇತರ ಕ್ಷೇತ್ರಗಳಲ್ಲಿ ಪ್ರೊ.ಎಂ.ಆರ್. ದೊರೆಸ್ವಾಮಿ ಅವರು ಅಪಾರ ಆಸಕ್ತಿ ಹೊಂದಿದ್ದರು.
- 1965ರಲ್ಲಿ ತ್ಯಾಗರಾಜನಗರದಲ್ಲಿ ಶಾಲೆಯನ್ನು ಆರಂಭಿಸಲು ಸ್ಥಳೀಯರನ್ನು ಒಳಗೊಂಡು, ಜಾಗ ಖರೀದಿ ಮತ್ತು ಶಾಲಾ ಕಟ್ಟಡ ನಿರ್ಮಾಣ
- ಸ್ಥಾಪಕ ಸದಸ್ಯರು : ತ್ಯಾಗರಾಜ ಕೋಆಪರೇಟಿವ್ ಬ್ಯಾಂಕ್, ಎನ್.ಆರ್. ಕಾಲೊನಿ. ಈಗ ಇದು 12 ಶಾಖೆಗಳನ್ನು ಹೊಂದಿದೆ.
- ಬನಶಂಕರಿ ವೆಲ್‌ಫೇರ್ ಸೊಸೈಟಿಯ ಸ್ಥಾಪಕ ಸದಸ್ಯರು
- ಧಾರವಾಡದಲ್ಲಿ ಐ ಐ ಟಿ ಸ್ಥಾಪನೆಯಲ್ಲಿ ಸಕ್ರಿಯರಾಗಿದ್ದರು.



ಒಂದು ಕೋಟಿ ರುಪಾಯಿ ದೇಣಿಗೆ!

2019ರಲ್ಲಿ ಕರ್ನಾಟಕದಲ್ಲಿ ನೆರೆ ಸಮಸ್ಯೆ ಉಂಟಾದಾಗ, ಪಿ.ಇ.ಎಸ್. ವಿಶ್ವವಿದ್ಯಾಲಯವು ರು.1 ಕೋಟಿಯನ್ನು ಕರ್ನಾಟಕ ಸರಕಾರಕ್ಕೆ ದೇಣಿಗೆಯಾಗಿ ನೀಡಿತು ಮತ್ತು ಪ್ರವಾಹ ಪೀಡಿತ ಪ್ರದೇಶದ ಕೆಲವು ಶಾಲೆಗಳನ್ನು ಪುನರ್‌ನಿರ್ಮಾಣ ಮಾಡಲು ಸಹಕರಿಸಿತು. ಖಾಸಗಿ ವಿಶ್ವವಿದ್ಯಾಲಯವನ್ನು ಮುನ್ನಡೆಸುತ್ತಿದ್ದರೂ ದೊರೆಸ್ವಾಮಿ ಅವರಿಗೆ ಸರಕಾರಿ ಶಾಲೆಗಳ ಮೇಲಿನ ಪ್ರೀತಿ ಕಿಂಚಿತ್ತೂ ಕಡಿಮೆಯಾಗಿರಲಿಲ್ಲ. ತಮ್ಮ ಶಾಲೆ-ಕಾಲೇಜಿನಲ್ಲಿ ವಿದ್ಯಾರ್ಥಿಗಳು ಯಾವ ರೀತಿಯ ಶಿಕ್ಷಣವನ್ನು ಪಡೆಯುತ್ತಾರೋ ಅದೇ ರೀತಿಯ, ಅದೇ ಅತ್ಯಾಧುನಿಕ ತಂತ್ರಜ್ಞಾನಧಾರಿತ ಶಿಕ್ಷಣವನ್ನು ಸರಕಾರಿ ಶಾಲೆಯ ಮಕ್ಕಳು ಪಡೆಯಬೇಕು ಎನ್ನುವ ಮಹದಾಸೆಯನ್ನು ಹೊಂದಿದ್ದರು. ಆದ್ದರಿಂದ ಪಿಇಎಸ್ ಕಾಲೇಜು ಆರಂಭಿಸಿದ ಕೆಲವೇ ವರ್ಷಗಳಿಂದ ಸರಕಾರಿ ಶಾಲೆಗಳನ್ನು ದತ್ತುಪಡೆಯುವ ಕಾರ್ಯಕ್ಕೆ ಮುಂದಾದರು. ಆರಂಭದಲ್ಲಿ ಪಿಇಎಸ್ ವಿವಿ ಸುತ್ತಮುತ್ತಲಿನ ಸರಕಾರಿ ಶಾಲೆಗಳ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಿದ ಅವರು ಬಳಿಕ, ಪ್ರತಿವರ್ಷದ ವಿಶ್ವವಿದ್ಯಾಲಯದ ಲಾಂಭಾಂಶದ ಇಂತಿಷ್ಟು ಹಣವನ್ನು ಸರಕಾರಿ ಶಾಲೆಗಳ ಅಭಿವೃದ್ಧಿಗೆ ಮೀಸಲಿಟ್ಟಿರು.



ಎಂ.ಆರ್ ದೊರೆಸ್ವಾಮಿಯವರು ಸ್ವಾಮಿ ವಿವೇಕಾನಂದ ಹಾಗೂ ಮಹಾತ್ಮ ಗಾಂಧಿಯವರ ತತ್ವಾದರ್ಶಗಳನ್ನು ಮಾದರಿಯಾಗಿಟ್ಟು ಬೃಹತ್ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಿ ತನ್ನದೇ ಆದ ಛಾಪು ಮೂಡಿಸಿದವರು. ಅವರ ಆದರ್ಶವು ಇಂದಿನ ಯುವ ಜನರಿಗೆ ನಿಜಕ್ಕೂ ಸ್ಫೂರ್ತಿ. **-ಡಿ.ಕೆ. ಶಿವಕುಮಾರ್**, ಡಿಸಿಎಂ

ವಿಧಾನ ಪರಿಷತ್ ಮಾಜಿ ಸದಸ್ಯರು, ಶಿಕ್ಷಣ ತಜ್ಞರಾಗಿದ್ದ ಪ್ರೊ. ಎಂ.ಆರ್. ದೊರೆಸ್ವಾಮಿ ಅವರು ನಿಧನರಾದ ಸುದ್ದಿ ತಿಳಿದು ಅತ್ಯಂತ ದುಃಖವಾಯಿತು. ಪಿಇಎಸ್ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ್ದರು. ಅವರ ಅಗಲಿಕೆಯಿಂದ ಶಿಕ್ಷಣ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ಅವರ ಕುಟುಂಬಕ್ಕೆ ಅವರ ಅಗಲಿಕೆಯ ದುಖವನ್ನು ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ, ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ. **- ಬಸವರಾಜ ಬೊಮ್ಮಾಯಿ**, ಮಾಜಿ ಮುಖ್ಯಮಂತ್ರಿ

ಶಿಕ್ಷಣ ಕ್ಷೇತ್ರಕ್ಕೆ ಅದರಲ್ಲೂ ಪ್ರಮುಖವಾಗಿ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ದೊರೆಸ್ವಾಮಿ ಅವರ ಕೊಡುಗೆ ಅಪಾರ. ಸರಕಾರಿ ಶಾಲೆಗಳ ದತ್ತು ಕಾರ್ಯಕ್ರಮ ಸೇರಿದಂತೆ ಶಿಕ್ಷಣ ಕ್ಷೇತ್ರದಲ್ಲಿ ಅವರು ಹಲವು ಬದಲಾವಣೆಗೆ ಶ್ರಮಿಸಿದ್ದರು. ದೊರೆಸ್ವಾಮಿ ಅವರ ಅಭಿಮಾನಿಗಳು, ಕುಟುಂಬ ವರ್ಗದವರಿಗೆ ಈ ಅಗಲಿಕೆಯ ನೋವು ಸಹಿಸುವ ಶಕ್ತಿಯನ್ನು ಭಗವಂತನು ಕರುಣಿಸಲಿ. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ. **- ಬಿ.ವೈ. ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

ಸಮಾಚಾರ ಸಣ್ಣದಲ್ಲ

ಕೃಷಿ ಇಲಾಖೆ: ಆಕ್ಷೇಪಣೆಗಳಿಗೆ ಆಹ್ವಾನ

ಬಳ್ಳಾರಿ: ಕೃಷಿ ಇಲಾಖೆ ವತಿಯಿಂದ 2023-24 ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ಸಲ್ಲಿಸಿದ ಮುಂಗಾರು ಹಂಗಾಮಿನ ಬೆಳೆ ವಿಮೆ ಪ್ರಸ್ತಾವನೆಗಳು ಬೆಳೆ ಸಮೀಕ್ಷೆಯೊಂದಿಗೆ ಹೊಂದಾಣಿಕೆಯಾಗದೇ ಇರುವ ಕುರಿತು ವಿಮಾ ಸಂಸ್ಥೆಯವರಿಂದ ತಿರಸ್ಕೃತಗೊಂಡ ಪ್ರಸ್ತಾವನೆಗಳಿಗೆ ಆಕ್ಷೇಪಣೆ ಸಲ್ಲಿಸಬಹುದು ಎಂದು ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ. ಬಳ್ಳಾರಿ ತಾಲೂಕಿನಲ್ಲಿ 23 ಪ್ರಸ್ತಾವನೆ ಹಾಗೂ ಕುರುಗೋಡು ತಾಲೂಕಿನಲ್ಲಿ 3 ಪ್ರಸ್ತಾವನೆ ತಿರಸ್ಕೃತಗೊಂಡಿರುತ್ತವೆ. ತಿರಸ್ಕೃತಗೊಂಡ ರೈತರ ಪ್ರಸ್ತಾವನೆ ವಿವರಗಳನ್ನು ಈಗಾಗಲೇ ರೈತ ಸಂಪರ್ಕ ಕೇಂದ್ರಗಳಲ್ಲಿ ಪ್ರಕಟಿಸಲಾಗಿದೆ. ಹಾಗಾಗಿ ರೈತರು ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಮಾ.10 ರೊಳಗೆ ಸಲ್ಲಿಸಬೇಕು. ಮುಂದುವರೆದು ನಿಗದಿತ ಸಮಯದಲ್ಲಿ ಆಕ್ಷೇಪಣೆ ಸಲ್ಲಿಸದಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಅಸಿಂಧು ಎಂದು ಪರಿಗಣಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಳ್ಳಾರಿ ಪೊಲೀಸ್ ರನ್ ಮಾ.9ರಂದು

ಬಳ್ಳಾರಿ: ಕರ್ನಾಟಕ ರಾಜ್ಯ ಪೊಲೀಸ್ ರನ್-2025 ಕಾರ್ಯಕ್ರಮ ಅಂಗವಾಗಿ ನಮ್ಮ ನಮ್ಮೆಲ್ಲರ ಸದೃಢತೆ, ಡ್ರಗ್ಸ್ ಮುಕ್ತ ಕರ್ನಾಟಕ ನಿರ್ಮಾಣಕ್ಕಾಗಿ ಬಳ್ಳಾರಿ ಜಿಲ್ಲಾ ಪೊಲೀಸ್ ವತಿಯಿಂದ ಮಾ.9 ರಂದು ಬೆಳಗ್ಗೆ 7 ಗಂಟೆಗೆ ನಗರದ ಕನಕ ದುರ್ಗಮ್ಮ ದೇವಸ್ಥಾನದ ಆವರಣದಲ್ಲಿ ಬಳ್ಳಾರಿ ಪೊಲೀಸ್ ರನ್-2025 ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ವಿಜೇತರಿಗೆ ಆಕರ್ಷಕ ನಗದು ಬಹುಮಾನ ಮತ್ತು ಪ್ರಮಾಣ ಪತ್ರ ನೀಡಲಾಗುತ್ತದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ.ಶೋಭಾರಾಣಿ ವಿ.ಜೆ ತಿಳಿಸಿದ್ದಾರೆ. ಓಟವು ಕನಕದುರ್ಗಮ್ಮ ದೇವಸ್ಥಾನದ ಆವರಣದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತ, ಹೆಚ್.ಆರ್. ಗವಿಯಪ್ಪ ವೃತ್ತ, ಡಾ.ಬಿ.ಆರ್.ಅಂಬೇಡ್ಕರ್ ವೃತ್ತ, ವಾಲ್ಮೀಕಿ(ಎಸ್.ಪಿ) ವೃತ್ತ, ತಾಳೂರು ರಸ್ತೆ ಕ್ರಾಸ್ ಮೂಲಕ ಮರಳಿ ಕನಕದುರ್ಗಮ್ಮ ದೇವಸ್ಥಾನ ಆವರಣದವರೆಗೆ ನಡೆಯಲಿದೆ.

ಅಹವಾಲು ಸ್ವೀಕಾರ/ ಜನ ಸಂಪರ್ಕ ಸಭೆ

ಬಳ್ಳಾರಿ: ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಂದ ಜಿಲ್ಲೆಯ ವಿವಿಧ ತಾಲೂಕು ಕೇಂದ್ರಗಳಲ್ಲಿ ಸಾರ್ವಜನಿಕರು ವಿವಿಧ ಇಲಾಖೆಗಳಿಗೆ ಸಲ್ಲಿಸಿದ ಅರ್ಜಿಗಳನ್ನು ವಿಲೇ ಮಾಡದಿರುವ ಕುರಿತು ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ/ಜನ ಸಂಪರ್ಕ ಸಭೆ ಏರ್ಪಡಿಸಲಾಗಿದೆ ಎಂದು ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ ತಿಳಿಸಿದ್ದಾರೆ. ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ ಮಾರ್ಗದರ್ಶನದಲ್ಲಿ ಡಿಎಸ್‌ಪಿ ಆರ್.ವಸಂತ್‌ಕುಮಾರ್ ಮತ್ತು ಪೊಲೀಸ್ ನಿರೀಕ್ಷಕರಾದ ಸಂಗಮೇಶ್ ಇವರು ಸಂಡೂರು ಮತ್ತು ಕಂಪ್ಲಿ ತಾಲೂಕು ಕೇಂದ್ರಗಳಲ್ಲಿ ಅಹವಾಲು ಸ್ವೀಕರಿಸುವ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಲು ನಮೂನೆ/ಫಾರಂ ನಂ.1 ಮತ್ತು 2 ಗಳನ್ನು ಸಹ ನೀಡಲಾಗುವುದು. ಕುಂದು ಕೊರತೆಗಳಿರುವ ಸಾರ್ವಜನಿಕರು ದೂರುಗಳಿದ್ದಲ್ಲಿ ನಿಗದಿಪಡಿಸಿದ ದಿನದಂದು ಅರ್ಜಿ ನಮೂನೆಯಲ್ಲಿ ಅಹವಾಲು ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುಸ್ತಕದ ಅಂಗಡಿಗೆ ನುಗ್ಗಿದ ನಾಗರ ಹಾವು

ಹೂವಿನಹಡಗಲಿ: ತಾಲೂಕಿನ ಹೊಳಲು ಗ್ರಾಮದಲ್ಲಿ ಮಧ್ಯಾಹ್ನ ಬಸ್ ನಿಲ್ದಾಣದ ಹತ್ತಿರವಿರುವ ಚೈತ್ರಾ ಬುಕ್‌ಸ್ಟಾಲ್‌ಗೆ ದೊಡ್ಡ ನಾಗರ ಹಾವೊಂದು ನುಗ್ಗಿ ಕೆಲಹೊತ್ತು ಎಲ್ಲರನ್ನು ಭಯಭೀತರನ್ನಾಗಿಸಿತು. ಇದ್ದಕ್ಕಿದ್ದ ಹಾಗೆ ಹೊರಗಿನಿಂದ ಬಂದ ಹಾವು ಅಂಗಡಿ ಒಳಗೆ ನುಗ್ಗುತ್ತಿದ್ದ ಹಾಗೆ ನೋಡಿದ ಜನರು ಹಾವು ಹಾವು ಎಂದು ಕಿರುಚಿದರು. ಈವೇಳೆ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದ ಮಹಿಳೆಯರು ಕೂಡಲೆ ಟೇಬಲ್ ಏರಿ ನಿಂತರು. ಕೆಲಹೊತ್ತು ತನ್ನ ಹೆಡೆ ಬಿಚ್ಚಿ ಆಡತೊಡಗಿದ್ದ ಹಾವನ್ನು ನೋಡಲು ಅಂಗಡಿಯ ಮುಂದೆ ಜನ ಕಿಕ್ಕಿರಿದು ತುಂಬಿತ್ತು. ಈಸಮಯದಲ್ಲಿ ಹನುಮಂತ ಎಂಬ ಯುವಕ ಹಾವನ್ನು ಡಬ್ಬದಲ್ಲಿ ಕಳಿಸುವಲ್ಲಿ ಧೈರ್ಯ ಮೆರೆದನು. ನಂತರ ಸ್ಥಳಕ್ಕೆ ಬೂದನೂರು ಗ್ರಾಮದ ಉರಗ ಪ್ರೇಮಿ ನಾಗರಾಜ ಸ್ವಾಮಿ ಹಿರೇಮಠ ಇವರು ಹಾವನ್ನು ರಕ್ಷಣೆ ಮಾಡಿ ಚೀಲದಲ್ಲಿ ತುಂಬಿಕೊಂಡು ಕಾಡಿಗೆ ಬಿಡುವಲ್ಲಿ ಯಶಸ್ವಿಯಾದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಎಚ್.ಡಿ.ಕುಮಾರಸ್ವಾಮಿ} ಸಚಿವ

ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಮೀಸಲು ಕೊಟ್ಟು ಏನು ಉಪಯೋಗ? ಮೀಸಲು ಚರ್ಚೆಯನ್ನು ಮತ ಗಳಿಕೆಗಾಗಿ ನಡೆಸಬಾ ರದು. ಜನರಿಗೆ ಅಭಿವೃದ್ಧಿ ಬೇಕೇ ಹೊರತು ಮೀಸಲು ಮುಖ್ಯವಲ್ಲ. ಒಂದು ವೇಳೆ ಕೊಟ್ಟರೂ ಅಲ್ಲೂ ಪರ್ಸೆಂಟೇಜ್ ತೆಗೆದುಕೊ ಳ್ಳುತ್ತಾರೆ. ನಾನು ಎರಡು ಸಲ ಮುಖ್ಯ ಮಂತ್ರಿಯಾಗಿದ್ದಾಗ ಗುತ್ತಿಗೆದಾರ ರಿಗೆ ಪ್ರತಿ ತಿಂಗಳು ಹಣ ಬಿಡುಗಡೆ ಮಾಡುತ್ತಿದ್ದೆ.

ಬೆನ್ನುಹುರಿ ಅಪಘಾತ ನಿರ್ವಹಣೆ ಬಗ್ಗೆ ಅರಿವಿರಲಿ

ಬೆನ್ನು ಮೂಳೆ ಕ್ಷಯ ಲಕ್ಷಣ ಕಂಡರೆ ವೈದ್ಯರ ಬಳಿ ಸೂಕ್ತ ಚಿಕಿತ್ಸೆಗೆ ಮುಂದಾಗಿ: ಡಿಎಚ್‌ಒ ಡಾ.ಶಂಕರ್‌ನಾಯ್ಕ್

ಹೊಸಪೇಟೆ: ಬೆನ್ನುಹುರಿ ಅಪಘಾತದಿಂದ ನರಗಳಿಗೆ ಆಕಸ್ಮಿಕವಾಗಿ ಆಗುವ ಘಟನೆಗಳ ಮತ್ತು ಬೆನ್ನು ಮೂಳೆ ಕ್ಷಯ ಲಕ್ಷಣಗಳು ಪತ್ತೆಯಾದರೇ ವೈದ್ಯರ ಬಳಿ ಸೂಕ್ತ ಚಿಕಿತ್ಸೆಗೆ ಮುಂದಾಗಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶಂಕರ್‌ನಾಯ್ಕ್ ಹೇಳಿದರು.

ನಗರದ ತಾಲೂಕು ಆರೋಗ್ಯಾಧಿಕಾರಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಬೆನ್ನುಹುರಿ ಅಪಘಾತ ಮತ್ತು ನಿರ್ವಹಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು. ಮನುಷ್ಯನ ಬೆನ್ನಿನ ಭಾಗದಲ್ಲಿ ಮೆದುಳಿನಿಂದ ಗುದದ್ವಾರರವರೆಗೂ ಒಟ್ಟು 33 ಗಂಟುಗಳನ್ನು ಒಳಗೊಂಡಿರುತ್ತದೆ. ಮಧ್ಯಭಾಗದಲ್ಲಿ ಹಗ್ಗದ ರೀತಿಯಲ್ಲಿ ಹಾದು ಹೋಗುವ ನೋವನ್ನು ಬೆನ್ನುಹುರಿ ಎನ್ನುತ್ತೇವೆ.

ಈ ಮೂಳೆಗಳ ಮಧ್ಯಭಾಗದಲ್ಲಿ ಎರಡು ಮುಖ್ಯವಾದ ಜ್ಞಾನವಾಹಿ ಮತ್ತು ಕ್ರಿಯಾವಾಯಿ ನರಗಳಿದ್ದು ಇವು ಮೆದುಳಿನಿಂದ ದೇಹದ ಎಲ್ಲಾ ಭಾಗಗಳಿಗೂ ಸಂದೇಶ ರವಾನಿಸುವ ಮತ್ತು ಸ್ವೀಕರಿಸುವ ಕಾರ್ಯನಿರ್ವಹಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಈ ನರಗಳಿಗೆ ಆಕಸ್ಮಿಕವಾಗಿ ಆಗುವ ಘಟನೆಗಳಿಂದ ಮತ್ತು ಬೆನ್ನು ಮೂಳೆ ಕ್ಷಯ ಕಾಯಿಲೆಯಿಂದ ಬೆನ್ನುಹುರಿಗೆ ಆಘಾತವಾದಾಗ ಅಲ್ಲಿನ ಕೆಳಭಾಗದ ಮನುಷ್ಯನ ದೇಹದ ಎಲ್ಲಾ ಕಾರ್ಯಗಳು ಸ್ಥಗಿತವಾಗುತ್ತವೆ.

ನಗರದ ತಾಲೂಕು ಆರೋಗ್ಯಾಧಿಕಾರಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಬೆನ್ನುಹುರಿ ಅಪಘಾತ ಮತ್ತು ನಿರ್ವಹಣಾ ಶಿಬಿರವನ್ನು ಗಣ್ಯರು ಉದ್ಘಾಟಿಸಿದರು.

ಇದರಿಂದ ಬಳಲುವವರು ಮಾನಸಿಕ ಒತ್ತಡ ಅಥವಾ ಹಾಸಿಗೆ ಗಾಯ ಮೂತ್ರನಾಳದ ಸೋಂಕು ಕಾಯಿಲೆ ಜಿಗಿತನ ಊತ ಮತ್ತು ಮಲಬದ್ಧತೆ ಸಮಸ್ಯೆಗಳಿಂದ ಬಳಲುತ್ತಾರೆ ಎಂದರು.

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ ಸಹಯೋಗದಲ್ಲಿ ವಿಜಯನಗರ ಜಿಲ್ಲೆಯಲ್ಲಿ ಈ ಕಾಯಿಲೆಗೆ ಗುರಿಯಾಗಿರುವ ರೋಗಿಗಳು ಉಚಿತವಾಗಿ ಚಿಕಿತ್ಸೆಯನ್ನು ಪಡೆದುಕೊಂಡು ಉತ್ತಮವಾದ ಭವಿಷ್ಯ ಪಡೆದುಕೊಳ್ಳಬೇಕು. ಚಿಕಿತ್ಸೆಯಿಂದ ಯಾವುದೇ ತೊಂದರೆಗಳಾಗದಂತೆ ಚಿಕಿತ್ಸೆಯನ್ನು ಯಶಸ್ವಿಯಾಗಿ ನೀಡುತ್ತಾರೆ. ಮತ್ತು ಹಣಕಾಸಿನ ತೊಂದರೆ ತುಂಬಾ ಜನರಲ್ಲಿ ಕಂಡುಬರುವುದರಿಂದ ಈ ಸಂಸ್ಥೆ ಸಮಾಜ ಸೇವೆಯ ಮೂಲಕ ಉಚಿತವಾಗಿ ಚಿಕಿತ್ಸೆಯನ್ನು ನೀಡಲಾಗುವುದು ಎಂದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ ಮಾತನಾಡಿ, ಬೆನ್ನುಹುರಿ ಅಪಘಾತಕ್ಕೆಗೊಳಗಾದ ವ್ಯಕ್ತಿ ಪ್ರತಿ ಮೂರು ತಿಂಗಳಿಗೊಮ್ಮೆ ವೈದ್ಯಕೀಯ ಚಿಕಿತ್ಸೆ ಮಾಡಿಸಿ ವೈದ್ಯರ ಬಳಿ ಸೂಕ್ತ ಸಲಹೆಗಳನ್ನು ಪಡೆದುಕೊಳ್ಳಬೇಕು ಎಂದರು.

ಈ ವೇಳೆ ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ(ಎಪಿಡಿ) ಸಂಸ್ಥೆಯ ಮುಖ್ಯಸ್ಥರು, ವೈದ್ಯಾಧಿಕಾರಿಗಳು, ಆಶಾ ಮೇಲ್ವಿಚಾರಕರು ಹಾಗೂ ಆಶಾ ಕಾರ್ಯಕರ್ತೆಯರು ಸಿಬ್ಬಂದಿಗಳು ಇದ್ದರು.

> ಬೆನ್ನುಹುರಿ ಇರುವ ವ್ಯಕ್ತಿಗಳು ಮತ್ತು ಪೋಷಕರು ಜಾಗೃತಿ ವಹಿಸಬೇಕು. ವೈದ್ಯರ ಸಲಹೆಗಳನ್ನು ತಪ್ಪದೇ ಅನುಸರಿಸಬೇಕು. ಮೌಢ್ಯತೆಯಿಂದ ಅವೈಜ್ಞಾನಿಕ ಪದ್ಧತಿಗಳನ್ನು ಪಾಲಿಸುವುದು. ನಾಟಿ ಔಷಧಿಗಳನ್ನು ಬಳಸುವುದು ಕೈಬಿಡಬೇಕು. ನಿತ್ಯ ನಿಯಮಿತ ವ್ಯಾಯಾಮವನ್ನು ತಪ್ಪದೇ ಮಾಡಬೇಕು.
> – ಡಾ.ಬಸವರಾಜ, ತಾಲೂಕು ಆರೋಗ್ಯ ಅಧಿಕಾರಿ

> ಬೆನ್ನುಹುರಿ ಅಪಘಾತ ವ್ಯಕ್ತಿಗೆ ಕಾಯಿಲೆಯ ಲಕ್ಷಣಗಳು ಮತ್ತು ಅವರಿಗೆ ಅವಶ್ಯವಿರುವ ಆರೈಕೆ ಮತ್ತು ವೈದ್ಯಕೀಯ ನಿರ್ವಹಣೆ ಬಗ್ಗೆ ಅರಿವು ಮೂಡಿಸುವ ಉದ್ದೇಶ ಈ ಶಿಬಿರದಿಂದ ಆಗಲಿದೆ.
> – ಡಾ.ಶಂಕರ್‌ನಾಯ್ಕ್, ಡಿಎಚ್‌ಒ

ಅಂತರ ಜಿಲ್ಲಾ ಯುವ ವಿನಿಮಯ ಕಾರ್ಯಕ್ರಮದಲ್ಲಿ ಪ್ರೊ.ಎಂ.ಮುನಿರಾಜು

ಸಾಂಸ್ಕೃತಿಕ ಕಲೆಗಳು ವಿನಿಮಯವಾಗಲಿ

ಬಳ್ಳಾರಿ: ಶೈಕ್ಷಣಿಕ ರಂಗದಲ್ಲಿ ರಾಜ್ಯದೆಲ್ಲೆಡೆ ಇರುವ ವೈವಿಧ್ಯಮಯ ಸಾಂಸ್ಕೃತಿಕ ಕಲೆಗಳು ಯುವ ಸಮುದಾಯಕ್ಕೆ ವಿನಿಮಯವಾಗಬೇಕು ಎಂದು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಮುನಿರಾಜು ಹೇಳಿದರು.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಜೀವ ವಿಜ್ಞಾನ ಸಭಾಂಗಣದಲ್ಲಿ ಭಾರತ ಸರಕಾರ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯದ ಮೈ ಭಾರತ್- ನೆಹರು ಯುವ ಕೇಂದ್ರ, ಬಳ್ಳಾರಿ ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕಲ್ಯಾಣ ಘಟಕದ ಸಂಯುಕ್ತಾಶ್ರಯದಲ್ಲಿ ಬಳ್ಳಾರಿ ಮತ್ತು ತುಮಕೂರು ಜಿಲ್ಲೆಗಳಲ್ಲಿ ನಡೆಯಲಿರುವ 5 ದಿನಗಳ ''ಅಂತರ್ ಜಿಲ್ಲಾ ಯುವ ವಿನಿಮಯ'' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಜ್ಯವು ಹಲವಾರು ವೈವಿಧ್ಯಮಯ ಕಲೆಗಳ ತವರೂರಾಗಿದೆ. ನಮ್ಮಲ್ಲಿ ಪ್ರದೇಶವಾರು ವಿಭಿನ್ನ ಸಾಂಸ್ಕೃತಿಕ ಪರಂಪರೆಗಳನ್ನು ಕಾಣಬಹುದಾಗಿದ್ದು, ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ವರದಾನವಾಗಿವೆ ಎಂದರು. ದೇಶವು 2047ರ ಹೊತ್ತಿಗೆ ಶೇ.80 ಯುವಕರನ್ನು ಹೊಂದಲಿದೆ. ಯುವಜನರು ತಮ್ಮಲ್ಲಿರುವ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪ್ರತಿಭೆಗಳನ್ನು ವಿನಿಮಯ ಮಾಡಿಕೊಳ್ಳ ಬೇಕು ಎಂದು ತಿಳಿಸಿದರು.

ವಿಶ್ವವಿದ್ಯಾಯದ ಕುಲಸಚಿವ ಎಸ್.ಎನ್.ರುದ್ರೇಶ್ ಮಾತನಾಡಿ, ಉತ್ತರ ಕರ್ನಾಟಕವು ಜನಪದ ಕಲೆಗಳ ಬೀಡಾಗಿದೆ. ನಮ್ಮಲ್ಲಿಯ ದೇಸಿ ಕಲೆಗಳ ಕುರಿತು ಇಂದಿನ ಯುವಕರಿಗೆ ಅರಿವೇ ಇಲ್ಲ. ಅವುಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಜವಾಬ್ದಾರಿ ಯುವಜನತೆ ಮೇಲಿದೆ. ಶಿಕ್ಷಣದ ಜತೆಗೆ ಸಾಂಸ್ಕೃತಿಕ ಮೌಲ್ಯಗಳನ್ನು ನಾವು ರೂಢಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು.

5 ದಿನಗಳ ''ಅಂತರ್ ಜಿಲ್ಲಾ ಯುವ ವಿನಿಮಯ'' ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ನೆಹರು ಯುವ ಕೇಂದ್ರದ ಜಿಲ್ಲಾ ಅಧಿಕಾರಿಗಳಾದ ಮೊಂಟು ಪತ್ತಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿನಿಮಯ ಕಾರ್ಯಕ್ರಮದಲ್ಲಿ ಬಳ್ಳಾರಿ ವಿವಿಯಿಂದ 27 ವಿದ್ಯಾರ್ಥಿಗಳನ್ನು ತುಮಕೂರಿಗೆ ಹಾಗೂ ತುಮಕೂರು ವಿವಿಯಿಂದ 25 ವಿದ್ಯಾರ್ಥಿಗಳು ಬಳ್ಳಾರಿಯಲ್ಲಿ ಭಾಗವಹಿಸಿದ್ದಾರೆ.

ಈ ಸಂದರ್ಭದಲ್ಲಿ ವಿವಿಯ ವಿದ್ಯಾರ್ಥಿ ಕಲ್ಯಾಣ ಘಟಕ ನಿರ್ದೇಶಕ ಪ್ರೊ. ಶಶಿಕಾಂತ್ ಮಜಗಿ, ನೆಹರು ಯುವ ಕೇಂದ್ರ, ಕಾರ್ಯಕ್ರಮ ಅಧಿಕಾರಿ ರಾಮ್‌ರಾವ್ ಬಿರಾದಾರ್ ವೇದಿಕೆಯಲ್ಲಿದ್ದರು.

ನಾಟಕ ಹಾಗೂ ಪ್ರದರ್ಶನ ಕಲೆ ವಿಭಾಗದ ಡಾ. ಅಣ್ಣಾಜಿ ಕೃಷ್ಣಾರೆಡ್ಡಿ ತಂಡದಿಂದ ಸಂಗೀತ ಕಾರ್ಯಕ್ರಮ ಪ್ರಸ್ತುತಪಡಿಸಲಾಯಿತು. ಐದು ದಿನಗಳ ವಿನಿಮಯ ಕಾರ್ಯಕ್ರಮದಲ್ಲಿ ವಿವಿಧ ಸಾಂಸ್ಕೃತಿಕ ಪ್ರದರ್ಶನಗಳನ್ನು ವಿದ್ಯಾರ್ಥಿಗಳು ನೀಡಲಿದ್ದಾರೆ.

ಕಾರ್ಯಕ್ರಮವನ್ನು ಡಾ.ಶಶಿಧರ ಕೆಲ್ಲೂರು ನಿರೂಪಿಸಿದರು. ಈ ಸಂದರ್ಭದಲ್ಲಿ ವಿವಿಧ ನಿಕಾಯಗಳ ಡೀನರು, ವಿಭಾಗಗಳ ಮುಖ್ಯಸ್ಥರು, ಬೋಧಕರು, ಸಂಶೋಧನಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

> ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಕೌಶಲ ಆಧಾರಿತ ಶಿಕ್ಷಣ ಮಹತ್ವಪೂರ್ಣವಾಗಿದೆ. ಜನಪದ ಕಲೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು.
> – ಡಾ.ಎಚ್.ಸಿ ರಾಘವೇಂದ್ರ, ನಿಕಟಪೂರ್ವ ಸದಸ್ಯ

ವಿಜ್ಞಾನ, ತಂತ್ರಜ್ಞಾನದಿಂದ ಅಭಿವೃದ್ಧಿ

ಬಳ್ಳಾರಿ: ವಿಜ್ಞಾನ ಮತ್ತು ತಂತ್ರಜ್ಞಾನ ನಮ್ಮ ಜೀವನದಲ್ಲಿ ಬಹಳ ಪ್ರಮುಖವಾದದ್ದು, ವಿದ್ಯಾರ್ಥಿಗಳು ದೈನಂದಿನ ಜೀವನದಲ್ಲಿ ಅಳವಡಿಸಿಕೊಂಡರೆ ದೇಶದ ಅಭಿವೃದ್ಧಿಯು ಹೊಂದುತ್ತದೆ ಎಂದು ಜಿಲ್ಲಾ ಪಂಚಾಯಿತಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್ ಹೇಳಿದರು.

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಹಾಗೂ ಜಿಲ್ಲಾ ಪಂಚಾಯಿತಿ ಸಹಯೋಗದಲ್ಲಿ ಮೋಕಾದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ 2025 ಕಾರ್ಯಕ್ರಮವನ್ನು ಸಿ.ವಿ.ರಾಮನ್ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ದಿನನಿತ್ಯ ಜೀವನದಲ್ಲಿ ವಿಜ್ಞಾನದ ಮಹತ್ವವನ್ನು ಅರಿತು ಅನೇಕ ಮಹಾನ್ ವಿಜ್ಞಾನಿಗಳು ಸಾಧನೆಗೈದಿದ್ದಾರೆ. ನಾವು ಸಹ ನಮ್ಮ ದಿನನಿತ್ಯದ ಜೀವನದಲ್ಲಿ ವಿಜ್ಞಾನದ ಮಹತ್ವ ಅಳವಡಿಸಿಕೊಳ್ಳಬೇಕು ಎಂದರು.

ಕೃತಕ ಬುದ್ಧಿಮತ್ತೆ, ರೋಬೋಟಿಕ್ಸ್, ಸಾಮಾಜಿಕ ಜಾಲತಾಣಗಳಾದ ಯುಟ್ಯೂಬ್, ಇನ್‌ಸ್ಟಾಗ್ರಾಮ್‌ನಲ್ಲಿ ಸಿಗುವಂತಹ ವಿಜ್ಞಾನದ ಮಹತ್ವದ ಮಾಹಿತಿಗಳನ್ನು ಬಳಸಿಕೊಂಡು ಉತ್ತಮ ವಿದ್ಯಾಭ್ಯಾಸದ ಕಡೆ ಗಮನ ನೀಡಬೇಕು. ವಿಜ್ಞಾನದಿಂದ ವೈಯುಕ್ತಿಕ ಅಭಿವೃದ್ಧಿ ಅಲ್ಲದೆ ದೇಶದ ಅಭಿವೃದ್ಧಿಯು ಸಹ ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಸರಕಾರದ ಆದೇಶದಂತೆ ವಿಜ್ಞಾನ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು.

ಸಂಪನ್ಮೂಲ ವ್ಯಕ್ತಿಗಳಾದ ಎಚ್ ಪೀರ್ ಭಾಷಾ ಅವರು ಮಾತನಾಡಿ, ವಿಜ್ಞಾನ ತಂತ್ರಜ್ಞಾನ ಬದುಕನ್ನು ಹಸನಗೊಳಿಸುತ್ತದೆ. ಸಿ.ವಿ.ರಾಮನ್ ಅವರ ಜೀವನ ಅವರ ಬಾಲ್ಯ ವಿದ್ಯಾಭ್ಯಾಸದ ಬಗ್ಗೆ ವಿವರವಾಗಿ ಪಿಪಿಟಿ ಮುಖಾಂತರ ತಿಳಿಸಿದರು.

ಈ ಸಂದರ್ಭದಲ್ಲಿ ಗಣಿತ ವಿಷಯದ ಪರಿವೀಕ್ಷಕರಾದ ಬಸವರಾಜ್, ನೋಡಲ್ ಅಧಿಕಾರಿಗಳಾದ ರಾಮಚಂದ್ರರೆಡ್ಡಿ.ಜಿ ಶಾಲಾ ಶಿಕ್ಷಕರು, ಶಾಲಾ ಉಪಸ್ಥಿತರಿದ್ದರು.



ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ

ಪ್ರೌಢಶಾಲೆಯಲ್ಲಿ ಗುರುವಾರದಂದು 2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪರೀಕ್ಷಾ ಪೂರ್ವ ತರಬೇತಿ ಕಾರ್ಯಾಗಾರ ನಡೆಯಿತು.

ಬಳ್ಳಾರಿ: ವಿದ್ಯಾರ್ಥಿ ಜೀವನದಲ್ಲಿ ಎಸ್‌ಎಸ್‌ಎಲ್‌ಸಿ ಒಂದು ಮಹತ್ವದ ಘಟ್ಟವಾಗಿದ್ದು, ಮಕ್ಕಳು ಪರೀಕ್ಷೆಯ ಬಗ್ಗೆ ಗೊಂದಲ, ಭಯ ಇಲ್ಲದೇ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಹೇಳಿದರು.

ಕುರುಗೋಡು ತಾಪಂ, ಬಾದನಹಟ್ಟಿ ಗ್ರಾಪಂ ಇವರ ಆಶ್ರಯದಲ್ಲಿ ಬಾದನಹಟ್ಟಿ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಗುರುವಾರದಂದು 2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪರೀಕ್ಷಾ ಪೂರ್ವ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಸರಕಾರವು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿ, ಸಾಕಷ್ಟು ಅನುದಾನ ಮತ್ತು ವಿನೂತನ ಕಾರ್ಯಕ್ರಮಗಳನ್ನು ಜಾರಿ ಮಾಡಿದೆ. ಶಿಕ್ಷಕರು ಮಕ್ಕಳನ್ನು ಸಮರ್ಥವಾಗಿ ಹಾಗೂ ಸಮರ್ಪಕವಾಗಿ ಪರೀಕ್ಷೆಗಳನ್ನು ಎದುರಿಸಲು ಅವರಲ್ಲಿ ಆತ್ಮವಿಶ್ವಾಸ ಮೂಡಿಸಬೇಕು ಎಂದು ತಿಳಿಸಿದರು.

ಶಿಕ್ಷಕರು ಶಾಲೆಯ ಪ್ರತಿ ಮಗುವನ್ನು ತಮ್ಮ ಸ್ವಂತ ಮಕ್ಕಳಂತೆ ಕಾಣಬೇಕು. ಮಕ್ಕಳ ಮೂಲಭೂತ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ವಿದ್ಯಾರ್ಥಿಗಳಲ್ಲಿ ಭರವಸೆ ಮೂಡಿಸುವ, ಶಕ್ತಿ ತುಂಬುವ ಕಾರ್ಯವನ್ನು ಸರಕಾರದಿಂದ ವಿವಿಧ ಕಾರ್ಯಕ್ರಮಗಳ ಮೂಲಕ ಮಾಡಲಾಗುತ್ತಿದೆ ಎಂದರು.

ಶೈಕ್ಷಣಿಕವಾಗಿ ಬೆಳೆಯಲು ಪ್ರಾಥಮಿಕ ಹಂತದಿಂದ ಪ್ರತಿ ಮಗು ಉತ್ತಮ ಓದು ಬರಹ ಕಲಿಯಬೇಕು. ಅಂದಾಗ ಮಾತ್ರ ಸಾಧನೆಯ ಗುರಿ ತಲುಪಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಹತ್ತನೇಯ ವರ್ಗದ ವಿದ್ಯಾರ್ಥಿ-ವಿದ್ಯಾರ್ಥಿನೀಯರು ತಮ್ಮ ಆತಂಕ, ಆಕಾಂಕ್ಷೆ-ಗೊಂದಲಗಳ ಕುರಿತು ಜಿಪಂ ಸಿಇಒ ಅವರೊಂದಿಗೆ ಸಂವಾದ ನಡೆಸಿದರು.

ಈ ಸಂದರ್ಭದಲ್ಲಿ ಕುರುಗೋಡು ತಾಪಂ ಕಾರ್ಯನಿರ್ವಾಹಕ ಅಧಿಕಾರಿ, ಕೆ.ವಿ.ನಿರ್ಮಲ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಹಾಯಕ ನಿರ್ದೇಶಕ ಪಿ.ಶಿವರಾಮರೆಡ್ಡಿ, ತಾಲೂಕು ಯೋಜನಾಧಿಕಾರಿ ರಾಧಿಕ, ಪಂಚಾಯಿತಿ ರಾಜ್ ಅಭಿವೃದ್ಧಿಯ ಸಹಾಯಕ ನಿರ್ದೇಶಕ ಅನೀಲ್ ಕುಮಾರ್ ಸೇರಿದಂತೆ ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ನರೇಗಾ ಸಿಬ್ಬಂದಿಯವರು ಹಾಗೂ ತಾಲ್ಲೂಕು ಪಂಚಾಯತ್ ಸಿಬ್ಬಂದಿ ಹಾಜರಿದ್ದರು.

ಗರ್ಭಿಣಿ ಅವಧಿಯಲ್ಲಿ ಮಾನಸಿಕ ಒತ್ತಡ ಬೇಡ

ಬಳ್ಳಾರಿ: ಗರ್ಭಿಣಿ ಮಹಿಳೆಯರು ಗರ್ಭಿಣಿ ಅವಧಿಯಲ್ಲಿ ಯಾವುದೇ ರೀತಿಯ ಒತ್ತಡಕ್ಕೆ ಒಳಗಾಗಬಾರದು. ಗಂಡಾಂತರಕಾರಿ ಚಿಹ್ನೆಗಳಿದ್ದಲ್ಲಿ ಹೆರಿಗೆಯ 3 ದಿನ ಮೊದಲು ಸರಕಾರಿ ಆಸ್ಪತ್ರೆಗಳಲ್ಲಿ ದಾಖಲಾಗುವ ಮೂಲಕ ವೈದ್ಯರ ನಿಗಾವಣೆಯಲ್ಲಿದ್ದುಕೊಂಡು ಸರಳ ಹೆರಿಗೆಗೆ ಸಹಕರಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಹೇಳಿದರು.

ಬಳ್ಳಾರಿ ತಾಲೂಕಿನ ಹಡ್ಲಿಗಿ ಗ್ರಾಮದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕುಟುಂಬಗಳು ಹೆಚ್ಚು ವಾಸಿಸುವ ಸ್ಥಳಗಳಿಗೆ ತೆರಳಿ ಕಾಲುಬಾವು ಕಂಡುಬಂದ ತೊಡಕಿನ ಗರ್ಭಿಣಿಯನ್ನು ಗುರಿತಿಸಿ ತಾಯಿ ಕಾರ್ಡ್ ಇತರೆ ದಾಖಲಾತಿ ಪರಿಶೀಲಿಸಿ ಕುಟುಂಬದ ಸದಸ್ಯರೊಂದಿಗೆ ಮಾತನಾಡಿದರು.

ಗರ್ಭಿಣಿಯಲ್ಲಿ ಅಪಾಯಕಾರಿ ಚಿಹ್ನೆಗಳು ಕಂಡುಬಂದಲ್ಲಿ ಹೆರಿಗೆಯ 3 ದಿನ ಪೂರ್ವದಲ್ಲಿ ಆಸ್ಪತ್ರೆಗೆ ದಾಖಲಿಸುವ ಜೊತೆಗೆ ತಮ್ಮ ಮನೆ ಮಗಳು ಅಥವಾ ತಮ್ಮ ಮನೆಯ ಸೊಸೆ ಸಂತಸದಿಂದ ನವಜಾತ ಶಿಶುವಿನೊಂದಿಗೆ ಮನೆಗೆ ತೆರಳುವ ಅವಕಾಶಕ್ಕೆ ಕೈಗೂಡಿಸಬೇಕು ಎಂದು ವಿನಂತಿಸಿದರು.

ಚೊಚ್ಚಲು ಗರ್ಭಿಣಿ, ಎತ್ತರ ಕಡಿಮೆ, ಅಧಿಕ ರಕ್ತದೊತ್ತಡ, ರಕ್ತದಲ್ಲಿ ಕಬ್ಬಿಣಾಂಶ ಕೊರತೆ, ಅವಳಿ-ಜವಳಿ ಗರ್ಭಿಣಿ, ವಿವಾಹವಾಗಿ ಐದಕ್ಕಿಂತ ಹೆಚ್ಚು ವರ್ಷಗಳ ನಂತರ ಗರ್ಭಿಣಿಯಾಗಿರುವುದು, ಮೊದಲ ಹೆರಿಗೆ ಸಿಸೇರಿಯನ್ ಮುಂತಾದ ಕಾರಣಗಳಿದ್ದರೆ ಆಯಾ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕ ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಿಸಬೇಕು ಎಂದರು.

ಹಡ್ಲಿಗಿ ಗ್ರಾಮದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕುಟುಂಬಗಳು ಹೆಚ್ಚು ವಾಸಿಸುವ ಸ್ಥಳಗಳಿಗೆ ತೆರಳಿ ಕಾಲುಬಾವು ಕಂಡುಬಂದ ತೊಡಕಿನ ಗರ್ಭಿಣಿಯನ್ನು ಗುರಿತಿಸಿ ಡಾ.ಯಲ್ಲಾ ರಮೇಶ್ ಬಾಬು ತಾಯಿ ಕಾರ್ಡ್ ದಾಖಲಾತಿ ಪರಿಶೀಲಿಸಿದರು.

> ಗರ್ಭಿಣಿ ಮಹಿಳೆಯರು ತನ್ನ ಕುಟುಂಬದ ಆಗುಹೋಗುಗಳನ್ನು ಶಾಂತಚಿತ್ತದಿಂದ ನಿಭಾಯಿಸುವ ಜತೆ ಜತೆಗೆ ಕುಟುಂಬದ ಸದಸ್ಯರು ದಿನತುಂಬುವ ಹಂತದಲ್ಲಿರುವ ಗರ್ಭಿಣಿಯರಿಗೆ ಯಾವುದೇ ಒತ್ತಡ ಅಥವಾ ಒತ್ತಡದ ಪರಿಸ್ಥಿತಿ ತರದಂತೆ ಸರಳ ಹೆರಿಗೆಗೆ ಕೈಜೋಡಿಸಬೇಕು.
> – ಡಾ.ಯಲ್ಲಾ ರಮೇಶ್ ಬಾಬು, ಕಲ್ಯಾಣಾಧಿಕಾರಿ

ವೈದ್ಯರ ಸಲಹೆಯಂತೆ ಉಚಿತವಾಗಿ ನೀಡುವ ಕಬ್ಬಿಣಾಂಶ ಮಾತ್ರೆಗಳನ್ನು ಪ್ರತಿದಿನ ಒಂದರಂತೆ ಕನಿಷ್ಟ 180 ಮಾತ್ರೆ ಮತ್ತು ಒಂದು ವೇಳೆ ರಕ್ತಹೀನತೆಯ ಪ್ರಮಾಣ ತೀವ್ರವಾಗಿದ್ದಲ್ಲಿ ದಿನಕ್ಕೆ 2 ರಂತೆ 360 ಮಾತ್ರೆಗಳನ್ನು 6 ತಿಂಗಳ ಅವಧಿಯಲ್ಲಿ ಸೇವಿಸುವಂತೆ ಇದರ ಜೊತೆಯಲ್ಲಿ ದೈಹಿಕವಾಗಿ ಸದೃಢವಾಗಿರಲು ಕ್ಯಾಲ್ಸಿಯಮ್ ಮಾತ್ರೆಗಳನ್ನು ಸಹ ನುಂಗುವಂತೆ ವಿನಂತಿಸಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಎಚ್ ದಾಸಪ್ಪನವರ, ಆಶಾಕಾರ್ಯಕರ್ತೆಯರಾದ ಗಂಗಮ್ಮ, ಶಶಿಕಲಾ, ರತ್ನಮ್ಮ ಸೇರಿದಂತೆ ಸಿಬ್ಬಂದಿಯವರು ತಾಯಂದಿರು ಹಾಜರಿದ್ದರು.

ಜಗದ್ಗುರು ರೇಣುಕಾಚಾರ್ಯ ಜಯಂತಿ ಮಾ.12ರಂದು

ಬಳ್ಳಾರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮವನ್ನು ಮಾ.12 ರಂದು ಸಂಜೆ 06.30 ಗಂಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಲಾಗಿದೆ. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಕಾರ್ಯಕ್ರಮ ಉದ್ಘಾಟಿಸುವರು.ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಈ.ತುಕಾರಾಂ, ಕೆ. ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಭಾಗವಹಿಸುವರು.

ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅರ್ಜಿ

ಹೊಸಪೇಟೆ: ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಮಲಾಪುರ ಪ್ರಾದೇಶಿಕ ಕೇಂದ್ರದಿಂದ 2024-25ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಗೆ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಿಗೆ ಸ್ಥಳದಲ್ಲಿಯೇ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಜಯನಗರ ಜಿಲ್ಲೆಯ ಪ್ರಾದೇಶಿಕ ನಿರ್ದೇಶಕ ಪ್ರಶಾಂತ್.ಎಂ ತಿಳಿಸಿದ್ದಾರೆ. ಸಾಂಪ್ರದಾಯಿಕವಾಗಿ ಕಾಲೇಜಿಗೆ ತೆರಳದೇ ಮನೆಯಲ್ಲೇ ಕುಳಿತು, ಸರಕಾರಿ, ಅರೆಸರಕಾರಿ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಾ ದೂರಶಿಕ್ಷಣ ವ್ಯವಸ್ಥೆಯಡಿ ಶಿಕ್ಷಣ ಪಡೆಯಲು ಈ ಭಾಗದ ಆಸಕ್ತ ವಿದ್ಯಾರ್ಥಿ ಮತ್ತು ಪೋಷಕರಿಗೆ ಅನುಕೂಲವಾಗುವ ದೃಷ್ಟಿಯಿಂದ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತನ್ನದೇ ಆದ ಪ್ರಾದೇಶಿಕ ಕೇಂದ್ರವನ್ನು ನೂತನವಾಗಿ ಹೊಸಪೇಟೆಯ ಕಮಲಾಪುರದಲ್ಲಿ ಪ್ರಾರಂಭಿಸಿರುತ್ತದೆ. ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಹಾಕಿಕೊಂಡು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹೊಸಪೇಟೆಯಲ್ಲಿ ಕಮಲಾಪುರದ ಪ್ರಾದೇಶಿಕ ಕೇಂದ್ರ ಕಚೇರಿಗೆ ಭೇಟಿ ನೀಡಿ, ನಿಗದಿತ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಿ, ಅಗತ್ಯ ದಾಖಲಾತಿಗಳ ನಕಲು ಪ್ರತಿಗಳನ್ನು ಪ್ರಾದೇಶಿಕ ಕೇಂದ್ರ ಕಚೇರಿಯಲ್ಲಿ ಸಲ್ಲಿಸಿ ಪ್ರವೇಶಾತಿಯನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಪ್ರವೇಶಕ್ಕೆ ಮಾ.31 ರಂದು ಕೊನೆ ದಿನ, ವಿದ್ಯಾರ್ಥಿಗಳು ಮತ್ತು ಪೋಷಕರು ಸದುಪಯೋಗ ಪಡೆದುಕೊಳ್ಳಲು ತಿಳಿಸಲಾಗಿದೆ.

ಬೇಸಿಗೆಗೆ ನೀರಿನ ಅಭಾವ ಆಗದಿರಲಿ

ಬಳ್ಳಾರಿ: ಬೇಸಿಗೆ ಕಾಲ ಆರಂಭವಾಗಿರುವುದರಿಂದ ಕುರುಗೋಡು ತಾಲೂಕಿನ ಎಲ್ಲಾ ಕೆರೆಗಳಲ್ಲಿ ಕುಡಿಯುವ ನೀರು ಸಂಗ್ರಹಣೆ ಮಾಡಿಕೊಳ್ಳಬೇಕು. ಬೇಸಿಗೆ ಸಂದರ್ಭದಲ್ಲಿ ಕುಡಿಯುವ ನೀರು ಅಭಾವವಾಗದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಹೇಳಿದರು.

ಜಿಲ್ಲೆಯ ಕುರುಗೋಡು ತಾಲೂಕು ಪಂಚಾಯಿತಿಗೆ ಭೇಟಿ ನೀಡಿ ವಿವಿಧ ವಿಷಯಗಳ ಕುರಿತು ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು.

ತಾಲೂಕು ಭಾಗದಲ್ಲಿ ಸ್ವಚ್ಛಭಾರತ್ ಮಿಷನ್ ಯೋಜನೆ ಕುರಿತು ಮಾಹಿತಿ ಪಡೆದುಕೊಂಡ ಅವರು, ಸಂಪೂರ್ಣವಾಗಿ ಅನುಷ್ಠಾನಗೊಳಿಸಬೇಕು ಎಂದು ಸೂಚಿಸಿದರು. ಮುಂದಿನ ದಿನಗಳಲ್ಲಿ ನರೇಗಾ ಯೋಜನೆಯು ಅನುಷ್ಠಾನಗೊಳ್ಳಲಿದೆ. ಇದಕ್ಕೆ ಬೇಕಾದ ಸೂಕ್ತ ಕಾರ್ಯಯೋಜನೆ ರೂಪಿಸಿಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಜಿಲ್ಲೆಯ ಕುರುಗೋಡು ತಾಲೂಕು ಪಂಚಾಯಿತಿ ಗೆ ಭೇಟಿ ನೀಡಿ ವಿವಿಧ ವಿಷಯಗಳ ಕುರಿತು ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಸಭೆಯಲ್ಲಿ ತೆರಿಗೆ ವಸೂಲಾತಿ, ವಸತಿ ಯೋಜನೆ, ಎನ್‌ಆರ್‌ಎಲ್‌ಎಂ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸಿ ಮಾಹಿತಿ ಪಡೆದುಕೊಂಡರು.

ಈ ಸಂದರ್ಭದಲ್ಲಿ ಕುರುಗೋಡು ತಾಪಂ ಕಾರ್ಯನಿರ್ವಾಹಕ ಅಧಿಕಾರಿ, ಕೆ.ವಿ.ನಿರ್ಮಲ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಹಾಯಕ ನಿರ್ದೇಶಕ ಪಿ.ಶಿವರಾಮರೆಡ್ಡಿ, ತಾಲ್ಲೂಕು ಯೋಜನಾಧಿಕಾರಿ ರಾಧಿಕ, ಪಂಚಾಯತ್ ರಾಜ್ ಅಭಿವೃದ್ಧಿಯ ಸಹಾಯಕ ನಿರ್ದೇಶಕ ಅನೀಲ್ ಕುಮಾರ್ ಸೇರಿದಂತೆ ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಾಲೂಕು ನರೇಗಾ ಸಿಬ್ಬಂದಿಯವರು ಹಾಗೂ ತಾಲೂಕು ಪಂಚಾಯಿತಿ ಸಿಬ್ಬಂದಿ ಹಾಜರಿದ್ದರು.

ಹಲವೆಡೆ ನಾಳೆ ವಿದ್ಯುತ್ ವ್ಯತ್ಯಯ

ಬಳ್ಳಾರಿ: ಬಳ್ಳಾರಿ ಗ್ರಾಮೀಣ ಜೆಸ್ಕಾಂನ ಅಲ್ಲೀಪುರ ಸ್ವೀಕರಣ ಕೇಂದ್ರದ ಎಫ್-37 ಮತ್ತು ಎಫ್-38 ಕೈಗಾರಿಕಾ ಫೀಡರ್‌ಗಳ ಹೆಚ್ಚುವರಿ ಭಾರವನ್ನು ಎಫ್-71 ಹರಗಿನದೋಣಿ ಎನ್.ಜೆ.ವೈ ಫೀಡರ್ ಮೇಲೆ ವರ್ಗಾಹಿಸುವ ಕಾಮಗಾರಿ ತುರ್ತಾಗಿ ಕೈಗೊಳ್ಳುತ್ತಿರುವುದರಿಂದ ಮಾ.8 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 3 ಗಂಟೆಯವರೆಗೆ ವಿವಿಧ 11ಕೆ.ವಿ ಮಾರ್ಗಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಎಫ್-32 ಐ.ಪಿ ಸೆಟ್ ಫೀಡರ್ ಮಾರ್ಗದ ಬೆಳಗಲ್ಲು, ಬೆಳಗಲ್ಲು ತಾಂಡ, ಜಾನೆಕುಂಟೆ, ಜಾನೆಕುಂಟೆ ತಾಂಡ, ಹರಗಿನದೋಣಿ, ಅಲ್ಲೀಪುರ, ಆಲದಹಳ್ಳಿ, ಕೃಷಿ ಪ್ರದೇಶಗಳು. ಎಫ್-37 ಬೆಳಗಲ್ಲು ತಾಂಡ ಕೈಗಾರಿಕೆ ಪ್ರದೇಶ ಫೀಡರ್ ಮಾರ್ಗದ ಬೆಳಗಲ್ಲು ಗ್ರಾಮ, ಬೆಳಗಲ್ಲು ತಾಂಡ ಕೈಗಾರಿಕೆ ಪ್ರದೇಶ. ಎಫ್-38 ಬೆಳಗಲ್ಲು ತಾಂಡ ಕೈಗಾರಿಕೆ ಪ್ರದೇಶ ಫೀಡರ್ ಮಾರ್ಗದ ಬೆಳಗಲ್ಲು ಬೆಳಗಲ್ಲು ತಾಂಡ, ಜಾನೆಕುಂಟೆ, ಜಾನೆಕುಂಟೆ ತಾಂಡ, ಹರಗಿನದೋಣಿ ಗ್ರಾಮ. ಎಫ್-71 ಹರಗಿನದೋಣಿ ಎನ್.ಜೆ.ವೈ ಫೀಡರ್ ಮಾರ್ಗದ ಬೆಳಗಲ್ಲು, ಬೆಳಗಲ್ಲು ತಾಂಡ, ಜಾನೆಕುಂಟೆ, ಜಾನೆಕುಂಟೆ ತಾಂಡ, ಹರಗಿನದೋಣಿ, ಹೊನ್ನಾಳ್ಳಿ, ಹೊನ್ನಳ್ಳಿ ತಾಂಡ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಹಾಗೂ ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಏಕದಿನ ಕ್ರಿಕೆಟ್‌ಗೆ ಮುಷ್ಫಿಕರ್ ವಿದಾಯ

ಕಾಬೂಲ್: 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಸೆಮಿಫೈನಲ್‌ಗೆ ಅರ್ಹತೆ ಪಡೆಯುವಲ್ಲಿ ಬಾಂಗ್ಲಾದೇಶ ತಂಡ ವಿಫಲವಾದ ಬೆನ್ನಲ್ಲೆ ಬಾಂಗ್ಲಾ ವಿಕೆಟ್ ಕೀಪರ್ ಮುಷ್ಫಿಕರ್ ರಹೀಮ್ ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಭಾರತ ಹಾಗೂ ನ್ಯೂಜಿಲೆಂಡ್ ವಿರುದ್ಧದ ಪಂದ್ಯಗಳಲ್ಲಿ ರಹೀಮ್ ಬ್ಯಾಟಿಂಗ್ ವೈಫಲ್ಯ

ಅನುಭವಿಸಿ ದ್ದರಲ್ಲದೆ, ಕೇವಲ ಎರಡು ರನ್ ಮಾತ್ರ ಗಳಿಸಿದ್ದರು. 'ಕಳೆದ ಎರಡು ವಾರಗಳ ಕಾಲ ಯೋಚಿಸಿದ ನಂತರ, ಈ ನಿರ್ಧಾರವನ್ನು ತೆಗೆದುಕೊಂಡಿದ್ದೇನೆ' ಎಂದು ಅವರು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಬರೆದಿದ್ದಾರೆ. ಜಿಂಬಾಬ್ವೆ ವಿರುದ್ಧ 2005ರಲ್ಲಿ ಹರಾರೆಯಲ್ಲಿ ಮುಷ್ಫಿಕರ್ ರಹೀಮ್ ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಅಂದಿನಿಂದ ಇಲ್ಲಿಯವರೆಗೂ ಅವರು 19 ವರ್ಷಗಳ ಕಾಲ ಏಕದಿನ ಕ್ರಿಕೆಟ್‌ನಲ್ಲಿ ಸಕ್ರಿಯರಾಗಿದ್ದರು. 2022ರಲ್ಲಿ ಅವರು ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ಗೂ ವಿದಾಯ ಹೇಳಿದ್ದರು. ಹಾಗಾಗಿ ಇದೀಗ ಅವರು ಬಾಂಗ್ಲಾದೇಶ ತಂಡದ ಪರ ಟೆಸ್ಟ್ ಕ್ರಿಕೆಟ್‌ಗೆ ಮಾತ್ರ ಲಭ್ಯರಾಗಿದ್ದಾರೆ.

ಮ್ಯಾಟ್ ಹೆನ್ರಿ ಗಾಯಾಳು

ದುಬೈ: ಭಾರತ ವಿರುದ್ಧದ ಭಾನುವಾರ ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯ ಆಡಲಿರುವ ನ್ಯೂಜಿಲೆಂಡ್ ತಂಡಕ್ಕೆ ದೊಡ್ಡ ಆಘಾತವೊಂದು ಎದುರಾಗಿದೆ. ತಂಡದ ಪ್ರಧಾನ ವೇಗಿ ಮ್ಯಾಟ್ ಹೆನ್ರಿ ಗಾಯದಿಂದ ಫೈನಲ್ ಪಂದ್ಯ ಆಡುವುದು ಅನುಮಾನ ಎನ್ನಲಾಗಿದೆ. ಬುಧವಾರ ಲಾಹೋರ್‌ನಲ್ಲಿ ನಡೆದಿದ್ದ ದಕ್ಷಿಣ ಆಫ್ರಿಕಾ



ನಡುವಿನ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಫೀಲ್ಡಿಂಗ್ ನಡೆಸುವ ವೇಳೆ ಮ್ಯಾಟ್ ಹೆನ್ರಿ ಭುಜದ ನೋವಿಗೆ ತುತ್ತಾಗಿದ್ದರು. ಗಾಯದಿಂದ ತಮ್ಮ 10 ಓವರ್‌ಗಳನ್ನು ಪೂರ್ಣಗೊಳಿಸಲು ಅವರಿಗೆ ಸಾಧ್ಯವಾಗದೆ, ಕೇವಲ 7 ಓವರ್ ಬೌಲಿಂಗ್ ಮಾಡಿ 2 ವಿಕೆಟ್ ಪಡೆದಿದ್ದರು. ಪಂದ್ಯದ ಬಳಿಕ ಮಾತನಾಡಿದ ನಾಯಕ ಮಿಚೆಲ್ ಸ್ಯಾಂಟ್ನರ್, ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯಕ್ಕೂ ಮುನ್ನ ಮ್ಯಾಟ್ ಹೆನ್ರಿ ಗಾಯಕ್ಕೆ ತುತ್ತಾಗಿರುವುದು ನಿಜಕ್ಕೂ ಬೇಸರದ ಸಂಗತಿ. ಅವರ ಭುಜದ ನೋವನ್ನು ಅವಲೋಕಿಸಲಾಗುತ್ತದೆ. ಸದ್ಯದ ಸ್ಥಿತಿ ನೋಡುವಾಗ ಗಾಯ ಗಂಭೀರವಾದಂತೆ ತೋರುತಿಲ್ಲ, ಒಂದೆರಡು ದಿನ ಕಾದು ನೋಡಬೇಕು' ಎಂದು ಸ್ಯಾಂಟ್ನರ್ ಹೇಳಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಮಹಿಳಾ ಪ್ರೀಮಿಯರ್ ಲೀಗ್ | ಯುಪಿ, ಮುಂಬೈ ವಿರುದ್ಧದ ಪಂದ್ಯ ಗೆಲ್ಲುವ ಅನಿವಾರ್ಯತೆ

ಮಂದಾನ ಬಳಗದ ಹಾದಿ ದುರ್ಗಮ

ದೆಹಲಿ: ಪ್ರಸ್ತುತ ನಡೆಯುತ್ತಿರುವ 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ (ಡಬ್ಲ್ಯೂಪಿಎಲ್) ರಾಯಲ್ ಚಾಲೆಂಜಸ್‌ರ್‌ನ ಮುಂದಿನ ಹಾದಿ ದುರ್ಗಮವಾಗಿರುವುದಂತೂ ಸ್ಪಷ್ಟ. ಕಳೆದ ವರ್ಷದ ಚಾಂಪಿಯನ್ ತಂಡವಾಗಿರುವ ಸ್ಮೃತಿ ಮಂದಾನಾ ನಾಯಕತ್ವದ ಬೆಂಗಳೂರು ತಂಡವು ಈ ವರ್ಷವೂ ಟ್ರೋಫಿ ಗೆಲ್ಲುವ ಫೇವರಿಟ್ ತಂಡ ಎಂದೇ ಆರಂಭದ ಎರಡೂ ಪಂದ್ಯಗಳು ಮುಗಿದಾಗ ಕ್ರಿಕೆಟ್ ಪ್ರೇಮಿಗಳೆಲ್ಲರೂ ಅಂದುಕೊಂಡಿದ್ದರು. ಆದರೆ ಆ ನಂತರದ ಆರ್‌ಸಿಬಿ ತಂಡಕ್ಕೆ ಎದುರಾದದ್ದು ಅನಿರೀಕ್ಷಿತ ಆಘಾತ, ಆರ್‌ಸಿಬಿಗೆ ಲೀಗ್ ಹಂತದಲ್ಲೇ ಗೆಲುವು ಮರೀಚಿಕೆ ಎಂಬಂತೆ ಪ್ರತಿಯೊಂದು ಪಂದ್ಯಗಳು ಮುಂದುವರಿಯುತ್ತಿವೆ. ಇಲ್ಲಿಯವರೆಗೂ ಆಡಿದ ಆರು ಪಂದ್ಯಗಳಲ್ಲಿ ನಾಲ್ಕು ಪಂದ್ಯಗಳಲ್ಲಿ ಸೋತಿರುವ ಆರ್‌ಸಿಬಿ ಮಹಿಳಾ ತಂಡಕ್ಕೆ ಹೀಗಾಗಿ ಪ್ಲೇಆಫ್ ಹಾದಿ ಕಠಿಣವಾಗಿದೆ. ಇನ್ನು ಕೊನೆಯ ಎರಡು ಪಂದ್ಯಗಳನ್ನು ಮಾತ್ರ ಆಡುವುದು ಬಾಕಿ ಇದೆ. ಈ ಎರಡೂ ಪಂದ್ಯಗಳನ್ನು ಗೆದ್ದರೂ ಆರ್‌ಸಿಬಿ ಪ್ಲೇಆಫ್‌ಗೆ ಅರ್ಹತೆ ಪಡೆಯುವ ಬಗ್ಗೆ ಯಾವುದೇ ಖಚಿತತೆ ಇಲ್ಲ. ಆರು ತಂಡಗಳು ಭಾಗವಹಿಸಿರುವ ಈ ಟೂರ್ನಿಯಲ್ಲಿ ಇದೀಗ ನಾಲ್ಕು ಅಂಕಗಳನ್ನು ಹೊಂದಿರುವ ಆರ್‌ಸಿಬಿ ಪಾಯಿಂಟ್ಸ್ ಟೇಬಲ್‌ನಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ಟೂರ್ನಿಯ ಮೊದಲ ಅವಧಿಯ ಪಂದ್ಯಗಳು ವಡೋದರದದಲ್ಲಿ ನಡೆದಿದ್ದವು. ಇಲ್ಲಿ ಆಡಿದ್ದ ಎರಡೂ ಪಂದ್ಯಗಳಲ್ಲಿ ಆರ್‌ಸಿಬಿ ಗೆಲುವು ಪಡೆಯುವ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡಿತ್ತು. ಮೊದಲ ಪಂದ್ಯದಲ್ಲಿ ಆರ್‌ಸಿಬಿ ಗುಜರಾತ್ ತಂಡವನ್ನು 6 ವಿಕೆಟ್‌ನಿಂದ ಸೋಲಿಸಿದರೆ, ಎರಡನೇ ಪಂದ್ಯದಲ್ಲಿ ಅದು ಡೆಲ್ಲಿ

ಕ್ಯಾಪಿಟಲ್ಸ್ ತಂಡದ ವಿರುದ್ಧ 8 ವಿಕೆಟ್‌ಗಳಿಂದ ಗೆಲುವನ್ನು ಸಾಧಿಸಿತ್ತು. ಆದರೆ ತವರು ಅಂಗಣವಾದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸತತ ನಾಲ್ಕೂ ಪಂದ್ಯಗಳಲ್ಲಿ ಸೋಲುವ ಮೂಲಕ ಆರ್‌ಸಿಬಿಗೆ ಇದೀಗ ಭಾರಿ ಹಿನ್ನಡೆಯಾಗಿದೆ. ಮುಂಬೈ ಇಂಡಿಯನ್ಸ್ ಆರ್‌ಸಿಬಿಯನ್ನು 4 ವಿಕೆಟ್‌ಗಳಿಂದ ಸೋಲಿಸಿತ್ತು. ಆ ನಂತರ ನಡೆದ ಪಂದ್ಯದಲ್ಲಿ ಯು.ಪಿ ವಾರಿಯರ್ಸ್ ಸೂಪರ್ ಓವರ್‌ನಲ್ಲಿ ಆರ್‌ಸಿಬಿಯನ್ನು ಮಣಿಸಿತು. ಮುಂದಿನ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಗುಜರಾತ್ ವಿರುದ್ಧ 5 ವಿಕೆಟ್‌ಗಳಿಂದ ಗೆಲುವು ಪಡೆದರೆ, ತಡೆಲ್ಲಿ ತಂಡವು ಆರ್‌ಸಿಬಿಯನ್ನು 9 ವಿಕೆಟ್‌ಗಳಿಂದ ಸೋಲಿಸಿತ್ತು.

ಆರ್‌ಸಿಬಿಗೆ ಇನ್ನು ಎರಡು ಪಂದ್ಯಗಳು ಬಾಕಿ ಇವೆ. ಮಾರ್ಚ್ 8ರಂದು ಲಕ್ನೋದಲ್ಲಿ ಯುಪಿ ವಾರಿಯರ್ಸ್ ವಿರುದ್ಧ ಆರ್‌ಸಿಬಿ ಮಹಿಳಾ ತಂಡ ಸೆಣಸಾಟ ನಡೆಯಲಿದೆ. ನಂತರ ಮಾರ್ಚ್ 11ರಂದು ಮುಂಬೈನಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಆಡಲಿದೆ. ಈ ಎರಡೂ ಪಂದ್ಯಗಳಲ್ಲಿ ಆರ್‌ಸಿಬಿ ಮಾಡು ಇಲ್ಲವೇ ಮಡಿ ಹೋರಾಟ ಪ್ರದರ್ಶಿಸಿ ಉತ್ತಮ ಸುಲಭ ಗೆಲುವನ್ನು ಸಾಧಿಸಿದರೆ ಮಾತ್ರ ಆರ್‌ಸಿಬಿ ಮಹಿಳಾ ತಂಡದ ಪ್ಲೇಆಫ್ ಕನಸು ಚಿಗುರಲು ಸಾಧ್ಯ.

ಆರ್‌ಸಿಬಿ: ಪ್ಲೇಆಫ್ ಲೆಕ್ಕಾಚಾರ

ಇನ್ನುಳಿದ ಎರಡೂ ಪಂದ್ಯಗಳಲ್ಲೂ ಆರ್‌ಸಿಬಿ ಗೆಲ್ಲುವುದು ಬಹಳ ಮುಖ್ಯ. ಆಗ ಅದರ ಅಂಕಗಳು 8 ಆಗಲಿದ್ದು, ಇನ್ನುಳಿದ ಮೂರೂ ತಂಡಗಳಾದ ಮುಂಬೈ ಇಂಡಿಯನ್ಸ್, ಯುಪಿ ವಾರಿಯರ್ಸ್ ಹಾಗೂ ಗುಜರಾತ್ ಟೈಟನ್ಸ್ ತಂಡಗಳು ಎಂಟು ಅಂಕವನ್ನು ಕಲೆ ಹಾಕಿದರೆ, ಆಗ ಆರ್‌ಸಿಬಿಗೆ ರನ್ ರೇಟ್ ಮುಖ್ಯವಾಗುತ್ತದೆ, ಈ ಹಿನ್ನೆಲೆಯಲ್ಲಿ ಕೊನೆಯ ಎರಡು ಪಂದ್ಯಗಳಲ್ಲಿ ಆರ್‌ಸಿಬಿ ಅತ್ಯುತ್ತಮ ರನ್‌ರೇಟ್‌ನಲ್ಲಿ ಗೆಲ್ಲಬೇಕಾಗುತ್ತದೆ. ಕೊನೆಯ ಎರಡು ಪಂದ್ಯಗಳಲ್ಲಿ ಒಂದರಲ್ಲಿ ಆರ್‌ಸಿಬಿ ಗೆದ್ದರೆ 6 ಅಂಕಗಳನ್ನು ಕಲೆ ಹಾಕಲಿದೆ. ಆ ಮೂಲಕ ಆರ್‌ಸಿಬಿ ಪ್ಲೇಆಫ್ ಹಾದಿ ಬಹುತೇಕ ಮುಕ್ತಾಯ ಆಗಲಿದೆ. ಯುಪಿ ವಾರಿಯರ್ಸ್, ಮುಂಬೈ ಇಂಡಿಯನ್ಸ್ ಹಾಗೂ ಗುಜರಾತ್ ಜಯಂಟ್ಸ್ ತಂಡಗಳು ಎಂಟು ಅಂಕಗಳನ್ನು ಕಲೆ ಹಾಕಿದರೆ, ಆಗ ಆರ್‌ಸಿಬಿ ಟೂರ್ನಿಯಿಂದ ಅಧಿಕೃತವಾಗಿ ಹೊರಬೀಳಲಿದೆ. ಡೆಲ್ಲಿ ಕ್ಯಾಪಿಟಲ್ಸ್ ಹೊರತುಪಡಿಸಿ ಇನ್ನುಳಿದ ಮೂರು ತಂಡಗಳ ಪೈಕಿ ಎರಡು ತಂಡಗಳು ಪ್ಲೇಆಫ್‌ಗೆ ಪ್ರವೇಶ ಮಾಡಲಿವೆ.

ಜಾರ್ಜಿಯಾ ವ್ರೋಲ್ ಅರ್ಧ ಶತಕ | ಮಿಂಚಿದ ಮುಂಬೈನ ಬೌಲರ್ ಅಮೇಲಿಯಾ ಕೆರ್

ಮುಂಬೈಗೆ 151 ರನ್‌ಗಳ ಗುರಿ

ಲಕ್ನೋ: ಮಹಿಳಾ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಗುರುವಾರದ ಪಂದ್ಯದಲ್ಲಿ ಯುಪಿ ವಾರಿಯರ್ಸ್ ತಂಡವು ಮುಂಬೈ ಇಂಡಿಯನ್ಸ್ ತಂಡಕ್ಕೆ 151 ರನ್‌ಗಳ ಗುರಿ ನೀಡಿದೆ.

ಟಾಸ್ ಗೆದ್ದ ಮುಂಬೈ ನಾಯಕಿ ಹರ್ಮನ್‌ಪ್ರೀತ್‌ಕೌರ್ ಬೌಲಿಂಗ್ ಆಯ್ದುಕೊಂಡರು. ಬ್ಯಾಟಿಂಗ್‌ಗೆ ಇಳಿದ ಯುಪಿ ವಾರಿಯರ್ಸ್ ತಂಡವು ಉತ್ತಮ ಆರಂಭವನ್ನು ಕಂಡಿತು. ಆರಂಭಿಕ ಆಟಗಾರರಾದ ಗ್ರೇಸ್ ಹ್ಯಾರಿಸ್ ಮತ್ತು ಜಾರ್ಜಿಯಾ ವೋಲ್ ಜೋಡಿ ಪ್ರಥಮ ವಿಕೆಟ್ ಜತೆಯಾಟದಲ್ಲಿ ಆರಂಭದ 8 ಓವರ್‌ಗಳಲ್ಲಿ 74 ರನ್ ಗಳಿಸಿದರು. ಗ್ರೇಸ್ 25 ಬಾಲ್‌ಗಳಲ್ಲಿ 28 ರನ್ ಹಾಗೂ ಜಾರ್ಜಿಯಾ ವೋಲ್ 33 ಬಾಲ್‌ಗಳಲ್ಲಿ 55 ರನ್ ಪಡೆದರು. ಆ ಬಳಿಕ ಕ್ರೀಸ್‌ಗೆ ಬಂದ ಕಿರಣ್ ನವಿಗೆರೆ ಯಾವುದೇ ರನ್ ಗಳಿಸದೆ ಪೆವಿಲಿಯನ್‌ಗೆ ತೆರಳಿದರು. ಯುಪಿ ತಂಡದ ನಾಯಕಿ ದೀಪ್ತಿ ಶರ್ಮಾ 25 ಬಾಲ್‌ಗಳಲ್ಲಿ 27 ರನ್ ಗಳಿಸುವಲ್ಲಿ ಯಶಸ್ವಿಯಾದರು. ಆದರೆ ಆ ಬಳಿಕ ಆಡಲು ಬಂದ ವೃಂದಾ ದಿನೇಶ್ 12 ಬಾಲ್‌ಗಳಲ್ಲಿ 10 ರನ್ ಹಾಗೂ ಚಿನ್ನೆ ಹೆನ್ರಿ 2 ಬಾಲ್‌ಗಳಿಂದ 6 ರನ್ ಗಳಿಸಿದರು. ನಂತರ ಕ್ರೀಸ್‌ಗೆ ಬಂದ ಶ್ವೇತಾ ಶ್ರಾವತ್ 2 ಬಾಲ್ ಎದುರಿಸಿದರೂ ಯಾವುದೇ ರನ್ ಗಳಿಸುವಲ್ಲಿ ವಿಫಲರಾದರು. ಯುಪಿ ತಂಡದ ವಿಕೆಟ್ ಕೀಪರ್ ಉಮಾ ಚೆಟ್ರಿ 7 ಬಾಲ್ ಎದುರಿಸಿ ಕೇವಲ 1 ರನ್ ಮಾತ್ರ ಗಳಿಸಿದರು. ಕೊನೆಯಲ್ಲಿ ಯುಪಿ ವಾರಿಯರ್ಸ್ ತಂಡದ ಸೋಪಿಯಾ ಎಕ್ಲೆಸ್ಟೋನ್ 11 ಬಾಲ್‌ಗಳಲ್ಲಿ 16 ರನ್ ಗಳಿಸಿ ತಂಡದ ಒಟ್ಟು ಮೊತ್ತ 150ರ ಗಡಿ ದಾಟಿಸಲು ಪ್ರಯತ್ನಿಸಿದರು. ಕೊನೆಗೆ ಬ್ಯಾಟಿಂಗ್‌ಗೆ ಬಂದ ಕ್ರಾಂತಿ ಗೋಡ್ 1 ಬಾಲ್ ಎದುರಿಸಿ ಕೇವಲ ಒಂದು ರನ್ ಮಾತ್ರ ಪಡೆದರು.

20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 150 ರನ್ ಗಳಿಸಲು ಯುಪಿ ವಾರಿಯರ್ಸ್ ತಂಡ ಶಕ್ತವಾಯಿತು. ಮುಂಬೈ ತಂಡದ ಅಮೇಲಿಯಾ ಕೆರ್ 38 ರನ್ ನೀಡಿ 5 ವಿಕೆಟ್ ಪಡೆದು ಯುಪಿ ವಾರಿಯರ್ಸ್ ತಂಡ ಹೆಚ್ಚಿನ ಮೊತ್ತ ಗಳಿಸದಂತೆ ಮಾಡುವಲ್ಲಿ ಯಶಸ್ವಿಯಾದರು. ಹೈಲಿ ಮ್ಯಾಥ್ಯುಸ್ 25 ರನ್ ನೀಡಿ 2 ವಿಕೆಟ್ ಪಡೆದರು.

ಶ್ರೀಲಂಕಾದಲ್ಲಿ ಮಹಿಳಾ ತ್ರಿಕೋನ ಕ್ರಿಕೆಟ್ ಸರಣಿ: ಭಾರತವೂ ಭಾಗಿ

ಕೊಲಂಬೊ: ಭಾರತ ಮಹಿಳಾ ಕ್ರಿಕೆಟ್ ತಂಡವು ಏಪ್ರಿಲ್ 27ರಿಂದ ಮೇ 11ರ ವರೆಗೆ ಶ್ರೀಲಂಕಾದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯಲ್ಲಿ ಪಾಲ್ಗೊಳ್ಳಲಿದೆ. ವಿಶ್ವಕಪ್ ಏಕದಿನ ಸರಣಿಗೂ ಮುನ್ನ ಈ ಸರಣಿಯು ಅಭ್ಯಾಸಕ್ಕೆ ಪೂರ್ವ ವೇದಿಕೆಯಾಗಲಿದೆ. ಸರಣಿಯಲ್ಲಿ ಶ್ರೀಲಂಕಾ, ಭಾರತ ಮತ್ತು ದಕ್ಷಿಣ ಆಫ್ರಿಕಾ ಮಹಿಳಾ ಕ್ರಿಕೆಟ್ ತಂಡಗಳು ಭಾಗವಹಿಸಲಿದೆ.

'ಸರಣಿಯಲ್ಲಿ ಪ್ರತಿ ತಂಡವೂ ತಲಾ 4 ಪಂದ್ಯಗಳನ್ನು ಆಡಲಿದೆ. ಅಂಕಪಟ್ಟಿಯಲ್ಲಿ ಅಗ್ರ ಎರಡು ಸ್ಥಾನ ಪಡೆದ ತಂಡಗಳು ಫೈನಲ್ ಆಡಲಿವೆ' ಎಂದು ಶ್ರೀಲಂಕಾ ಕ್ರಿಕೆಟ್ ಮಂಡಳಿ (ಎಸ್‌ಎಲ್‌ಸಿ) ತಿಳಿಸಿದೆ.

ತ್ರಿಕೋನ ಸರಣಿ ವೇಳಾಪಟ್ಟಿ: ಭಾರತ-ಶ್ರೀಲಂಕಾ (ಏ. 27), ಭಾರತ-ದಕ್ಷಿಣ ಆಫ್ರಿಕಾ (ಏ. 29), ಶ್ರೀಲಂಕಾ-ದಕ್ಷಿಣ ಆಫ್ರಿಕಾ (ಮೇ. 1) ಭಾರತ-ಶ್ರೀಲಂಕಾ (ಮೇ. 4) ಭಾರತ-ದ. ಆಫ್ರಿಕಾ (ಮೇ 8) ಹಾಗೂ ಫೈನಲ್ (ಮೇ. 11)

ಆರ್‌ಸಿಬಿ ಅನ್‌ಬಾಕ್ಸ್

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದೇ 17ರಂದು ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ 'ಅನ್‌ಬಾಕ್ಸ್' ಕಾರ್ಯಕ್ರಮದ ಟಿಕೆಟ್‌ಗಳು ಕೇವಲ ಒಂದು ತಾಸಿನಲ್ಲಿ ಬಿಕರಿಯಾಗಿವೆ. ನೂತನ ನಾಯಕ ರಜತ್ ಪಾಟೀದಾರ್ ಅವರ ನಾಯಕತ್ವದಲ್ಲಿ ತಮಡವು ಈ ಬಾರಿ ಕಣಕ್ಕಿಳಿಯಲಿದೆ. ಪ್ರತೀ ಬಾರಿಯಂತೆ ಈ ಸಲವೂ ಆರ್‌ಸಿಬಿ ಟೂರ್ನಿಯ ಆರಂಭಕ್ಕೂ ಮುನ್ನ ಅನ್‌ಬಾಕ್ಸ್ ಕಾರ್ಯಕ್ರಮ ಆಯೋಜಿಸಿದೆ. ತಂಡದ ಅಭಿಮಾನಿಗಳು ತಮ್ಮ ನೆಚ್ಚಿನ ಆಟಗಾರರಿಗೆ ಶುಭ ಹಾರೈಸುವ ಕಾರ್ಯಕ್ರಮ ಇದಾಗಿದೆ.

25 ವರ್ಷಗಳ ಬಳಿಕ ಫೈನಲ್‌ನಲ್ಲಿ ಭಾರತ-ಕಿವೀಸ್ ಮುಖಾಮುಖಿ | ಬಲಿಷ್ಠ ಎದುರಾಳಿ ಎಂದೇ ವ್ಯಾಖ್ಯಾನ

ಕೆಎಲ್ ರಾಹುಲ್ ಮೇಲೆ ಮತ್ತೆ ತೂಗುಗತ್ತಿ!

ದುಬೈ: ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯಕ್ಕೆ ವೇದಿಕೆ ಸಿದ್ಧವಾಗಿದ್ದು, ಟೂರ್ನಿಯ ಇತಿಹಾಸದಲ್ಲಿ 25 ವರ್ಷಗಳ ಬಳಿಕ ಭಾರತ-ನ್ಯೂಜಿಲೆಂಡ್ ತಂಡಗಳು ಮಾರ್ಚ್ 9ರಂದು ಇಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಮುಖಾಮುಖಿಯಾಗುತ್ತಿವೆ.

2000ರಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿಯ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ಮುಖಾಮುಖಿಯಾಗಿತ್ತು. ಈ ವೇಳೆ ಟೀಮ್ ಇಂಡಿಯಾವನ್ನು 4 ವಿಕೆಟ್‌ಗಳಿಂದ ಸೋಲಿಸಿ ನ್ಯೂಜಿಲೆಂಡ್ ಚೊಚ್ಚಲ ಐಸಿಸಿ ಟ್ರೋಫಿಯನ್ನು ಮುಡಿಗೇರಿಸಿಕೊಂಡಿತ್ತು.

ಟ್ರೋಫಿ ಫೈನಲ್ ಪಂದ್ಯಕ್ಕೆ ಈ ಸಲದ ಅಜೇಯ ಭಾರತ ತಂಡ ಭಾರೀ ಸಿದ್ಧತೆಗಳನ್ನು ನಡೆಸುತ್ತಿದೆ. ಬುಧವಾರ ವಿಶ್ರಾಂತಿ ಪಡೆದಿದ್ದ ಟೀಮ್ ಇಂಡಿಯಾ ಆಟಗಾರರು ಗುರುವಾರದಿಂದ ಅಭ್ಯಾಸ ನಿರತರಾಗಿದ್ದಾರೆ. ಆದರೆ ಫೈನಲ್ ಪಂದ್ಯಕ್ಕೆ ಭಾರತ ತನ್ನ ಆಡುವ

ಬಳಗದಲ್ಲಿ ಎರಡು ಬದಲಾವಣೆ ಮಾಡಲಿದೆ ಎಂಬ ಸುದ್ದಿಯೊಂದು ಹೊರಬಿದ್ದಿದೆ. ಕಳೆದ ಸೆಮಿ ಪಂದ್ಯದಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶನ ತೋರಿದ ಹೊರತಾಗಿಯೂ ಕನ್ನಡಿಗ ಕೆ.ಎಲ್. ರಾಹುಲ್ ಅವರನ್ನು ಕೈ ಬಿಟ್ಟು ಯುವ ಬ್ಯಾಟರ್ ರಿಷಭ್ ಪಂತ್‌ಗೆ ಅವಕಾಶ ನೀಡುವ ಸಾಧ್ಯತೆಯಿದೆ ಎಂದು ವರದಿ ಹೇಳಿದೆ. ರಾಹುಲ್ ಮಾತ್ರವಲ್ಲದೆ, ಸ್ಪಿನ್ನರ್ ಕುಲ್‌ದೀಪ್ ಯಾದವ್‌ಗೂ ಫೈನಲ್ ಪಂದ್ಯದಿಂದ ಕೊಕ್ ನೀಡಿ ಎಡಗೈ ವೇಗಿ ಅರ್ಶ್‌ದೀಪ್ ಸಿಂಗ್‌ಗೆ ಅವಕಾಶ ನೀಡಲಿದ್ದಾರೆ ಎಂದು ತಿಳಿದುಬಂದಿದೆ. ಮಂಗಳವಾರ ಆಸ್ಟ್ರೇಲಿಯಾ ವಿರುದ್ಧ ನಡೆದಿದ್ದ ಸೆಮಿಫೈನಲ್ ಪಂದ್ಯದಲ್ಲಿ 6ನೇ ಕ್ರಮಾಂಕದಲ್ಲಿ ಆಡಿದ್ದ ರಾಹುಲ್, 34 ಎಸೆತಗಳಲ್ಲಿ ಅಜೇಯ 42 ರನ್ ಸಿಡಿಸಿ ತಂಡಕ್ಕೆ ನೆರವಾಗಿದ್ದರು. ರಾಹುಲ್ ಬ್ಯಾಟಿಂಗ್‌ನಲ್ಲಿ ಕ್ಲಿಕ್ ಆಗಿದ್ದರೂ ಕೀಪಿಂಗ್‌ನಲ್ಲಿ ನಿರೀಕ್ಷಿತ ಪ್ರದರ್ಶನ ತೋರುವಲ್ಲಿ ವಿಫಲರಾಗಿದ್ದಾರೆ ಎಂಬುದು ಸಾರ್ವತ್ರಿಕ ಅಭಿಪ್ರಾಯ, ಹೀಗಾಗಿ ಫೈನಲ್ ಪಂದ್ಯಕ್ಕೆ ಅನುಭವಿ ಕೀಪರ್ ಅಗತ್ಯವಿರುವ ಕಾರಣ ಪಂತ್ ಅವರನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ. ನ್ಯೂಜಿಲೆಂಡ್ ತಂಡದ ಮಾಜಿ ನಾಯಕ ಕೇನ್ ವಿಲಿಯಮ್ಸ್, ಆರಂಭಿಕ ಬ್ಯಾಟರ್ ಡೆವೋನ್ ಕಾನ್ವೆ ಮತ್ತು ವೇಗದ ಬೌಲರ್ ಫರ್ಗುಸನ್ ಒಂದು ವರ್ಷದ ಬಳಿಕ ನ್ಯೂಜಿಲೆಂಡ್ ತಂಡಕ್ಕೆ ಚಾಂಯನ್ಸ್ ಟ್ರೋಫಿ ತಂಡದಲ್ಲಿ ಸೇರ್ಪಡೆ ಆಗಿದ್ದರಿಂದ ಕಿವೀಸ್ ತಂಡ ಆನೆಬಲ ಬಂದಂತಾಗುತ್ತು. ಹಾಗೆಯೇ ಆರಂಭಿಕ ಆಟಗಾರ ರಚಿನ್ ರವೀಂದ್ರ ಉತ್ತಮ ಫಾರ್ಮ್‌ನಲ್ಲಿದ್ದು ತಂಡಕ್ಕೆ ಶ್ರೀರಕ್ಷೆಯಾಗಿದೆ. ಹಾಗಾಗಿ ಸಮಾಜಿಕ ಮಾಧ್ಯಮಗಳಲ್ಲಿ ಭಾನುವಾರದ ಪಂದ್ಯವು ಕಠಿಣ ಸವಾಲಿನದ್ದಾಗಿರುತ್ತದೆ ಎಂಬುದು ಸದ್ಯದ ವಿಶ್ಲೇಷಣೆ. ಟ್ರೋಫಿಯ ಫೈನಲ್ ಪಂದ್ಯದ ಎಲ್ಲ ಟಿಕೆಟ್‌ಗಳು ಕೇವಲ 2 ಗಂಟೆಗಳಲ್ಲೇ ಮಾರಾಟವಾಗಿದೆ. ಟಿಕೆಟ್‌ಗಳಿಗೆ ಕನಿಷ್ಠ 250 ದಿಹರಮ್ (ಸುಮಾರು ರು. 5,925) ಹಾಗೂ ಗರಿಷ್ಠ 12,000 ದಿರ್ಹಮ್ (ಸುಮಾರು 2 ಲಕ್ಷ 84 ಸಾವಿರ) ಬೆಲೆ ನಿಗದಿಪಡಿಸಿತ್ತು. ದುಬೈ ಕ್ರೀಡಾಂಗಣ 25 ಸಾವಿರ ಆಸನ ಸಾಮರ್ಥ್ಯವನ್ನು ಹೊಂದಿದೆ.

ಡಾರ್ಕ್‌ವೆಬ್ ಲೋಕದ ಕಪಟಿ

ಡಾರ್ಕ್ ವೆಬ್ ಅದೊಂದು ಕರಾಳ ಲೋಕ. ಡಾರ್ಕ್ ವೆಬ್ ಕುರಿತ ಹಲವು ಸಿನಿಮಾಗಳು ತೆರೆಗೆ ಬಂದಿವೆ. ಈ ವಾರ ರಿಲೀಸ್ ಆದ ಕಪಟಿ, ಡಾರ್ಕ್ ವೆಬ್ ಲೋಕದ ಮತ್ತಷ್ಟು ಕರಾಳತೆಯನ್ನು ಬಿಚ್ಚಿಟ್ಟಿದೆ. ಬ್ಯಾಂಕ್ ಅಕೌಂಟ್ ಹ್ಯಾಕ್ ಮಾಡಿ ಹಣ ದೋಚುವುದು, ಸೋಷಿಯಲ್ ಮೀಡಿಯಾ ಹ್ಯಾಕ್ ಮಾಡುವುದು. ಇದೆಲ್ಲವೂ ಮೊದಲ ಹಂತವಾದರೆ ಉಳಿದ ಮೂರು ಹಂತಗಳು ಇನ್ನೂ ಭಯಾನಕವಾಗಿರುತ್ತವೆ. ಅದು ಏನು ಎಂಬುದನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ.

ಸೈಕಲಾಜಿಕಲ್ ಥ್ರಿಲ್ಲರ್ ಕಪಟಿಯಲ್ಲಿ ಸುಕೃತಾ ವಾಗ್ಲೆ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

©udibhat

ಮ್ಯಾಕ್ಸ್‌ನಲ್ಲಿ ಮಿಂಚಿ ಮನಸೂರೆಗೊಂಡ ಸುಕೃತಾ ಈ ಚಿತ್ರದಲ್ಲಿಯೂ ಮೋಡಿ ಮಾಡಿದ್ದಾರೆ. ಸುಕೃತಾ ನಿಗೂಢತೆಯ ಅಸ್ತವ್ಯಸ್ತತೆಯ ಜಾಲದಲ್ಲಿ ಸಿಲುಕಿರುವ ಪ್ರಿಯಾ ಎಂಬ ಮಹಿಳೆಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ದೇವ್ ಮತ್ತು ಸಾತ್ವಿಕ್ ನೈತಿಕತೆ ಮತ್ತು ಮಹತ್ವಾಕಾಂಕ್ಷೆಯ ನಡುವಿನ ಗೆರೆಗಳನ್ನು ಮಸುಕುಗೊಳಿಸುವ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಶಂಕರ್ ನಾರಾಯಣನ್, ಪವನ್ ವೇಣುಗೋಪಾಲ್ ಮುಂತಾದವರು ತಾರಾಗಣದಲ್ಲಿದ್ದಾರೆ.

ರವಿಕಿರಣ್ ಮತ್ತು ಎಸ್.ಪಿ.ಚೇತನ್ ಜಂಟಿಯಾಗಿ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಡಿ.ಪಿಕ್ಚರ್ಸ್ ಲಾಂಛನದಲ್ಲಿ ದಯಾಳ್ ಪದ್ಮನಾಭನ್ ನಿರ್ಮಾಣ ಮಾಡಿದ್ದಾರೆ. ಈ ಚಿತ್ರವನ್ನು ಗಾನ್ ಗರ್ಲ್, ಸರ್ಚಿಂಗ್, ಸಿ ಯು ಸೂನ್ ಮತ್ತು ಅನ್‌ಫ್ರೆಂಡ್‌ನಂತಹ ಥ್ರಿಲ್ಲರ್‌ಗಳಿಂದ ಸ್ಫೂರ್ತಿ ಪಡೆದು ನಿರ್ಮಿಸಲಾಗಿದೆ. ಆನ್‌ಲೈನ್ ಶೋಷಣೆಯ ಪರಿಣಾಮಗಳು ಮತ್ತು ವಾಸ್ತವ

ಮತ್ತು ಭ್ರಮೆಯ ನಡುವಿನ ತೆಳುವಾದ ರೇಖೆಯನ್ನು ಪರಿಶೋಧಿಸುವ ಹಿಡಿತದ ನಿರೂಪಣೆ ಇಲ್ಲಿದ್ದು, ಕಪಟಿ ಪ್ರೇಕ್ಷಕರಿಗೆ ಥ್ರಿಲ್ಲಿಂಗ್ ಅನುಭವ ನೀಡಲಿದೆ. ಸತೀಶ್ ರಾಜೇಂದ್ರನ್ ಛಾಯಾಗ್ರಹಣ, ಜೋಹಾನ್ ಸೇವಾನಾಶ್ ಸಂಗೀತ ನಿರ್ದೇಶನ ಹಾಗೂ ಸಂತೋಷ್ ಸಂಕಲನ ಈ ಚಿತ್ರಕ್ಕಿದೆ.

ತೆರೆಯಲ್ಲಿ ಕನಸಿನ ಅನಾವರಣ

ಲಕ್ಷ್ಮೀಕಾಂತ್ ರೆಡ್ಡಿ ನಿರ್ಮಿಸಿರುವ ಕನಸೊಂದು ಶುರುವಾಗಿದೆ, ಅದ್ದೂರಿಯಾಗಿ ತೆರೆಗೆ ಬಂದಿದೆ. ಅಪ್ಪು ಅಭಿನಯದ ಮಿಲನ ಚಿತ್ರದ ನಿನ್ನಿಂದಲೇ.. ಕನಸೊಂದು ಶುರುವಾಗಿದೆ ಹಾಡಿನ ಸಾಲನ್ನೇ ಶೀರ್ಷಿಕೆಯಾಗಿ ಬಳಸಿಕೊಳ್ಳಲಾಗಿದೆ. ಸಸ್ಪೆನ್ಸ್, ಥ್ರಿಲ್ಲರ್ ಸ್ಟೋರಿಯ ಜತೆಗೆ ಮಹಿಳಾ ಪ್ರಧಾನ ಕಥೆಯೂ ಚಿತ್ರದಲ್ಲಿ ಅಡಕವಾಗಿದೆ. ನಮ್ಮ ರಾಜ್ಯದಲ್ಲಿಯೇ ನಡೆದ ನೈಜ ಘಟನೆಯನ್ನು ಆಧರಿಸಿ ಚಿತ್ರದ ಕಥೆ ಹೆಣೆಯಲಾಗಿದ್ದು, ಅದನ್ನು ಎಲ್ಲರಿಗೂ ಕನೆಕ್ಟ್ ಆಗುವಂತೆ ತೆರೆಯಲ್ಲಿ ಕಟ್ಟಿಕೊಡಲಾಗಿದೆ.

ಈ ಹಿಂದೆ ಸಹರಾ ಚಿತ್ರವನ್ನು ನಿರ್ದೇಶಿಸಿದ್ದ ಮಂಜೇಶ್ ಭಾಗವತ್ ಈ ಸಿನಿಮಾದ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಕನಸೊಂದು ಶುರುವಾಗಿದೆ ಚಿತ್ರದ ಮೂಲಕ ಸಂತೋಷ್ ಬಿಲ್ಲವ ನಾಯಕನಾಗಿ ಪರಿಚಿತರಾಗುತ್ತಿದ್ದಾರೆ. ಸಾತ್ವಿಕಾ ರಾವ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಥ್ರಿಲ್ಲರ್ ಮಂಜು, ಕುರಿ ಸುನಿಲ್, ರಶ್ಮಿ, ರಾಜು ಕಾಲ್ಕುಣಿ, ಕೃಷ್ಣಮೂರ್ತಿ ಕನಕಪುರ,

ನಾಗರತ್ನಾ ಭಟ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಕನಸೊಂದು ಶುರುವಾಗಿದೆ ಹಾಡುಗಳ ಮೂಲಕವೇ ಮನಗೆದ್ದಿದೆ. ಶಶಾಂಕ್, ಸಿಂಪಲ್ ಸುನಿ, ಪ್ರಮೋದ್ ಮರವಂತೆ ಹಾಡುಗಳಿಗೆ ಸಾಹಿತ್ಯ ಬರೆದಿದ್ದು, ಸೋನು ನಿಗಮ್, ರಾಜೇಶ್ ಕೃಷ್ಣನ್ ಹಾಗೂ ವಾಸುಕಿ ವೈಭವ್ ಹಾಡುಗಳಿಗೆ ದನಿಯಾಗಿದ್ದಾರೆ. ಲೋಕೇಂದ್ರ ಸೂರ್ಯ ಛಾಯಾಗ್ರಹಣ, ಸೂರಜ್ ಜೋಯಿಸ್ ಸಂಗೀತ ನಿರ್ದೇಶನ, ದೀಪಕ್ ಗೌಡ ಸಂಕಲನ ಈ ಚಿತ್ರಕ್ಕಿದೆ.

ಕನಸೊಂದು ಶುರುವಾಗಿದೆ ಎಂದರೆ ಅಪ್ಪು ಸರ್ ನೆನಪಿಗೆ ಬರುತ್ತಾರೆ. ಅವರ ಸಿನಿಮಾದ ಹಾಡಿನ ಸಾಲನ್ನೇ ಶೀರ್ಷಿಕೆಯಾಗಿ ಬಳಸಿಕೊಳ್ಳಲಾಗಿದೆ. ಇದೊಂದು ಸಸ್ಪೆನ್ಸ್, ಥ್ರಿಲ್ಲರ್ ಸಿನಿಮಾವಾಗಿದ್ದು ನವಿರಾದ ಪ್ರೇಮಕಥೆಯೂ ಬೆರೆತಿದೆ.
-ಲಕ್ಷ್ಮಿಕಾಂತ್ ರೆಡ್ಡಿ ನಿರ್ಮಾಪಕ



ಬೆಂಗಳೂರು:
VEERESH CINEMAS
ತ್ರಿವೇಣಿ 2 SHOWS 4:30,7:30PM
PVR INOX
Orion Mall 6:00pm
GT World Mall 7:35pm
Vaishnavi Sapphire Mall 3:50pm
Vega City 7:20pm
Global Mall 2:00pm
Superplex Forum Mall 2:05pm
Megaplex Mall of Asia 11:30 - 7:25pm
MSR Element Mall Regalia 4:50pm
Mantri Square 2:20pm
Cental 4:20pm
RMZ Galleria Mall 12:45pm
Cinépolis
Lulu Mall 6:45pm
Royal Meenakshi 4:25pm
ETA Mall 2:00pm
Forum Shantiniketan 1:30pm
SJR Central Mall 2:00pm
GOPALAN CINEMAS
Gopalan Arch 6:00pm
Gopalan Legacy 3 - 7:30pm
Gopalan Grand Mall 8:00pm
MOVIE TIME CINEMAS
Movie time (RR Nagar) 7:30pm
ROCKLINE mall & cinemas
Rockline Mall 3:45pm
MIRAJ CINEMAS
Miraj Cinemas 1:10pm
KINO CINEMAS
Kino Cinemas 2:30pm
Cinephile 3:30pm
ಕೆಂಗೇರಿ: ವೆಂಕಟೇಶ್ವರ 2shows 4:30,7:30pm
ತುಮಕೂರು: ಗಾಯಿತ್ರಿ
PVR INOX
S Mall, Tumkur 4:45pm
ಮೈಸೂರು: ಸಂಗಮ್ 10:30 - 01:30pm
DRC Cinemas 1:30pm
DRC CINEMAS
Centro 7:30pm
PVR INOX
Vision Cinemas 1:45pm
MYSURU VISION CINEMAS
ಮಂಡ್ಯ: ಸಂಜಯ 2shows 4:30,7:30pm
ನಂಜನಗೂಡು: ಶಾರದ 2shows 4:30,7:30pm
ಹಾಸನ: ಸಹ್ಯಾದ್ರಿ 4shows 4:30,7:30pm
ಗುಂಡ್ಲುಪೇಟೆ: ವೆಂಕಟೇಶ್ವರ 2shows 4:30,7:30pm
ಕೆಆರ್ ನಗರ: ವೆಂಕಟೇಶ್ವರ 2shows 4:30,7:30pm
ಅರಸಿಕೆರೆ: ಸಾಧನಾ 2shows 4:30,7:30pm
ಬಿಳಿಕೆರೆ: ಲಕ್ಷ್ಮಿ 2shows 4:30,7:30pm
Davangere
MOVIE TIME CINEMAS
Movie Time 8:00pm
Shivamogga: 1:00pm
Bharath Cinemas
ಭದ್ರಾವತಿ: ಸತ್ಯ
Mangalore: 3:45pm
Bharath Cinemas
Udupi: 4:45pm
Bharath Cinemas
Kundapura: 1:00 - 7:00pm
Bharath Cinemas
Putur: 5:15pm
Bharath Cinemas
Gurbarga: Shetty Multiplex
PVR INOX
Orchid Mall 5:05pm
Raichur:
MIRAJ CINEMAS
Miraj Cinemas 2:00pm
Hubli:
Lakshmi Pride 4.00 - 9.20pm
Dharwad:
PVR INOX
Smartcity Mall 7:40pm
Suratkal
Cine Galaxy 3:30pm
And many more...